ಶುಕ್ರವಾರ, ಜನವರಿ 24, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಾಯನ
ಬೆಂಗಳೂರಿನಲ್ಲಿ ಆಯೋಜಿಸಿರುವ ಸಾವಯವ ಮತ್ತು ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಗಾಯಕ ರಿಕಿ ಕೇಜ್ ಥೀಮ್ ಸಾಂಗ್ ಪ್ರಸ್ತುತಪಡಿಸಿದರು




ಶುಕ್ರವಾರ, ಜನವರಿ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 24 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರನ್ನು ತಲುಪುವುದೇ ನಟ ರಿಷಿ ಗುರಿ

ಆಳ-ಅಗಲ
ಫ್ಯಾಕ್ಟ್ ಚೆಕ್: ಮುಖ ತಿರುವಿದ ಮೆಟಾ

ಬಿಜೆಪಿಯಂತೆ ಕಾಂಗ್ರೆಸ್‌ನಲ್ಲಿ ಕಚ್ಚಾಟ ಇಲ್ಲ: ಸಿ.ಎಂ 6

'ಎಪಿಎಂಸಿಯಲ್ಲಿ ಸಾವಯವ ಉತ್ಪನ್ನ ಖರೀದಿ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,520	23,205	₹84,560 (ಬೆಂಗಳೂರು)	₹96,400 (ಬೆಂಗಳೂರು)	86.44

ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ

6,415 ಹುದ್ದೆ ಖಾಲಿ: ಅತಿಥಿಯೇ ಗತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಹುದ್ದೆಗಳನ್ನೇ ಸೃಜಿಸದೆ ನಾಲ್ಕು ಎಂಜಿನಿಯರಿಂಗ್ ಕಾಲೇಜು ಮತ್ತು 26 ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಆರಂಭಿಸಿದ್ದರಿಂದಾಗಿ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆ ಬೋಧಕ, ಬೋಧಕೇತರ ಸಿಬ್ಬಂದಿಯ ತೀವ್ರ ಕೊರತೆ ಎದುರಿಸುತ್ತಿದೆ.

ರಾಜ್ಯದಲ್ಲಿ ಒಟ್ಟು 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿವೆ. ಈ ಪೈಕಿ, ಗದಗ ಜಿಲ್ಲೆಯ ನರಗುಂದ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಕೊಪ್ಪಳ ಜಿಲ್ಲೆಯ ತಳಕಲ್, ಗಂಗಾವತಿ, ಹಾಸನದ ಮೊಸಳೆಹೊಸಹಳ್ಳಿ ಮತ್ತು ಬೀದರ್ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಹುದ್ದೆಗಳನ್ನೇ ಸೃಜಿಸದೆ ಆರಂಭಿಸಲಾಗಿದೆ. ಈ ಎಲ್ಲ ಕಾಲೇಜುಗಳು 'ಅತಿಥಿ' ಬೋಧಕ, ಬೋಧಕೇತರ ಸಿಬ್ಬಂದಿಯಿಂದ ನಡೆಯುತ್ತಿವೆ. ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಮತ್ತೊಂದು ಹೊಸ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ನಿರ್ಮಾಣಗೊಂಡಿದ್ದು, ಶೀಘ್ರದಲ್ಲೇ ಆರಂಭ ಆಗಲಿದೆ. ಈ ಕಾಲೇಜಿಗೂ ಹುದ್ದೆಗಳನ್ನು ಸೃಜಿಸಿಲ್ಲ.

ಇಲಾಖೆಗೆ ಈವರೆಗೆ 9,944 ಹುದ್ದೆಗಳು ಮಂಜೂರಾಗಿದ್ದು, 3,329 ಹುದ್ದೆಗಳಷ್ಟೆ ಭರ್ತಿ ಆಗಿವೆ. 6,415 ಖಾಲಿ ಇವೆ. ಈ ಹುದ್ದೆಗಳನ್ನು ತುಂಬುವ ಜೊತೆಗೆ 2,947 ಹುದ್ದೆಗಳನ್ನು ಹೊಸತಾಗಿ ಸೃಜಿಸಬೇಕೆಂದು ಆರ್ಥಿಕ ಇಲಾಖೆಗೆ ತಾಂತ್ರಿಕ ಶಿಕ್ಷಣ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ.

'ಸರ್ಕಾರ ನೂರಾರು ಕೋಟಿ ವೆಚ್ಚದಲ್ಲಿ ಎಂಜಿನಿಯರಿಂಗ್ ಕಾಲೇಜು ಕಟ್ಟಿ, ವಿವಿಧ ಕೋರ್ಸ್‌ಗಳನ್ನು ಆರಂಭಿಸಿದೆ. ಆದರೆ, ಈ ಕಾಲೇಜುಗಳಿಗೆ ಅಗತ್ಯ ಸಂಖ್ಯೆಯ ಬೋಧಕ, ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಿ, ನೇಮಿಸುವ ಕೆಲಸ ಆಗಿಲ್ಲ. ಏಳು ವರ್ಷಗಳಿಂದ ಯಾವುದೇ ಹುದ್ದೆಯನ್ನು ಸೃಷ್ಟಿಸದೆಯೇ 26 ಪಾಲಿಟೆಕ್ನಿಕ್‌ಗಳನ್ನು ಆರಂಭಿಸಲಾಗಿದೆ' ಎಂದು ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

13ನೇ ಪುಟ ನೋಡಿ

ತಾಂತ್ರಿಕ ಶಿಕ್ಷಣ ಇಲಾಖೆ- ಹುದ್ದೆಗಳ ಮಾಹಿತಿ

267 ಮಂಜೂರು | **118** ಭರ್ತಿ | **149** ಖಾಲಿ

ಸರ್ಕಾರಿ ಎಂಜಿನಿಯರಿಂಗ್ ಕಾಲೇಜು

ಹುದ್ದೆ	ಮಂಜೂರು	ಭರ್ತಿ	ಖಾಲಿ	ಸೃಜಿಸಲು ಪ್ರಸ್ತಾಪ
ಬೋಧಕ	646	339	307	292
ಬೋಧಕೇತರ	1,150	127	1,023	652

ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆ

ಹುದ್ದೆ	ಮಂಜೂರು	ಭರ್ತಿ	ಖಾಲಿ	ಸೃಜಿಸಲು ಪ್ರಸ್ತಾಪ
ಬೋಧಕ	2,812	1,780	1,032	759
ಬೋಧಕೇತರ	4,642	910	3,732	1,244

ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ

ಹುದ್ದೆ	ಮಂಜೂರು	ಭರ್ತಿ	ಖಾಲಿ
ಬೋಧಕ	53	20	22
ಬೋಧಕೇತರ	174	35	139



ಖಾಲಿ ಹುದ್ದೆಗಳ ಭರ್ತಿ ಮತ್ತು ಹೊಸತಾಗಿ ಹುದ್ದೆಗಳನ್ನು ಸೃಜಿಸುವ ಕುರಿತು ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇನೆ. ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿಗೆ ಕ್ರಮ ವಹಿಸಲಾಗುವುದು

ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ

ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇ ಪರಿಷ್ಕೃತ ನಿಯಮಾವಳಿ ಪ್ರಕಾರ ಬೋಧಕ, ಬೋಧಕೇತರ ಸಿಬ್ಬಂದಿ ಹುದ್ದೆ ಸೃಜಿಸಲು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವ ಸಲ್ಲಿಸಲಾಗಿದೆ

ಎಚ್. ಪ್ರಸನ್ನ, ನಿರ್ದೇಶಕ, ತಾಂತ್ರಿಕ ಶಿಕ್ಷಣ ಇಲಾಖೆ

ಕೆಪಿಟಿಸಿಎಲ್: 60 ನಿವೃತ್ತರಿಗೆ 'ಅಧಿಕಾರ'

• ಆರ್. ಮಂಜುನಾಥ್

60	ಒಟ್ಟು ನಿವೃತ್ತ ಸಿವಿಲ್ ಎಂಜಿನಿಯರ್‌ಗಳ ಆಯ್ಕೆ
48	ಇಒಡಿ–1 ದರ್ಜೆ– 30ಗಳಿಗೆ ₹1 ಲಕ್ಷ ವೇತನ
11	ಇಒಡಿ–2 ದರ್ಜೆ– 30ಗಳಿಗೆ ₹90 ಸಾವಿರ ವೇತನ
1	ಇಒಡಿ–3 ದರ್ಜೆ– 30ಗಳಿಗೆ ₹80 ಸಾವಿರ ವೇತನ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) 60 ನಿವೃತ್ತ ಎಂಜಿನಿಯರ್‌ಗಳನ್ನು ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿಯವರ ಆದೇಶ ಮೀರಿ ನೇಮಿಸಿಕೊಂಡಿದೆ.

ಸರ್ಕಾರಿ ಕೆಲಸದಿಂದ ನಿವೃತ್ತರಾಗಿರುವ ಸಿವಿಲ್ ಎಂಜಿನಿಯರ್‌ಗಳನ್ನು 'ಎಂಜಿನಿಯರ್ ಆನ್ ಡ್ಯುಟಿ (ಇಒಡಿ) ಎಂದು ತಾತ್ಕಾಲಿಕ ಆಧಾರ'ದಲ್ಲಿ ಕೆಪಿಟಿಸಿಎಲ್ ಕಾರ್ಪೊರೇಟ್ ಕಚೇರಿ ಹಾಗೂ ಪ್ರಸರಣ ವಲಯಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ. ಕೆಪಿಟಿಸಿಎಲ್‌ನ ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರು ಜನವರಿ 9ರಂದು ಈ ಬಗ್ಗೆ ಆದೇಶ ಹೊರಡಿಸಿದ್ದಾರೆ.

'ಇಒಡಿ' ಹುದ್ದೆಗಳನ್ನು ಮೂರು ವರ್ಗಗಳಲ್ಲಿ ಸೃಜಿಸಲಾಗಿದೆ. 1957ರಿಂದ 1964ರವರೆಗೆ ಜನಿಸಿದವರನ್ನು ನೇಮಕ ಮಾಡಿಕೊಂಡು, ಅವರಿಗೆ ಕಿರಿಯ ಎಂಜಿನಿಯರ್ ಅಥವಾ ಸಹಾಯಕ ಎಂಜಿನಿಯರ್ ಅವರ ಕಾರ್ಯಗಳನ್ನು ನೀಡಲಾಗಿದೆ. ಜೊತೆಗೆ, ಸಬ್–ಸ್ಟೇಷನ್‌ಗಳ ಸಿವಿಲ್ ಎಂಜಿನಿಯರಿಂಗ್ ಕಾಮಗಾರಿಗಳ ಮೇಲ್ವಿಚಾರಣೆ, ಪರಿಶೀಲನೆ ನಡೆಸುವ ಜವಾಬ್ದಾರಿ ವಹಿಸಲಾಗಿದೆ.

'ನಿವೃತ್ತ ನೌಕರರನ್ನು ನೇಮಿಸಿಕೊಳ್ಳುವುದರಿಂದ ಬೊಕ್ಕಸಕ್ಕೆ ಹೆಚ್ಚುವರಿಯಾಗಿ ಹೊರೆಯಾಗುತ್ತಿದೆ. ಅಲ್ಲದೆ, ನಿವೃತ್ತರಲ್ಲಿ ಕಾರ್ಯಕ್ಷಮತೆಯ ಗುಣಮಟ್ಟ ಮತ್ತು ಉತ್ತರದಾಯಿತ್ವದ ಕೊರತೆಯೂ ಇರುತ್ತದೆ. ಹೀಗಾಗಿ ಇಲಾಖೆಗಳಲ್ಲಿರುವ ನಿವೃತ್ತರನ್ನು ಕೆಲಸದಿಂದ ಬಿಡುಗಡೆ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿಯವರಿಗೆ 2024ರ ಜನವರಿ 9ರಂದು ಸೂಚಿಸಿದ್ದರು. ಇದರಂತೆ, ಮುಖ್ಯ ಕಾರ್ಯದರ್ಶಿಯವರು ಎಲ್ಲ ಇಲಾಖೆಗಳ ಮುಖ್ಯ, ಪ್ರಧಾನ, ಕಾರ್ಯದರ್ಶಿಗಳಿಗೆ 2024ರ ಜನವರಿ 23ರಂದು ಸೂಚನೆ ನೀಡಿ, 'ನಿವೃತ್ತರನ್ನು ಕೆಲಸದಿಂದ ಬಿಡುಗಡೆ ಮಾಡಬೇಕು. ಖಾಲಿ ಹುದ್ದೆಗಳಿಗೆ ನಿಯೋಜನೆ ಮಾಡಿಕೊಳ್ಳಬೇಕು' ಎಂದು ಆದೇಶಿಸಿದ್ದರು.

13ನೇ ಪುಟ ನೋಡಿ



ಬಾಗಿನ ಚಿತ್ರದುರ್ಗ ಜಿಲ್ಲೆ ಹಿರಿಯೂರು ಸಮೀಪದ ವಾಣಿವಿಲಾಸ ಸಾಗರ ಜಲಾಶಯಕ್ಕೆ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕರಾದ ಕೆ. ಸಿ.ವೀರೇಂದ್ರ, ಟಿ.ರಘುಮೂರ್ತಿ, ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಇದ್ದಾರೆ ಚಿತ್ರ: ಚಂದ್ರಪ್ಪ.ವಿ 6

ಮಹಿಳಾ ಸಿಬ್ಬಂದಿ ಮೇಲೆ ಹಲ್ಲೆ, ಬೆದರಿಕೆ: 14 ಮಂದಿ ಬಂಧನ

ಸಲೂನ್ ಮೇಲೆ ಗುಂಪಿನಿಂದ ದಾಳಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ಬಿಜೈನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಆದಿತ್ಯ ವಾಣಿಜ್ಯ ಸಂಕೀರ್ಣದಲ್ಲಿರುವ ಕಲರ್ಸ್ ಯೂನಿಸೆಕ್ಸ್ ಸಲೂನ್ ಮೇಲೆ ಗುರುವಾರ ಮಧ್ಯಾಹ್ನ 12ರ ವೇಳೆಗೆ ಗುಂಪೊಂದು ದಾಳಿ ನಡೆಸಿ, ಅಲ್ಲಿದ್ದ ಇಬ್ಬರು ಮಹಿಳಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದೆ. ಅಲ್ಲಿಯ ವಸ್ತುಗಳನ್ನು ಧ್ವಂಸಗೊಳಿಸಿದೆ.

ಈ ಪ್ರಕರಣ ಸಂಬಂಧ ಪೊಲೀಸರು 14 ಮಂದಿಯನ್ನು ಬಂಧಿಸಿದ್ದಾರೆ. ಫರಂಗಿಪೇಟೆಯ ಹರ್ಷರಾಜ್ ಅಲಿಯಾಸ್ ಹರ್ಷಿತ್, ವಾಮಂಜೂರು ಮೂಡುಶೆಡ್ಡೆಯ ಮೋಹನದಾಸ್ ಅಲಿಯಾಸ್ ರವಿ, ಕಾಸರಗೋಡು ಉಪ್ಪಳದ ಪುರಂದರ, ವಾಮಂಜೂರು ಅಂಬೇಡ್ಕರ್ ನಗರದ ಸಚಿನ್, ಉಳಾಯಿಬೆಟ್ಟುವಿನ ರವೀಶ್, ಬೆಂಜನಪದವು ಶಿವಾಜಿನಗರದ ಸುಕೇಶ್, ವಾಮಂಜೂರಿನ ಅಂಕಿತ್, ಮೂಡುಶೆಡ್ಡೆ ಶಿವಾಜಿನಗರದ ಕಲಿ ಮುತ್ತು, ದೀಪಕ್, ಪ್ರದೀಪ್ ಪೂಜಾರಿ, ಬೊಂಡಂತಿಲ ತಾರಿಗುಡ್ಡೆಯ ಅಭಿಲಾಷ್, ನೀರುಮಾರ್ಗ ಪೆದಮಲೆ ಸರಿಪಲ್ಲದ ವಿಘ್ನೇಶ್, ನಗರದ ಮಂಕಿಸ್ಟ್ಯಾಂಡ್‌ನ ಶರಣ್‌ರಾಜ್ (ಕ್ಯಾಮೆರಾಮನ್) ಹಾಗೂ ನಗರದ ನಿದ್ದಲೆಯ ಪ್ರಸಾದ ಅತ್ತಾವರ ಬಂಧಿತರು.

'ಸಲೂನ್‌ನಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿತ್ತು. ನಮ್ಮ ಹುಡುಗರೇ ದಾಳಿ ನಡೆಸಿದ್ದಾರೆ' ಎಂದು ರಾಮ ಸೇನೆಯ ಸಂಸ್ಥಾಪಕ ಪ್ರಸಾದ್ ಅತ್ತಾವರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದರು. ಇದರ ಬೆನ್ನಲ್ಲೇ ಪೊಲೀಸರು ಅವರನ್ನು ಬಂಧಿಸಿದ್ದರು.

13ನೇ ಪುಟ ನೋಡಿ

ದಾಳಿಕೋರರ ವಿರುದ್ಧ ಕ್ರಮ: ಪರಮೇಶ್ವರ



ಉಡುಪಿ: ಮಂಗಳೂರಿನಲ್ಲಿ ಮಸಾಜ್ ಪಾರ್ಲರ್ ಮೇಲೆ ದಾಳಿ ನಡೆಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಇಲ್ಲಿ ಮಾತನಾಡಿದ ಅವರು, 'ಯಾವ ಉದ್ದೇಶಕ್ಕೆ ದಾಳಿಯಾಗಿದೆ ಗೊತ್ತಿಲ್ಲ. ಆದರೆ, ದಾಳಿ ಮಾಡಿದವರನ್ನು ತಕ್ಷಣ ಬಂಧಿಸಲು ಸೂಚಿಸಿದ್ದೇನೆ' ಎಂದರು.

ಇಂಥ ಕೃತ್ಯಗಳು ನಡೆಯಬಾರದು ಮತ್ತು ಯಾರಿಗೂ ವ್ಯಾಪಾರ ಮಾಡಲು ಅಡ್ಡಿಪಡಿಸಬಾರದು. ಪ್ರತಿಯೊಬ್ಬರಿಗೂ ಕೆಲಸ ಮಾಡುವ ಹಕ್ಕು ಇದೆ. ಯಾರು ಕೂಡ ಕಾನೂನು ಕೈಗೆತ್ತಿಕೊಳ್ಳಬಾರದು. ದಾಳಿ ಮಾಡಿದವರು ಯಾರು ಎಂದು ಗುರುತಿಸುತ್ತೇವೆ. ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ಇಲಾಖೆ ನಿರ್ಧರಿಸುತ್ತದೆ ಎಂದು ಹೇಳಿದರು.

'ಅನೈತಿಕ ಚಟುವಟಿಕೆ ನಡೆಸುವ ಪಾರ್ಲರ್‌ಗಳಿದ್ದರೆ ದೂರು ಕೊಡಿ, ಅದನ್ನು ಬಿಟ್ಟು ನಾವೇ ಕಾನೂನು ಕೈಗೆತ್ತಿಕೊಳ್ಳುತ್ತೇವೆ ಎನ್ನುವುದು ಸರಿಯಲ್ಲ. ದೂರು ಕೊಟ್ಟರೆ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ. ಉದ್ಯಮ ಮಾಡುವವರಿಗೆ ಮಹಾನಗರ ಪಾಲಿಕೆಯವರು ಪರವಾನಗಿ ಕೊಟ್ಟಿರುತ್ತಾರೆ. ಯಾವ ಷರತ್ತುಗಳನ್ನು ಹಾಕಿ ಕೊಟ್ಟಿರುತ್ತಾರೆಯೋ ಅದನ್ನು ಪಾಲಿಸದಿದ್ದರೆ ಕ್ರಮ ಕೈಗೊಳ್ಳುತ್ತಾರೆ' ಎಂದರು.

13ನೇ ಪುಟ ನೋಡಿ

ವರದಿ ಸಲ್ಲಿಸಿದ ಮೈಸೂರು ಲೋಕಾಯುಕ್ತ ಎಸ್‌ಪಿ: ಹರಿದಾಡಿದ ಸುದ್ದಿ

ಮುಡಾ: ಸಿದ್ದರಾಮಯ್ಯಗೆ ಕ್ಲೀನ್ ಚಿಟ್?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿ ಅವರಿಗೆ ಲೋಕಾಯುಕ್ತ ಪೊಲೀಸರು ಕ್ಲೀನ್‌ಚಿಟ್ ನೀಡಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ.

'ಪ್ರಕರಣದಲ್ಲಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿ ಅವರು ಪ್ರಭಾವ ಬೀರಿರುವುದಕ್ಕೆ ಯಾವುದೇ ಸಾಕ್ಷ್ಯ ಇಲ್ಲ. ಆದರೆ, ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡುವಲ್ಲಿ ಮುಡಾ ಅಧಿಕಾರಿಗಳಿಂದ ಸಾಲು–ಸಾಲು ಅಕ್ರಮಗಳು ನಡೆದಿವೆ' ಎಂಬ ಮಾಹಿತಿ ವಿವಿಧ ಸುದ್ದಿವಾಹಿನಿಗಳಲ್ಲಿ ಬಿತ್ತರವಾಗಿದೆ. 'ಈ ಬಗ್ಗೆ ನನಗೇನೂ ಮಾಹಿತಿ ಇಲ್ಲ' ಎಂದು ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದಾರೆ.

ಪಾರ್ವತಿ ಅವರಿಗೆ ಮುಡಾ 50:50ರ ಅನುಪಾತದಲ್ಲಿ 14 ಪರಿಹಾರ ನಿವೇಶನಗಳನ್ನು ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್ ಅವರ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ತನಿಖಾ ವರದಿಯನ್ನು ಇದೇ 27ರ ಒಳಗೆ ಸಲ್ಲಿಸಬೇಕು ಎಂದು ನ್ಯಾಯಾಲಯವು ತನಿಖಾಧಿಕಾರಿಗೆ ಸೂಚಿಸಿತ್ತು. ಉದೇಶ್ ಅವರ ತಂಡವು ಸಿದ್ಧಪಡಿಸಿರುವ ವರದಿಯನ್ನು ಲೋಕಾಯುಕ್ತದ ಬೆಂಗಳೂರು ಕೇಂದ್ರ ಕಚೇರಿಗೆ ಶುಕ್ರವಾರ ಸಲ್ಲಿಸಲಾಗುವುದು ಎಂಬ ಮಾಹಿತಿಯನ್ನು ವಾಹಿನಿಗಳು ಬಿತ್ತರಿಸಿವೆ.

ಕೇಂದ್ರ ಕಚೇರಿಗೆ ವರದಿ ಸಲ್ಲಿಸುವುದಕ್ಕೂ ಮುನ್ನ, ಅದರಲ್ಲಿ ಉಲ್ಲೇಖಿಸಲಾದ ಅಂಶಗಳು ಮತ್ತು ದಾಖಲೆಗಳನ್ನು ಎಸ್‌ಪಿ ಉದೇಶ್ ಅವರು ಸ್ವತಃ ಪರಿಶೀಲಿಸಿದ್ದಾರೆ ಎನ್ನಲಾಗಿದೆ. ವರದಿ ಇನ್ನಷ್ಟೇ ನ್ಯಾಯಾಲಯಕ್ಕೆ ಸಲ್ಲಿಕೆಯಾಗಬೇಕಿದೆ.

8ನೇ ಪುಟ ನೋಡಿ

'ಮುಡಾ ಪ್ರಕರಣ ಮುಚ್ಚಿಹಾಕಲು ಯತ್ನ'



'ಮುಡಾ ಹಗರಣದಲ್ಲಿ ಜಾರಿ ನಿರ್ದೇಶನಾಲಯ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದರೂ ಲೋಕಾಯುಕ್ತ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಹಗರಣ ಮುಚ್ಚಿಹಾಕಲು ಲೋಕಾಯುಕ್ತ ಪೊಲೀಸರು ಪ್ರಯತ್ನಿಸುತ್ತಿದ್ದಾರೆ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಗರಣದಲ್ಲಿ ಮುಖ್ಯಮಂತ್ರಿಯವರ ಪಾತ್ರವನ್ನು ಮುಚ್ಚಿಹಾಕುವ ಪ್ರಯತ್ನ ವಿರೋಧಿಸಿ ಬಿಜೆಪಿ ಮತ್ತೆ ಹೋರಾಟ ಮುಂದುವರಿಸಲಿದೆ' ಎಂದರು. 'ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಎಸ್‌ಐಟಿ ಕ್ಲೀನ್ ಚಿಟ್ ನೀಡಿರುವಾಗ ಮುಖ್ಯಮಂತ್ರಿಗೆ ಕ್ಲೀನ್ ಚಿಟ್ ನೀಡುವುದು ಖಚಿತ. ಆದ್ದರಿಂದ ತನಿಖೆಯನ್ನು ಸಿಬಿಐಗೆ ವಹಿಸುವವರೆಗೂ ಹೋರಾಟ ಮಾಡುತ್ತೇವೆ' ಎಂದು ತಿಳಿಸಿದರು.

ರಾತ್ರಿ ಮದುವೆ ಸಲ್ಲ: ಹಿಂದೂ ನೀತಿ

ಲಖನೌ: ಸನಾತನ ಧರ್ಮ ಪರಿಪಾಲನೆಗೆ ಏನು ಮಾಡಬೇಕು, ಏನು ಮಾಡಬಾರದು ಎಂಬುದೂ ಸೇರಿ ಹಲವು ಅಂಶಗಳನ್ನು ಒಳಗೊಂಡಿರುವ 'ಹಿಂದೂ ನೀತಿ ಸಂಹಿತೆ'ಯು ಕುಂಭಮೇಳದಲ್ಲಿ ಇದೇ 27ರಂದು ಬಿಡುಗಡೆಯಾಗಲಿದೆ. 13

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಇಂದು ಹುಟ್ಟಿದ ಹೆಣ್ಣುಶಿಶುವಿಗೆ ಇಲಾಖೆಯ ವಿಶೇಷ ಉಡುಗೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಪ್ರಯುಕ್ತ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಶುಕ್ರವಾರ (ಜ.24) ಜನಿಸಿದ ಎಲ್ಲ ಹೆಣ್ಣು ಮಕ್ಕಳಿಗೆ ವಿಶೇಷ ಉಡುಗೊರೆ ನೀಡಲು ಆರೋಗ್ಯ ಇಲಾಖೆ ನಿರ್ಧರಿಸಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ ಅನುಸಾರ ಇಲಾಖೆ ಈ ಅಭಿಯಾನ ಹಮ್ಮಿಕೊಂಡಿದೆ. ಶುಕ್ರವಾರ ಜನಿಸಿದ ಹೆಣ್ಣು ಮಗುವಿನ ಕುಟುಂಬಕ್ಕೆ ₹1,000 ಮೌಲ್ಯದ ಮಕ್ಕಳ ಕಿಟ್‌ಗಳನ್ನು ಒದಗಿಸಲು ಆರೋಗ್ಯಾಧಿಕಾರಿಗಳಿಗೆ ಇಲಾಖೆ ನಿರ್ದೇಶಿಸಿದೆ.

ಭ್ರೂಣ ಹತ್ಯೆ– 136 ಪ್ರಕರಣ: ಗರ್ಭಾವಸ್ಥೆ ಮತ್ತು ಪ್ರಸವಪೂರ್ವ ಲಿಂಗ ಪತ್ತೆ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾಯ್ದೆ ಉಲ್ಲಂಘನೆಗೆ ಸಂಬಂಧಿಸಿದಂತೆ ಸ್ಕ್ಯಾನಿಂಗ್ ಸೆಂಟರ್, ಮಾಲೀಕರು ಹಾಗೂ ವೈದ್ಯರ ವಿರುದ್ಧ ಒಟ್ಟು 136 ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ಹೂಡಲಾಗಿದೆ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಅತ್ಯುತ್ತಮ ನಟ ರಾಜ್ಯ ಪ್ರಶಸ್ತಿ ನಿರಾಕರಿಸಿದ ನಟ ಸುದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೈಲ್ವಾನ್' ಚಿತ್ರದಲ್ಲಿನ ನಟನೆಗಾಗಿ ಬುಧವಾರವಷ್ಟೇ (ಜ.22) ಘೋಷಣೆಯಾಗಿದ್ದ 2019ನೇ ಸಾಲಿನ ಅತ್ಯುತ್ತಮ ನಟ ರಾಜ್ಯ ಪ್ರಶಸ್ತಿಯನ್ನು ನಟ ಸುದೀಪ್ ನಿರಾಕರಿಸಿದ್ದಾರೆ.



ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಅತ್ಯುತ್ತಮ ನಟ ವಿಭಾಗದಡಿ ರಾಜ್ಯ ಪ್ರಶಸ್ತಿ ಪಡೆದಿರುವುದು ನನಗೆ ಹೆಮ್ಮೆಯ ವಿಷಯ. ಇದಕ್ಕಾಗಿ ತೀರ್ಪುಗಾರರಿಗೆ, ರಾಜ್ಯ ಸರ್ಕಾರಕ್ಕೆ ಧನ್ಯವಾದಗಳು. ನಾನು ಪ್ರಶಸ್ತಿಗಳನ್ನು ಸ್ವೀಕರಿಸದೇ ಇರುವ ನಿರ್ಧಾರ ಮಾಡಿ ಹಲವು ವರ್ಷಗಳು ಆಗಿವೆ. ಈ ನಿರ್ಧಾರದ ಹಿಂದೆ ಹಲವು ವೈಯಕ್ತಿಕ ಕಾರಣಗಳು ಇವೆ. ಈ ನಿರ್ಧಾರಕ್ಕೆ ಬದ್ಧನಾಗಿದ್ದೇನೆ' ಎಂದಿದ್ದಾರೆ.

7ನೇ ಪುಟ ನೋಡಿ

ರಾಮುಲು ಸೆಳೆಯಲು ಡಿಕೆಶಿ ನಿರಂತರ ಪ್ರಯತ್ನ: ಜನಾರ್ದನ ರೆಡ್ಡಿ

ಸತೀಶ ಮಣಿಸಲು ರಾಮುಲು ಕಾಂಗ್ರೆಸ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸತೀಶ ಜಾರಕಿಹೊಳಿ ಅವರನ್ನು ಮಣಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶ್ರೀರಾಮುಲು ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಬಿಜೆಪಿಯಲ್ಲಿರುವುದು ಅಥವಾ ಬಿಡುವುದು ರಾಮುಲುಗೆ ಬಿಟ್ಟ ವಿಚಾರ ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು.



ಜನಾರ್ದನ ರೆಡ್ಡಿ

ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾರಕಿಹೊಳಿ ಅವರನ್ನು ಮೂಲೆಗುಂಪು ಮಾಡಲು ಶ್ರೀರಾಮುಲು ಅವರನ್ನು ಹೇಗಾದರೂ ಸರಿ ಕಾಂಗ್ರೆಸ್‌ಗೆ ಸೇರಿಸಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಹೇಳಿದರು.

'ನಾನು ಸಾಯುವವರೆಗೂ ರಾಮುಲು ನನ್ನ ಸ್ನೇಹಿತನೇ. ಆದರೆ, ಶತ್ರುಗಳ ಜತೆ ಸೇರಿ ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಅವರು ಪಕ್ಷ ಬಿಡುವ ಬಗ್ಗೆ ಬಳ್ಳಾರಿಯಲ್ಲಿ ಮನೆ ಮಾತಾಗಿದೆ. ಅವರು ಕಾಂಗ್ರೆಸ್ ಬಿಟ್ಟು ಬೇರೆ ಯಾವ ಪಕ್ಷ ಸೇರಲು ಸಾಧ್ಯವಿದೆ' ಎಂದು ಪ್ರಶ್ನಿಸಿದರು.

'ಶ್ರೀರಾಮುಲು ವಿರುದ್ಧ ನಾನು ಯಾರಿಗೂ ಯಾವುದೇ ರೀತಿಯಲ್ಲಿ ಚಾಡಿ ಹೇಳಿಲ್ಲ. ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ ಅವರು ನನ್ನ ವಿರುದ್ಧ ಆರೋಪಗಳನ್ನು ಮಾಡಿದ್ದಾರೆ. ಅದಕ್ಕೆ ಸ್ಪಷ್ಟನೆ ಕೊಡುವುದು ನನ್ನ ಜವಾಬ್ದಾರಿ. ಲೋಕಸಭಾ ಚುನಾವಣೆಗೂ ಮೊದಲೇ ಬಿಜೆಪಿಯಲ್ಲಿ ನನ್ನ ಪಕ್ಷವನ್ನು ವಿಲೀನಗೊಳಿಸಿದ್ದು, 18 ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಿದ್ದೇನೆ' ಎಂದರು.

6ನೇ ಪುಟ ನೋಡಿ

ಸತೀಶ ಮುಗಿಸಲು ನಾನ್ಯಾರು?



ಬಳ್ಳಾರಿ: 'ಸತೀಶ ಜಾರಕಿಹೊಳಿ ಅವರನ್ನು ಮಟ್ಟಹಾಕಲು ನನ್ನನ್ನು ಡಿ.ಕೆ ಶಿವಕುಮಾರ್ ಬಳಸಿಕೊಳ್ಳುತ್ತಿದ್ದಾರೆ, ನಾನು ಕಾಂಗ್ರೆಸ್ ಸೇರುತ್ತೇನೆ ಎಂಬುದು ಜನಾರ್ದನ ರೆಡ್ಡಿ ಅವರ ಊಹೆ. ಅವರನ್ನು ಮಟ್ಟ ಹಾಕಲು ನಾನು ಯಾರು' ಎಂದು ಮಾಜಿ ಸಚಿವ ಶ್ರೀರಾಮುಲು ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ಊರಿನ ರಾಜ ಇನ್ನೊಂದು ಊರಿನ ಗುಲಾಮ. ಸತೀಶ ಜಾರಕಿಹೊಳಿಗೆ ತೊಂದರೆ ಕೊಡುವಷ್ಟು ನಾನು ಸಣ್ಣವನಲ್ಲ; ನಾನೂ ದೊಡ್ಡ ನಾಯಕನೇ. ನಾನೀಗ ಸೋತಿದ್ದೇನೆ. ಕಾಂಗ್ರೆಸ್‌ಗೆ ನನ್ನ ಅಗತ್ಯವೇನಿದೆ? ಬಿಜೆಪಿಯಲ್ಲಿದ್ದೇನೆ, ಇಲ್ಲಿಯೇ ಮುಂದುವರಿಯುತ್ತೇನೆ' ಎಂದರು.

'ಪಕ್ಷದಲ್ಲಿ ನಡೆದ ಬೆಳವಣಿಗೆಯಿಂದ ನನಗೆ ನೋವು ಆಗಿದ್ದಕ್ಕೆ ಮಾತನಾಡಿದ್ದೇನೆ. ನಾನು ಕಾಂಗ್ರೆಸ್‌ಗೆ ಹೋಗುತ್ತೇನೆಯೇ ಎಂಬುದರ ಬಗ್ಗೆ ಜನಾರ್ದನ ರೆಡ್ಡಿಯವರೇ ಸ್ಪಷ್ಟನೆ ನೀಡಲಿ. ಅವರು ಸುಳ್ಳಿನ ಮೇಲೆ ಕೋಟೆ ಕಟ್ಟುತ್ತಾರೆ. ಕಾಂಗ್ರೆಸ್‌ನಿಂದ ನನ್ನನ್ನು ಯಾರೂ ಆಹ್ವಾನಿಸಿಲ್ಲ' ಎಂದು ಅವರು ಹೇಳಿದರು.




ರಾಮುಲು ಅವರನ್ನು ನಮ್ಮ ಪಕ್ಷಕ್ಕೆ ಕಳುಹಿಸಲು ಅವರೇ ಯತ್ನಿಸುತ್ತಿರಬಹುದು. ಬಿಜೆಪಿ ಆಂತರಿಕ ಸಂಘರ್ಷಕ್ಕೂ ನನಗೂ ಯಾವುದೇ ಸಂಬಂಧವಿಲ್ಲ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ



EXCELLENT TRAVEL COMPANY
CORPORATE AND FAMILY TOUR
TRAWEL MART WORLD TOUR PRIVATE LIMITED
Proud Moment - Unveiling Excellence In Travel!


ಗೋಲ್ಡನ್ ಯುರೋಪ್
ಇಂಗ್ಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಫ್ರಾನ್ಸ್, ಲಕ್ಸಮ್‌ಬರ್ಗ್, ಸ್ವಿಡ್ಜರ್‌ಲ್ಯಾಂಡ್, ಲಿಚೆನ್‌ಸ್ಟೈನ್, ಆಸ್ಟ್ರಿಯಾ, ಇಟಲಿ ಮತ್ತು ವ್ಯಾಟಿಕನ್
₹ 3,90,000/-




ಬೆಸ್ಟ್ ಆಫ್ ಯುರೋಪ್
ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಲಕ್ಸಮ್‌ಬರ್ಗ್, ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಇಟಲಿ ಮತ್ತು ವ್ಯಾಟಿಕನ್
₹ 2,75,000/-



ದುಬೈ
ದುಬೈ ಫ್ರೇಮ್, ಡೌ ಕ್ರೂಸ್, ಡೆಸರ್ಟ್ ಸಫಾರಿ, ಬುರ್ಜ್ ಖಲೀಫಾ, ಮಿರಾಕಲ್ ಗಾರ್ಡನ್, ಅಬು ಧಾಬಿ
₹ 95,000/-



ಸಿಂಗಾಪುರ್ ಮಲೇಷಿಯಾ
ಸಿಂಗಾಪುರ್, ಕೌಲಾಲಂಪುರ್, ಜೆಂಟಿಂಗ್ ಹೈಲ್ಯಾಂಡ್
₹ 1,09,000/-



ವಿಯೆಟ್ನಾಂ ಕಾಂಬೋಡಿಯಾ
ಹಾನೊಯ್, ಹಾಲಾಂಗ್ ಬೇ ಕ್ರೂಸ್, ನಿನ್ಹ್ ಬಿನ್, ದನಂಗ್, ಹೋ ಚಿ ಮಿನ್ಹ್ ಸಿಟೀ
₹ 1,60,000/-



ಈಜಿಪ್ಟ್
ಕೈರೋ, ಆಸ್ವಾನ್, ನೈಲ್ ಕ್ರೂಸ್, ಲಕ್ಸರ್, ಅಲೆಕ್ಸಾಂಡ್ರಿಯ
₹ 1,85,000/-



ಟರ್ಕಿ
ಇಸ್ತಾಂಬುಲ್, ಕ್ಯಾಪಡೋಸಿಯಾ, ಅಂತಾಲಿಯಾ
₹ 1,85,000/-



ಗುಂಪು ಪ್ರವಾಸ ಪ್ಯಾಕೇಜ್‌ಗಳು

ಡಿಲೈಟ್‌ಫುಲ್ ಯುರೋಪ್	14 ದಿನಗಳು	₹3,40,000/-
ಸ್ಪೇನ್ ಮತ್ತು ಪೋರ್ಚುಗಲ್	12 ದಿನಗಳು	₹2,90,000/-
ವಿಯೆಟ್ನಾಂ	7 ದಿನಗಳು	₹1,22,000/-
ಸಿಂಗಾಪುರ್ ಮಲೇಷಿಯಾ ಥೈಲ್ಯಾಂಡ್	11 ದಿನಗಳು	₹1,39,000/–
ಈಸ್ಟರ್ನ್ ಯುರೋಪ್	11 ದಿನಗಳು	₹2,80,000/-
ಗ್ರೇಟ್ ಬ್ರಿಟನ್	11 ದಿನಗಳು	₹3,20,000/-
ಸ್ಕ್ಯಾಂಡಿನೇವಿಯಾ	10 ದಿನಗಳು	₹3,35,000/-
ಸೌತ್ ಆಫ್ರಿಕಾ	10 ದಿನಗಳು	₹2,25,000/-
ಆಸ್ಟ್ರೇಲಿಯಾ	10 ದಿನಗಳು	₹3,50,000/-

ಕಾಸ್ಟಮೈಸ್ಡ್ ಪ್ರವಾಸ ಪ್ಯಾಕೇಜ್‌ಗಳು
ವಿಮಾನ ಟಿಕೆಟ್ ಹೆಚ್ಚುವರಿ

ಶ್ರೀಲಂಕಾ	6 ದಿನಗಳು	₹ 38,000/-
ಥೈಲ್ಯಾಂಡ್	7 ದಿನಗಳು	₹ 42,000/-
ಬಾಲಿ	6 ದಿನಗಳು	₹ 48,000/-
ಕಜಖಿಸ್ತಾನ್	6 ದಿನಗಳು	₹ 48,000/-
ಅಜೆರ್‌ಬೈಜಾನ್	5 ದಿನಗಳು	₹ 48,000/-
ಮಾರಿಷಸ್	7 ದಿನಗಳು	₹ 49,000/-
ಜಿಯೊರ್ಜಿಯಾ	6 ದಿನಗಳು	₹ 58,000/-
ಮಾಲ್ಡೀವ್ಸ್	5 ದಿನಗಳು	₹ 62,000/-
ಹಾಂಗ್ ಕಾಂಗ್ ಮತ್ತು ಮಕಾವು	6 ದಿನಗಳು	₹ 83,000/-
ಜೋರ್ಡಾನ್	8 ದಿನಗಳು	₹ 93,000/-
ಕೀನ್ಯಾ	8 ದಿನಗಳು	₹ 1,10,000/-
ಸೀಶೆಲ್ಸ್	7 ದಿನಗಳು	₹ 1,35,000/-
ನ್ಯೂಜಿಲ್ಯಾಂಡ್	9 ದಿನಗಳು	₹ 1,50,000/-
ಜಪಾನ್	7 ದಿನಗಳು	₹ 1,80,000/-
ಫಿನ್‌ಲ್ಯಾಂಡ್ ಮತ್ತು ಸ್ವೀಡನ್	10 ದಿನಗಳು	₹ 2,60,000/-

ಭಾರತ ಪ್ರವಾಸ ಪ್ಯಾಕೇಜ್‌ಗಳು
ವಿಮಾನ ಟಿಕೆಟ್ ಹೆಚ್ಚುವರಿ

ಕಾಶ್ಮೀರ	5 ದಿನಗಳು	₹ 23,000/-
ಲೇಹ್ ಲಡಾಖ್	5 ದಿನಗಳು	₹ 26,000/-
ಅಂಡಮಾನ್	5 ದಿನಗಳು	₹ 23,000/-
ರಾಜಸ್ಥಾನ	5 ದಿನಗಳು	₹ 24,000/-
ಮಹಾ ಕುಂಭಮೇಳ	5 ದಿನಗಳು	₹ 23,500/-
ಸಿಕ್ಕಿಂ ಡಾರ್ಜಿಲಿಂಗ್	5 ದಿನಗಳು	₹ 23,000/-
ಅಸ್ಸಾಂ ಮೇಘಾಲಯ	5 ದಿನಗಳು	₹ 25,000/-
ನೇಪಾಳ	7 ದಿನಗಳು	₹ 24,000/-
ಭೂತಾನ್	7 ದಿನಗಳು	₹ 50,000/-

ಟ್ರಾವೆಲ್ ಮಾರ್ಟ್ ವರ್ಲ್ಡ್ ಟೂರ್ಸ್ ಪ್ರೈವೇಟ್ ಲಿಮಿಟೆಡ್

IATA Accredited Agent 14376740

ಬೆಂಗಳೂರು ನಂ. ೩೫೭, ಟ್ರಾವೆಲ್ ಮಾರ್ಟ್ ಗೃಹ, ೧೧ನೇ ಬಿ ಮುಖ್ಯ ರಸ್ತೆ, ಜಯನಗರ ೪ನೇ ಬಡಾವಣೆ, ಬೆಂಗಳೂರು–೫೬೦೦೧೧

ಮಲ್ಲೇಶ್ವರಂ ೧ನೇ ಟೆಂಪಲ್ ಸ್ಟ್ರೀಟ್, ೨೦, ೧೧ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – ೫೬೦೦೦೩.

enquiry@trawelmart.com 080 4642 7999 www.trawelmart.com

ವಿರೂಪಾಕ್ಷಯ್ಯ, ರಾಮಚಂದ್ರಗೆ 'ಪುಟ್ಟಶ್ರೀ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಗುರು ಗಾನಲಹರಿ ಸಂಗೀತ ಅಕಾಡೆಮಿ ನೀಡುವ 'ಪುಟ್ಟಶ್ರೀ ಪ್ರಶಸ್ತಿ'ಗೆ ಹಿಂದೂಸ್ತಾನಿ ಗಾಯಕ ವಿರೂಪಾಕ್ಷಯ್ಯ ವಂದಲಿ ಹಾಗೂ ತಬಲಾ ವಾದಕ ರಾಮಚಂದ್ರ ಕಲ್ಲಹಿಪ್ಪರಗಿ ಆಯ್ಕೆಯಾಗಿದ್ದಾರೆ.



ವಿರೂಪಾಕ್ಷಯ್ಯ ವಂದಲಿ



ರಾಮಚಂದ್ರ ಕಲ್ಲಹಿಪ್ಪರಗಿ

ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಅಕಾಡೆಮಿಯು ಇದೇ 25ರಂದು ಮಧ್ಯಾಹ್ನ 3.30ಕ್ಕೆ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 15ನೇ ಸಂಗೀತೋತ್ಸವ ಹಮ್ಮಿಕೊಂಡಿದೆ. ಇದೇ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಸಂಗೀತೋತ್ಸವವನ್ನು ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಉದ್ಘಾಟಿಸುತ್ತಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಮನು ಬಳಿಗಾರ್ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ತಬಲಾ ವಾದಕ ಸತೀಶ್ ಹಂಪಿಹೊಳಿ ಅವರು ಅಧ್ಯಕ್ಷತೆ ವಹಿಸುತ್ತಾರೆ ಎಂದು ಅಕಾಡೆಮಿ ಅಧ್ಯಕ್ಷ ಶಿವಾನಂದ ಹೇರೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಲಿತಕಲಾ ಅಕಾಡೆಮಿಯ 'ಮನೆಗೊಂದು ಕಲಾಕೃತಿ' ಯೋಜನೆ: 65 ಪೇಂಟಿಂಗ್ ಮಾರಾಟ

ದಾಸ್ತಾನು ಕೇಂದ್ರಕ್ಕೆ ಕಲಾಕೃತಿಗಳು

• ವರುಣ ಹೆಗಡೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು 'ಮನೆಗೊಂದು ಕಲಾಕೃತಿ' ಯೋಜನೆಯಡಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಿದ್ದ 700 ಕಲಾಕೃತಿಗಳಲ್ಲಿ ಕೇವಲ 65 ಕಲಾಕೃತಿಗಳು ಮಾತ್ರ ಮಾರಾಟವಾಗಿವೆ. ಇದರಿಂದಾಗಿ ಉಳಿದ ಕಲಾಕೃತಿಗಳು ಮತ್ತೆ ಅಕಾಡೆಮಿಯ ದಾಸ್ತಾನು ಕೇಂದ್ರಕ್ಕೆ ಮರಳಿವೆ.

ಕಲಾಕೃತಿಗಳು ಕೈಗೆಟುಕುವ ದರದಲ್ಲಿ ಸಿಗುವ ಜತೆಗೆ, ಮನೆಗಳ ಗೋಡೆಯನ್ನು ಅಲಂಕರಿಸುವಂತಾಗಬೇಕು ಎಂಬ ಉದ್ದೇಶದಿಂದ ಅಕಾಡೆಮಿಯು ಈ ಯೋಜನೆಯನ್ನು ಪ್ರಾರಂಭಿಸಿದೆ. ಅಕಾಡೆಮಿ ನಡೆಸಿದ ತರಬೇತಿ, ಕಾರ್ಯಾಗಾರ, ಶಿಬಿರಗಳಲ್ಲಿ ಯುವ ಕಲಾವಿದರು ರಚಿಸಿದ ಅತ್ಯುತ್ತಮ ಕಲಾಕೃತಿಗಳನ್ನು ಆಯ್ಕೆ ಮಾಡಿ, ಅವುಗಳ ಪ್ರದರ್ಶನ ಮತ್ತು ಮಾರಾಟವನ್ನುಇದೇ 18ರಿಂದ 21ರವರೆಗೆ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಮೊದಲ ದಿನವೇ ₹3 ಲಕ್ಷದಷ್ಟು ವಹಿವಾಟು ನಡೆದಿತ್ತು. ಇದರಿಂದಾಗಿ ಬಹುತೇಕ ಎಲ್ಲ ಕಲಾಕೃತಿಗಳು ಮಾರಾಟವಾಗುವ ನಿರೀಕ್ಷೆಯನ್ನು ಅಕಾಡೆಮಿ ಕಾರ್ಯಕಾರಿ ಸಮಿತಿ ಹೊಂದಿತ್ತು. ಆದರೆ, ವಾರಾಂತ್ಯದಲ್ಲಿ ಮಳೆಯ ಕಾರಣ



ಅಕಾಡೆಮಿ ಹಮ್ಮಿಕೊಂಡಿದ್ದ ಪ್ರದರ್ಶನದಲ್ಲಿ ಕಲಾಕೃತಿಗಳನ್ನು ಕುತೂಹಲದಿಂದ ವೀಕ್ಷಿಸಿದ ಯುವತಿಯರು ಪ್ರಜಾವಾಣಿ ಚಿತ್ರ



ಒಂದಷ್ಟು ಕಲಾಕೃತಿಗಳನ್ನಾದರೂ ಕಲಾಭಿಮಾನಿಗಳ ಮನೆಗಳಿಗೆ ತಲುಪಿಸಿದ ತೃಪ್ತಿಯಿದೆ. ಈ ಪ್ರದರ್ಶನವು ಜನರಲ್ಲಿ ಕಲಾ ಅಭಿರುಚಿ ಬೆಳೆಸಲು ಸಹಕಾರಿಯಾಗಿದೆ

ಪ.ಸ.ಕುಮಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ

ಪ್ರದರ್ಶನವು ಕಲಾಸಕ್ತರ ಬರ ಎದುರಿಸಿತು. ಪರಿಣಾಮ ನಾಲ್ಕು ದಿನಗಳಲ್ಲಿ ₹ 6.05 ಲಕ್ಷದಷ್ಟು ಮಾತ್ರ ವಹಿವಾಟು ನಡೆದಿದೆ.

ಅಕಾಡೆಮಿ ನಡೆಸಿದ ತರಬೇತಿ, ಕಾರ್ಯಾಗಾರ, ಶಿಬಿರಗಳಲ್ಲಿ ನೂರಾರು ಕಲಾವಿದರಿಂದ ಸಾವಿರಾರು ಕಲಾಕೃತಿಗಳು ರಚಿಸಲ್ಪಟ್ಟಿವೆ. ಅವುಗಳು ಅಕಾಡೆಮಿಯಲ್ಲಿಯೇ ದೂಳು ಹಿಡಿಯುತ್ತಿದ್ದರಿಂದ, ಹಾಲಿ ಕಾರ್ಯಕಾರಿ ಸಮಿತಿಯು ಸುಸ್ಥಿತಿಯಲ್ಲಿರುವ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಈ ಯೋಜನೆ ರೂಪಿಸಿತ್ತು. ಇವುಗಳನ್ನು ಇರಿಸಲು ಸ್ಥಳಾವಕಾಶದ ಕೊರತೆಯೂ ಎದುರಾಗಿತ್ತು. ಪ್ರದರ್ಶನ ಮತ್ತು ಮಾರಾಟಕ್ಕೆ ಆಯ್ಕೆ ಮಾಡಲಾದ ಕಲಾಕೃತಿಗಳಲ್ಲಿ ಡ್ರಾಯಿಂಗ್‌ಗಳಿಗೆ ₹1 ಸಾವಿರದಿಂದ ₹2 ಸಾವಿರ ನಿಗದಿಪಡಿಸಿದರೆ, ಪೇಂಟಿಂಗ್‌ಗಳಿಗೆ ₹ 3 ಸಾವಿರದಿಂದ ₹ 30 ಸಾವಿರದವರೆಗೆ ದರ ಗೊತ್ತುಪಡಿಸಲಾಗಿತ್ತು. 3x3 ಅಡಿವರೆಗಿನ ಅಳತೆಯ ಕಲಾಕೃತಿಗಳೂ ಇದ್ದವು. ಜಲವರ್ಣ, ಆಕ್ರಿಲಿಕ್, ಮಧುಬನಿ, ತೈಲವರ್ಣ ಸೇರಿ ವಿವಿಧ ಪ್ರಕಾರದ ಕಲಾ ಕೃತಿಗಳು ಪ್ರದರ್ಶನದಲ್ಲಿ ಗಮನ ಸೆಳೆದಿದ್ದವು.

ವಲಯವಾರು ಕಲಾಕೃತಿಗಳ ಪ್ರದರ್ಶನ

ಅಕಾಡೆಮಿಯ 'ಮನೆಗೊಂದು ಕಲಾಕೃತಿ' ಯೋಜನೆಯಡಿ ಆಯ್ದ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟವನ್ನು ರಾಜ್ಯದ ನಾಲ್ಕೂ ವಲಯಗಳಲ್ಲಿ ಹಮ್ಮಿಕೊಳ್ಳಲು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಕಲಾಗ್ರಾಮದಲ್ಲಿ ಇರಿಸಲಾಗಿರುವ ಕಲಾಕೃತಿಗಳನ್ನು ಈ ಪ್ರದರ್ಶನಗಳಿಗೆ ಕೊಂಡೊಯ್ಯಲಾಗುತ್ತದೆ. ಬೆಂಗಳೂರಿನಲ್ಲಿ ಆರು ತಿಂಗಳ ಬಳಿಕ ಮತ್ತೊಮ್ಮೆ ಪ್ರದರ್ಶನ ಮತ್ತು ಮಾರಾಟ ನಡೆಸಲು ಯೋಜನೆ ರೂಪಿಸಿದೆ. ಮಕ್ಕಳು ಹಾಗೂ ವಿವಿಧ ವಯೋಮಾನದವರಲ್ಲಿ ಕಲಾ ಅಭಿರುಚಿ ಬೆಳೆಸುವ ಉದ್ದೇಶ ಈ ಪ್ರದರ್ಶನಗಳ ಹಿಂದಿದೆ.

ಕಲಾಗ್ರಾಮದಲ್ಲಿ ದಾಸ್ತಾನು

ಪ್ರದರ್ಶನದಲ್ಲಿ ಮಾರಾಟವಾಗದ ಕಲಾಕೃತಿಗಳನ್ನು ಕಲಾಗ್ರಾಮದಲ್ಲಿರುವ ಅಕಾಡೆಮಿ ಕೇಂದ್ರದಲ್ಲಿ ದಾಸ್ತಾನು ಮಾಡಲಾಗಿದೆ. ಸದ್ಯ ಅಕಾಡೆಮಿ ಸ್ಥಳಾವಕಾಶದಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಇರದಿದ್ದರಿಂದ ಹಾಗೇ ಇರಿಸಲು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. 'ಮನೆಗೊಂದು ಕಲಾಕೃತಿ' ಯೋಜನೆಯಡಿ ನಡೆದ ಪ್ರದರ್ಶನದಿಂದ ಬಂದ ಹಣವನ್ನು ಕಲಾ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಡಿಸಲು ಹಾಗೂ ಕಲಾಕೃತಿಗಳ ರಕ್ಷಣೆಗೆ ಬಳಸಿಕೊಳ್ಳಲು ಅಕಾಡೆಮಿ ಮುಂದಾಗಿದೆ.

'ಕಲಾ ಪ್ರದರ್ಶನಗಳಿಗೆ ಸಾಮಾನ್ಯವಾಗಿ ವಾರಾಂತ್ಯದಲ್ಲಿಯೇ ಹೆಚ್ಚಿನ ಜನರು ಕುಟುಂಬ ಸಮೇತ ಬರುತ್ತಾರೆ. ಆದರೆ, ಪ್ರದರ್ಶನದ ಅವಧಿಯ ಭಾನುವಾರ ಮಳೆ–ಮೋಡ ಕವಿದ ವಾತಾವರಣದಿಂದಾಗಿ ಕಲಾಸಕ್ತರು ಬರಲಿಲ್ಲ. ಉಳಿದ ದಿನಗಳು ಹಲವರು ಪ್ರದರ್ಶನವನ್ನು ವೀಕ್ಷಿಸಿ, ಸಂಭ್ರಮಿಸಿದರು. ಕಲಾಕೃತಿಗಳನ್ನು ಕಲಾಗ್ರಾಮದಲ್ಲಿರುವ ಕೇಂದ್ರದಲ್ಲಿ ಜೋಪಾನವಾಗಿ ಇರಿಸಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಮತ್ತೆ ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಲಾಗುತ್ತದೆ. ಪ್ರದರ್ಶನ ಮುಗಿದ ಬಳಿಕವೂ ಹಲವು ಮಂದಿ ಕಲಾಕೃತಿಯ ಲಭ್ಯತೆ ಬಗ್ಗೆ ವಿಚಾರಿಸಿದ್ದಾರೆ' ಎಂದು ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ತಿಳಿಸಿದರು.

27 ಎಕರೆಯಲ್ಲಿ ಉಚಿತ ನಿವೇಶನ

ರಾಜರಾಜೇಶ್ವರಿನಗರ: ರಾಮೋಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಆಶ್ರಯ ಯೋಜನೆಯಲ್ಲಿ 27 ಎಕರೆಯಲ್ಲಿ ಉಚಿತ ನಿವೇಶನ ಪಡೆಯುವ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲಾಗಿದೆ.

ರಾಮೋಹಳ್ಳಿಯಲ್ಲಿ 10 ಎಕರೆ, ಬೆಟ್ಟನಪಾಳ್ಯದಲ್ಲಿ ಐದು ಎಕರೆ, ಚಳ್ಳಘಟ್ಟದಲ್ಲಿ 7 ಎಕರೆ, ಭೀಮನಕುಪ್ಪೆಯಲ್ಲಿ ಐದು ಎಕರೆ ಪ್ರದೇಶದಲ್ಲಿ ಉಚಿತ ನಿವೇಶನ ನೀಡಲು ಗ್ರಾಮಸಭೆಯಲ್ಲಿ ನಿರ್ಣಯಿಸಲಾಯಿತು. ಅಂಗವಿಕಲರಿಗೆ ನೀಡಿದ 75 ಹಕ್ಕುಪತ್ರಗಳಿಗೆ ಇ-ಖಾತೆ, 94 ಸಿಸಿ ಅಡಿಯಲ್ಲಿ ವಿನಾಯಕನಗರ, ಭೀಮನಕುಪ್ಪೆ, ಬೆಣ್ಣಚಕಲ್ಲು, ಹೊಸಕೆರೆ ಗ್ರಾಮಸ್ಥರಿಗೂ ಇ-ಖಾತೆಗಳನ್ನು ಉಚಿತವಾಗಿ ನೀಡಲಾಯಿತು. ಇದೇ ಸಂದರ್ಭದಲ್ಲಿ 70 ಉಚಿತ ಹೊಲಿಗೆ ಯಂತ್ರಗಳನ್ನು ಶಾಸಕ ಎಸ್.ಟಿ.ಸೋಮಶೇಖರ್ ವಿತರಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಚ್.ಪ್ರಭು, ಉಪಾಧ್ಯಕ್ಷೆ ಜಯಮ್ಮಎಲ್ಲಪ್ಪ, ಸದಸ್ಯ ವಿ.ವೇಣುಗೋಪಾಲ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಬಿಂದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭಾರತಿ ಉಪಸ್ಥಿತರಿದ್ದರು.

ಯಂತ್ರೋಪಕರಣಗಳ ರಾಜಧಾನಿ ಕರ್ನಾಟಕ: ಸಚಿವ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ಕರ್ನಾಟಕವು ಶೇ 50ರಷ್ಟು ಪಾಲು ಹೊಂದಿದ್ದು, 'ಯಂತ್ರೋಪಕರಣಗಳ ರಾಜಧಾನಿ' ಎಂಬ ಪ್ರಖ್ಯಾತಿ ಪಡೆದಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆದ 'ಭಾರತೀಯ ಯಂತ್ರೋಪಕರಣ ತಂತ್ರಜ್ಞಾನ ಪ್ರದರ್ಶನ'ವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಹಿಂದೂಸ್ತಾನ್ ಮಷಿನ್ ಅಂಡ್ ಟೂಲ್ಸ್ (ಎಚ್‌ಎಂಟಿ) ಮೂಲಕ ಯಂತ್ರೋಪಕರಣ ಕ್ಷೇತ್ರಕ್ಕೆ ರಾಜ್ಯ ಐದು ದಶಕಗಳ ಹಿಂದೆಯೇ ಬಲಿಷ್ಠ ಅಡಿಪಾಯ ಹಾಕಿದೆ' ಎಂದರು.

'ತಂತ್ರಜ್ಞಾನದ ಉನ್ನತೀಕರಣ, ಕೌಶಲ ಅಭಿವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಬಗ್ಗೆ ಭಾರತ ಸ್ಪಷ್ಟ ಗುರಿ ಹೊಂದಿದ್ದು, ಆ ನಿಟ್ಟಿನಲ್ಲಿ ಭಾರತೀಯ ಬಂಡವಾಳ ಸರಕುಗಳ ವಲಯದಲ್ಲಿ ಸ್ಪರ್ಧೆ ಹೆಚ್ಚಿಸಲು ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ' ಎಂದು ಹೇಳಿದರು.

'ರಾಷ್ಟ್ರೀಯ ಬಂಡವಾಳ ಸರಕುಗಳ ನೀತಿ- 2025' ರೂಪಿಸಲು ಕೈಗಾರಿಕೆ ಸಚಿವಾಲಯ ಮುಂದಾಗಿದೆ. ಈ ವಲಯದಲ್ಲಿ ಭಾರತವನ್ನು ಜಾಗತಿಕ ಶಕ್ತಿಯನ್ನಾಗಿ ಮಾಡುವತ್ತ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಆಮದು ಮೇಲಿನ ಅವಲಂಬನೆ ಕಡಿತ, ಸ್ಪರ್ಧಾತ್ಮಕತೆ ಹೆಚ್ಚಿಸಲು ವ್ಯವಸ್ಥಿತ ಚೌಕಟ್ಟು ಒದಗಿಸುವ ಈ ನೀತಿಯು ಆದಷ್ಟು ಬೇಗ ಹೊರಬರಲಿದೆ' ಎಂದು ಕುಮಾರಸ್ವಾಮಿ ಹೇಳಿದರು.



'ಭಾರತೀಯ ಯಂತ್ರೋಪಕರಣ ತಂತ್ರಜ್ಞಾನ ಪ್ರದರ್ಶನ'ಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ರಾಜ್ಯದ ಸಚಿವ ಎಂ.ಬಿ. ಪಾಟೀಲ ಅವರು ಯಂತ್ರಗಳ ಬಗ್ಗೆ ಮಾಹಿತಿ ಪಡೆದರು

ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ ಮಾತನಾಡಿ, 'ಯಂತ್ರೋಪಕರಣಗಳ ಉದ್ಯಮದ ಬಲವರ್ಧನೆಗೆ ಸರ್ಕಾರವು ನಿರ್ದಿಷ್ಟ 'ವಿಷನ್ ಗ್ರೂಪ್' ರಚಿಸಿದೆ' ಎಂದರು.

'ಮಷಿನ್ ಟೂಲ್ ವಲಯಕ್ಕಾಗಿ 'ಮಷಿನ್ ಟೂಲ್ ಪಾರ್ಕ್' ಅನ್ನು ರಾಜ್ಯ ಸರ್ಕಾರ ತುಮಕೂರಿನಲ್ಲಿ ಸ್ಥಾಪಿಸಿದೆ. ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಒದಗಿಸಲಾಗಿದ್ದು, ವಿದೇಶಗಳ ಹೂಡಿಕೆದಾರರನ್ನು ಆಕರ್ಷಿಸುತ್ತಿದೆ' ಎಂದರು.

ಅಂಗಾಂಗ ದಾನ: ಏಳು ಮಂದಿಗೆ ನೆರವಾದ ಯುವಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಿದುಳು ಸಂಬಂಧಿ ಸಮಸ್ಯೆಯಿಂದಾಗಿ ಮೃತಪಟ್ಟ ಯುವಕನೊಬ್ಬ, ಅಂಗಾಂಗ ದಾನಗಳ ಮೂಲಕ ಏಳು ಮಂದಿಗೆ ನೆರವಾಗಿದ್ದಾರೆ.

32 ವರ್ಷದ ಕಿರಣ್ ಕುಮಾರ್ ಅಂಗಾಂಗ ದಾನಿಯಾಗಿದ್ದಾರೆ. ಕೂಲಿ ಕಾರ್ಮಿಕರಾಗಿದ್ದ ಅವರು, ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ತುಪ್ಪದಹಳ್ಳಿಯವರು. ಸದ್ಯ ಮಹದೇವಪುರದಲ್ಲಿ ವಾಸವಿದ್ದರು. ಜ.17ರಂದು ಪ್ರಜ್ಞೆ ತಪ್ಪಿ ಬಿದ್ದಿದ್ದ ಅವರನ್ನು ನಿಮ್ಹಾನ್ಸ್‌ಗೆ ಕರೆದೊಯ್ಯಲಾಗಿತ್ತು. 18ರಂದು ಬೆಳಿಗ್ಗೆ ಆಸ್ಟರ್ ಆರ್‌ವಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೇ 20ರಂದು ವೈದ್ಯರು ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿ, ಅಂಗಾಂಗ ದಾನದ ಬಗ್ಗೆ ಕುಟುಂಬಸ್ಥರಿಗೆ ತಿಳಿಸಿದರು.

ಮೃತರಿಗೆ ತಂದೆ–ತಾಯಿ, ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಪಾಲಕರು ಪುತ್ರನ ಎರಡು ಮೂತ್ರಪಿಂಡಗಳು, ಕಣ್ಣುಗಳು, ಯಕೃತ್ತು ಮತ್ತು ಹೃದಯವನ್ನು ದಾನ ಮಾಡಲು ಸಮ್ಮತಿಸಿದ್ದರು. ಇದರಿಂದ ಏಳು ಮಂದಿಗೆ ಅಂಗಾಂಗಗಳು ದೊರೆತಂತಾಗಿದೆ. 'ಕಿರಣ್ ನಮ್ಮ ಮನೆಯ ಆಧಾರ ಸ್ತಂಭವಾಗಿದ್ದ. ಆತನ ಹಠಾತ್ ನಿರ್ಗಮನದಿಂದ ಜೀವನದಲ್ಲಿ ಶೂನ್ಯ ಆವರಿಸಿದೆ. ಮತ್ತೊಬ್ಬರ ಜೀವನಕ್ಕೆ ನೆರವಾಗಲಿ ಎಂದು ಅಂಗಾಂಗ ದಾನ ಮಾಡಲು ತೀರ್ಮಾನಿಸಿದೆವು' ಎಂದು ತಂದೆ ಸ್ವಾಮಿ ತಿಳಿಸಿದ್ದಾರೆ.

'ವಿಶ್ವನಾಥ್ ಯಾರು?: ಸ್ಪಷ್ಟಪಡಿಸಲಿ'

ಬೆಂಗಳೂರು: 'ಕಾಂಗ್ರೆಸ್ ವಿದ್ಯಮಾನಗಳ ಬಗ್ಗೆ ಮಾತನಾಡಲು ಎಚ್. ವಿಶ್ವನಾಥ್ ಯಾರು? ಅವರು ಅನಿವಾಸಿ ಕಾಂಗ್ರೆಸ್ಸಿಗರೋ? ಅಲೆಮಾರಿ ಕಾಂಗ್ರೆಸ್ಸಿಗರೋ ಎಂಬುದನ್ನು ಮೊದಲು ಸ್ಪಷ್ಟಪಡಿಸಲಿ' ಎಂದು ರಾಮಮೋಹನ್ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಆಗ್ರಹಿಸಿದ್ದಾರೆ.

'ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಬೇಕು, ಅವರದ್ದೆಲ್ಲ ಮುಗಿದಿದೆ' ಎಂಬ ವಿಶ್ವನಾಥ್ ಹೇಳಿಕೆಗೆ ತಿರುಗೇಟು ನೀಡಿರುವ ಶಿವಣ್ಣ, 'ತಮ್ಮ ರಾಜಕೀಯ ಅಸ್ತಿತ್ವ ಹಾಗೂ ಜೀವಂತಿಕೆ ಉಳಿಸಿಕೊಳ್ಳಲು ವಿಶ್ವನಾಥ್ ಇಂತಹ ಹೇಳಿಕೆ ನೀಡುತ್ತಿದ್ದಾರೆ. ಅವರ ಬಾಲಿಶ ವರ್ತನೆ ಹೊಸದೇನು ಅಲ್ಲ' ಎಂದಿದ್ದಾರೆ.

'ಅಧಿಕಾರ ಮತ್ತು ಲಾಭಕ್ಕಾಗಿ ವಿಶ್ವನಾಥ್ ಅವರು ಯಾರ ಮನೆಬಾಗಿಲಿಗೆ ಬೇಕಾದರೂ ಎಡತಾಕುತ್ತಾರೆ. ಅವರು ಈಗ ಯಾವ ಪಕ್ಷದಲ್ಲಿ ಇದ್ದಾರೆ? ಯಾರಾದರೂ ಅವರನ್ನು ಗಂಭೀರವಾಗಿ ಪರಿಗಣಿಸುತ್ತಾರೆಯೇ? ಅವರ ಆಲ್‌ಪಾರ್ಟಿ ಸ್ವಭಾವದಿಂದಲೇ ಈಗ ಮೂಲೆಗುಂಪಾಗಿದ್ದಾರೆ. ಅವರು ನಿರೀಕ್ಷೆ ಮಾಡುವವರೇ ಹೊರತು ನಿಯತ್ತಿನ ವ್ಯಕ್ತಿ ಅಲ್ಲ' ಎಂದು ಟೀಕಿಸಿದ್ದಾರೆ.



ನಿವೃತ್ತ ಪ್ರಾಧ್ಯಾಪಕರ ಸನ್ಮಾನ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಮಾತನಾಡಿದರು

'ಗ್ಯಾರಂಟಿ ಪಟ್ಟಿಯಲ್ಲಿ ಶಿಕ್ಷಣವನ್ನು ಸೇರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಗಳು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಬೇಕು. ಆದರೆ ಎಲ್ಲಾ ಸರ್ಕಾರಗಳು ಶಿಕ್ಷಣ ಕ್ಷೇತ್ರದ ಮಹತ್ವವನ್ನೇ ಮರೆತಂತಿದೆ. ಸರ್ಕಾರಗಳು ಮೊದಲು ಶಿಕ್ಷಣವನ್ನು ಗ್ಯಾರಂಟಿ ಪಟ್ಟಿಯಲ್ಲಿ ಸೇರಿಸಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕರ ಪರಿಷತ್ತು ವತಿಯಿಂದ ಆಯೋಜಿಸಿದ್ದ 'ಸೇವಾ ನಿವೃತ್ತ ಪ್ರಾಧ್ಯಾಪಕರಿಗೆ ಗೌರವ ಸಮರ್ಪಣೆ ಸಮಾರಂಭ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಎಲ್ಲಾ ಸರ್ಕಾರಗಳು ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷಿಸುತ್ತಿವೆ. ಕೇವಲ ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಿಸುವ ಕಡೆ ಗಮನ ಹರಿಸುತ್ತಿವೆಯೇ ಹೊರತು, ಅವುಗಳಿಗೆ ಮೂಲ ಸೌಕರ್ಯ ಕಲ್ಪಿಸುವುದನ್ನೇ ಮರೆತಂತಿದೆ. ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತಿಲ್ಲ. ಹೊಸ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ವಾಹನದ ಪೆಟ್ರೋಲ್‌ಗೂ ಹಣವಿಲ್ಲ. ಮೂಲ ಸೌಕರ್ಯ, ಗ್ರಂಥಾಲಯಗಳಿಗೆ ಅನುದಾನವಿಲ್ಲ. ಈ ಬಗ್ಗೆಯೂ ಸಂಘಟನೆಗಳು ಧ್ವನಿ ಎತ್ತಬೇಕು' ಎಂದರು.

'ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯ, ಶಿಕ್ಷಣ ಸಂಸ್ಥೆಗಳಲ್ಲಿ ಕಾಯಂ ಪ್ರಾಧ್ಯಾಪಕ, ಉಪನ್ಯಾಸಕರ ಕೊರತೆ ಎದ್ದು ಕಾಣುತ್ತಿದೆ. ಕೆಲವೆಡೆ ಬೆರಳೆಣಿಕೆಯಷ್ಟೂ ಕಾಯಂ ಪ್ರಾಧ್ಯಾಪಕರಿಲ್ಲ. ರಾಜ್ಯದಲ್ಲಿ 13,000 ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಷ್ಟಾದರೂ ಸಮಸ್ಯೆ ಬಗೆಹರಿದಿಲ್ಲ. ಇದರಿಂದ ಸಂಶೋಧನೆ ಮತ್ತು ಅಧ್ಯಯನದ ಮೇಲೆ ಪರಿಣಾಮ ಬೀರಲಿದೆ' ಎಂದು ಪ್ರತಿಪಾದಿಸಿದರು.

'ಕೇವಲ ಪಾಠ ಮಾಡುವುದೇ ಶಿಕ್ಷಕ ವೃತ್ತಿಯ ಕೆಲಸವಲ್ಲ. ಮುಂದಿನ ಪೀಳಿಗೆಯನ್ನು ಆರೋಗ್ಯಕರವಾಗಿರಿಸಲು ಪ್ರಯತ್ನಿಸಬೇಕು. ಸರ್ಕಾರದಿಂದ ಸೌಲಭ್ಯಕ್ಕೆ ಮತ್ತು ಪ್ರಾಧ್ಯಾಪಕರ ನೇಮಕಾತಿಗೆ ಹಕ್ಕೊತ್ತಾಯ ಮಾಡಬೇಕು. ಪ್ರಾಧ್ಯಾಪಕರು ತಮ್ಮ ನೈತಿಕತೆ ಮತ್ತು ಜವಾಬ್ದಾರಿ ಮರೆಯಬೇಕು' ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 10 ನಿವೃತ್ತ ಪ್ರಾಧ್ಯಪಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಕುಲಸಚಿವ ಶೇಕ್ ಲತೀಫ್, ಕುಲಸಚಿವರು (ಮೌಲ್ಯಮಾಪನ) ಶ್ರೀನಿವಾಸ್ ಸಿ, ಪ್ರೊ. ಸಿ. ಬಿ. ಹೊನ್ನುಸಿದ್ಧಾರ್ಥ, ಪ್ರೊ.ಎಸ್.ನಾಗರತ್ನಮ್ಮ, ಪ್ರೊ.ಎಸ್.ಟಿ. ಗಿರೀಶ್, ಪ್ರೊ.ಡಿ.ಕೆ. ಚಿತ್ತಯ್ಯ ಪೂಜಾರ್ ಸೇರಿದಂತೆ ಬಿ.ಯು.ಟಿ.ಸಿ. ಉಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ವಿದ್ಯುತ್ ಕಡಿತಕ್ಕೆ ನಾಗರಿಕರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಹೊಸ ಬಡಾವಣೆ ರಚಿಸುವ ಪ್ರದೇಶಗಳಲ್ಲಿನ ಮನೆಗಳಿಗೆ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಬೆಸ್ಕಾಂಗೆ ಪತ್ರ ಬರೆದ ಬೆನ್ನಲ್ಲೇ, ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿರುವುದಕ್ಕೆ ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ

ಪಿಆರ್‌ಆರ್–2 ರಸ್ತೆ ಯೋಜನೆಯು ಮೈಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ-ಕನಕಪುರ ರಸ್ತೆ-ಹೊಸೂರು ರಸ್ತೆ ಸಂಪರ್ಕ ಸಾಧ್ಯವಾಗಲಿದೆ. ಈ ರಸ್ತೆಯ ಅಕ್ಕಪಕ್ಕದ ಪ್ರದೇಶದಲ್ಲಿ ಹೊಸ ಬಡಾವಣೆ ರಚಿಸಲು ಬಿಡಿಎ ಮುಂದಾಗಿದೆ. ಹಾಗಾಗಿ ಈ ಪ್ರದೇಶಗಳಲ್ಲಿನ ಗ್ರಾಮಗಳಲ್ಲಿರುವ ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಬಾರದು ಎಂದು ಬಿಡಿಎ ಕಾರ್ಯನಿರ್ವಾಹಕ ಎಂಜಿನಿಯರ್, ಬೆಸ್ಕಾಂ ಕೆಂಗೇರಿ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ಪತ್ರ ಬರೆದಿದ್ದಾರೆ. ಬೆಸ್ಕಾಂ ಎಂಜಿನಿಯರ್‌ಗಳು ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿದ್ದು, ಇದಕ್ಕೆ ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ಹೊರವಲಯದಲ್ಲಿ ಬಿಡಿಎ ಹೊಸ ಬಡಾವಣೆಗಳನ್ನು ನಿರ್ಮಿಸಲು ಮುಂದಾಗಿದೆ. ಇದಕ್ಕಾಗಿ ಆಯಾ ಗ್ರಾಮಗಳಲ್ಲಿ ಲಭ್ಯ ಜಮೀನಿನ ಸಮೀಕ್ಷೆ ಕೈಗೊಂಡಿದೆ. ಜತೆಗೆ ಡಿಪಿಆರ್ ಸಿದ್ದಪಡಿಸುತ್ತಿದ್ದು, ಭೂಸ್ವಾಧೀನ ಪ್ರಕ್ರಿಯೆಗೂ ಚಾಲನೆ ನೀಡಿದೆ.

‘ಭವಿಷ್ಯದಲ್ಲಿ ನಿರ್ಮಿಸುವ ಹೊಸ ಬಡಾವಣೆಗಳಿಗಾಗಿ ಈಗಲೇ ನಮ್ಮ ಸ್ವಂತ ಜಮೀನಿನಲ್ಲಿ ವಾಸಕ್ಕೆ ಮನೆ ನಿರ್ಮಿಸಿಕೊಳ್ಳಲು ತಡೆಯುವುದು ಯಾವ ನ್ಯಾಯ?’ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಿಆರ್‌ಆರ್–2 ನಿರ್ಮಾಣವಾಗಲಿರುವ ಮಾರ್ಗದಲ್ಲಿ ಕೆಂಗೇರಿ, ಉತ್ತರಹಳ್ಳಿ, ಜಿಗಣಿ ಹಾಗೂ ಬೇಗೂರು ಹೋಬಳಿಗಳಿಗೆ ಸೇರಿದ 20 ಹಳ್ಳಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಸ್ಥಗಿತಕ್ಕೆ ಸೂಚಿಸಲಾಗಿದೆ.

ಅಗರ, ಕಗ್ಗಲಿಪುರ, ಒ.ಬಿ. ಚೂಡಹಳ್ಳಿ, ಗುಲಕಮಲೆ, ಹುತ್ತರಿ, ಗುಡಿಮಾವು, ಕಂಬೀಪುರ, ದೇವಗೆರೆ, ಗಂಗಸಂದ್ರ, ಮಾರಗೊಂಡನಹಳ್ಳಿ, ಹುಲ್ಲಳ್ಳಿ, ಬಿಂಗೀಪುರ, ಹುಲಿ ಮಂಗಲ, ಬೆಟ್ಟದದಾಸಪುರ, ಯಲೇನಹಳ್ಳಿ, ಮೈಲಸಂದ್ರ, ಕಮ್ಮನಹಳ್ಳಿ, ಹೊಮ್ಮದೇವನಹಳ್ಳಿ, ಬೇಗೂರು ಗ್ರಾಮಗಳು ಸಮಸ್ಯೆಗೆ ಸಿಲುಕಿವೆ.

ಪತ್ರಿಕಾ ವಿತರಕರ ಕುಟುಂಬಕ್ಕೆ ಕ್ರೀಡಾಕೂಟ

ಬೆಂಗಳೂರು: ಪತ್ರಿಕಾ ವಿತರಕರು, ಅವರ ಕುಟುಂಬದವರು ಹಾಗೂ ಪತ್ರಿಕೆ ಹಂಚುವ ಹುಡುಗರಿಗೆ ಫೆಬ್ರುವರಿಯಲ್ಲಿ ಕ್ರೀಡಾಕೂಟ ನಡೆಸಲಾಗುವುದು ಎಂದು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ. ಶಂಭುಲಿಂಗ ತಿಳಿಸಿದ್ದಾರೆ

ವಿಜಯನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಪತ್ರಿಕಾ ವಿತರಕರ ಸಭೆಯಲ್ಲಿ ಕ್ರೀಡಾಕೂಟ ನಡೆಸುವ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ ಎಂದರು. ಸಭೆಯಲ್ಲಿ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ವಿಜಯನಗರದ ಅಧ್ಯಕ್ಷರು, ಪದಾಧಿಕಾರಿಗಳು, ಹೊಸಹಳ್ಳಿ ಅಧ್ಯಕ್ಷರು, ಪದಾಧಿಕಾರಿಗಳು, ಗಾಂಧಿನಗರ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು. ಮಾಹಿತಿಗೆ 9972534666 /9986327778 ಸಂಪರ್ಕಿಸಿ.


‘ಬೆಂಗಳೂರು ಸಮುದಾಯ’ಕ್ಕೆ ಬಂಜಗೆರೆ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಸ್ಕೃತಿಕ ಚಳವಳಿಯ ಸಂಘಟನೆ ‘ಬೆಂಗಳೂರು ಸಮುದಾಯ’ದ ಅಧ್ಯಕ್ಷರಾಗಿ ಚಿಂತಕ ಬಂಜಗೆರೆ ಜಯಪ್ರಕಾಶ್ ಹಾಗೂ ಕಾರ್ಯಾಧ್ಯಕ್ಷರಾಗಿ ಜನಪರ ಚಳವಳಿಗಾರ ಮಂಜುನಾಥ್ ಬಿ.ಆರ್. ಅವರು ಆಯ್ಕೆ ಆಗಿದ್ದಾರೆ.



ಬಂಜಗೆರೆ ಜಯಪ್ರಕಾಶ್



ಬಿ.ಆರ್. ಮಂಜುನಾಥ್

ನಗರದಲ್ಲಿ ಗುರುವಾರ ನಡೆದ ಸರ್ವಸದಸ್ಯರ ಸಭೆಯಲ್ಲಿ ನೂತನ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಸಂಘಟನೆಯ ಉಪಾಧ್ಯಕ್ಷರಾಗಿಎನ್.ಎಸ್. ಸನತ್ ಕುಮಾರ್, ಪದ್ಮಾ ಶಿವಮೊಗ್ಗ, ಕಾರ್ಯದರ್ಶಿಯಾಗಿ ಸಂಗಮೇಶ ಶಿವಣಗಿ, ಖಜಾಂಚಿಯಾಗಿ ಫೈರೋಜ್ ಕೆ., ಜಂಟಿ ಕಾರ್ಯದರ್ಶಿಗಳಾಗಿ ನಾಗಲಕ್ಷ್ಮಿ, ಎಂ. ಅನಂತು ಶಾಂದ್ರೇಯ, ಸದಸ್ಯರಾಗಿ ಸಿ.ಕೆ.ಗುಂಡಣ್ಣ, ಜೆ.ಸಿ. ಶಶಿಧರ, ಕಾವ್ಯ ಅಚ್ಯುತ್, ಪ್ರಣವ್ ವಿ. ಕಿಶನ್, ಎಂ.ವಿ.ಸುರೇಶ್, ದಿಲೀಪ್, ರವೀಂದ್ರನಾಥ ಸಿರಿವರ, ರವಿಕುಮಾರ್ ಬಾಗಿ ಅವರು ಆಯ್ಕೆ ಆಗಿದ್ದಾರೆ.

ಸೋಂಪುರ ವಿಎಸ್‌ಎಸ್‌ಎನ್‌ಗೆ 12 ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘಕ್ಕೆ 12 ಮಂದಿ ನೂತನ ಪದಾಧಿಕಾರಿಗಳ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ಎಂ.ಮೋಹನ್ ಕುಮಾರ್, ಉಪಾಧ್ಯಕ್ಷರಾಗಿ ಕೆ.ಸಿ.ವೇದಾವತಿ ನಿರ್ದೇಶಕರಾಗಿ ಶಶಿಧರ್, ಡಿ.ಎಸ್. ಚಂದ್ರಶೇಖರ್, ಸಿ.ರಂಗನಾಥ, ಪಿ.ಮಂಜುನಾಥ, ವಿ.ಎಚ್. ಗಂಗರುದ್ರಯ್ಯ, ಗಂಗರಾಜು, ಕೃಷ್ಣಮೂರ್ತಿ, ಜಿ.ಕೆಂಪರಾಜು, ಆರ್.ನಾರಾಯಣಪ್ಪ, ಚಿಕ್ಕಮಣಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಕಾರ್ಯನಿರ್ವಣಾಧಿಕಾರಿ ಎಂ.ಎಸ್.ಭಾನುಪ್ರಕಾಶ್, ರಂಗಸ್ವಾಮಿ ರಮೇಶ್ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–560001. ದೂ: 080-22867369
e-mail : cgmksamb@gmail.com Website krishimaratavahini.karnataka.gov.in

ಸಂಖ್ಯೆ: ಕೃಮಾಮಂ/ಲೆಕ್ಕವಿ/ನಿಠೇ–72/2024–25 ದಿನಾಂಕ: 23.01.2025

ಇ–ಟೆಂಡರ್ ಕಂ ಇ–ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ **ರೂ.45.00 ಕೋಟಿಗಳನ್ನು** (ರೂಪಾಯಿ ನಲವತ್ತೈದು ಕೋಟಿಗಳು ಮಾತ್ರ) e-procurement ಮೂಲಕ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ/ಖಾಸಗಿ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: APMC/2024-25/AUCTION-72 ರಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **31.01.2025.**

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕ.ರಾ.ಕೃ.ಮಾ.ಮಂ., ಬೆಂಗಳೂರು.

ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/4546/2024–25

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 01/SBC/25, ದಿನಾಂಕ: 07.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಚಿಕ್ಕ ಬಣಾವರ – ಹಾಸನ ವಿಭಾಗ:** ನೆಲಮಂಗಲ ನಿಲ್ದಾಣದ ಹತ್ತಿರ ರೈಲ್ವೆ ಕಿಮೀ. 20/750 ರಲ್ಲಿ ಪ್ರಸ್ತಾವಿತ ಹೊಸ ಬ್ರಿಡ್ಜ್ ಸಂ. 39–ಎ ಯ ನಿರ್ಮಾಣ – ಬಾಕ್ಸ್ ಪುಶಿಂಗ್ ಮಾದರಿಯ ಮೂಲಕ ಆರ್‌ಸಿಸಿ ಬಾಕ್ಸ್ ಅಳತೆ 1x5.0ಮೀ.x4.25ಮೀ. ಆಗಿರಬೇಕು – ಎತ್ತಿನಹೊಳೆ ಯೋಜನೆಯ ವಿಭಾಗ ಸಂ. 4 ರಲ್ಲಿ ಡಿಪೋಸಿಟ್ ಕಾಮಗಾರಿ (ಬಾಕ್ಸ್ ಪುಶಿಂಗ್ ಮಾದರಿಯ ಮೂಲಕ ಅಳತೆ: 1x5.00ಮೀ.x4.25ಮೀ.). ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ನಂತರ ಬರುವದಾಗಿದೆ.	ರೂ. 2,55,52,996/-
2	**ಚಿಕ್ಕ ಬಣಾವರ – ಹಾಸನ ವಿಭಾಗ:** ವಿಭಾಗೀಯ ಇಂಜಿನಿಯರ್/ದಕ್ಷಿಣ/ಬೆಂಗಳೂರು ವ್ಯಾಪ್ತಿಯ ಸಹಾಯಕ ವಿಭಾಗೀಯ ಇಂಜಿನಿಯರ್ / ಕುಣಿಗಲ್ ವಿಭಾಗದಲ್ಲಿ ಹಿರಿಸಾವೆ (ಹೆಚ್‌ಐಎಸ್‌ಇ) ಯಲ್ಲಿ ಪ್ರಸ್ತಾವಿತ ಬಾಲಾಸ್ಟ್ ಡಿಪೋ (210ಮೀ.x18ಮೀ.) ಮತ್ತು ಅಪ್ರೋಚ್ ರೋಡ್ (400ಮೀ.x4.5ಮೀ.) ಗಳ ವಿಸ್ತರಣಾ ಕಾಮಗಾರಿಗಳು. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ನಂತರ ಬರುವದಾಗಿದೆ.	ರೂ. 1,07,28,464/-
3	**ಬೆಂಗಳೂರು – ಸೇಲಂ ವಿಭಾಗ:** ಎಸ್‌ಎಸ್‌ಇ/ಪಿವೇ/ಟಿಪಿಪಿ ವ್ಯಾಪ್ತಿಯಲ್ಲಿ ಮುಟ್ಟಂಪಟ್ಟಿ (ಎಂಪಿಸಿ) ಮತ್ತು ಸಿವಾಡಿ (ಎಸ್‌ಝಡ್‌ವಿ) ನಿಲ್ದಾಣಗಳ ನಡುವೆ ಕಿಮೀ. 50/000–100, 50/800–51/050, 51/300–500, 51/760–880 ರಲ್ಲಿ ಸ್ಲೋಪ್‌ಗಳ ಮೇಲಿನ ಕಟಿಂಗ್‌ಗಳಲ್ಲಿ, ಸ್ಲೋಪ್‌ಗಳನ್ನು ಅಗಲೀಕರಣ ಮಾಡುವುದರ ಮೂಲಕ ಸ್ಲೋಪ್‌ಗಳನ್ನು ಸದೃಢೀಕರಣಗೊಳಿಸುವುದು. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ನಂತರ ಬರುವದಾಗಿದೆ.	ರೂ. 7,76,05,706/-
4	**ಬೆಂಗಳೂರು – ಸೇಲಂ ವಿಭಾಗ: ಉಪ ಕಾಮಗಾರಿ–1:** ಬೆಂಗಳೂರು–ಸೇಲಂ ವಿಭಾಗದ ಕಾಮಗಾರಿಗೆ ಸಂಬಂಧಿಸಿದಂತೆ ಕಿಮೀ. 205/350–220/000 ಎಸ್‌ಎಲ್ ನಲ್ಲಿ 14.65 ಕಿಮೀ. ದೂರಕ್ಕೆ ಡೀಪ್ ಸ್ಕ್ರೀನಿಂಗ್ ಕೆಲಸಗಳು: ವಿಭಾಗೀಯ ಇಂಜಿನಿಯರ್ / ದಕ್ಷಿಣ / ಬೆಂಗಳೂರು ವಿಭಾಗದಲ್ಲಿ ಕಿಮೀ. 205/350–220/000 ಎಸ್‌ಎಲ್ ನಲ್ಲಿ 14.65 ಕಿಮೀ. ಉದ್ದಕ್ಕೆ ಈಗಿರುವ 1540 ನಂ/ಕಿಮೀ ಉದ್ದದ 52 ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲಿನ 52ಕೆಜಿ/90 ಯುಟಿಎಸ್ ರೈಲ್‌ಗಳನ್ನು 1660 ನಂ/ಕಿಮೀ ಉದ್ದದ 60 ಕೆಜಿ ಪಿಎಸ್‌ಸಿ ಸ್ಲೀಪರುಗಳಿಂದ ಸಂಪೂರ್ಣ ಟ್ರ್ಯಾಕ್ ರಿನ್ಯೂವಲ್ (ಪಿ) ಕಾಮಗಾರಿಗಳು. **ಉಪ ಕಾಮಗಾರಿ–2: ಬೆಂಗಳೂರು – ಸೇಲಂ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಧರ್ಮಪುರಿ ವಿಭಾಗದ ಕಿಮೀ. 110/500–118/000 ರಲ್ಲಿ (ಚದುರಲ್ಪಟ್ಟ ಸ್ಥಳಗಳು) 1 ಕಿಮೀ. ದೂರಕ್ಕೆ ಥ್ರೂ ಸ್ಲೀಪರ್ ರಿನ್ಯೂವಲ್ ಕಾಮಗಾರಿಗಳು	ರೂ. 2,07,52,551/-
5	**ಬೆಂಗಳೂರು – ಸೇಲಂ ವಿಭಾಗ: ಉಪ ಕಾಮಗಾರಿ–1:** ಸಹಾಯಕ ವಿಭಾಗೀಯ ಇಂಜಿನಿಯರ್/ಧರ್ಮಪುರಿ ವಿಭಾಗದ ಎಲ್‌ಸಿ ನಂ. 143 ರಲ್ಲಿ ರಸ್ತೆಯ ಮೇಲ್ಸೈಯ ಪ್ರಸ್ತಾವಿತ ವಿಸ್ತರಣಾ ಕಾಮಗಾರಿ. **ಉಪ ಕಾಮಗಾರಿ–2: ಚಿಕ್ಕಬಣಾವರ – ಹಾಸನ ವಿಭಾಗ:** ಕಿಮೀ. 3/870 ರಿಂದ 79/530 (ಎಸ್‌ಎಲ್) ವರೆಗಿನ 16.65 ಕಿಮೀ. ದೂರದ ವರೆಗೆ ಸ್ಟಾಂಡರ್ಡ್ ವಿಡ್ತ್ ಮತ್ತು ಡ್ರೈನೇಜ್‌ಗಳ ಅಭಿವೃದ್ಧಿಯ ಮೂಲಕ ದಡವನ್ನು ಬಲವರ್ಧನೆ ಮಾಡುವ ಕೆಲಸಗಳಿಗೆ ಸಂಬಂಧಿಸಿದಂತೆ 750ಮೀ. ಉದ್ದದ ಆರ್‌ಸಿಸಿ ಸೈಡ್ ಡ್ರೈನ್‌ನ ನಿರ್ಮಾಣ ಕಾರ್ಯ.	ರೂ. 1,28,14,568/-
6	**ಸಹಾಯಕ ವಿಭಾಗೀಯ ಇಂಜಿನಿಯರ್ / ಕುಣಿಗಲ್ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್ / ಕುಣಿಗಲ್ ವಿಭಾಗದಲ್ಲಿ 2 ವರ್ಷಗಳ ಅವಧಿಗೆ ಖಾಸಗಿ ಏಜೆನ್ಸಿಯವರ ಮೂಲಕ ನಿಲ್ದಾಣಗಳು ಮತ್ತು ಕಾಲೊನಿಗಳಲ್ಲಿ ಪೋಟಬಲ್ ಕುಡಿಯುವ ನೀರಿನ ಪೂರೈಕೆ.	ರೂ. 8,17,582/-
7	ಚಿಕ್ಕಬಣಾವರ – ಹಾಸನದಲ್ಲಿ ಕಿಮೀ. 14/000–124/000 (ಎಸ್‌ಎಲ್) ರಲ್ಲಿ 110 ಕಿಮೀ. ಉದ್ದಕ್ಕೆ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ ಕೆಲಸಗಳಿಗೆ ಸಂಬಂಧಿಸಿದಂತೆ ಹಿರಿಸಾವೆ (ಹೆಚ್‌ಐಎಸ್‌ಇ) ಡಿಪೋನಲ್ಲಿ (ಪರಿಮಾಣ: 1,43,000) ಲೋಡಿಂಗ್ ಅನ್ನು ಒಳಗೊಂಡಂತೆ ಮಶೀನ್ ಕ್ರಷ್ಡ್ ಬಾಲಾಸ್ಟ್‌ಗಳ ತಯಾರಿಕೆ, ಪೂರೈಕೆ ಮತ್ತು ಶೇಖರಣೆ ಕೆಲಸಗಳು. (2 ಪ್ಯಾಕೆಟ್)	ರೂ. 13,32,03,070/-
8	**ಬೆಂಗಳೂರು – ಸೇಲಂ ವಿಭಾಗ: ಉಪ ಕಾಮಗಾರಿ–1:** ಎಸ್‌ಎಸ್‌ಇ/ಪಿವೇ/ಧರ್ಮಪುರಿ (ದಕ್ಷಿಣ) ವಿಭಾಗದಲ್ಲಿ ತೊಪ್ಪೂರು (ಟಿಪಿಪಿ) ಮತ್ತು ಮುಟ್ಟಂಪಟ್ಟಿ (ಎಂಪಿಸಿ) ನಿಲ್ದಾಣಗಳ ನಡುವೆ ಕಿಮೀ. 48/600–700, 49/000–100 ರಲ್ಲಿ ಕಟಿಂಗ್‌ಗಳಲ್ಲಿ ಬರುವ ಇಳಿಜಾರುಗಳಲ್ಲಿ ವೈರ್ ನೆಟಿಂಗ್ ಮೂಲಕ ಸ್ಲೋಪ್‌ಗಳ ಸದೃಢೀಕರಣ. **ಉಪ ಕಾಮಗಾರಿ–2:** ಎಸ್‌ಎಸ್‌ಇ/ಪಿವೇ/ಧರ್ಮಪುರಿ (ದಕ್ಷಿಣ) ವಿಭಾಗದಲ್ಲಿ ತೊಪ್ಪೂರು (ಟಿಪಿಪಿ) ಮತ್ತು ಮುಟ್ಟಂಪಟ್ಟಿ (ಎಂಪಿಸಿ) ನಿಲ್ದಾಣಗಳ ನಡುವೆ ಕಿಮೀ. 49/200–340 ರಲ್ಲಿ ಕಟಿಂಗ್‌ಗಳಲ್ಲಿ ಬರುವ ಇಳಿಜಾರುಗಳಲ್ಲಿ ವೈರ್ ನೆಟಿಂಗ್ ಮೂಲಕ ಸ್ಲೋಪ್‌ಗಳ ಸದೃಢೀಕರಣ. **ಉಪ ಕಾಮಗಾರಿ–3:** ಎಸ್‌ಎಸ್‌ಇ/ಪಿವೇ/ಧರ್ಮಪುರಿ (ದಕ್ಷಿಣ) ವಿಭಾಗದಲ್ಲಿ ತೊಪ್ಪೂರು (ಟಿಪಿಪಿ) ಮತ್ತು ಮುಟ್ಟಂಪಟ್ಟಿ (ಎಂಪಿಸಿ) ನಿಲ್ದಾಣಗಳ ನಡುವೆ ಕಿಮೀ. 50/100–300 ರಲ್ಲಿ ಕಟಿಂಗ್‌ಗಳಲ್ಲಿ ಬರುವ ಇಳಿಜಾರುಗಳಲ್ಲಿ ವೈರ್ ನೆಟಿಂಗ್ ಮೂಲಕ ಸ್ಲೋಪ್‌ಗಳ ಸದೃಢೀಕರಣ. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ನಂತರ ಬರುವದಾಗಿದೆ.	ರೂ. 16,68,07,999/-
9	**ಬೆಂಗಳೂರು – ಸೇಲಂ ವಿಭಾಗ: ಉಪ ಕಾಮಗಾರಿ–1:** ವಿಭಾಗೀಯ ಇಂಜಿನಿಯರ್/ದಕ್ಷಿಣ/ಬೆಂಗಳೂರು ವ್ಯಾಪ್ತಿಯಲ್ಲಿ ಎಸ್‌ಎಸ್‌ಇ/ಪಿವೇ/ಧರ್ಮಪುರಿ (ಉತ್ತರ) ವಿಭಾಗದಲ್ಲಿ 5 ವರ್ಷಗಳ ಅವಧಿಗೆ 39 ತಿರುವುಗಳಲ್ಲಿ ಟ್ರ್ಯಾಕ್ ಮೌಂಟೆಡ್ ಆಟೋಮ್ಯಾಟಿಕ್ ಫೇಸ್ ಲೂಬ್ರಿಕೇಟರುಗಳ ಪೂರೈಕೆ, ಸ್ಥಾಪನೆ, ಕಾರ್ಯಾರಂಭ ಮತ್ತು ನಿರ್ವಹಣೆ ಕೆಲಸಗಳು. **ಉಪ ಕಾಮಗಾರಿ–2: ಚಿಕ್ಕ ಬಣಾವರ – ಹಾಸನ ವಿಭಾಗ:** ವಿಭಾಗೀಯ ಇಂಜಿನಿಯರ್/ದಕ್ಷಿಣ/ಬೆಂಗಳೂರು ವ್ಯಾಪ್ತಿಯಲ್ಲಿ ಎಸ್‌ಎಸ್‌ಇ/ಪಿವೇ/ಹೆಚ್‌ಎಸ್‌ಆರ್‌ಎ ವಿಭಾಗದಲ್ಲಿ 29 ತಿರುವುಗಳಲ್ಲಿ ಹಾಗೂ ಎಸ್‌ಎಸ್‌ಇ/ಪಿವೇ/ಸಿಎನ್‌ಪಿಎ ವಿಭಾಗದಲ್ಲಿ 01 ತಿರುವಿನಲ್ಲಿ ಟ್ರ್ಯಾಕ್ ಮೌಂಟೆಡ್ ಆಟೋಮ್ಯಾಟಿಕ್ ಫೇಸ್ ಲೂಬ್ರಿಕೇಟರುಗಳ ಪೂರೈಕೆ, ಸ್ಥಾಪನೆ, ಕಾರ್ಯಾರಂಭ ಮತ್ತು ನಿರ್ವಹಣೆ ಕೆಲಸಗಳು. (ಸರ್ವೀಸ್ ಟೆಂಡರು) (2 ಪ್ಯಾಕೆಟ್)	ರೂ. 8,55,14,060/-
10	**ಸಹಾಯಕ ವಿಭಾಗೀಯ ಇಂಜಿನಿಯರ್/ಹಿಂದೂಪುರ ವಿಭಾಗ:** ಶ್ರೀ ಸತ್ಯ ಸಾಯಿ ಪ್ರಶಾಂತಿ ನಿಲಯಂ (ಎಸ್‌ಎಸ್‌ಪಿಎನ್) ಕಾಲೊನಿಯಲ್ಲಿ ಟೈಪ್ 3 ಮಾದರಿಯ ಸಿಬ್ಬಂದಿ ಕ್ವಾರ್ಟರುಗಳ (8 ಘಟಕಗಳು) ಪ್ರಸ್ತಾವಿತ ನಿರ್ಮಾಣ (ಎಲೆಕ್ಟ್ರಿಕಲ್ ಪೋರ್ಶನ್‌ಗಳನ್ನು ಒಳಗೊಂಡಂತೆ). ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 2,20,14,132/-
11	**ಬೈಯಪ್ಪನಹಳ್ಳಿ – ಧರ್ಮಾವರಂ ವಿಭಾಗ:** ಚನ್ನಸಂದ್ರ (ಸಿಎಸ್‌ಡಿಆರ್) – ಯಲಹಂಕ (ವೈಎನ್‌ಕೆ) ನಡುವೆ ಕಿಮೀ. 15/452 ರ ಅಪ್ ಲೈನ್‌ನಲ್ಲಿ ಆರ್‌ಯುಬಿ ಸಂ. 516–ಎ ಗೆ ಸ್ಪಾನ್ 2x11.755 ಮೀ. ನ ಆರ್‌ಸಿಸಿ ಸ್ಲಾಬ್‌ಗಳನ್ನು ಪಿಎಸ್‌ಸಿ ಸ್ಲಾಬ್‌ಗಳಾಗಿ ಬದಲಾವಣೆ ಮಾಡುವುದು ಮತ್ತು ಯಶವಂತಪುರ (ವೈಪಿಆರ್) – ಯಲಹಂಕ (ವೈಎನ್‌ಕೆ) ನಡುವಿನ ಕಿಮೀ. 17/300–400 ರ ಡೌನ್ ಲೈನ್‌ನಲ್ಲಿ ಪಿಎಸ್‌ಸಿ ಸ್ಲಾಬ್‌ಗಳನ್ನಾಗಿ ಬದಲಾವಣೆ ಮಾಡುವುದು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 2,30,33,381/-
12	**ಬೆಂಗಳೂರು – ಧರ್ಮಾವರಂ ವಿಭಾಗ:** ಎಸ್‌ಎಸ್‌ಇ/ಪಿವೇ/ಪಿಕೆಡಿ ವಿಭಾಗದಲ್ಲಿ ರಂಗೇಪಲ್ಲಿ (ಆರ್‌ಇಪಿಐ) – ಪೇನುಕೊಂಡ (ಪಿಕೆಡಿ) ನಡುವೆ ಕಿಮೀ. 128/700–134/700 ರಲ್ಲಿ ಬರುವ ಪ್ರತ್ಯೇಕ ಸ್ಥಳಗಳಲ್ಲಿ 4.5 ಕಿಮೀ. ಉದ್ದಕ್ಕೆ ಆರ್‌ಸಿಸಿ ಡ್ರೈನ್‌ಗಳ ನಿರ್ಮಾಣ ಕಾರ್ಯಗಳು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 2,83,68,263/-
13	**ಬೆಂಗಳೂರು – ಸಂಪಿಗೆ ರೋಡ್ ಮತ್ತು ಲೊಟ್ಟೆಗೊಲ್ಲಹಳ್ಳಿ – ಯಲಹಂಕ ವಿಭಾಗ: ಉಪ ಕಾಮಗಾರಿ–1:** ಬೆಂಗಳೂರು – ಅರಸೀಕೆರೆಯ ಕಿಮೀ. 19/300 ರಿಂದ 26/900 (ಡೌನ್ ಲೈನ್ – 3.65 ಕಿಮೀ.) ನಡುವೆ ಮತ್ತು ಎಸ್‌ಎಸ್‌ಇ/ಪಿವೇ/ಯಶವಂತಪುರ ವಿಭಾಗದಲ್ಲಿ ಕಿಮೀ. 10/750–15/00 (ಅಪ್ ಲೈನ್ – 950 ಮೀ.) ರ ಪ್ರತ್ಯೇಕ ಸ್ಥಳಗಳಲ್ಲಿ 4.60 ಕಿಮೀ. ಉದ್ದದ ದೂರಕ್ಕೆ ಆರ್‌ಸಿಸಿ ಸೈಡ್ ಡ್ರೈನ್‌ಗಳ ನಿರ್ಮಾಣ ಕಾರ್ಯಗಳು. **ಉಪ ಕಾಮಗಾರಿ–2: ಯಲಹಂಕ – ಬಂಗಾರಪೇಟೆ ವಿಭಾಗ:** ಎಸ್‌ಎಸ್‌ಇ/ಪಿವೇ/ಯಲಹಂಕ ವಿಭಾಗದ ಯಲಹಂಕ – ಚಿಂತಾಮಣಿ ನಿಲ್ದಾಣಗಳ ನಡುವೆ ಕಿಮೀ. 17/000–75/200 ರಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ 4.60 ಕಿಮೀ. ಉದ್ದದ ದೂರಕ್ಕೆ ಆರ್‌ಸಿಸಿ ಸೈಡ್ ಡ್ರೈನ್‌ಗಳ ನಿರ್ಮಾಣ ಕಾರ್ಯಗಳು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 5,79,06,382/-
14	**ಬೆಂಗಳೂರು ವಿಭಾಗ:** ಡಿಎಸ್‌ಡಿಸಿ ರೈಲುಗಳನ್ನು ಚಾಲನೆ ಮಾಡುವುದಕ್ಕಾಗಿ ಆರ್‌ಒಬಿಗಳ ಪುನರ್ ನಿರ್ಮಾಣ ಮತ್ತು ಲೆವೆಲ್ ಕ್ರಾಸಿಂಗ್‌ಗಳ ನಿರ್ಮೂಲನೆ ಮಾಡುವ ಮೂಲಕ ಆರ್‌ಒಬಿ/ಆರ್‌ಯುಬಿ ಗಳನ್ನು ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದಂತೆ ಡಿಪಿಆರ್ ನ ಸಿದ್ಧತೆ ಮತ್ತು ಸಮರ್ಪಣೆ. (24 ನಂ.)	ರೂ. 86,11,531/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **03.02.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ


PUB/725/AAF/PRB/SWR/2024-25 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

South Western Railway - SWR | SWRRLY | SWRRLY

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಂ.24, ಸುವರ್ಣ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 080- 23300497 41159606 , 23359600 ಇ–ಮೇಲ್ : vjn@jscbl.com

ಸ್ವಾಧೀನ ಸೂಚನೆ ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)



ಶ್ರೀ. ರಂಗನಾಥ್ ಎನ್.
ಬಿನ್ ಲೇಟ್. ನರಸಿಂಹಯ್ಯ ಜಿ.



ಶ್ರೀ. ಸಂದೀಪ್ ಆರ್
ಬಿನ್ ರಂಗನಾಥ್ ಎನ್.

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **21.10.2024** ರಂದು ಇದ್ದಂತೆ **ರೂ. 60,00,791/–** (ರೂಪಾಯಿ ಅರವತ್ತು ಲಕ್ಷದ ಏಳುನೂರ ತೊಂಭತ್ತೊಂದು ಮಾತ್ರ) ಪಾವತಿ ಮಾಡಲು **ಸಾಲಗಾರರಾದ: (1) ಲೇಟ್. ರಂಗಮ್ಮ** ಕೋಂ ಲೇಟ್ ನರಸಿಂಹಯ್ಯ.ಜಿ. **ಪ್ರತಿನಿಧಿಸುವ ಕಾನೂನು ಉತ್ತರಾಧಿಕಾರಿಗಳು : ಎ) ಶ್ರೀಮತಿ. ಲಕ್ಷ್ಮಮ್ಮ.ಎನ್.** ಕೋಂ ಎಂ.ಗಂಗಪ್ಪ **ಬಿ) ಶ್ರೀ. ರಂಗನಾಥ್.ಎನ್** ಬಿನ್ ಲೇಟ್ ನರಸಿಂಹಯ್ಯ.ಜಿ ಇವರೆಲ್ಲರ ವಿಳಾಸ: ನಂ. 06, 1ನೇ ಮಹಡಿ, ವೆಂಕಟಮ್ಮ ಕಾಂಪೌಂಡ್, 2ನೇ ಎ ಮುಖ್ಯರಸ್ತೆ, ಗೋವಿಂದರಾಜನಗರ, ವಿಜಯನಗರ, ಬೆಂಗಳೂರು–560040, **ಸಿ) ಶ್ರೀಮತಿ ತ್ರಿವೇಣಿ.ಎನ್.** 3ನೇ ಮುಖ್ಯರಸ್ತೆ, ವಿಳಾಸ : ನಂ.8/11, ಕೃಷ್ಣಪ್ಪ.ಸಿ. ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು–560040, **ಸಾಲಗಾರರು: (1) ಶ್ರೀ. ರಂಗನಾಥ್.ಎನ್** ಬಿನ್ ಲೇಟ್ ನರಸಿಂಹಯ್ಯ.ಜಿ, **ಜಾಮೀನುದಾರರು: ಶ್ರೀ. ಸಂದೀಪ್. ಆರ್** ಬಿನ್ ರಂಗನಾಥ್ ಎನ್. ನಂ. 06, 1ನೇ ಮಹಡಿ, ವೆಂಕಟಮ್ಮ ಕಾಂಪೌಂಡ್, 2ನೇ ಎ ಮುಖ್ಯರಸ್ತೆ, ಗೋವಿಂದರಾಜನಗರ, ವಿಜಯನಗರ ಬೆಂಗಳೂರು–560040 ಇವರಿಗೆ ದಿನಾಂಕ: **21.10.2024** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 20.01.2025** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ವಿಜಯನಗರ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಸಾಲ ಮತ್ತು **ಎಂಟಿಎಲ್–90 ವಿಜಯನಗರ** ಮೊತ್ತ ಮೊಬಲಗು **ರೂ. 60,34,878/– (ರೂಪಾಯಿ ಅರವತ್ತು ಲಕ್ಷದ ಮೂವತ್ತನಾಲ್ಕು ಸಾವಿರದ ಎಂಟುನೂರ ಎಪ್ಪತ್ತೆಂಟು ಮಾತ್ರ) ದಿನಾಂಕ 03.01.2025** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

(ಹೈಪೋಥಿಕೇಟೆಡ್ ಸ್ವತ್ತುಗಳ ವಿವರಗಳು ಮತ್ತು ಸಾಲಗಾರನ ಅಡಮಾನ ಆಸ್ತಿಗಳ ವಿವರಗಳು)

ಸಕಲ ಸಮಸ್ತವೂ ಸೇರಿದ ಆಸ್ತಿಯ ಹೊಸ ನಂ. 4/1–1, 1ನೇ ಅಡ್ಡರಸ್ತೆ, ತಿಮ್ಮೇನಹಳ್ಳಿ, ಬಿಬಿಎಂಪಿ ವಾರ್ಡ್ ನಂ. 36, ಬೆಂಗಳೂರು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (80+72)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (41+41)/2 ಅಡಿ ಒಟ್ಟು 3116.00 ಚ.ಅಡಿ., ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಗೋವಿಂದಪ್ಪರವರ ಮನೆ, ಉತ್ತರಕ್ಕೆ: ಕಾರ್ಪೋರೇಷನ್ ನಂ. 4ರ 2ನೇ ಭಾಗದ 2ನೇ ಷೆಡ್ಯೂಲ್‌ನ 4ನೇ ಐಟಂ ಆಸ್ತಿ, ದಕ್ಷಿಣಕ್ಕೆ: ರಸ್ತೆ.

ದಿನಾಂಕ : **20.01.2025**
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 02/MYS/2025
ದಿನಾಂಕ: 17.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹಾಸನ – ಮಂಗಳೂರು ವಿಭಾಗ: ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಸಕಲೇಶಪುರ ವ್ಯಾಪ್ತಿಯಲ್ಲಿ (ಸಕಲೇಶಪುರ – ಸುಬ್ರಮಣ್ಯ ರೋಡ್ ಘಾಟ್ ವಿಭಾಗ ಸೇರಿದಂತೆ) ಹಾಸನ – ಮಂಗಳೂರು ಜಂ. ವಿಭಾಗದಲ್ಲಿ 2020–21 & 2022–23 ನೇ ಸಾಲಿನಲ್ಲಿ ಮಾಡಬೇಕಿದ್ದ ಸ್ಟೀಲ್ ಗಿರ್ಡರ್ ಬ್ರಿಡ್ಜ್‌ಗಳ ಪೇಂಟಿಂಗ್ ಕಾಮಗಾರಿಗಳು. (ಬ್ರಿಡ್ಜ್ ಸಂ. 293, 296 298, 300, 367, 400, 474, 539 & ಐಟಹೆಚ್ ಶೆಡ್ ಮತ್ತು 15, 23, 133, 142,165, 177, 180, 183, 184, 185, 186, 187, 188,189, 190, 192, 193, 194, 200, 232, 233, 238, 239, 241, 243, 246, 247, 248, 249, 250, 251, 252, 264, 281, 283, 287, 289, 292, 297, 303, 318, 322, 326, 327, 328, 334, 335, 337, 353, 358, 366 & 578) (ಉಳಿದಿರುವ ಕಾಮಗಾರಿ)	ರೂ. 1,42,08,435/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.02.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಮೈಸೂರು

PUB/722/AAF/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: CAO/CN/BNC/49/2025
ದಿನಾಂಕ: 16.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ತುಮಕೂರು – ಅರಸೀಕೆರೆ ವಿಭಾಗದಲ್ಲಿ ತಿಪಟೂರು ಮತ್ತು ಹೊನ್ನವಳ್ಳಿ ರೋಡ್ ನಿಲ್ದಾಣಗಳ ನಡುವೆ ರೈಲ್ವೆ ಕಿಮೀ. 142/700–800 ರಲ್ಲಿ ಲೆವೆಲ್ ಕ್ರಾಸಿಂಗ್ ಸಂ. 86ಕ್ಕೆ ಬದಲಾಗಿ ಹಾಸನದ ಕಡೆಗೆ 8x18ಮೀ. ಪಿಎಸ್‌ಸಿ ಗಿರ್ಡರ್ ನಿಂದ 1x30ಮೀ. ಸಂಯುಕ್ತ ಗಿರ್ಡರ್‌ನಂತೆ ಮತ್ತು ರಾಷ್ಟ್ರೀಯ ಹೆದ್ದಾರಿ ಕಡೆಗೆ 8x18ಮೀ. ಪಿಎಸ್‌ಸಿ ಗಿರ್ಡರ್ ನಿಂದ ಸಬ್‌ವೇ ಸೇರಿದಂತೆ ರೋಡ್ ಓವರ್ ಬ್ರಿಡ್ಜ್‌ನ ನಿರ್ಮಾಣ. (ಸಂಯುಕ್ತ ಕಾಮಗಾರಿ) (ಟೆಂಡರು ಉಲ್ಲೇಖ ಸಂ.: **ASK-TK-ROB-LC-86**)	ರೂ. 39,41,87,732/-
2	ಕ್ಯಾತಸಂದ್ರ ಮತ್ತು ತುಮಕೂರು ನಿಲ್ದಾಣಗಳ ನಡುವೆ ಕಿಮೀ. 65/300–400 ರಲ್ಲಿ ಎಲ್‌ಸಿ ಸಂ. 38ಕ್ಕೆ ಬದಲಾಗಿ ರಾಹೆ–73ರ ಕಡೆಗೆ ಅಂದರೆ ಬಡ್ಡಿಹಳ್ಳಿಯ ಪಾರ್ಶ್ವದಲ್ಲಿ 1x42ಮೀ. ಬೋ ಸ್ಟ್ರಿಂಗ್ ಗಿರ್ಡರ್ (ರೈಲ್ವೆ ಪೋರ್ಶನ್) + 08x18.71 ಮೀ. ಪಿಎಸ್‌ಸಿ ಗಿರ್ಡರ್‌ನಿಂದ ಮತ್ತು ರಾಹೆ–43 ಕಡೆಗೆ 5x18.71 ಮೀ. ಪಿಎಸ್‌ಸಿ ಗಿರ್ಡರ್‌ನಿಂದ 2 ಲೇನ್ ಆರ್‌ಒಬಿ ಮತ್ತು ಅದರ ಮರ್ಜಿಂಗ್ ಲೆಂಗ್ತ್‌ಗಳ ಎರಡೂ ಬದಿಗಳಲ್ಲಿ ರೀಟೇನಿಂಗ್ ಗೋಡೆಗಳ ನಿರ್ಮಾಣ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳು. (ಸಂಯುಕ್ತ ಕಾಮಗಾರಿ) (ಟೆಂಡರು ಉಲ್ಲೇಖ ಸಂ.: **ROB-LC38-KIAT-TK**)	ರೂ. 25,45,18,275/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.02.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು

PUB/720/AAF/PRB/SWR/2024-25

South Western Railway - SWR | SWRRLY | SWRRLY

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 560 094. ದೂ: (080)22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗಳಿಗೆ ಆನ್‌ಲೈನ್ ಐಟಂ ದರ ಟೆಂಡರ್‌ಗಳನ್ನು ಇ–ಟೆಂಡರಿಂಗ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಬಿಡ್ ಸ್ಪಷ್ಟೀಕರಣಕ್ಕೆ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಹೆಚ್‌ಎಸ್‌ಎಫ್‌ಸಿ, ದೇವನಹಳ್ಳಿ, ಬೆಂಗಳೂರು ಇಲ್ಲಿರುವ ಇಸಿಎಲ್‌ಎಸ್‌ಎಸ್ ಟೆಸ್ಟ್ ಫೆಸಿಲಿಟಿಯ ಸುತ್ತಮುತ್ತಲೂ ಲ್ಯಾಂಡ್ ಸ್ಕೇಪಿಂಗ್ ಕಾಮಗಾರಿ–ಹಂತ 1 (ಸಿವಿಲ್ ಮತ್ತು ತೋಟಗಾರಿಕೆ ಕಾಮಗಾರಿಗಳು) **HSFC/CMG/MM/C/130/2024-25** ಮತ್ತು ದಿ: 23.01.2025	20.00 ಲಕ್ಷಗಳು	04 ತಿಂಗಳು	24.01.2025 ರ (11.00 ಗಂಟೆ) ಇಂದ 03.02.2025 (23.30 ಗಂಟೆ) ವರೆಗೆ	24.01.2025 ರ (11.30 ಗಂಟೆ) ಇಂದ 04.02.2025 (10.30 ಗಂಟೆ) ವರೆಗೆ	05.02.2025 11.00 ಗಂಟೆವರೆಗೆ	05.02.2025 11.30 ಗಂಟೆಗೆ	40,000/–
02	ಹೆಚ್‌ಎಸ್‌ಎಫ್‌ಸಿ, ದೇವನಹಳ್ಳಿ, ಬೆಂಗಳೂರು ಇಲ್ಲಿಗೆ ರೋಲರ್‌ಬ್ಲೈಂಡ್ಸ್, ವರ್ಟಿಕಲ್ ಬ್ಲೈಂಡ್ಸ್ ಒದಗಿಸುವುದು ಹಾಗೂ ಸ್ಥಿರಗೊಳಿಸುವುದು. **HSFC/CMG/MM/C/131/2024-25** ಮತ್ತು ದಿ: 23.01.2025	5.68 ಲಕ್ಷಗಳು	02 ತಿಂಗಳು					11,360/–
03	ಹೆಚ್‌ಎಸ್‌ಎಫ್‌ಸಿ, ದೇವನಹಳ್ಳಿ, ಬೆಂಗಳೂರು ಇಲ್ಲಿರುವ ಇಸಿಎಲ್‌ಎಸ್‌ಎಸ್ ಟೆಸ್ಟ್ ಫೆಸಿಲಿಟಿಯ 3 ನೇ ಮಹಡಿಯಲ್ಲಿ ಕುಳಿತುಕೊಳ್ಳಲು ಹೆಚ್ಚುವರಿ ಪ್ರದೇಶ ಒದಗಿಸುವುದು. (ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು) **HSFC/CMG/MM/C/132/2024-25** ಮತ್ತು ದಿ: 23.01.2025	16.88 ಲಕ್ಷಗಳು	03 ತಿಂಗಳು					33,760/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕ ಪಾವತಿಸಿ ಟೆಂಡರ್ ವೆಬ್‌ಸೈಟ್: **www.tenderwizard.com/ISRO** ಮೂಲಕ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ಪ್ರಕ್ರಿಯೆಯನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ.

ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್: **www.isro.gov.in**ನಲ್ಲಿ ಟೆಂಡರ್ ಆಹ್ವಾನ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಪರಿವೀಕ್ಷಿಸಬಹುದು ಮತ್ತು ಟೆಂಡರ್ ಹೆಚ್ಚಿನ ವಿವರಗಳಿಗೆ ಹಾಗೂ ಟೆಂಡರ್ ದಸ್ತಾವೇಜು ಖರೀದಿಗೆ **www.tenderwizard.com/ISRO**ಗೆ ಭೇಟಿ ನೀಡಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: ‘ಯುಬಿ ಟವರ್’, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಡಿಸೆಂಬರ್ 31, 2024ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಫಲಿತಾಂಶಗಳ ವಿವರಣೆ

(₹ ಕೋಟಿಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಡಿಸೆಂಬರ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2024ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ	ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2024ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ	ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	7,731	20,231	6,949	7,732	20,642	6,962
2.	ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳು ಮತ್ತು ತೆರಿಗೆಯ ಮೊದಲು)	686	1,536	457	545	1,658	459
3.	ತೆರಿಗೆಗೆ ಮುಂಚಿನ ಅವಧಿಯ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	621	1,471	457	480	1,593	459
4.	ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	473	1,107	347	335	1,161	350
5.	ಅವಧಿಯ ಒಟ್ಟು ಸಮಗ್ರ ಆದಾಯ	473	1,107	347	330	1,159	353
6.	ಈಕ್ವಿಟಿ ಷೇರು ಬಂಡವಾಳ	145	145	145	145	145	145
7.	ಇತರ ಈಕ್ವಿಟಿ [ಕೆಳಗೆ ಟಿಪ್ಪಣಿ (ಬಿ) ಗಮನಿಸಿ]	6,818	6,818	5,799	6,976	6,976	5,854
8.	ಗಳಿಕೆ ಪ್ರತಿ ಷೇರಿಗೆ (₹ 2/- ಪ್ರತಿ) [ಕೆಳಗೆ ಟಿಪ್ಪಣಿ (ಸಿ) ಗಮನಿಸಿ] ಮೂಲ ಮತ್ತು ದುರ್ಬಲ (₹ ಗಳಲ್ಲಿ)	6.50	15.22	4.79	4.72	16.35	4.93

ಟಿಪ್ಪಣಿಗಳು

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಡಿಸೆಂಬರ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳ ಬಾಕಿಗಳು ಮಾರ್ಚ್ 31, 2024ಕ್ಕೆ ಕೊನೆಗೊಂಡ ವರ್ಷಕ್ಕೆ ಲೆಕ್ಕಪರಿಶೋಧಿತ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಬ್ಯಾಲೆನ್ಸ್ ಶೀಟ್ ಪ್ರಕಾರ ಬಾಕಿಗಳನ್ನು ಪ್ರತಿನಿಧಿಸುತ್ತವೆ ಮತ್ತು ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕದ ಬಾಕಿಗಳು ಸೆಕ್ಯುರಿಟೀಸ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಂತ್ರಣ, 2015ರ ಪ್ರಕಾರ ಮಾರ್ಚ್ 31, 2023ಕ್ಕೆ ಕೊನೆಗೊಂಡ ವರ್ಷಕ್ಕೆ ಲೆಕ್ಕಪರಿಶೋಧಿತ ಸ್ವತಂತ್ರ ಮತ್ತು ಕ್ರೋಢೀಕೃತ ಬ್ಯಾಲೆನ್ಸ್ ಶೀಟ್ ಪ್ರಕಾರ ಬಾಕಿಗಳನ್ನು ಪ್ರತಿನಿಧಿಸುತ್ತವೆ.

ಸಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜನವರಿ 23, 2025

ರಾಜ್ಯ ಲಾಂಛನದಲ್ಲಿ ಕನ್ನಡ ಸೇರಿಸಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸರ್ಕಾರದ ಅಧಿಕೃತ ಲಾಂಛನದಲ್ಲಿ ಕನ್ನಡ ಬಳಸಬೇಕು' ಎಂದು ವಕೀಲ ಅನಿಕೇತನ ಸುವ್ವಿ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರಿಗೆ ಪತ್ರ ಬರೆದಿದ್ದಾರೆ.

'ಲಾಂಛನದಲ್ಲಿ 'ಸತ್ಯಮೇವ ಜಯತೆ' ಎಂಬ ಘೋಷವಾಕ್ಯವನ್ನು ದೇವನಾಗರಿ ಲಿಪಿಯಲ್ಲಿ ಬಳಸಲಾಗಿದೆ. ಈ ಘೋಷವಾಕ್ಯವು ರಾಷ್ಟ್ರೀಯ ಮಹತ್ವ ಹೊಂದಿರುವುದಾದರೂ ಇದರಲ್ಲಿ ಕರ್ನಾಟಕದ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರಾದೇಶಿಕ ಅಸ್ಮಿತೆ ಪ್ರತಿನಿಧಿಸುವ ಕನ್ನಡ ಭಾಷೆ ಮತ್ತು ಲಿಪಿಯ ಗೈರು ಬಹುದೊಡ್ಡ ಲೋಪವಾಗಿ ಕಾಣಿಸುತ್ತಿದೆ' ಎಂದು ಹೇಳಿದ್ದಾರೆ.

'ತಮಿಳುನಾಡು, ಆಂಧ್ರಪ್ರದೇಶ ಸೇರಿ ದಕ್ಷಿಣ ಭಾರತದ ರಾಜ್ಯಗಳು ತಮ್ಮ ರಾಜ್ಯದ ಲಾಂಛನಗಳಲ್ಲಿ ಘೋಷ-ವಾಕ್ಯವನ್ನು ರಾಜ್ಯಭಾಷಾ ಲಿಪಿಯಲ್ಲಿ ಬಳಸುತ್ತಿವೆ. ಇಂತಹ ಸಮತೋಲಿತ ಪ್ರವೃತ್ತಿಯು ಭಾಷಾವಾರು ರಾಜ್ಯಗಳ ಅಸ್ಮಿತೆಯನ್ನು ಕಾಪಾಡುವುದರ ಜತೆಗೆ ರಾಷ್ಟ್ರೀಯ ಏಕತೆಯನ್ನು ಸಹ ಗೌರವಿಸುತ್ತದೆ. ಕನ್ನಡವನ್ನು ಸಂರಕ್ಷಿಸುವ ಮತ್ತು ಉತ್ತೇಜಿಸುವ ಕಾರ್ಯದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರ ಕೂಡ ಈ ಧೋರಣೆ ಅನುಸರಿಸಲು ಮುಂದಾಗಬೇಕು' ಎಂದು ಆಗ್ರಹಿಸಿದ್ದಾರೆ.

'ಇಂತಹ ಬದಲಾವಣೆ, ಕರ್ನಾಟಕ ಸರ್ಕಾರದ ರಾಜ್ಯಭಾಷಾ ಬದ್ಧತೆಯನ್ನು ತೋರಿಸುವುದಲ್ಲದೆ ಕನ್ನಡಿಗರ ಸ್ವಾಭಿಮಾನದ ಪ್ರತಿಬಿಂಬವಾಗಿಯೂ ದಾಖಲಾಗುತ್ತದೆ' ಎಂದು ತಿಳಿಸಿದ್ದಾರೆ.

ಅರಮನೆ ಅಂಗಳದಲ್ಲಿ ಕೃಷಿ ಇಲಾಖೆ ಆಯೋಜಿಸಿರುವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ

ಸಿರಿಧಾನ್ಯ, ದೇಸಿ ತಳಿಗಳ ಅನಾವರಣ

• ಖಲೀಲಅಹ್ಮದ ಶೇಖ





ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಮಳಿಗೆಯನ್ನು ಸಾರ್ವಜನಿಕರು ವೀಕ್ಷಿಸಿದರು (ಎಡಚಿತ್ರ). ಸಿರಿಧಾನ್ಯಗಳಲ್ಲಿ ಅರಳಿದ ರೈತ ಮಹಿಳೆಯ ಪ್ರತಿಕೃತಿಯನ್ನು ಮಹಿಳೆಯರು ಕುತೂಹಲದಿಂದ ವೀಕ್ಷಿಸಿದರು ಪ್ರಜಾವಾಣಿ ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

ಬೆಂಗಳೂರು: ಸಿರಿಧಾನ್ಯಗಳಿಂದ ತಯಾರಿಸಿದ ಪಿಜ್ಜಾ, ಪಾಸ್ತಾಗಳು, ಬರಗು ದೋಸೆ, ಊದಲು ಇಡ್ಲಿ, ಡೋನಟ್‌ನಂತಹ ತಿನಿಸುಗಳ ಪ್ರದರ್ಶನ ಒಂದೆಡೆಯಾದರೆ, ಮತ್ತೊಂದೆಡೆ ಕಪ್ಪು ಕಡಲೆ, ಗೋಧಿ, ಹೆಸರು, ಭತ್ತ, ಜೋಳ, ನೆಲಗಡಲೆ ಸೇರಿದಂತೆ ಆಹಾರ ಧಾನ್ಯಗಳ ದೇಸಿ ತಳಿಗಳ ವೈಭವ..!

ನಗರದ ಅರಮನೆ ಆವರಣದಲ್ಲಿ ಕೃಷಿ ಇಲಾಖೆ ಆಯೋಜಿಸಿರುವ ಮೂರು ದಿನಗಳ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಮೊದಲ ದಿನ ಕಂಡು ಬಂದ ದೃಶ್ಯಗಳಿವು.

ಮೇಳದಲ್ಲಿ ಸಾವಯವ ಮತ್ತು ಸಿರಿಧಾನ್ಯಗಳ ಪ್ರದರ್ಶನಕ್ಕೆ ಪ್ರತ್ಯೇಕ ಮಳಿಗೆಗಳನ್ನು ತೆರೆಯಲಾಗಿತ್ತು. ರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾಲಯಗಳು ಸಿರಿಧಾನ್ಯಗಳಿಂದ ತಯಾರಿಸಿರುವ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. 'ರೆಡಿ ಟು ಕುಕ್', 'ರೆಡಿ ಟು ಈಟ್'ನಂತಹ ಉತ್ಪನ್ನಗಳ ಬಗ್ಗೆ ಸಾರ್ವಜನಿಕರು ಮಾಹಿತಿ ಪಡೆದು, ಅವುಗಳನ್ನು ಖರೀದಿಸುತ್ತಿದ್ದರು.

ಬೆಳ್ಳುಳ್ಳಿ ಮಿಶ್ರಿತ ಸಿರಿಧಾನ್ಯದ ಬ್ರೆಡ್: ಬೆಳ್ಳುಳ್ಳಿ ಮಿಶ್ರಿತ ನವಣೆ ಬ್ರೆಡ್, ನಾರಿನಂಶ ಮತ್ತು ಅಧಿಕ ಪೋಷಕಾಂಶಗಳನ್ನು ಒಳಗೊಂಡಿದೆ. ಇದು ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಿಸಲು ನೆರವಾಗುತ್ತದೆ. ಇದರಲ್ಲಿ ಕೊಬ್ಬಿನಂಶವೂ ಕಡಿಮೆ ಇದೆ. ರೋಗನಿರೋಧಕ ಶಕ್ತಿ ಹೆಚ್ಚಿಸಲು ಇದು ಸಹಾಯಕವಾಗಿದೆ ಎಂದು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಸಂಸ್ಕರಣೆ ಹಾಗೂ ಆಹಾರ ತಂತ್ರಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವರಿಸಿದರು.

ದೇಸಿ ತಳಿಗಳ ಪ್ರದರ್ಶನ: ತಲೆಮಾರುಗಳಿಂದ ರೈತರು ಕಾಪಾಡಿಕೊಂಡು ಬಂದಿರುವ ದೇಸಿ ತಳಿಗಳ ಪ್ರದರ್ಶನ, ಮೇಳದ ಮತ್ತೊಂದು ಆಕರ್ಷಣೆಯಾಗಿತ್ತು. ರಾಜ್ಯದ 15 ಜಿಲ್ಲೆಗಳ ಬೀಜ ಸಂರಕ್ಷಕರು, ತಾವು ಜತನದಿಂದ ಕಾಪಾಡಿಕೊಂಡಿರು ದೇಸಿ ತಳಿಗಳ ಬೀಜಗಳನ್ನು ಪ್ರದರ್ಶನಕ್ಕಿಟ್ಟಿದ್ದರು. ಮಳಿಗೆಗಳಿಗೆ ಭೇಟಿ ನೀಡಿದವರಿಗೆ ದೇಸಿ ಬೀಜಗಳ ಮಹತ್ವ, ಅವುಗಳ ಸಂರಕ್ಷಣೆ ಮಾಹಿತಿ ನೀಡುತ್ತಿದ್ದರು.

ಒಕ್ಕಣೆಗೆ ಬಳಸುವ ಕೃಷಿ ಉಪಕರಣಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ನಗರದ ಜನರು ಅವುಗಳನ್ನು ಕುತೂಹಲದಿಂದ ನೋಡಿದರು. ಹೇಗೆ ಬಳಸುತ್ತಾರೆಂದು ಮಳಿಗೆಯಲ್ಲಿದ್ದ ರೈತರಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದರು.

ಮಣ್ಣಿನ ಪೆವಿಲಿಯನ್: ಮಣ್ಣಿನ ಮಹತ್ವ ಕುರಿತು ಮಾಹಿತಿ ನೀಡುವುದಕ್ಕಾಗಿ ಮೇಳದಲ್ಲಿ ಪ್ರತ್ಯೇಕವಾದ ವಿಭಾಗವನ್ನು ತೆರೆಯಲಾಗಿತ್ತು. ಈ ವಿಭಾಗದಲ್ಲಿ ರಾಜ್ಯದಲ್ಲಿರುವ ಮಣ್ಣಿನ ವಿಧಗಳು, ಪದರಗಳು, ಮಣ್ಣಿನ ಮಹತ್ವ, ಗುಣಲಕ್ಷಣಗಳು, ವರ್ಗೀಕರಣ ಮತ್ತು ರಚನೆ ಬಗ್ಗೆ ಚಿತ್ರ ಸಹಿತ ಮಾಹಿತಿ ನೀಡಲಾಗುತ್ತಿತ್ತು.

ಮೇಳದ ಪ್ರವೇಶದ್ವಾರದಲ್ಲಿ ನವಧಾನ್ಯಗಳಲ್ಲಿ ಅರಳಿದ ರೈತ ಮತ್ತು ರೈತ ಮಹಿಳೆಯ ಪ್ರತಿಕೃತಿಯ ಮುಂಭಾಗದಲ್ಲಿ ಸಾರ್ವಜನಿಕರು ಸೆಲ್ಫಿಗಳನ್ನು ತೆಗೆದುಕೊಳ್ಳುತ್ತಿದ್ದರು.

ಗಮನ ಸೆಳೆದ 'ರಾಗಿ ವೈನ್'

ರಾಗಿ ಬೆಳೆಗಾರರಿಗೆ ಬೆಂಬಲ ನೀಡುವ ಉದ್ದೇಶದಿಂದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಸಂಸ್ಕರಣಾ ಹಾಗೂ ಆಹಾರ ತಂತ್ರಜ್ಞಾನ ವಿಭಾಗವು 'ರಾಗಿ ವೈನ್' ತಯಾರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ.

'ಒಂದು ಲೀಟರ್ ರಾಗಿ ವೈನ್ ತಯಾರಿಸಲು 125 ಗ್ರಾಂ ಸಕ್ಕರೆ, ಅಷ್ಟೇ ಪ್ರಮಾಣದ ರಾಗಿಯನ್ನು ಹಾಗೂ 50 ಗ್ರಾಂ ಯೀಸ್ಟ್ ಬಳಸಲಾಗುತ್ತದೆ. ಹೊಟ್ಟು ತೆಗೆದ ರಾಗಿಯೊಂದಿಗೆ ಸಕ್ಕರೆ ಬೆರೆಸಿ 15 ದಿನಗಳವರೆಗೆ ನೀರಿನಲ್ಲಿ ನೆನೆಸಿಡಬೇಕು. ಇದನ್ನು ಪ್ರತಿನಿತ್ಯ ಫಿಲ್ಟರ್ ಮಾಡಿಕೊಳ್ಳಬೇಕು. ಒಂದು ತಿಂಗಳ ಈ ಪ್ರಕ್ರಿಯೆಯ ನಂತರ ಇದು ವೈನ್ ಆಗಿ ಬದಲಾಗುತ್ತದೆ' ಎಂದು ಸಂಸ್ಕರಣಾ ಹಾಗೂ ಆಹಾರ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಉದಯಕುಮಾರ್ ನಿಡೋಣಿ, ಸಹಾಯಕ ಪ್ರಾಧ್ಯಾಪಕಿ ಸುಧಾ ದೇವಿ ಜಿ., ಮಾಹಿತಿ ನೀಡಿದರು.

'ರಾಗಿ ವೈನ್ ಕೂಡ ಉತ್ತಮ ಸ್ವಾದ ಹೊಂದಿದ್ದು, ಈ ವೈನ್ ತಯಾರಿಕೆ ಸುಲಭ. ವೆಚ್ಚವೂ ಕಡಿಮೆ. ಒಂದು ತಿಂಗಳ ಅವಧಿಯಲ್ಲಿ ವೈನ್ ತಯಾರಿಸಬಹುದು. ಇದರಲ್ಲಿ ಶೇ 12.01ರಷ್ಟು ಆಲ್ಕೋಹಾಲ್ ಪ್ರಮಾಣ ಇರುತ್ತದೆ. ರಾಗಿಯನ್ನು ಬಳಸಿ ವೈನ್ ತಯಾರಿಸುವ ತಂತ್ರಜ್ಞಾನವು ರಾಜ್ಯದಲ್ಲಿ ಇದೇ ಮೊದಲು' ಎಂದರು.

'1,300 ದೇಸಿ ಭತ್ತದ ತಳಿಗಳು'

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಗ್ರಾಮದ ಫನಿ ಖಾನ್, ತಮ್ಮ 'ಫನಿ ಅಗ್ರಿ ಆ್ಯಂಡ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್' ಮೂಲಕ ಸಂರಕ್ಷಿಸಿದ್ದ 1,300 ದೇಸಿ ಭತ್ತದ ತಳಿಗಳನ್ನು ಮೇಳದಲ್ಲಿ ಪ್ರದರ್ಶನಕ್ಕಿಟ್ಟಿದ್ದರು.

'ದೇಸಿ ತಳಿಗಳನ್ನು ರಕ್ಷಿಸುವುದು ಮತ್ತು ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮ ಉದ್ದೇಶವಾಗಿದೆ' ಎಂದು ಫನಿಖಾನ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮಲ್ಲಿ ಕೆಂಪಕ್ಕಿ, ದೊಡ್ಡಿಭತ್ತ, ರಸಕದಂ, ಜಿರಿಗೆ ಸಣ್ಣ, ರಾಜಮುಡಿ, ಮೈಸೂರು ಮಲ್ಲಿಗೆ ಸೇರಿದಂತೆ ಹಲವು ತಳಿಗಳನ್ನು ಸಂರಕ್ಷಿಸಲಾಗಿದೆ. ಆಸಕ್ತ ರೈತರು ನಮ್ಮನ್ನು ಸಂಪರ್ಕಿಸಿದರೆ, ಅವರಿಗೆ ಉಚಿತವಾಗಿ 50 ಗ್ರಾಂನಿಂದ 100 ಗ್ರಾಂ ವರೆಗೆ ಬಿತ್ತನ ಬೀಜಗಳನ್ನು ನೀಡಲಾಗುವುದು. ಅವುಗಳನ್ನು ಬೆಳೆಸಿ, ಉಳಿಸಬೇಕು' ಎಂದರು.

₹120 ಕೋಟಿ ಆಸ್ತಿ ಬಿಡಿಎ ವಶ

ಮಾಳಗಾಳದಲ್ಲಿ ಅಕ್ರಮ ಮನೆ, ಶೆಡ್‌ಗಳ ತೆರವುಗೊಳಿಸಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತೆರವುಗೊಳಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ಗುರುವಾರ ನಡೆದ ಕಾರ್ಯಾಚರಣೆಯಲ್ಲಿ ನಾಗರಬಾವಿ ಬಡಾವಣೆಯ ಮಾಳಗಾಳದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮನೆ, ಶೆಡ್‌ಗಳನ್ನು ತೆರವು ಮಾಡಿ ₹120 ಕೋಟಿ ಆಸ್ತಿಯನ್ನು ವಶಕ್ಕೆ ಪಡೆದುಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಾಳಗಾಳ ಗ್ರಾಮದ (ನಾಗರಬಾವಿ ಬಡಾವಣೆ) ಸರ್ವೆ ನಂ. 14/2ರ 2 ಎಕರೆ 16 ಗುಂಟೆ ಪ್ರದೇಶದಲ್ಲಿ 25 ಸಿಮೆಂಟ್ ಶೀಟ್‌ನ ಮನೆಗಳು, ಎರಡು ಆರ್‌ಸಿಸಿ ಮನೆ ಹಾಗೂ ಕಟ್ಟಡಗಳನ್ನು ತೆರವುಗೊಳಿಸಿತು. ಒತ್ತುವರಿ ತೆರವು ಮಾಡುವಂತೆ ಬಿಡಿಎ ಅಧಿಕಾರಿಗಳು 3–4 ಬಾರಿ ಮಾಹಿತಿ ನೀಡಿದ್ದರೂ ತೆರವು ಮಾಡಿರಲಿಲ್ಲ. ಬೆಳಿಗ್ಗೆ ನಾಲ್ಕು ಜೆಸಿಬಿ, ಒಂದು ಹಿಟಾಚಿ ಯಂತ್ರ ಕಾರ್ಯಾಚರಣೆ ನಡೆಸಿ, ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡಿದವು.

ಬೀದಿಗೆ ಬಿದ್ದ ಕುಟುಂಬ: ಉತ್ತರ ಕರ್ನಾಟದ 20 ಕುಟುಂಬಗಳು ಸಿಮೆಂಟ್ ಶೀಟ್ ಮನೆಗಳಲ್ಲಿ ವಾಸವಿದ್ದರು. ನಿರ್ಮಾಣ ಹಂತದ ಕಟ್ಟಡಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಅವರು, ದಿಢೀರ್ ಕಾರ್ಯಾಚರಣೆಯಿಂದಾಗಿ ಕಂಗಾಲಾದರು. ಮನೆಗಳು ನೆಲಸಮವಾಗುವುದನ್ನು ಕಂಡು ಕಣ್ಣೀರಿಟ್ಟರು.

'ಮೊದಲೇ ಮಾಹಿತಿ ನೀಡಿದ್ದರೆ ಮನೆಗಳನ್ನು ಖಾಲಿ ಮಾಡುತ್ತಿದ್ದೆವು. ಮನೆಯ ಸಾಮಗ್ರಿಗಳನ್ನು ಹೊರಗೆ ಹಾಕಿರುವುದರಿಂದ ಏನು ಮಾಡಬೇಕು ಎಂದು ಗೊತ್ತಾಗುತ್ತಿಲ್ಲ. ತಿಂಗಳಿಗೆ ₹ 4 ಸಾವಿರ ಬಾಡಿಗೆ ನೀಡುತ್ತಿದ್ದೆವು. ಈಗ ಮಾಲೀಕ ನಾಪತ್ತೆಯಾಗಿದ್ದಾರೆ' ಎಂದು ನಿವಾಸಿಗಳು ಕಣ್ಣೀರಿಟ್ಟರು.

'ಮಕ್ಕಳು ಸಮೀಪದ ಶಾಲೆಗೆ ಹೋಗುತ್ತಿದ್ದರು. ಈಗ ಸಾಮಗ್ರಿಗಳನ್ನು ರಸ್ತೆ ಪಕ್ಕದಲ್ಲಿಯೇ ಇಟ್ಟುಕೊಂಡಿದ್ದೇವೆ. ಮಲಗಲು ಸಹ ಜಾಗವಿಲ್ಲ. ವಯಸ್ಸಾದವರು, ಅಂಗವಿಕಲರು, ಅನಾರೋಗ್ಯ ಪೀಡಿತರು ಇದ್ದಾರೆ' ಎಂದು ಅಳಲು ತೋಡಿಕೊಂಡರು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಉಪ ಆರಕ್ಷಕ ಅಧೀಕ್ಷಕ ಕೃಷ್ಣಕುಮಾರ್, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರವಿಕುಮಾರ್ ಹಾಗೂ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.



ನಾಗರಬಾವಿ ಬಡಾವಣೆಯ ಮಾಳಗಾಳದಲ್ಲಿ ನಿರ್ಮಿಸಿದ್ದ ಮನೆ, ಶೆಡ್‌ಗಳನ್ನು ಜೆಸಿಬಿ ಯಂತ್ರಗಳಿಂದ ನೆಲಸಮ ಮಾಡಲಾಯಿತು

'3 ಬಾರಿ ಸೂಚನೆ'

'ಬಿಡಿಎಗೆ ಸೇರಿದ ಜಾಗದಲ್ಲಿ ಅಕ್ರಮವಾಗಿ ಮನೆ ಹಾಗೂ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಆರು ತಿಂಗಳ ಹಿಂದೆಯೇ ಈ ಜಾಗದಲ್ಲಿ ಸರ್ವೆ ನಡೆಸಿ, ಬೇಲಿ ಹಾಕಲಾಗಿತ್ತು. ಒತ್ತುವರಿ ತೆರವು ಮಾಡುವಂತೆ 3–4 ಬಾರಿ ಸೂಚನೆ ನೀಡಲಾಗಿತ್ತು. ನಿಯಮದ ಪ್ರಕಾರ ಕಾರ್ಯಾಚರಣೆ ನಡೆಸಿ, ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ' ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಸವರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಡಿಎಗೆ ಸೇರಿದ ಈ ಜಾಗವನ್ನು ವ್ಯಕ್ತಿಯೊಬ್ಬ ಒತ್ತುವರಿ ಮಾಡಿಕೊಂಡು ಮನೆಗಳನ್ನು ನಿರ್ಮಿಸಿ ಹಲವರಿಗೆ ಬಾಡಿಗೆ ನೀಡಿದ್ದ. ಪ್ರತಿ ಮನೆಗೆ ತಲಾ ₹4 ರಿಂದ 5 ಸಾವಿರ ಬಾಡಿಗೆ ಪಡೆಯುತ್ತಿದ್ದ. ಬಾಡಿಗೆ ವಾಸಿಗಳಿಂದ ಮುಂಗಡ ಹಣವನ್ನು ಪಡೆದು ಈಗ ನಾಪತ್ತೆ-ಯಾಗಿದ್ದಾನೆ' ಎಂದು ಹೇಳಿದರು.

ಸಭೆಗೆ ಹಾಜರಾಗಲು ಆಯುಕ್ತರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮೂಲಸೌಲಭ್ಯ ಕಲ್ಪಿಸದಿದ್ದಕ್ಕೆ ಅಸಮಾಧಾನ
- ಸಮರ್ಪಕ ಉತ್ತರ ನೀಡದ ಎಂಜಿನಿಯರ್
- ಬಡಾವಣೆ ಜನರ ಸಮಸ್ಯೆ ಆಲಿಸಿದ ಸಮಿತಿ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಪಿಕೆಎಲ್)ಗೆ ನಿಗದಿತ ಗಡುವಿನೊಳಗೆ ಮೂಲಸೌಲಭ್ಯ ಕಲ್ಪಿಸದ ಬಿಡಿಎ ವಿರುದ್ಧ ವಿಧಾನಸಭೆ ಅರ್ಜಿ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

ಯಶವಂತಪುರ ಕ್ಷೇತ್ರದ ಶಾಸಕ ಎಸ್‌.ಟಿ. ಸೋಮಶೇಖರ್ ಅಧ್ಯಕ್ಷತೆ-ಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಸದಸ್ಯರಾದ ಎಸ್. ಸುರೇಶ್ ಕುಮಾರ್, ಯು.ಬಿ. ಬಣಕಾರ್, ಸಿ.ಎನ್. ಬಾಲಕೃಷ್ಣ, ಎ.ಸಿ. ಶ್ರೀನಿವಾಸ್, ಎ. ಮಂಜು, ಡಾ. ಅವಿಶ್ ಅವರು ಬಡಾವಣೆ ನಿವಾಸಿಗಳ ಸಮಸ್ಯೆ ಆಲಿಸಿದರು.

ಅನ್ಯ ಕಾರ್ಯನಿಮಿತ್ತ ಬಿಡಿಎ ಆಯುಕ್ತ ಎನ್.ಜಯರಾಮ್ ಸಭೆಗೆ ಗೈರು ಹಾಜರಾಗಿದ್ದರು. ಜನವರಿ 30ರಂದು ಆಯುಕ್ತರು ಖುದ್ದು ಹಾಜರಾಗಿ, ಸಮರ್ಪಕ ಉತ್ತರ ನೀಡುವಂತೆ ಸಮಿತಿ ಸೂಚಿಸಿತು.

ಬಿಡಿಎ ಪರವಾಗಿ ಎಂಜಿನಿಯರ್ ಎಚ್‌.ಆರ್. ಶಾಂತರಾಜಣ್ಣ ಹಾಗೂ ನಗರಾಭಿವೃದ್ಧಿ ಇಲಾಖೆ ಪರವಾಗಿ ಉಪ ಕಾರ್ಯದರ್ಶಿ ಪ್ರಶಾಂತ್ ಹಾಜರಾಗಿದ್ದರು.

'2023ರ ನವೆಂಬರ್ ತಿಂಗಳೊಳಗೆ ಎನ್‌ಪಿಕೆಎಲ್‌ಗೆ ಮೂಲಸೌಲಭ್ಯ ಒದಗಿಸುವುದಾಗಿ ಬಿಡಿಎ ಒಪ್ಪಿಕೊಂಡಿತ್ತು. ಎರಡು ಬಾರಿ ಗಡುವು ವಿಸ್ತರಣೆಗೊಂಡ ಬಳಿಕವೂ ಸೌಕರ್ಯ ಒದಗಿಸದಿರಲು ಕಾರಣವೇನು?. ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡದ ಶಿವರಾಮ ಕಾರಂತ ಬಡಾವಣೆಯ ರಸ್ತೆಗಳಿಗೆ ಡಾಂಬರ್ ಹಾಕುವುದಕ್ಕೆ ಆದ್ಯತೆ ನೀಡಲು ಕಾರಣವೇನು? ಎಂಬ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಪ್ರಾಧಿಕಾರದ ಎಂಜಿನಿಯರ್ ಸಮರ್ಪಕ ಉತ್ತರ ನೀಡಲಿಲ್ಲ.

'ರಸ್ತೆ, ಒಳಚರಂಡಿ, ವಿದ್ಯುತ್ ಮತ್ತು ಕುಡಿಯುವ ನೀರಿನ ಕೊರತೆಯಿಂದಾಗಿ ನಿವೇಶನ ಪಡೆದವರು ಮನೆಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಮನೆಗಳನ್ನು ನಿರ್ಮಿಸಿದವರು ಸಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ' ಎಂದು ಸದಸ್ಯರು ಹೇಳಿದರು.

ವಸ್ತುಸ್ಥಿತಿ ತಿಳಿಯಲು ಬಡಾವಣೆಗೆ ಭೇಟಿ ನೀಡಬೇಕೆಂಬ ಶಾಸಕ ಸಿ.ಎನ್. ಬಾಲಕೃಷ್ಣ ಅವರ ಸಲಹೆಗೆ ಆಯುಕ್ತರ ಜತೆ ಚರ್ಚಿಸಿದ ಬಳಿಕ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸೋಮಶೇಖರ್ ಉತ್ತರಿಸಿದರು.

'ವಿಧಾನಸಭೆ ಅರ್ಜಿ ಸಮಿತಿಯು ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಮೂಲಸೌಲಭ್ಯ ಕಲ್ಪಿಸಿರುವ ಕುರಿತು ಸಭೆ ನಡೆಸಿತು. 2023ರ ನವೆಂಬರ್ ತಿಂಗಳೊಳಗೆ ಮೂಲಸೌಕರ್ಯ ಕಲ್ಪಿಸುವುದಾಗಿ ಬಿಡಿಎ ಹೇಳಿ ಈವರೆಗೂ ಕಲ್ಪಿಸಿಲ್ಲ. 9 ಬ್ಲಾಕ್‌ಗಳ ಪೈಕಿ ಆರು ಬ್ಲಾಕ್‌ಗಳ ರಸ್ತೆ ಡಾಂಬರೀಕರಣಕ್ಕೆ ಟೆಂಡರ್ ಕರೆದಿಲ್ಲ. ವಿದ್ಯುತ್ ಪೂರೈಕೆ ಇಲ್ಲ. ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಮನೆ ನಿರ್ಮಾಣಕ್ಕೆ ನೀರು ಸಿಗುತ್ತಿಲ್ಲ. ಈ ಎಲ್ಲಾ ಅಂಶಗಳನ್ನು ಸಮಿತಿ ಸದಸ್ಯರ ಗಮನಕ್ಕೆ ತರಲಾಗಿದೆ' ಎಂದು ನಾಡಪ್ರಭು ಕೆಂಪೇಗೌಡ ಲೇಔಟ್ ಮುಕ್ತ ವೇದಿಕೆ ಜಂಟಿ ಕಾರ್ಯದರ್ಶಿ ಎ. ಎಸ್. ಸೂರ್ಯಕಿರಣ್ ತಿಳಿಸಿದರು.

ನಗರದಲ್ಲಿ ಇಂದು

ಶಿವಬಾಲಯೋಗಿ ಮಹಾರಾಜರ ಜಯಂತಿ: ಪೂಜೆ, ಹೋಮ, ಪೂರ್ಣಾಹುತಿ, ಕುಂಭಾಭಿಷೇಕ, ಪ್ರಸಾದ, ಆಯೋಜನೆ ಮತ್ತು ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ. ನಗರ, ಬೆಳಿಗ್ಗೆ 6.30ರಿಂದ

'ಕಲಾ ಧ್ವನಿ' ಕಾರ್ಯಕ್ರಮದ ಉದ್ಘಾಟನೆ: ಯು.ಟಿ. ಖಾದರ್, ಚಿರಂಜೀವಿ ಸಿಂಘ್, ಸುನಿಲ್ ಕುಮಾರ್ ಧರೇಶ್ವರ್, ಜಗದೀಶ್ ಲಖಾನಿ, ಬಿ.ಎಲ್. ಶಂಕರ್, ಜಾನಪದ, ಬುಡಕಟ್ಟು ಕಲೆ ಪ್ರದರ್ಶನ, ಸಂಗೀತ ಕಾರ್ಯಕ್ರಮ: ರಘು ದೀಕ್ಷಿತ್, ಆಯೋಜನೆ: ಇನ್ಫೋಸಿಸ್ ಫೌಂಡೇಷನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

'ಶತಮಾನದ ಸಮತಾ ಸಂಭ್ರಮ' ವಿಚಾರ ಸಂಕಿರಣದ ಉದ್ಘಾಟನೆ: ಜಿ. ಪರಮೇಶ್ವರ್, ಅಧ್ಯಕ್ಷತೆ: ಜಯಕರ ಎಸ್. ಎಂ., ಉಪಸ್ಥಿತಿ: ಎಂ. ವೆಂಕಟಸ್ವಾಮಿ, ರಾಕೇಶ್ ಕುಮಾರ್, ಆಯೋಜನೆ: ಸಮತಾ ಸೈನಿಕ ದಳ, ಬೆಂಗಳೂರು ವಿಶ್ವವಿದ್ಯಾಲಯ ಡಾ.ಬಿ. ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯ, ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟ, ಸ್ಥಳ: ಎಚ್. ಎನ್. ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ಅಂಗಳದಲ್ಲಿ ತಿಂಗಳ ಪುಸ್ತಕ: ಶಿವರಾಮ ಕಾರಂತರ 'ಬೆಟ್ಟದ ಜೀವ' ಕೃತಿ ಕುರಿತು ಮಾತನಾಡುವವರು: ಪಿ. ಶೇಷಾದ್ರಿ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಸುರಾನ ಕಾಲೇಜು, ಸೌತ್‌ಎಂಡ್ ವೃತ್ತ, ಬೆಳಿಗ್ಗೆ 11

ಸನ್ನತಿ ಪಂಚಶೀಲ ಪಾದಯಾತ್ರೆ: ಆಯೋಜನೆ: ಸನ್ನತಿ ಪಂಚಶೀಲ ಪಾದಯಾತ್ರೆ ಸಮಾರೋಪ ಸಮಾರಂಭ ಸಂಘಟನಾ ಸಮಿತಿ, ಪಾದಯಾತ್ರೆ ಪ್ರಾರಂಭವಾಗುವ ಸ್ಥಳ: ನಾಗಸೇನಾ ಬುದ್ಧ ವಿಹಾರದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ, ಬೆಳಿಗ್ಗೆ 11.30ರಿಂದ

ರಾಜ್ಯಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆ: ಅತಿಥಿಗಳು: ದಿನೇಶ್ ಗುಂಡೂರಾವ್, ಕೆ. ವೆಂಕಟೇಶ್, ವಿನಯ್ ಕುಲಕರ್ಣಿ, ಅನೂಪ್ ಅಯ್ಯಂಗಾರ್, ನವೀನ್ ಲತಾ, ಸುರೇಶ್ ಗೌಡ, ಆಯೋಜನೆ: ಬೃಹತ್ ಬೆಂಗಳೂರು ಮಹಾನಗರ ಗೋಪಾಲಕರ ಸಂಘ, ಸ್ಥಳ: ಶಿರೂರುಪಾರ್ಕ್ ಆಟದ ಮೈದಾನ, ಮಂತ್ರಿಮಾಲ್ ಮುಂಭಾಗ, ಶೇಷಾದ್ರಿಪುರ, ಸಂಜೆ 5ರಿಂದ

'ಭಾವ ಧ್ಯಾನ' ಸಾಂಸ್ಕೃತಿಕ ಕಾರ್ಯಕ್ರಮ: ನಿರ್ಗುಣ ಭಾವ: ಅದಿತಿ ಮಂಗಲದಾಸ್, ಕಾಲರಂಜಿನಿ ಭಾವ: ಸೋನಲ್ ಮಾನಸಿಂಗ್, ಕಾವ್ಯಭಾವ: ಅಲೋಕ್ ಶ್ರೀವಾಸ್ತವ್, ದೇವಿ ಭಾವ: ಬರಸಾತ್, ರಾಗಾಂಜಲಿ ಭಾವ: ಮೀಠಾ ಪಂಡಿತ್, ಪವಿತ್ರ ಭಾವ: ಓಂಪ್ರಕಾಶ್ ಶರ್ಮಾ, ಸ್ತೋತ್ರ ಭಾವ: ಕೆ. ಸಾಯಿ ಶಂಕರ್, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದ ಮೀನಾಕ್ಷಿ ಮಂಟಪ, ಮಧ್ಯಾಹ್ನ 3ರಿಂದ

ಕನ್ನಡ ಸೇನಾನಿ ಸಾ.ರಾ. ಗೋವಿಂದು ಅಭಿನಂದನಾ ಸಮಾರಂಭ: ಅಭಿನಂದಿಸುವವರು: ಸಿದ್ದರಾಮಯ್ಯ, ಅತಿಥಿಗಳು: ರಾಮಲಿಂಗಾರೆಡ್ಡಿ, ಎಚ್‌.ಸಿ. ಮಹದೇವಪ್ಪ, ಶಿವರಾಜ ತಂಗಡಗಿ, ಎಂ. ನರಸಿಂಹಲು, ಅಭಿನಂದನಾ ಗ್ರಂಥ ಬಿಡುಗಡೆ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಆಯೋಜನೆ: ಸಾ.ರಾ. ಗೋವಿಂದು ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮೂವರಿಗೆ ₹30 ಲಕ್ಷ ವಂಚಿಸಿದ ಸೈಬರ್ ಕಳ್ಳರು: ತನಿಖೆ ಚುರುಕು ● ಆರೋಪಿಗಳಿಗಾಗಿ ಹುಡುಕಾಟ

ಪೊಲೀಸರ ಸೋಗಿನಲ್ಲಿ ಕರೆ ಮಾಡಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಾಗೂ ಈಶಾನ್ಯ ವಿಭಾಗದ ಸೈಬರ್ ಅಪರಾಧ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ಸೈಬರ್ ಕಳ್ಳರು ಮೂವರಿಗೆ ₹30 ಲಕ್ಷ ವಂಚಿಸಿದ್ದಾರೆ.

ಈ ಸಂಬಂಧ ಸೈಬರ್ ಅಪರಾಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಆರೋಪಿಗಳಿಗೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ನಿವೃತ್ತ ಅಧಿಕಾರಿಗೆ ಡಿಜಿಟಲ್ ಅರೆಸ್ಟ್: ಮಲ್ಲೇಶ್ವರದಲ್ಲಿ ನೆಲಸಿರುವ 65 ವರ್ಷದ ನಿವೃತ್ತ ಅಧಿಕಾರಿಯೊಬ್ಬರಿಗೆ ದೆಹಲಿ ಪೊಲೀಸರೆಂದು ಹೇಳಿಕೊಂಡು ವಾಟ್ಸ್‌ಆ್ಯಪ್‌ನಲ್ಲಿ ವಿಡಿಯೊ ಕರೆ ಮಾಡಿದ್ದ ಸೈಬರ್ ವಂಚಕರು, ತಮ್ಮ ವಿರುದ್ಧ ಸಿಬಿಐನಲ್ಲಿ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿದ್ದರು. ಪ್ರಕರಣದ ಸಂಬಂಧ ತಮ್ಮನ್ನು ವಿಚಾರಣೆಗೆ ಒಳಪಡಿಸಬೇಕಿದೆ ಎಂದು ಬೆದರಿಸಿ, ಐದು ದಿನ 'ಡಿಜಿಟಲ್ ಅರೆಸ್ಟ್'ನಲ್ಲಿ ಇರಿಸಿದ್ದರು.

ಜಾಮೀನು ಹಾಗೂ ನ್ಯಾಯಾಲಯದ ಪ್ರಕ್ರಿಯೆಗೆ ತಾವು ನೀಡುವ ಬ್ಯಾಂಕ್ ಖಾತೆಗೆ ₹10 ಲಕ್ಷ ವರ್ಗಾವಣೆ ಮಾಡುವಂತೆ ಸೂಚಿಸಿದ್ದರು. ವಂಚಕರ ಮಾತಿನಿಂದ ಹೆದರಿದ್ದ ದೂರುದಾರರು ತಮ್ಮ ಕೆನರಾ ಬ್ಯಾಂಕ್ ಖಾತೆಯಿಂದ ಜ.15ರಂದು ಆರ್‌ಟಿಜಿಎಸ್ ಮೂಲಕ ಹಣ ವರ್ಗಾವಣೆ ಮಾಡಿದ್ದರು. ಮತ್ತೆ ₹3 ಲಕ್ಷ ವರ್ಗಾವಣೆ ಮಾಡುವಂತೆ ಸೂಚಿಸಿದ್ದರು. ನಂತರ, ವಂಚನೆಗೆ ಒಳಗಾಗಿರುವುದು ಗೊತ್ತಾಗಿ ದೂರು ನೀಡಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಪೊಲೀಸರು ಹೇಳಿದರು.

ಉದ್ಯಮಿಗೂ ವಂಚನೆ: ಇನ್ನೊಂದು ಪ್ರಕರಣದಲ್ಲಿ ಕುಂಬಾರಪೇಟೆಯ ಎಸ್‌.ಪಿ. ರಸ್ತೆಯಲ್ಲಿ ನೆಲಸಿರುವ ಉದ್ಯಮಿಯೊಬ್ಬರಿಗೆ ₹10.60 ಲಕ್ಷ ವಂಚಿಸಲಾಗಿದೆ.

ಉದ್ಯಮಿಗೆ ಇನ್‌ಸ್ಟಾಗ್ರಾಂನ 'ಸೌತ್ ಅನ್ನಾ ಎಕ್ಸ್‌ಚೇಂಜ್' ಖಾತೆಯ ಮೂಲಕ ಸುರಾಜ್ ಹೆಸರಿನ ವ್ಯಕ್ತಿ ಪರಿಚಯವಾಗಿದ್ದ. ನಂತರ, ಎರಡು ಪ್ರತ್ಯೇಕ ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ್ದ ವ್ಯಕ್ತಿ, ಆನ್‌ಲೈನ್ ಮೂಲಕ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಆಮಿಷ ವೊಡ್ಡಿದ್ದ. ಇದನ್ನು ನಂಬಿದ್ದ ಉದ್ಯಮಿ 2024ರ ಫೆಬ್ರುವರಿಯಿಂದ ಮೇ ತನಕ ₹10.60 ಲಕ್ಷ ವರ್ಗಾವಣೆ ಮಾಡಿದ್ದರು. ಕೆಲವು ದಿನಗಳು ಕಳೆದರೂ ಅಸಲು ಹಾಗೂ ಲಾಭಾಂಶ ನೀಡಿರಲಿಲ್ಲ. ಆಗ ಸೈಬರ್ ವಂಚನೆಗೆ ಒಳಗಾಗಿರುವುದು ಗೊತ್ತಾಗಿ ದೂರು ನೀಡಿದ್ದರು ಎಂದು ಪೊಲೀಸರು ಹೇಳಿದರು.

ಖಾಸಗಿ ಕಂಪನಿ ಉದ್ಯೋಗಿಗೆ ವಂಚನೆ

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ 57 ವರ್ಷದ ವ್ಯಕ್ತಿಯೊಬ್ಬರು ಎಚ್‌ಬಿಆರ್ ಲೇಔಟ್‌ನಲ್ಲಿ ನೆಲಸಿದ್ದಾರೆ. ಅವರಿಗೆ ಸೈಬರ್ ವಂಚಕರು ₹9.76 ಲಕ್ಷ ವಂಚಿಸಿದ್ದಾರೆ.

ಫೇಸ್‌ಬುಕ್‌ನಲ್ಲಿ ಟ್ರೇಡಿಂಗ್‌ಗೆ ಸಂಬಂಧಿಸಿದಂತೆ ಅಪರಿಚಿತ ಪೇಜ್‌ನಲ್ಲಿದ್ದ ಲಿಂಕ್ ಅನ್ನು ಕ್ಲಿಕ್ ಮಾಡಿ 'ದಿ ಚಾರಿಟಿ ವೆಲ್ತ್' ಹೆಸರಿನ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಅವರು ಸೇರ್ಪಡೆಗೊಂಡಿದ್ದರು. ಎಸ್‌ಎಂಸಿಎಸ್‌ಟಿಕೆ ಆ್ಯಪ್ ಮೂಲಕ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರಲಿದೆ ಎಂದು ನಂಬಿಸಿದ್ದರು. ವಂಚಕರ ಮಾತು ನಂಬಿ ದೂರುದಾರರು ಹಂತಹಂತವಾಗಿ ₹9.76 ಲಕ್ಷ ಹೂಡಿಕೆ ಮಾಡಿ ವಂಚನೆಗೆ ಒಳಗಾಗಿದ್ದಾರೆ ಎಂದು ಸೈಬರ್ ಪೊಲೀಸರು ತಿಳಿಸಿದ್ದಾರೆ.



ಪೆಂಡಾಲ್ ತೆರವು ವಿಚಾರಕ್ಕೆ ಗಲಾಟೆ

ಬೆಂಗಳೂರು: ಅಣ್ಣಮ್ಮ ದೇವಿಯ ಮೂರ್ತಿಯನ್ನು ಕೂರಿಸುವ ವಿಚಾರದಲ್ಲಿ ಸ್ಥಳೀಯರು ಹಾಗೂ 'ಲಾಯರ್' ಜಗದೀಶ್ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು–ಪ್ರತಿದೂರು ದಾಖಲಾಗಿದೆ.

ಕೊಡಿಗೇಹಳ್ಳಿಯ ವಿರೂಪಾಕ್ಷ ನಗರದಲ್ಲಿ ಜಗದೀಶ್ ಅವರಿಗೆ ಸೇರಿದ ಕಾಂಪ್ಲೆಕ್ಸ್ ಇದೆ. ಅದೇ ರಸ್ತೆಯಲ್ಲಿ ಸ್ಥಳೀಯರು ಅಣ್ಣಮ್ಮ ದೇವಿ ಮೂರ್ತಿ ಕೂರಿಸಲು ಪೆಂಡಾಲ್ ಹಾಕಿದ್ದರು.

ಪೆಂಡಾಲ್ ಹಾಕಿದ್ದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗುತ್ತದೆ ಎಂದು ಜಗದೀಶ್ ಅವರು ದೂರು ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಹೊಯ್ಸಳ ಸಿಬ್ಬಂದಿ ಸ್ಥಳೀಯರ ಜತೆ ಚರ್ಚಿಸಿದ್ದರು. ಪೆಂಡಾಲ್ ತೆರವು ಮಾಡಲು ಸಾಧ್ಯವಿಲ್ಲ ಎಂದು ಸ್ಥಳೀಯರು ಹೇಳಿದ್ದರು. ಅದಾದ ಕೆಲವೇ ಹೊತ್ತಿನಲ್ಲಿ ಜಗದೀಶ್ ಮನೆ ಬಳಿ ಬಂದ ತಂಡವೊಂದು ಗಲಾಟೆ ನಡೆಸಿದೆ. ಆಗ ಪರಸ್ಪರ ತಳ್ಳಾಟ ನಡೆದಿರುವುದು ವಿಡಿಯೊದಲ್ಲಿ ದಾಖಲಾಗಿದೆ. ವಿಡಿಯೊ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆಟೊ ಡಿಕ್ಕಿ ವಿಚಾರಕ್ಕೆ ಗಲಾಟೆ: ಕೊಲೆ

ಬೆಂಗಳೂರು: ಆರ್‌.ಟಿ.ನಗರ ಸಮೀಪದ ರಹಮತ್ ನಗರದಲ್ಲಿ ಬುಧವಾರ ಆಟೊ ಡಿಕ್ಕಿ ಹೊಡೆದ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಆಟೊ ಚಾಲಕನನ್ನು ಕೊಲೆ ಮಾಡಲಾಗಿದೆ.

ಸಲ್ಮಾನ್ (27) ಕೊಲೆಯಾದ ಚಾಲಕ. ರಹಮತ್ ನಗರದ ಸೈಯದ್ ಪರ್ವೇಜ್, ಆತನ ಸಹೋದರ ಸೈಯದ್ ತಬ್ರೇಜ್ ಮತ್ತು ಸಂಬಂಧಿಕರಾದ ಸಾದಿಕ್, ತೌಸಿಫ್ ಎಂಬವರನ್ನು ಆರ್‌.ಟಿ.ನಗರ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಪರ್ವೇಜ್ ತಂದೆಗೆ ಬುಧವಾರ ಬೆಳಿಗ್ಗೆ ಆಟೊ ಡಿಕ್ಕಿಯಾಗಿತ್ತು. ಈ ಕಾರಣಕ್ಕೆ ಪರ್ವೇಜ್‌ನ ತಂದೆ, ಚಾಲಕ ಸಲ್ಮಾನ್‌ಗೆ ಬೈದಿದ್ದರು. ಇದರಿಂದ ಕೋಪಗೊಂಡ ಸಲ್ಮಾನ್, ಅವರ ಮೇಲೆ ಹಲ್ಲೆ ನಡೆಸಿದ್ದ. ನಂತರ, ಆರೋಪಿಗಳು ಸಲ್ಮಾನ್ ಮನೆಯ ಎದುರು ಹೋಗಿ ಗಲಾಟೆ ಮಾಡಿದ್ದರು. ಜಗಳ ವಿಕೋಪಕ್ಕೆ ತಿರುಗಿ ಆರೋಪಿಗಳು, ಸಲ್ಮಾನ್‌ಗೆ ಒದ್ದಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಸಲ್ಮಾನ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದರು.

ಬಾರ್‌ನಲ್ಲಿ ಹಲ್ಲೆ: ವ್ಯಕ್ತಿ ಸಾವು

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ ಶಾರದಾ ಕ್ರಾಸ್ ಬಳಿಯಿರುವ ಜಿಎನ್‌ಎಸ್ ಕಂಫರ್ಟ್ಸ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ನಡೆದಿದ್ದ ಗಲಾಟೆಯಲ್ಲಿ ಹಲ್ಲೆಗೊಳಗಾಗಿದ್ದ ಬೆಂಗಳೂರಿನ ಶ್ರೀರಾಮಪುರದ ಜೈಕುಮಾರ್ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.


ಜೈಕುಮಾರ್

ಸೋಂಪುರ ಹೋಬಳಿಯ ಗೊಟ್ಟಿಗೆರೆಯ ವಿನೋದ್, ಹರ್ಷಿತ್ ಮತ್ತು ನಾಗೇಂದ್ರ ಅವರು ಜೈಕುಮಾರ್ ಮೇಲೆ ಜ.17ರಂದು ಹಲ್ಲೆ ಮಾಡಿದ್ದರು. ಜೈಕುಮಾರ್‌ನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಪತ್ನಿಯ ಮನೆ ಎದುರು ಬೆಂಕಿ ಹಚ್ಚಿಕೊಂಡು ಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ಬೇಸತ್ತು ವ್ಯಕ್ತಿಯೊಬ್ಬರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಯಾಬ್ ಚಾಲಕ ಮಂಜುನಾಥ್ (39) ಮೃತಪಟ್ಟವರು.

ಮಂಜುನಾಥ್ ತಾಯಿ ನಂಜಮ್ಮ ಅವರು ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

'ತುಮಕೂರಿನ ಮಂಜುನಾಥ್ ಅವರು 2013ರಲ್ಲಿ ನಯನಾ ರಾಜ್ ಅವರನ್ನು ಮದುವೆ ಆಗಿದ್ದರು. ಬಳಿಕ 2016ರಿಂದ ದಂಪತಿ ಜ್ಞಾನಭಾರತಿಯ ಎನ್‌ಜಿಇಎಫ್ ಲೇಔಟ್‌ನ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ದಂಪತಿಗೆ 9 ವರ್ಷದ ಪುತ್ರನಿದ್ದಾನೆ. ನಯನಾ ಅವರು ಮೇಕಪ್ ಕಲಾವಿದೆಯಾಗಿ ಕೆಲಸ ಮಾಡುತ್ತಿದ್ದಾರೆ. ಕೌಟುಂಬಿಕ ಕಲಹ ಉಂಟಾಗಿ 2022ರಿಂದ ಇಬ್ಬರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಯನಾ ಅವರು ವಿಚ್ಛೇದನ ಪಡೆಯಲು 2023ರಲ್ಲಿ ನ್ಯಾಯಾಲಯದ ಮೊರೆ ಹೋಗಿದ್ದರು. ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಈ ನಡುವೆ ಮಂಜುನಾಥ್ ಅವರು ನಯನಾ ಅವರ ಮನೆ ಎದುರು ಬಂದು 'ಇನ್ನು ಮುಂದೆ ನಿನ್ನೊಂದಿಗೆ ಜಗಳ ಮಾಡುವುದಿಲ್ಲ. ಚೆನ್ನಾಗಿ ನೋಡಿಕೊಳ್ಳುತ್ತೇನೆ. ಇಬ್ಬರೂ ಮಗನ ಒಟ್ಟಿಗೆ ಇರೋಣ' ಎಂದು ಕೇಳಿಕೊಳ್ಳುತ್ತಿದ್ದರು. ಇದಕ್ಕೆ ನಯನಾ ಒಪ್ಪಿರಲಿಲ್ಲ. ಪದೇ ಪದೇ ಮನೆಯ ಎದುರು ಬಂದು ಮಂಜುನಾಥ್ ಕೂಗಾಟ ಮಾಡುತ್ತಿದ್ದರು. ಗುರುವಾರ ಬೆಳಿಗ್ಗೆಯೂ ಮನೆಯ ಎದುರು ಬಂದಿದ್ದ ಮಂಜುನಾಥ್ ಮತ್ತೊಮ್ಮೆ ಒಟ್ಟಿಗೆ ಇರೋಣ ಎಂಬುದಾಗಿ ಮನವಿ ಮಾಡಿದ್ದರು. ಮನೆಯ ಬಾಗಿಲು ತೆಗೆಯಲು ನಯನಾ ನಿರಾಕರಿಸಿದ್ದರು. ಆಗ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.


ಮಂಜುನಾಥ್

'ಮಗನ ಸಾವಿನ ಬಗ್ಗೆ ಅನುಮಾನವಿದೆ' ಎಂದು ಮಂಜುನಾಥ್ ತಾಯಿ ನಂಜಮ್ಮ ದೂರು ನೀಡಿದ್ದಾರೆ. ಮಂಜುನಾಥ್ ಅವರ ಪತ್ನಿ ನಯನಾ ರಾಜ್, ಅತ್ತೆ ನಿರ್ಮಲಾ, ಮಾವ ರಾಜು, ನಯನಾ ರಾಜು ಅವರ ಅಕ್ಕ ಚಿನ್ನು ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮಂತ್ರಿ ಮಾಲ್‌ನ ಎರಡನೇ ಮಹಡಿಯಿಂದ ಜಿಗಿದು ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು: ಮಲ್ಲೇಶ್ವರದ ಮಂತ್ರಿ ಮಾಲ್‌ನ ಎರಡನೇ ಮಹಡಿಯಿಂದ ಜಿಗಿದು ವ್ಯಕ್ತಿಯೊಬ್ಬರು ಗುರುವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತುಮಕೂರು ಜಿಲ್ಲೆಯ ತಿಪಟೂರಿನ ನಿವಾಸಿ ಟಿ.ಸಿ. ಮಂಜುನಾಥ್ (55) ಆತ್ಮಹತ್ಯೆ ಮಾಡಿಕೊಂಡವರು. ನಗರದ ಉಲ್ಲಾಳ ಉಪ ನಗರದಲ್ಲಿ ಮಂಜುನಾಥ್ ನೆಲಸಿದ್ದರು.

ರಾತ್ರಿ 9ರ ಸುಮಾರಿಗೆ ಮಾಲ್‌ನಲ್ಲಿ ಹೆಚ್ಚಿನ ಗ್ರಾಹಕರು ಇದ್ದರು. ಅದೇ ವೇಳೆ ಎರಡನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಂಜುನಾಥ್ ಅವರು ಬ್ಯಾಂಕ್ ಸೇರಿ ವಿವಿಧೆಡೆ ಸಾಲ ಮಾಡಿಕೊಂಡಿದ್ದರು. ಇದೇ ಕಾರಣಕ್ಕೆ ಅವರು ಆತ್ಮಹತ್ಯೆಕೊಂಡಿರುವ ಸಾಧ್ಯತೆಯಿದೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಮೃತ ವ್ಯಕ್ತಿಯ ಕುಟುಂಬಕ್ಕೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಘಾತ: ಉತ್ತರ ಪ್ರದೇಶದ ಯುವಕ ಸಾವು

ಬೆಂಗಳೂರು: ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಗಂಟಿಗಾನಹಳ್ಳಿಯಲ್ಲಿ ನಿಲ್ಲಿಸಿದ್ದ ಲಾರಿಗೆ ದ್ವಿಚಕ್ರ ವಾಹನ ಡಿಕ್ಕಿಯಾಗಿ ಸವಾರ ಮೃತಪಟ್ಟಿದ್ದಾರೆ.

ನೀರಜ್‌ಕುಮಾರ್ (20) ಮೃತ ಯುವಕ. ಉತ್ತರ ಪ್ರದೇಶದ ಇವರು ಹಾರೋಹಳ್ಳಿಯಲ್ಲಿ ನೆಲಸಿದ್ದರು.

'ಗಂಟಿಗಾನಹಳ್ಳಿ ರಸ್ತೆಯ ಸಾಯಿಗ್ರೀನ್ ಪಾರ್ಕ್ ಲೇಔಟ್‌ನಲ್ಲಿ ವಿದ್ಯುತ್ ಕಂಬ ಅಳವಡಿಸಲು ಲಾರಿಯನ್ನು ಬುಧವಾರ ರಾತ್ರಿ ನಿಲುಗಡೆ ಮಾಡಲಾಗಿತ್ತು. ಲಾರಿಯ ಪಾರ್ಕಿಂಗ್ ಲೈಟ್ ಹಾಕಿರಲಿಲ್ಲ. ರಾತ್ರಿ 11.30ರ ಸುಮಾರಿಗೆ ಅದೇ ಮಾರ್ಗದಲ್ಲಿ ನೀರಜ್ ಅವರು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಲಾರಿಗೆ ಡಿಕ್ಕಿ ಹೊಡೆದು ಕೆಳಕ್ಕೆ ಬಿದ್ದಿದ್ದ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸಾರ್ವಜನಿಕರು ನೀರಜ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.

ಮಾತ್ರೆ ಸೇವಿಸಿ ಆರೋಗ್ಯದಲ್ಲಿ ಏರುಪೇರು: ವ್ಯಕ್ತಿ ಸಾವು

ಬೆಂಗಳೂರು: ಜಾಲಹಳ್ಳಿಯ ಬಾಹುಬಲಿ ನಗರದಲ್ಲಿ ವ್ಯಕ್ತಿಯೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಈ ಕುರಿತು ಜಾಲಹಳ್ಳಿ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಕಲಬುರಗಿ ಜಿಲ್ಲೆ ಕಾಳಗಿ ತಾಲ್ಲೂಕಿನ ಪಸ್ತಪುರ ಗ್ರಾಮದ ನಾಗೇಶ ಈರಪ್ಪ ಧುತ್ತರಗಿ (33) ಮೃತಪಟ್ಟವರು.


ನಾಗೇಶ

'ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಂಪನಿಯೊಂದಕ್ಕೆ ನಾಗೇಶ ಅವರು ಜ.12ರಂದು ತೆರಳಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಜಾಲಹಳ್ಳಿಯ ಸಹೋದರನ ನಿವಾಸಕ್ಕೆ ಬಂದಿದ್ದರು. ಎರಡು ದಿನ ಮನೆಯಲ್ಲೇ ಇದ್ದರು. ನಂತರ ಮತ್ತೆ ಕಂಪನಿಗೆ ಹೋಗಿದ್ದರು. ಅಲ್ಲಿ ಅಸ್ವಸ್ಥಗೊಂಡಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಜ.22ರಂದು ಮತ್ತೆ ಮನೆಯಲ್ಲಿ ಅಸ್ವಸ್ಥಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ' ಎಂದು ಮೃತ ವ್ಯಕ್ತಿಯ ಸಹೋದರ ರೇವಣಸಿದ್ದಪ್ಪ ದೂರು ನೀಡಿದ್ದಾರೆ.

'ನಾಗೇಶ ಅವರಿಗೆ ಯಾವುದೇ ಕಾಯಿಲೆ ಇರಲಿಲ್ಲ. ಕಂಪನಿಯವರು ಮಾತ್ರೆ ಹಾಗೂ ಚುಚ್ಚುಮದ್ದು ಪರೀಕ್ಷೆ ನಡೆಸಲು ನನ್ನ ಅಣ್ಣನಿಗೆ ನೀಡಿದ್ದರು. ಇದರಿಂದ ಅಣ್ಣನ ಆರೋಗ್ಯದಲ್ಲಿ ಏರುಪೇರಾಗಿ ಮೃತಪಟ್ಟಿದ್ದಾರೆ. ಅಣ್ಣನ ಸಾವಿನ ಬಗ್ಗೆ ಅನುಮಾನವಿದ್ದು ತನಿಖೆ ನಡೆಸಿ' ಎಂದು ದೂರಿನಲ್ಲಿ ಕೋರಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಭರವಸೆ

'ಜಾತಿ ಪ್ರಮಾಣ ಪತ್ರ ಪ್ರಕ್ರಿಯೆ ಸರಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ಸಮುದಾಯದವರಿಗೆ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಒದಗಿಸುವ ಪ್ರಕ್ರಿಯೆಯನ್ನು ಸರಳೀಕರಣ ಗೊಳಿಸಲಾಗುವುದು. ಈ ಸಂಬಂಧ ಸುತ್ತೋಲೆ ಹೊರಡಿಸುತ್ತೇವೆ' ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಭರವಸೆ ನೀಡಿದರು.

ಎಸ್‌.ಸಿ.ಎಸ್‌.ಎ/ಟಿ.ಎಸ್‌.ಎ ಜಾಗೃತಿ ವೇದಿಕೆ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ, ಎಸ್‌ಸಿ–ಎಸ್‌ಟಿ ಸಮುದಾಯದ ಪ್ರಮುಖರ ಅಹವಾಲು ಆಲಿಸಿದರು. ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಪಡೆಯಲು ಇರುವ ತೊಡಕಿನ ನಿವಾರಣೆ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಅವರು, 'ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ತಹಶೀಲ್ದಾರ್‌ಗಳಿಗೆ ಸರ್ಕಾರದ ಆದೇಶಗಳು ಹಾಗೂ ನ್ಯಾಯಾಲಯಗಳ ಮಾರ್ಗಸೂಚಿಗಳ ಬಗ್ಗೆ ತರಬೇತಿ ನೀಡಬೇಕಿದೆ. ಈ ಬಗ್ಗೆ ಕಂದಾಯ ಇಲಾಖೆಯೊಂದಿಗೆ ಸಭೆ ನಡೆಸಿ, ಸರಳವಾಗಿ ಜಾತಿ ಪ್ರಮಾಣ ಪತ್ರ ಒದಗಿಸಲು ಸುತ್ತೋಲೆ ಹೊರಡಿಸಲಾಗುವುದು' ಎಂದರು.

ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್ ಕುಮಾರ್, 'ಶಾಲಾ ವರ್ಗಾವಣೆ ಪ್ರಮಾಣಪತ್ರ ಇಲ್ಲದ ಅಥವಾ ಶಿಕ್ಷಣ ಪಡೆಯದ ಎಸ್‌ಸಿ–ಎಸ್‌ಟಿ ಸಮುದಾಯದವರಿಗೆ ಸ್ಥಳ ಮಹಜರು ಮಾಡಬೇಕು. ಜಾತಿಯ ಬಗ್ಗೆ ಮಾಹಿತಿ ಪಡೆಯುವ ಮೂಲಕ ಪ್ರಮಾಣ ಪತ್ರವನ್ನು ನೀಡಬೇಕು. ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಅನ್ಯ ರಾಜ್ಯದವರಾಗಿದ್ದರೇ ಅಲ್ಲಿನ ಜಾತಿ ಹಿನ್ನೆಲೆ ಪರಿಶೀಲಿಸಿ, ಪ್ರಮಾಣ ಪತ್ರ ನೀಡಲಾಗುವುದು' ಎಂದರು.

ರಾಜ್ಯಸಭೆ ಮಾಜಿ ಸದಸ್ಯ ಎಲ್‌. ಹನುಮಂತಯ್ಯ, 'ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಪಡೆಯುವುದು ಕ್ಲಿಷ್ಟಕರವಾಗಿದೆ. ಜಾತಿಯ ಗುರುತಿನ ಚೀಟಿ ವಿತರಿಸಲು ಕ್ರಮ ಕೈಗೊಳ್ಳಬೇಕಿದೆ. ಒಂಟಿ ಮಹಿಳೆಯರ ಸಮಸ್ಯೆ ಪರಿಹಾರಕ್ಕೆ ಕಂದಾಯ ಅಧಿಕಾರಿಗಳು ಸ್ಥಳ ಮಹಜರು ಮಾಡಿ, ಪರಿಹಾರ ಒದಗಿಸಬೇಕು. ಎಸ್‌ಸಿ–ಎಸ್‌ಟಿ ಜನರ ಸರ್ವತೋಮುಖ ಅಭಿವೃದ್ಧಿಗೆ ಜಾತಿ ಪ್ರಮಾಣ ಪತ್ರ ಅಗತ್ಯ' ಎಂದು ಹೇಳಿದರು.


ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಪಡೆಯುವಿಕೆಗೆ ಇರುವ ತೊಡಕುಗಳ ಬಗ್ಗೆ ಸಭೆಯಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯದವರು ವಿವರಿಸಿದರು. ಪಿ. ಮಣಿವಣ್ಣನ್, ಕೆ.ರಾಜೇಶ್ ಕುಮಾರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಮುಡಾ: ಅಧಿಕಾರಿಗಳಿಂದ ರಾತ್ರಿಯೂ ಪರಿಶೀಲನೆ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಗುರುವಾರವೂ ದಾಖಲೆಗಳ ಪರಿಶೀಲನೆ ಮುಂದುವರಿಸಿದ್ದು, ರಾತ್ರಿ 9ರ ನಂತರವೂ ಮಾಹಿತಿಯನ್ನು ದಾಖಲಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿದ್ದರು.

ಬುಧವಾರ ಮುಡಾ ಕಚೇರಿಯಲ್ಲಿ ಕಡತಗಳ ಪರಿಶೀಲನೆ ನಡೆಸಿದ್ದ ಲೋಕಾಯುಕ್ತ ಅಧಿಕಾರಿಗಳು ಮತ್ತೆ ಗುರುವಾರ ಬೆಳಿಗ್ಗೆ ಕಚೇರಿಗೆ ಭೇಟಿ ಕೊಟ್ಟರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಬದಲಿ ನಿವೇಶನ ಕೊಡಲು 2020ರ ನವೆಂಬರ್ 20ರಂದು ನಡೆದ ಮುಡಾ ಸಾಮಾನ್ಯಸಭೆಯಲ್ಲಿ ನಿರ್ಣಯ ಕೈಗೊಂಡಿದ್ದು, ಆ ಸಭೆಯ ಧ್ವನಿಮುದ್ರಿಕೆ ದಾಖಲೆಗಳನ್ನು ಪಡೆದು, ಸಭೆಯಲ್ಲಿ ಪಾಲ್ಗೊಂಡಿದ್ದ 19 ಸದಸ್ಯರ ಮಾತುಗಳನ್ನೂ ಲಿಖಿತ ರೂಪದಲ್ಲಿ ದಾಖಲಿಸಿಕೊಂಡರು.

ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಷೇಕ್ ಶಂಕರ್ ಪವಾರ್ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5–2ರಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಅಭಿಷೇಕ್ 37ನೇ, 39ನೇ ಮತ್ತು 60ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಕ್ರಿಸ್ಪಿನ್ ಕ್ಲೀಟಸ್ (62ನೇ ಮತ್ತು 87ನೇ ನಿ.) ಎರಡು ಗೋಲು ಗಳಿಸಿದರು. ಸ್ಪೋರ್ಟಿಂಗ್ ತಂಡದ ಪರ ವಿ.ವಿಘ್ನೇಶ್ (80ನೇ) ಮತ್ತು ಆಂಟೊ ರಶಿತ್ (83ನೇ) ತಲಾ ಒಂದು ಗೋಲು ಹೊಡೆದರು.

ದಿನದ ಮತ್ತೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡವು 2–0ಯಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವನ್ನು ಸೋಲಿಸಿತು.

ವೈಟ್ ಟಾಪಿಂಗ್ ಕಾಮಗಾರಿ ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಾಸ್ಕ್ ರಸ್ತೆಯಲ್ಲಿ ಬಿಬಿಎಂಪಿಯಿಂದ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದ್ದು, ಈ ಭಾಗದ ರಸ್ತೆಯಲ್ಲಿ 30 ದಿನ ವಾಹನ ಸಂಚಾರ ಹಾಗೂ ನಿಲುಗಡೆ ನಿರ್ಬಂಧಿಸಲಾಗಿದೆ.

ಸಂಚಾರ ನಿರ್ಬಂಧಿಸಿರುವ ರಸ್ತೆ: ಮಾಸ್ಕ್ ರಸ್ತೆ–ಕೋಲ್ಸ್ ರಸ್ತೆ ಜಂಕ್ಷನ್ ಕಡೆಯಿಂದ ಮಾಸ್ಕ್ ಜಂಕ್ಷನ್ ಕಡೆಗೆ ಹೋಗುವ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಕೋಲ್ಸ್ ರಸ್ತೆ ಕಡೆಯಿಂದ ಮಾಸ್ಕ್ ಜಂಕ್ಷನ್ ಕಡೆಗೆ ಹೋಗುವ ವಾಹನ ಚಾಲಕರು, ಸವಾರರು ಕೋಲ್ಸ್ ರಸ್ತೆಯಲ್ಲಿ ನೇರವಾಗಿ ಚಲಿಸಿ ಸ್ಟೀಫನ್ಸ್ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಸ್ಟೀಫನ್ಸ್ ರಸ್ತೆಯಲ್ಲಿ ನೇರವಾಗಿ ಸಾಗಿ ಎಂ.ಎಂ.ರಸ್ತೆ ತಲುಪಿ ಎಡಕ್ಕೆ ತಿರುವು ಪಡೆದು ಮಾಸ್ಕ್ ಜಂಕ್ಷನ್ ಕಡೆಗೆ ಸಂಚರಿಸಬಹುದು.


ಸಂಗ್ರಹ ಚಿತ್ರ

ವಾಹನ ನಿಲುಗಡೆ ನಿರ್ಬಂಧಿತ ಸ್ಥಳಗಳು: ಎಂ.ಎಂ. ರಸ್ತೆ, ಕೋಲ್ಸ್ ರಸ್ತೆ, ಮಾಸ್ಕ್ ರಸ್ತೆ, ಸ್ಟೀಫನ್ಸ್ ರಸ್ತೆಯಲ್ಲಿ ಎಲ್ಲ ರೀತಿಯ ವಾಹನಗಳ ನಿಲುಗಡೆಯನ್ನು ತಾತ್ಕಾಲಿಕವಾಗಿ ನಿರ್ಬಂಧ ಮಾಡಲಾಗಿದೆ ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕ್ಷೇತ್ರಕ್ಕೆ ಅಪಮಾನ: ಬೇಸತ್ತು ಮುನಿರತ್ನ ಮೇಲೆ ಮೊಟ್ಟೆ ಎಸೆತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌.ಆರ್‌.ನಗರ ಕ್ಷೇತ್ರದ ಶಾಸಕ ಮುನಿರತ್ನ ಅವರ ಕಾರ್ಯವೈಖರಿಗೆ ಬೇಸತ್ತು ಅವರ ಮೇಲೆ ಮೊಟ್ಟೆ ಎಸೆದಿದ್ದಾಗಿ ಮೂವರು ಆರೋಪಿಗಳು ಪೊಲೀಸರ ವಿಚಾರಣೆ ವೇಳೆ ತಿಳಿಸಿದ್ದಾರೆ' ಎಂಬುದು ಗೊತ್ತಾಗಿದೆ.

ಡಿ.25ರಂದು ಲಕ್ಷ್ಮಿದೇವಿ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಾಪಸ್ ಬರುವಾಗ ಮುನಿರತ್ನ ಅವರ ಮೇಲೆ ಮೊಟ್ಟೆ ಎಸೆಯಲಾಗಿತ್ತು.

'ಬಂಧಿತರಾಗಿದ್ದ ಮೂವರು ಆರೋಪಿಗಳು ಕಾಂಗ್ರೆಸ್ ಬೆಂಬಲಿಗರಾಗಿದ್ದು, ಕ್ಷೇತ್ರಕ್ಕೆ ಅಪಮಾನವಾಗಿದೆ ಎಂದು ಆರೋಪಿಸಿ ಕೃತ್ಯ ಎಸಗಿದ್ದರು' ಎಂದು ತನಿಖಾ ಮೂಲಗಳು ತಿಳಿಸಿವೆ.

'ಲಗ್ಗೆರೆಯ ಭೈರವೇಶ್ವರ ನಗರದ ಕೆ. ವಿಶ್ವನಾಥ್, ಪಾಪರೆಡ್ಡಿಪಾಳ್ಯದ ವಿಶ್ವಕಿರಣ್ ಹಾಗೂ ಲಗ್ಗೆರೆ ಅಶೋಕ್ ಕುಮಾರ್ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ಕೃತ್ಯದ ಹಿಂದೆ ರಾಜಕೀಯ ಪ್ರಭಾವಿಗಳ ಕೈವಾಡ ಇಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮುನಿರತ್ನ ಅವರು ಜಾಮೀನಿನ ಮೇಲೆ ಹೊರಬಂದ ಬಳಿಕ ಆರೋಪಿಗಳು ಗುಂಪು ಕಟ್ಟಿಕೊಂಡು ಶಾಸಕರ ವಿರುದ್ಧ ಪ್ರತಿಭಟನೆ ಸಹ ನಡೆಸಿದ್ದರು. ಮುಂಜಾಗ್ರತಾ ಕ್ರಮವಾಗಿ ಎರಡು ಬಾರಿ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ಬಿಟ್ಟು ಕಳುಹಿಸಲಾಗಿತ್ತು. ಡಿ.25ರಂದು ಮುನಿರತ್ನ ಅವರು ಕಾರ್ಯಕ್ರಮದಲ್ಲಿ ಭಾಗಿ ಆಗುತ್ತಿರುವುದರ ಬಗ್ಗೆ ಮಾಹಿತಿ ತಿಳಿದಿದ್ದ ಆರೋಪಿಗಳು, ಸಂಚು ರೂಪಿಸಿ ಮೊಟ್ಟೆ ಎಸೆದಿದ್ದರು. ಸಮೀಪದ ಅಂಗಡಿಯೊಂದರಲ್ಲಿ ಮೊಟ್ಟೆ ಖರೀದಿಸಿ ಮುನಿರತ್ನ ಅವರು ಬರುತ್ತಿದ್ದಂತೆಯೇ ಏಕಾಏಕಿ ಎಸೆದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರಕರಣದ ತನಿಖೆ ನಡೆಯುತ್ತಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಬಂದ ಬಳಿಕ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮೈಕ್ರೊ ಫೈನಾನ್ಸ್ ಕಿರುಕುಳಕ್ಕೆ ಕಡಿವಾಣ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಮೈಕ್ರೊ ಫೈನಾನ್ಸ್ ಮತ್ತು ಖಾಸಗಿ ಹಣಕಾಸು ಸಂಸ್ಥೆಗಳ ಹಾವಳಿಗೆ ಕಡಿವಾಣ ಹಾಕಬೇಕೆಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ–ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ, 'ಈ ಸಂಸ್ಥೆಗಳ ಕಿರುಕುಳ ತಾಳಲಾರದೇ ರಾಜ್ಯದ ವಿವಿಧ ಜಿಲ್ಲೆಗಳ ಹತ್ತಾರು ಗ್ರಾಮಗಳ ನೂರಾರು ಮಂದಿ ಊರು ತೊರೆದಿದ್ದಾರೆ. ಐದಾರು ತಿಂಗಳುಗಳ ಅವಧಿಯಲ್ಲಿ ಕಿರುಕುಳ, ಆತ್ಮಹತ್ಯೆಯಂತಹ ಪ್ರಕರಣಗಳು ವರದಿಯಾಗುತ್ತಿವೆ' ಎಂದು ವಿವರಿಸಿದ್ದಾರೆ.

'ಸಾಲ ವಸೂಲಾತಿಗಾಗಿ ಮನೆಗೆ ಬಂದು ಕಿರುಕುಳ ಕೊಡುವುದನ್ನು ತಡೆಗಟ್ಟಬೇಕು. ಮಿತಿಮೀರಿದ ಬಡ್ಡಿ ವಿಧಿಸುವ ಕಂಪನಿಗಳನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕು. ಮೈಕ್ರೊ ಫೈನಾನ್ಸ್ ವ್ಯವಹಾರದ ನಿಯಂತ್ರಣಕ್ಕೆ ಸೂಕ್ತ ಕಾಯ್ದೆ ರೂಪಿಸಬೇಕು' ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

> ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರಿ ಸಂಸ್ಥೆಗಳು ಬಡ- ಮಧ್ಯಮ ವರ್ಗದವರಿಗೆ ಸಾಲ ಪಡೆಯಲು ಸಾಧ್ಯವಾಗುವಂತೆ ನಿಯಮ ಸರಳಗೊಳಿಸಬೇಕು
> **ಕೆ. ಉಮಾ,** ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ

'ಕೃಷಿ, ಆರೋಗ್ಯ, ಶಿಕ್ಷಣ, ವಸತಿ ಮುಂತಾದ ಕ್ಷೇತ್ರಗಳಿಗೆ ಹೆಚ್ಚು ಹಣವನ್ನು ಸರ್ಕಾರ ಮೀಸಲಿಡಬೇಕು. ನರೇಗಾ ಕೂಲಿ ಹೆಚ್ಚಿಸಿ, ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿ, ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಸಿ, ಪರೋಕ್ಷ ತೆರಿಗೆ ಇಳಿಸಿ, ಜನಸಾಮಾನ್ಯರು ಬೇಕಾಬಿಟ್ಟಿ ಸಾಲಕ್ಕೆ ಮೊರೆಹೋಗದಂತಾಗಲು ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

‘ಮಾಜಿ’ ಗೆಳೆಯರ ‘ಸವಾಲ್–ಜವಾಬ್’

‘ಕೊಲೆಗೆ ಸಂಚು ಮಾಡಿದ್ದ ಶ್ರೀರಾಮುಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ 14 ವರ್ಷಗಳಲ್ಲಿ ಶ್ರೀರಾಮುಲು ಹಲವು ವಿಚಾರಗಳನ್ನು ತಮ್ಮ ಮೈಮೇಲೆ ಎಳೆದುಕೊಂಡಿದ್ದಾರೆ. ಮಾತನಾಡಲು ಬಹಳಷ್ಟು ವಿಚಾರಗಳು ಇವೆ. ಏಜೆನ್ಸಿಗಳು ತನಿಖೆ ಮಾಡಿದರೆ ಸಾಕಷ್ಟು ಸಂಗತಿ ಬಯಲಿಗೆ ಬರುತ್ತವೆ. ಅವುಗಳ ಬಗ್ಗೆ ಈಗ ಮಾತನಾಡುವುದಿಲ್ಲ. ಸಮಯ ಬಂದಾಗ ಮಾತನಾಡುತ್ತೇನೆ’ ಎಂದು ಜನಾರ್ದನ ರೆಡ್ಡಿ ಹೇಳಿದರು.


ಜನಾರ್ದನ ರೆಡ್ಡಿ

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘1991ರಲ್ಲಿ ರಾಮುಲು ಅವರ ಮಾವ ರೈಲ್ವೆಬಾಬು ಕೊಲೆ ಆದಾಗ ಶತ್ರುಗಳ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ಮಚ್ಚು, ಲಾಂಗು ಮತ್ತಿತರ ಮಾರಕಾಸ್ತ್ರಗಳನ್ನು ಹಿಡಿದ ಶ್ರೀರಾಮುಲು 40 ಮಂದಿ ಜತೆ ಪ್ರತೀಕಾರಕ್ಕೆ ಹೊರಟಿದ್ದರು. ಮುಂದೆ ಆಗಬಹುದಾದ ಅನಾಹುತಗಳನ್ನು ಮನಗಂಡು ಅವರನ್ನು ತಡೆದೆ. ರಾಮುಲು ಜೀವಕ್ಕೂ ಬೆದರಿಕೆ ಇತ್ತು. ಹೀಗಾಗಿ ಅವರನ್ನು ಕಾಪಾಡಿದ್ದೆ. ಅವರನ್ನು ಸನ್ಮಾರ್ಗಕ್ಕೆ ತಂದಿದ್ದೆ’ ಎಂದರು.

‘ಆದರೆ, ಮತ್ತೊಮ್ಮೆ ಅವರು ಸೂರ್ಯನಾರಾಯಣ ರೆಡ್ಡಿ ಕೊಲೆಗೆ ಸಂಚು ಮಾಡಿದ್ದು ಗೊತ್ತಾಗಿ ಅದನ್ನು ತಡೆದೆ. ಒಮ್ಮೆ ಅಪರಾಧ ಮಾಡಿದರೆ ಅದೇ ಮಾರ್ಗ ಹಿಡಿಯುತ್ತಾರೆ ಎಂದು ಬುದ್ಧಿವಾದ ಹೇಳಿದ್ದೆ. ಅದೇ ನಾನು ಮಾಡಿದ ತಪ್ಪು’ ಎಂದು ಹೇಳಿದರು.

‘2004 ರಲ್ಲಿ ಬಳ್ಳಾರಿಯಲ್ಲಿ ಕಾರ್ಪೊರೇಟರ್ ಒಬ್ಬರ ಕೊಲೆ ಆಯಿತು. ಆಗ ರಾಮುಲು ಮೊದಲ ಬಾರಿಗೆ ಶಾಸಕರಾಗಿದ್ದರು. ಕೊಲೆ ಆರೋಪ ಅವರ ಮೇಲೆ ಬಂದಿತು. ಆದರೆ ಆ ಕೊಲೆಯನ್ನು ಹಣ ಕೊಟ್ಟು ಮಾಡಿಸಿದ್ದು ಬೇರೆಯವರು. ಆ ಇಬ್ಬರ ವಿರುದ್ಧ ಆರೋಪ ಮಾಡಿದಾಗ ಅವರು ನನ್ನ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕಿದರು’ ಎಂದರು.

‘ನಾನು ನನ್ನ ಸ್ನೇಹಿತನಿಗೆ ದ್ರೋಹ ಮಾಡಿದೆ, ಅವಮಾನ ಮಾಡಿದೆ ಎಂದು ಶ್ರೀರಾಮುಲು ಬಳ್ಳಾರಿಯಮ್ಮ ದೇವಿ ಬಳಿ ಹೋಗಿ ಕಣ್ಣೀರು ಹಾಕಲಿ. ಕರ್ಮ ಯಾರನ್ನೂ ಬಿಡುವುದಿಲ್ಲ. ರಾಮುಲು ನನ್ನ ವಿರುದ್ಧ ಸ್ವಾಮಿ ದ್ರೋಹ, ಆಸ್ತಿ ದ್ರೋಹ ಮತ್ತು ಮಾತೃ ದ್ರೋಹ ಮಾಡಿದ್ದಾರೆ. ನನ್ನ ಕುರಿತು ವೆಬ್ ಸೀರೀಸ್ ಬರುತ್ತಿದ್ದು, ಅದರಲ್ಲಿ ಶ್ರೀರಾಮುಲು ಪಾತ್ರವೂ ಇದೆ. ಇದನ್ನು ಎಲ್ಲರೂ ನೋಡಿ’ ಎಂದು ಜನಾರ್ದನ ರೆಡ್ಡಿ ಹೇಳಿದರು.

ರಾಜ್ಯ ಘಟಕದೊಳಗಿನ ಬೆಳವಣಿಗೆಗಳು ನನಗೂ, ಕಾರ್ಯಕರ್ತರಿಗೂ ಸಂತೋಷ ತಂದಿಲ್ಲ. ಯಡಿಯೂರಪ್ಪ ಅವರಂತಹ ಹೋರಾಟಗಾರರ ಬಗ್ಗೆ ಕೆಲವು ಮುಖಂಡರು ಅಪಮಾನ ಮಾಡುವ ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಇದರಿಂದ ಕಾರ್ಯಕರ್ತರು ನೊಂದಿದ್ದಾರೆ
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಪಕ್ಷದಲ್ಲಿ ಗೊಂದಲ ಇರುವುದು ನಿಜ. ಅದನ್ನು ಸರಿಪಡಿಸುವ ಕೆಲಸ ಮಾಡಲಾಗುವುದು. ಶ್ರೀರಾಮುಲು ಅವರೊಂದಿಗೆ ನಾನು ಹಾಗೂ ಬಸವರಾಜ ಬೊಮ್ಮಾಯಿ ಚರ್ಚಿಸಲಿದ್ದೇವೆ
ಆರ್.ಅಶೋಕ
ವಿರೋಧ ಪಕ್ಷದ ನಾಯಕ

ಬಿಜೆಪಿಯಲ್ಲಿ ಪ್ರಜಾಪ್ರಭುತ್ವವಿದೆ ಹೊರತು ಭಿನ್ನಮತವಿಲ್ಲ. ನಮ್ಮ ಪಕ್ಷ ಮನೆ ಇದ್ದಂತೆ. ಅಣ್ಣ ತಮ್ಮಂದಿರ ಜಗಳ ಸಹಜ. ಒಳ ಜಗಳವನ್ನು ಹಿರಿಯರು ಚರ್ಚಿಸಿ, ಬಗೆಹರಿಸುವರು
ಬಸವರಾಜ ಬೊಮ್ಮಾಯಿ, ಸಂಸದ

‘ಜನಾರ್ದನ ರೆಡ್ಡಿ ಅವರೇನು ಸಾಚಾನಾ?’

ಬಳ್ಳಾರಿ: ‘ನನ್ನನ್ನು ಕ್ರಿಮಿನಲ್ ಎನ್ನುತ್ತಿರುವ ಜನಾರ್ದನ ರೆಡ್ಡಿ ಅವರೇನು ಸಾಚಾನಾ? ನನ್ನ ಬಳಿ ಅವರ ದಾಖಲೆಗಳಿವೆ. ಎಪಿಸೋಡ್‌ಗಳಲ್ಲಿ ನನ್ನ ಕತೆ ಹೇಳುವುದಾಗಿ ಅವರು ಹೇಳುತ್ತಿದ್ದಾರೆ. ಅವರ ಕತೆಯನ್ನು ಎರಡು ಮೂರು ಎಪಿಸೋಡ್‌ಗಳಲ್ಲಿ ಹೇಳಿ ಸಿಲುಕಿಸಿಬಿಡುವೆ. ಅವರ ಕೃತ್ಯಗಳ ದಾಖಲೆಗಳಿವೆ’ ಎಂದು ಶ್ರೀರಾಮುಲು ಹೇಳಿದರು.

‘ದಾರೀಲಿ ಹೋಗುವವರು ನನ್ನನ್ನು ಬೆಳೆಸಿದ್ದೇನೆ ಎನ್ನುತ್ತಿದ್ದಾರೆ. ನಮ್ಮದು ರಾಜಕೀಯದ ಕುಟುಂಬ. ನನ್ನ ಬಳಿ ಏನೂ ಇರಲಿಲ್ಲ ಎಂಬುದು ಸುಳ್ಳು. ನನ್ನ ಸೋದರ ಮಾವ ರೈಲ್ವೆ ಬಾಬು ರಾಜೀವ್ ಗಾಂಧಿಯೊಂದಿಗೆ ಮಾತನಾಡುತ್ತಿದ್ದರು. ಆ ಕಾಲಕ್ಕೆ ಅವರು ವಿಧಾನಸಭಾ ಚುನಾವಣೆ ಟಿಕೆಟ್ ಆಕಾಂಕ್ಷಿಯಾಗಿದ್ದರು. ನಮ್ಮ ಅಜ್ಜಿಯೂ ರಾಜಕಾರಣದಲ್ಲಿದ್ದರು. ಅವರ ಬಳಿಕ ರಾಜಕೀಯಕ್ಕೆ ಬಂದ ನಾನು ಫ್ಯೂಡಲ್ ವ್ಯವಸ್ಥೆ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದೇನೆ. ಯಾರದ್ದೋ ಕೃಪಾ ಕಟಾಕ್ಷದಿಂದ ಗೆದ್ದವನಲ್ಲ’ ಎಂದರು.


ಬಿ.ಶ್ರೀರಾಮುಲು

‘ಕೊಲೆ ಪ್ರಕರಣಗಳನ್ನು ಉಲ್ಲೇಖಿಸಿ ಮಾತನಾಡುತ್ತಿರುವ ಜನಾರ್ದನ ರೆಡ್ಡಿ, ಮಾಜಿ ಸಚಿವ ದಿವಾಕರ ಬಾಬು, ಮಾಜಿ ಶಾಸಕ ಸೂರ್ಯನಾರಾಯಣ ರೆಡ್ಡಿ ಅವರನ್ನು ಸುಮ್ಮನೆ ಎಳೆ ತಂದು ಚೆನ್ನಾಗಿ ಸಂಬಂಧ ಕಲ್ಪಿಸಿದ್ದಾರೆ. ನಾನು ಸೂರ್ಯನಾರಾಯಣ ರೆಡ್ಡಿ ಜತೆಗೆ ಈಗಲೂ ಚೆನ್ನಾಗಿದ್ದೇನೆ’ ಎಂದು ಸ್ಪಷ್ಟಪಡಿಸಿದರು.

‘ಎಲ್ಲರನ್ನೂ ಮುಗಿಸುವ ಚಾಳಿ ಜನಾರ್ದನ ರೆಡ್ಡಿ ಅವರದ್ದು. ಅವರದ್ದು ಸಣ್ಣ ಮನಸ್ಥಿತಿ. ನನ್ನಿಂದ ಅವರು, ಅವರಿಂದ ನಾನು ಬೆಳೆಯಲು ಆಗದು. ಅವರಿಂದ ಬೆಳೆದಿದ್ದೇನೆ ಎಂದರೆ ಜನ ನಂಬುವುದಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದಿದ್ದು, ಮೋದಿ ಪ್ರಧಾನಿ ಆಗಿದ್ದು, ಮುಂದೆ ಬಿಜೆಪಿ ಸರ್ಕಾರ ಬರುವುದು ನನ್ನಿಂದಲೇ ಎಂದೂ ಜನಾರ್ದನ ರೆಡ್ಡಿ ಹೇಳುತ್ತಾರೆ. ಇದು ಅದು ಅವರ ಸಂಸ್ಕೃತಿ’ ಎಂದು ವ್ಯಂಗ್ಯವಾಡಿದರು.

‘ಪಕ್ಷದ ಒಳಗಿನ ಮುನಿಸುಗಳು ಕ್ಷಣಿಕ. ಆದರೆ, ನಮ್ಮಿಬ್ಬರ ನಡುವಿನ ಈ ಮುನಿಸು ಶಾಶ್ವತ. ಮನಸ್ಸುಗಳು ಒಡೆದು ಹೋದ ಮೇಲೆ ಜೋಡಿಸುವುದು ಕಷ್ಟ’ ಎಂದೂ ಹೇಳಿದರು.

‘ಜನಾರ್ದನ ರೆಡ್ಡಿ 14 ವರ್ಷ ಬಳ್ಳಾರಿಯಲ್ಲಿ ಇರಲಿಲ್ಲ. ಆಗ ಪ್ರಾಮಾಣಿಕವಾಗಿ ಜಿಲ್ಲೆಯಲ್ಲಿ ಪಕ್ಷದ ಪರ ಕೆಲಸ ಮಾಡಿದ್ದೇನೆ. ರೆಡ್ಡಿ ಒಂದು ಬಾರಿ ವಿಧಾನಪರಿಷತ್ ಸದಸ್ಯರಾಗಿದ್ದರು. ಒಂದು ಬಾರಿ ಸಚಿವರಾಗಿದ್ದರು. ಈ ಬಾರಿ ಶಾಸಕರಾಗಿದ್ದಾರೆ. ಆದರೆ, ನಾನು ಆರು ಬಾರಿ ಗೆದ್ದಿದ್ದೇನೆ. ಸ್ವಂತ ಪಕ್ಷ ಕಟ್ಟಿದ್ದೇನೆ. ಪಕ್ಷ ವಿಲೀನ ಮಾಡು ಎಂದು ಮೋದಿ ಅವರು ಹೇಳಿದಾಗ ಮಾಡಿದ್ದೇನೆ. ಅವತ್ತು ಜನಾರ್ದನ ರೆಡ್ಡಿ ಇದ್ದರೇ? ಜನಾರ್ದನ ರೆಡ್ಡಿ ನಮ್ಮ ಆಸ್ತಿ ಎಂದು ಪಕ್ಷದ ವೇದಿಕೆಗಳಲ್ಲಿ ಹೈಕಮಾಂಡ್‌ಗೆ ಹೇಳಿದ್ದೇನೆ. ದಯವಿಟ್ಟು ಅವರನ್ನು ಜೈಲಿನಿಂದ ಬಿಡಿಸಿ ಎಂದು ಕೇಳಿಕೊಂಡಿದ್ದೇನೆ. ಕನಸು ಮನಸಲ್ಲೂ ನಾನು ಅವರಿಗೆ ಕೆಟ್ಟದು ಬಯಸಿರಲಿಲ್ಲ’ ಎಂದು ತಿಳಿಸಿದರು.

‘ಜನಾರ್ದನ ರೆಡ್ಡಿ ಅವರನ್ನು ಪಕ್ಷಕ್ಕೆ ಕರೆದುಕೊಳ್ಳಲು ಕೇಂದ್ರ ನಾಯಕರು ವಿಳಂಬ ಮಾಡಿದಾಗ ನಾನೇ ಹೋಗಿ ಅವರ ಪರವಾಗಿ ಮಾತನಾಡಿದ್ದೆ. ‘ಜನಾರ್ದನ ರೆಡ್ಡಿ ಬಂದ ಮೇಲೆ ನೀನೂ ಸೋತೆ, ಉತ್ತರ ಕರ್ನಾಟಕದಲ್ಲಿ ಎಲ್ಲರೂ ಸೋತರು’ ಎಂದು ಇದೇ ರಾಧಾಮೋಹನ ದಾಸ್ ಹೇಳಿದ್ದರು. ಸೋಲು ಅನಾಥ. ಸೋಲಾದಾಗ ರೆಡ್ಡಿ ತನ್ನ ಮೇಲೆ ಹಾಕಿಕೊಳ್ಳುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಜನಾರ್ದನ ರೆಡ್ಡಿ 25 ವರ್ಷ ಮುಂಚಿತವಾಗಿ ಯೋಚಿಸುತ್ತಾರೆ. ಅದಕ್ಕಾಗಿಯೇ ರಾಮುಲು ಇಲ್ಲಿರಬಾರದು ಎಂಬುದು ಅವರ ಇಚ್ಛೆ. ಬಂಗಾರು ಹನುಮಂತು ಅವರಿಗೆ ಬೆಳೆಯುವ ಆಸೆ ಇದೆ. ಆದರೆ, ವೇಗ ಜಾಸ್ತಿ ಇದೆ. ಅವರು ಅಪಘಾತಕ್ಕೆ ಈಡಾಗಬೇಕಾಗುತ್ತದೆ. ಅಂಥವರೇ ಜನಾರ್ದನ ರೆಡ್ಡಿ ತಲೆ ಕೆಡಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ಸುದ್ದಿ 2 ನಿಮಿಷ

‘ಕಾಳ್ಗಿಚ್ಚು ತಡೆಗೆ ಮುನ್ನೆಚ್ಚರಿಕೆ’

ಬೆಂಗಳೂರು: ಬೇಸಿಗೆ ಸಮೀಪಿಸುತ್ತಿದ್ದು, ಪದೇ ಪದೇ ಕಾಳ್ಗಿಚ್ಚು ಕಾಣಿಸಿಕೊಳ್ಳುವ ವಲಯ ಸೇರಿ ರಾಜ್ಯದ ಯಾವುದೇ ಅರಣ್ಯದಲ್ಲಿ ಕಾಡ್ಗಿಚ್ಚು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಿಗೆ ನೀಡಿರುವ ಸೂಚನೆಯಲ್ಲಿ ಕಾಳ್ಗಿಚ್ಚು ನಂದಿಸಲು ಅಗ್ನಿಶಾಮಕ ಸಾಧನಗಳು ಮತ್ತು ಸಿಬ್ಬಂದಿಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರುವಂತೆಯೂ ನಿರ್ದೇಶನ ನೀಡಿದ್ದಾರೆ.

ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಚಾರ್ಮಾಡಿ ಘಾಟ್‌ನ ಬಿದಿರುತಳ ಅರಣ್ಯ ಪ್ರದೇಶದಲ್ಲಿ ಸಂಭವಿಸಿದ ಕಾಳ್ಗಿಚ್ಚಿನಿಂದ ಅರಣ್ಯಕ್ಕೆ ಆಗಿರುವ ಹಾನಿಯ ಕುರಿತು ಅರಣ್ಯ ಸಚಿವರು ಇಲಾಖೆ ಅಧಿಕಾರಿಗಳಿಂದ ಮಾಹಿತಿ ಕೇಳಿದ್ದಾರೆ.

ಕಾಳ್ಗಿಚ್ಚಿನ ಬಗ್ಗೆ ಸಂಬಂಧಿತ ವಲಯಕ್ಕೆ ಮಾಹಿತಿ ಲಭಿಸಿದ ಎಷ್ಟು ಸಮಯದಲ್ಲಿ ಬೆಂಕಿ ನಂದಿಸಲು ಕ್ರಮ ವಹಿಸಲಾಗಿದೆ. ಯಾವ ಯಾವ ವಿಧಾನ ಬಳಸಲಾಗಿದೆ ಮತ್ತು ಎಷ್ಟು ಸಂಭಾವ್ಯ ಹಾನಿ ತಡೆಯಲಾಗಿದೆ ಎಂಬ ವಿವರವನ್ನು ಏಳು ದಿನಗಳ ಒಳಗಾಗಿ ನೀಡುವಂತೆಯೂ ಖಂಡ್ರೆ ಸೂಚಿಸಿದ್ದಾರೆ.



ವೀರಶೈವ ಮಹಾಸಭಾಗೆ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾಗೆ ರಾಜ್ಯಸಭೆಯ ಮಾಜಿ ಸದಸ್ಯ ಪ್ರಭಾಕರ ಕೋರೆ ಸೇರಿ ಒಟ್ಟು 12 ಮಂದಿಯನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರಿಗೆ ಪದಾಧಿಕಾರಿಗಳ ನೇಮಕದ ಅಧಿಕಾರವನ್ನು ನೀಡಲಾಗಿತ್ತು.

ಉಪಾಧ್ಯಕ್ಷರು: ವಿ.ಸಿ.ಚರಂತಿಮಠ, ಬಿ.ಎಸ್. ಸಚ್ಚಿದಾನಂದಮೂರ್ತಿ, ವಿನಯ ಕುಲಕರ್ಣಿ, ಎ.ಎಸ್.ವೀರಣ್ಣ, ಅಣಬೇರು ರಾಜಣ್ಣ, ಎಸ್.ಎಸ್.ಗಣೇಶ್, ಶರಣಬಸಪ್ಪ ದರ್ಶನಾಪುರ, ಬಿ.ಕೆ.ಚಂದ್ರಕಲಾ, ಗುರಮ್ಮ ಸಿದ್ದರೆಡ್ಡಿ, ಸಿದ್ರಾಮಪ್ಪ ಸಿ.ಉಪ್ಪಿನ್, ವಿಶ್ವನಾಥ್ ಬಾಬುರಾವ್ ಚಕೋಟೆ.

ಪ್ರಧಾನಕಾರ್ಯದರ್ಶಿ– ಈಶ್ವರ ಖಂಡ್ರೆ, ಕಾರ್ಯದರ್ಶಿ– ಎಚ್.ಎಂ.ರೇಣುಕಾಪ್ರಸಾದ್.

ಸತೀಶ ಮಣಿಸಲು ರಾಮುಲು ಕಾಂಗ್ರೆಸ್‌ಗೆ

ಒಂದನೇ ಪುಟದಿಂದ...

‘ಸಂಡೂರು ಕ್ಷೇತ್ರದ ಉಪಚುನಾವಣೆಗೆ ಶ್ರೀರಾಮುಲು ಮೂರು ದಿನ ತಡವಾಗಿ ಬಂದರು. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಇಡೀ ಸರ್ಕಾರವೇ ಬಂದು ಕುಳಿತಿತ್ತು. ಹಣದ ಹೊಳೆ ಹರಿಸಿದರು. ಇದರಿಂದ ನಮಗೆ ಸೋಲಾಯಿತು. ಶ್ರೀರಾಮುಲು ಕೆಲಸ ಮಾಡಿಲ್ಲ ಎಂದು ಯಾರ ಬಳಿಯೂ ನಾನು ಚಾಡಿ ಹೇಳಿಲ್ಲ. ಬಂಗಾರು ಹನುಮಂತು ಅವರನ್ನು ಪಕ್ಷವೇ ಗುರುತಿಸಿ ಟಿಕೆಟ್ ನೀಡಿತ್ತು. ಬಳ್ಳಾರಿಯಲ್ಲಿ ಸೋತಿದ್ದ ರಾಮುಲು ಅವರು ಜನರ ವಿಶ್ವಾಸ ಕಳೆದುಕೊಂಡಿದ್ದಾರೆ. ಅಲ್ಲದೇ, ವಾಲ್ಮೀಕಿ ಜನಾಂಗದ ಮತ್ತೊಬ್ಬ ನಾಯಕ ಬಂದರೆ ತಮ್ಮ ಭವಿಷ್ಯಕ್ಕೆ ಪೆಟ್ಟು ಬೀಳಬಹುದು ಎಂಬ ಆತಂಕವೂ ಕಾಡಿರಬಹುದು’ ಎಂದರು.

ಯತ್ನಾಳ ವಿರುದ್ಧದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರವನ್ನು ಪತನಗೊಳಿಸಲು ನಾಯಕರೊಬ್ಬರು ₹1 ಸಾವಿರ ಕೋಟಿ ತೆಗೆದಿರಿಸಿದ್ದಾರೆ ಎಂಬ ಆರೋಪ ಮಾಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಜನಾದೇಶಕ್ಕೆ ಅಪಚಾರ ಮಾಡಿದ್ದಾರೆ. ಈ ಹೇಳಿಕೆಯಿಂದ ಭ್ರಷ್ಟ ಹಾಗೂ ಅಕ್ರಮ ಹಣ ವರ್ಗಾವಣೆ ನಡೆಯುತ್ತಿರುವುದು ಗೋಚರವಾಗಿದೆ’ ಎಂದು ಆರೋಪಿಸಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್ ಸಲ್ಲಿಸಿದ್ದ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ.

ದೂರು ವಜಾಗೊಳಿಸುವಂತೆ ಕೋರಿ ಯತ್ನಾಳ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು. ಈ ವೇಳೆ ಯತ್ನಾಳ ಪರ ವಕೀಲ ವೆಂಕಟೇಶ್ ಪಿ.ದಳವಾಯಿ ವಾದ ಆಲಿಸಿದ ನ್ಯಾಯಪೀಠ, ‘ಈ ದೂರಿನಲ್ಲಿ ಹುರುಳಿಲ್ಲ’ ಎಂಬ ವಾದವನ್ನು ಮನ್ನಿಸಿ ದೂರು ವಜಾಗೊಳಿಸಿತು.


ಬಸನಗೌಡ ಯತ್ನಾಳ

‘ಯತ್ನಾಳ ಅವರು ಈ ರೀತಿ ಹೇಳಿಕೆ ನೀಡುವ ಮೂಲಕ ಪಕ್ಷ-ಪಕ್ಷಗಳ ಕಾರ್ಯಕರ್ತರ ನಡುವೆ ಕೋಮು ದ್ವೇಷ ಸೃಷ್ಟಿಸಿ ಗಲಭೆ ಉಂಟಾಗುವಂತೆ ಮಾಡಿದ್ದಾರೆ. ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು’ ಎಂದು ಕೋರಿ ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

‘ಅಮಿತ್ ಶಾ ರಾಜೀನಾಮೆಗೆ ಪಟ್ಟು’

ಅಂಬೇಡ್ಕರ್‌ಗೆ ಅವಮಾನ ಆರೋಪ; ದಸಂಸ ಒಕ್ಕೂಟದಿಂದ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾ ಮಾಡಬೇಕು’ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಗುರುವಾರ ಒತ್ತಾಯಿಸಿತು.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಜನರು, ‘ಅಂಬೇಡ್ಕರ್ ಪ್ರತಿಮೆ ಎದುರು ಶಾ ಅವರು ಮಂಡಿಯೂರಿ ಕ್ಷಮೆ ಕೇಳಬೇಕು’ ಎಂದು ಆಗ್ರಹಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅವರು, ‘ಅಂಬೇಡ್ಕರ್ ಕುರಿತು ಆಡಿದ್ದ ಮಾತುಗಳನ್ನು ಶಾ ಸಮರ್ಥಿಸಿಕೊಂಡಿದ್ದಾರೆ. ಪ್ರಧಾನಿ ಮೋದಿ ಅವರು ಶಾ ಬೆನ್ನಿಗೆ ನಿಂತಿದ್ದಾರೆ. ಇಂತಹವರಿಂದ ನ್ಯಾಯ ಬಯಸಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

‘ಅಂಬೇಡ್ಕರ್ ಅವರ ಅನುಯಾಯಿಗಳೆಂದರೆ ಜೇನುಗೂಡು ಇದ್ದಂತೆ. ಅದಕ್ಕೆ ಕೈಯಿಟ್ಟರೆ ನಿಮ್ಮನ್ನು ಸರ್ವನಾಶ ಮಾಡುತ್ತದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ಮುಖಂಡ ಇಂದೂಧರ ಹೊನ್ನಾಪುರ ಮಾತನಾಡಿ, ‘ಮೋದಿ ನೇತೃತ್ವದ ಸರ್ಕಾರದಿಂದ ಆಗುತ್ತಿರುವ ಅನ್ಯಾಯವನ್ನು ಮಲ್ಲಿಕಾರ್ಜುನ ಖರ್ಗೆ ಅವರು ಬಯಲಿಗೆಳೆಯುತ್ತಿದಾರೆ. ಹೀಗಾಗಿ, ಪ್ರಿಯಾಂಕ್ ಅವರ ವಿರುದ್ಧ ಆರೋಪ ಮಾಡಿ, ಜೈಲಿಗೆ ಕಳಿಸುವ ಪಿತೂರಿ ಮಾಡಲಾಗುತ್ತಿದೆ’ ಎಂದು ಆರೋಪಿಸಿದರು.

‘ಶಾ ಅವರು ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲುವುದಿಲ್ಲ’ ಎಂದೂ ಎಚ್ಚರಿಸಿದರು.

ದಸಂಸ ರಾಜ್ಯ ಪ್ರಧಾನ ಸಂಚಾಲಕರಾದ ಗುರುಪ್ರಸಾದ್ ಕೆರಗೋಡು, ವಿ.ನಾಗರಾಜ್, ಮುಖಂಡರಾದ ಜೀವನಹಳ್ಳಿ ವೆಂಟೇಶ್, ಎಸ್.ಬಾಲಕೃಷ್ಣ, ಇಂದಿರಾ ಕೃಷ್ಣಪ್ಪ, ಕೆ.ಎಂ.ರಾಮಚಂದ್ರಪ್ಪ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಗುತ್ತಿಗೆದಾರರಿಗೆ ₹2,500 ಕೋಟಿ ಬಿಡುಗಡೆ: ಬೋಸರಾಜು ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಯಲ್ಲಿ ಬಾಕಿಯಿರುವ ಬಿಲ್‌ನಲ್ಲಿ ಶೇ 50ರಷ್ಟು ಮೊತ್ತವನ್ನು ಮಾರ್ಚ್ ಅಂತ್ಯದೊಳಗೆ ಪಾವತಿಸುವುದಾಗಿ ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಗೆ ಸಚಿವರು ಭರವಸೆ ನೀಡಿದ್ದಾರೆ.

ಸಣ್ಣ ನೀರಾವರಿ ಇಲಾಖೆ ಸಚಿವ ಎನ್.ಎಸ್. ಬೋಸರಾಜು ಅವರು ಗುತ್ತಿಗೆದಾರರೊಂದಿಗೆ ಗುರುವಾರ ಸಭೆ ನಡೆಸಿ, ಸಮಸ್ಯೆಗಳನ್ನು ಆಲಿಸಿದರು. ‘ಸುಮಾರು ₹2 ಸಾವಿರ ಕೋಟಿ ಬಿಲ್ ಬಾಕಿ ಇದ್ದು, ಅದನ್ನು ಜ್ಯೇಷ್ಠತೆ ಆಧಾರದಲ್ಲಿ ಕೂಡಲೇ ಬಿಡುಗಡೆ ಮಾಡಬೇಕು. ವಿಶೇಷ ಎಲ್‌ಒಸಿಗಳನ್ನು ನೀಡಬಾರದು. ದೊಡ್ಡ ಮೊತ್ತದ ಪ್ಯಾಕೇಜ್‌ಗಳನ್ನು ಮಾಡಬಾರದು’ ಎಂದು ಗುತ್ತಿಗೆದಾರರು ಮನವಿ ಮಾಡಿಕೊಂಡರು.

‘ಮಾರ್ಚ್ ಅಂತ್ಯದೊಳಗೆ ಬಾಕಿ ಬಿಲ್‌ನ ಮೊತ್ತದಲ್ಲಿ ₹1,000 ಕೋಟಿ ಪಾವತಿಸಲಾಗುತ್ತದೆ. ಜ್ಯೇಷ್ಠತೆಯನ್ನು ಮೀರದಂತೆ ಹಾಗೂ ವಿಶೇಷ ಎಲ್‌ಒಸಿಗಳನ್ನೂ ನೀಡದಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಬೋಸರಾಜು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರೂ ಗುತ್ತಿಗೆದಾರರೊಂದಿಗೆ ಸಭೆ ನಡೆಸಿ, ಸಮಸ್ಯೆಗಳನ್ನು ಈಡೇರಿಸಲು ಭರವಸೆ ನೀಡಿದರು.

‘ಸುಮಾರು ₹3 ಸಾವಿರ ಕೋಟಿ ಬಿಲ್ ಬಾಕಿಯಲ್ಲಿ ₹1,500 ಕೋಟಿ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಮುಖ್ಯಮಂತ್ರಿಯವರೊಂದಿಗೆ ನಡೆಯುವ ಸಭೆಯಲ್ಲಿ ಗುತ್ತಿಗೆದಾರರನ್ನೂ ಕರೆದು, ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಲ್ಪಿಸಲಾಗುತ್ತದೆ’ ಎಂದು ಹೇಳಿದರು.

ಬಿಜೆಪಿಯಂತೆ ಕಾಂಗ್ರೆಸ್‌ನಲ್ಲಿ ಕಚ್ಚಾಟ ಇಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಬಿಜೆಪಿಯಲ್ಲಿ ಮೂರು ಗುಂಪುಗಳಿದ್ದು, ಮುಖಂಡರ ಕಚ್ಚಾಟ ತೀವ್ರಗೊಂಡಿದೆ. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ಒಗ್ಗಟ್ಟಿದ್ದು ಸರ್ಕಾರ ಸುಭದ್ರವಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಆರ್.ಅಶೋಕ, ಯತ್ನಾಳ, ಬಿ.ವೈ. ವಿಜಯೇಂದ್ರ ಸೇರಿ ಹಲವರ ಗುಂಪುಗಳಿವೆ.ಒಬ್ಬರವಿರುದ್ಧಮತ್ತೊಬ್ಬರುಮಾತನಾಡುತ್ತಾ ಓಡಾಡುತ್ತಿದ್ದಾರೆ. ನಮ್ಮ ಪಕ್ಷಕ್ಕೆ ಅಂತಹ ಪರಿಸ್ಥಿತಿ ಬಂದಿಲ್ಲ. ನಾವು 5 ವರ್ಷಗಳವರೆಗೆ ಸುಭದ್ರ ಸರ್ಕಾರ ನೀಡುತ್ತೇವೆ. 2028ಕ್ಕೆ ನಾವೇ ಮತ್ತೆ ಅಧಿಕಾರಕ್ಕೆ ಬರುತ್ತೇವೆ’ ಎಂದು ಇಲ್ಲಿ ಗುರುವಾರ ವಿಶ್ವಾಸ ವ್ಯಕ್ತಪಡಿಸಿದರು.

ಬಾಗಿನ ಅರ್ಪಣೆ: ಹಿರಿಯೂರು ಸಮೀಪದ ವಾಣಿ ವಿಲಾಸ ಸಾಗರ ಜಲಾಶಯ ಗರಿಷ್ಠ ಮಟ್ಟ ತಲುಪಿರುವ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಾಗಿನ ಅರ್ಪಿಸಿದರು.

‘ವಿವಿ ಸಾಗರವು ರಾಜ್ಯದ ಮೊದಲ ಜಲಾಶಯ. ಇದರ ಪ್ರೇರಣೆಯಿಂದಲೇ ಕೆಆರ್‌ಎಸ್ ಸೇರಿದಂತೆ ಹಲವು ಜಲಾಶಯಗಳು ನಿರ್ಮಾಣಗೊಂಡಿವೆ. ವಿವಿ ಸಾಗರದ ನಿರ್ಮಾಣಕ್ಕಾಗಿ ಮೈಸೂರು ಸಂಸ್ಥಾನದ ಕೆಂಪಮ್ಮಣ್ಣಿ ಅವರು ತಮ್ಮ ಒಡವೆ ಅಡಮಾನ ಇಟ್ಟಿದ್ದನ್ನು ನಾವು ನೆನೆಯಬೇಕು’ ಎಂದು ಸಿದ್ದರಾಮಯ್ಯ ಸ್ಮರಿಸಿದರು.

ಬಜೆಟ್‌ನಲ್ಲಿ 800 ಕೋಟಿ: ‘ಭದ್ರಾ ಮೇಲ್ದಂಡೆ ಯೋಜನೆ ಸಂಪೂರ್ಣ ಜಾರಿಯಾದರೆ ಈ ಜಲಾಶಯ ಪ್ರತಿ ವರ್ಷ ಭರ್ತಿಯಾಗಲಿದೆ. ಯೋಜನೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ್ದ ₹ 5,300 ಕೋಟಿ ಅನುದಾನದಲ್ಲಿ ಬಿಡಿಗಾಸನ್ನೂ ಕೊಟ್ಟಿಲ್ಲ. ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಗಾಗಿ ನಾವು ಈ ಬಾರಿ ₹ 800 ಕೋಟಿ ಬಿಡುಗಡೆ ಮಾಡುತ್ತೇವೆ. ಕೇಂದ್ರದ ಪಾಲಿನ ಹಣ ಬಿಡುಗಡೆಗೆ ಬಿಜೆಪಿ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು’ ಎಂದು ಅವರು ಒತ್ತಾಯಿಸಿದರು.

‘ಅನುದಾನ ಬಿಡುಗಡೆ ಕೋರಿ ನಾವು ಪ್ರಧಾನಿ, ಕೇಂದ್ರದ ಹಣಕಾಸು ಸಚಿವರು ಹಾಗೂ ನೀರಾವರಿ ಸಚಿವರನ್ನು ಭೇಟಿ ಮಾಡಿದ್ದೆವು. ಆದರೆ ಇಲ್ಲಿಯವರೆಗೂ ಅನುದಾನ ಬಿಡುಗಡೆ ಆಗಿಲ್ಲ. ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಣೆ ಮಾಡಿಸುವುದಾಗಿ ಹೇಳಿದ್ದರು. ಅದೂ ಆಗಲಿಲ್ಲ’ ಎಂದು ದೂರಿದರು.

‘ಭದ್ರಾ, ಕೃಷ್ಣಾ, ಕಾವೇರಿ ಸೇರಿ ಎಲ್ಲಾ ನೀರಾವರಿ ಯೋಜನೆ ವ್ಯಾಪ್ತಿಯಲ್ಲಿ ನಾಲೆಗಳ ಕೊನೆಯ ಭಾಗದ ರೈತರಿಗೂ ನೀರು ಸಿಗಬೇಕು. ನೀರು ದುರುಪಯೋಗ ತಡೆಯಲು ವಿಶೇಷ ಕಾನೂನು ರೂಪಿಸಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸಿಇಟಿ: ಅರ್ಜಿ ಸಲ್ಲಿಕೆಗೂ ಎಐ ನೆರವು

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ 2025 ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗೆ ಕೃತಕ ಬುದ್ಧಿಮತ್ತೆ ಆಧಾರಿತ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಗುರುವಾರ ಆರಂಭಿಸಿದೆ.ಮೊದಲ ದಿನ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅರ್ಜಿಯನ್ನು ಫೆಬ್ರುವರಿ 21ರವರೆಗೆ ಸಲ್ಲಿಸುವುದಕ್ಕೆ ಅವಕಾಶ ನೀಡಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಇರುವ ಮಾಹಿತಿ ಪುಸ್ತಕವನ್ನು ಓದಿದ ನಂತರವೇ ಭರ್ತಿ ಮಾಡಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಸಚಿವೆ ಲಕ್ಷ್ಮಿ ಹೆಬ್ಬಾಳಕರಗೆ ಅವಾಚ್ಯ ಶಬ್ದ ಬಳಕೆ ಆರೋಪ

ಕಾನೂನು ಸೂಕ್ಷ್ಮ ಅವಲೋಕನ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ವಿಧಾನ ಪರಿಷತ್ ಅಧಿವೇಶನದಲ್ಲಿ ಅವಾಚ್ಯ ಶಬ್ದ ಬಳಸಿದ್ದ ಪ್ರಕರಣದ ಆರೋಪಿಯಾಗಿರುವ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂದು ಆದೇಶಿಸಿರುವ ಹೈಕೋರ್ಟ್, ‘ಈ ಪ್ರಕರಣದಲ್ಲಿ ಕಾನೂನಿನ ಸೂಕ್ಷ್ಮ ಜಿಜ್ಞಾಸೆ ಅಡಗಿದೆ’ ಎಂಬ ಇಂಗಿತ ವ್ಯಕ್ತಪಡಿಸಿದೆ.

‘ನನ್ನ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಸಿ.ಟಿ.ರವಿ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ’ದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ರವಿ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, ‘ರವಿ ಅವರು ಹೇಳಿದ್ದಾರೆ ಎಂಬ ಹೇಳಿಕೆಯನ್ನು ಆಧರಿಸಿ ದೂರು ದಾಖಲಿಸುವ ಮೊದಲೇ ಸಭಾಪತಿ ಅವರು ಪ್ರಕರಣ ಇತ್ಯರ್ಥಪಡಿಸಿದ್ದಾರೆ. ಸದನದಲ್ಲಿ ಶಾಸಕರ ನಡುವಿನ ವಾಗ್ವಾದ ವಿಶೇಷ ಹಕ್ಕು. ಇದಕ್ಕೆ ವಿನಾಯಿತಿ ಇರುತ್ತದೆ’ ಎಂದು ಸುಪ್ರೀಂ ಕೋರ್ಟ್ ತೀರ್ಪು ಉಲ್ಲೇಖಿಸಿದರು.



ಇದಕ್ಕೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ, ‘ಸದನದಲ್ಲಿ ನಡೆಯುವ ಎಲ್ಲಾ ಕ್ರಿಮಿನಲ್ ಚಟುವಟಿಕೆಗಳಿಗೆ ವಿನಾಯಿತಿ ಇರುವುದಿಲ್ಲ. ಅಪರಾಧ ಪ್ರಕರಣವನ್ನು ತನಿಖೆ ನಡೆಸಬೇಕಾಗುತ್ತದೆ’ ಎಂದು ಪ್ರತಿಪಾದಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಪ್ರಕರಣ ಸೂಕ್ಷ್ಮ ಅಂಶಗಳನ್ನು ಒಳಗೊಂಡಿದೆ. ಸಭಾಧ್ಯಕ್ಷರು ಪ್ರಕ್ರಿಯೆ ಮುಕ್ತಾಯಗೊಳಿಸಬಹುದೇ, ತನಿಖೆ ನಡೆಸಬೇಕೇ ಎಂಬುದಕ್ಕೆ ಉತ್ತರ ಕಂಡುಕೊಳ್ಳಬೇಕು. ವಿಚಾರಣೆಯನ್ನು ಇದೇ 30ಕ್ಕೆ ನಿಗದಿಗೊಳಿಸಲಾಗಿದೆ. ಅಲ್ಲಿಯವರೆಗೆ ಸರ್ಕಾರ ಅರ್ಜಿದಾರರ ವಿರುದ್ಧ ಆತುರದ ನಿರ್ಧಾರ ಕೈಗೊಳ್ಳಬಾರದು’ ಎಂದು ಆದೇಶಿಸಿತು.

‘ವಾಲ್ಮೀಕಿ ಹಗರಣ: ಸಿಬಿಐ ವರದಿ ಎಲ್ಲ ತೆರೆದಿಡಲಿದೆ’

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿ ಸಿಬಿಐ ಸಂಪೂರ್ಣ ಸ್ಥಿತಿಗತಿ ವರದಿ ಸಲ್ಲಿಸಿದ ನಂತರವೇ ಎಲ್ಲವೂ ಬೆಳಕಿಗೆ ಬರಲಿದೆ’ ಎಂದು ಹೈಕೋರ್ಟ್ ಹೇಳಿದೆ.

ಬಿಜೆಪಿಯ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗ ಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ಸಿಬಿಐ ಪರ ಹಾಜರಿದ್ದ ಪಿ.ಪ್ರಸನ್ನ ಕುಮಾರ್ ನವರಿ 15ರವರೆಗಿನ ಸ್ಥಿತಿಗತಿ ವರದಿ ಸಲ್ಲಿಸಿ, ‘ಈತನಕ ಎಸ್‌ಐಟಿ ಶೋಧಿಸದೇ ಇರುವ ಹಲವು ಬ್ಯಾಂಕ್ ಖಾತೆಗಳನ್ನು ಪತ್ತೆ ಮಾಡಲಾಗಿದೆ’ ಎಂದರು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ, ‘ಇ.ಡಿ ವರದಿಯಲ್ಲಿ ₹20 ಕೋಟಿಯನ್ನು ಬಳ್ಳಾರಿ ಲೋಕಸಭಾ ಚುನಾವಣೆಗೆ ಬಳಸಲಾಗಿದೆ ಎಂದು ಹೇಳಲಾಗಿದೆ. ಅಂದಿನ ಹಣಕಾಸು ಇಲಾಖೆ ಮತ್ತು ಹಣಕಾಸು ಸಚಿವರ ಸಹಮತಿ ಇಲ್ಲದೇ ಇಂತಹ ಹಗರಣ ನಡೆದಿರಲಿಕ್ಕಿಲ್ಲ. ಭ್ರಷ್ಟಾಚಾರ ನಿವಾರಣಾ ಕಾಯ್ದೆ–1988ರ ಅಡಿ ಎಲ್ಲವನ್ನೂ ತನಿಖೆ ನಡೆಸಲು ಸಿಬಿಐ ಸ್ವತಂತ್ರವಾಗಿದೆ ಎಂದು ಇದೇ ಪೀಠ ಈ ಹಿಂದೆಯೇ ಆದೇಶಿಸಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಮುಚ್ಚಿದ ಲಕೋಟೆಯಲ್ಲಿ ಸಿಬಿಐ ಸಲ್ಲಿಸಿದ್ದ ತನಿಖಾ ವರದಿ ಪರಿಶೀಲಿಸಿದ ನ್ಯಾಯಪೀಠ, ‘ಪ್ರಕರಣದ ಮೇಲೆ ಕೋರ್ಟ್ ನಿಗಾ ಇರಿಸಿದೆ. ಸ್ಥಿತಿಗತಿ ವರದಿ ಬರಲಿ’ ಎಂದು ಹೇಳಿತು. ‘ಮುಂದಿನ ವಿಚಾರಣೆ ವೇಳೆಗೆ ತನಿಖಾ ಪ್ರಗತಿ ವರದಿ ಸಲ್ಲಿಸಿ’ ಎಂದು ಸಿಬಿಐಗೆ ನಿರ್ದೇಶಿಸಿ ಫೆ.20ಕ್ಕೆ ವಿಚಾರಣೆ ಮುಂದೂಡಿತು.

ಕೋರಿಕೆ: ‘ವಾಲ್ಮೀಕಿ ಪ್ರಕರಣಕ್ಕೆ ಸಂಬಂಧಿಸಿದ ಸಿಬಿಐ ತನಿಖೆಯನ್ನು ಹೈಕೋರ್ ನಿಗಾದಲ್ಲೇ ನಡೆಸಬೇಕು. ಹದಿನೈದು ದಿನಗಳಿಗೊಮ್ಮೆ ಹೈಕೋರ್ಟ್‌ಗೆ ಪ್ರಗತಿ ವರದಿ ಸಲ್ಲಿಸಬೇಕು ಮತ್ತು ತ್ವರಿತವಾಗಿ ವಿಚಾರಣೆ ಪೂರ್ಣಗೊಳಿಸಲು ಸಿಬಿಐ ವಿಶೇಷ ಕೋರ್ಟ್‌ಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಕೆಪಿಎಸ್‌ಸಿ ಮರು ಪರೀಕ್ಷೆ: ನೋಟಿಸ್


ಬೆಂಗಳೂರು: ಕರ್ನಾಟಕ ಆಡಳಿತಾತ್ಮಕ ಸೇವೆ (ಕೆಎಎಸ್) ಪೂರ್ವಭಾವಿ ಪರೀಕ್ಷೆ 2024 ಅನ್ನು; ಮರು ಪರೀಕ್ಷೆ ನಡೆಸುವವರೆಗೆ ಅನಿರ್ದಿಷ್ಟಾವಧಿ ಧರಣಿ ನಡೆಸಲು ಅನುಮತಿ ನೀಡಬೇಕು ಎಂಬ ‘ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘಟನೆ’ಯ ಮಧ್ಯಂತರ ಮನವಿಯನ್ನು ತಳ್ಳಿ ಹಾಕಿರುವ ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ರಾಜ್ಯ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

‘ಮರು ಪರೀಕ್ಷೆ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಿ, ‘ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘಟನೆ’ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

ಜಿಲ್ಲಾ ಕಾಂಗ್ರೆಸ್‌ನಲ್ಲಿ ತುಮುಲ್ ತಳಮಳ ● ಪರಮೇಶ್ವರ, ರಾಜಣ್ಣ ವಿರುದ್ಧ ಶಾಸಕ ಶ್ರೀನಿವಾಸ್ ವಾಗ್ದಾಳಿ

‘ತುಮಕೂರಿನಲ್ಲಿ ತುಘಲಕ್ ದರ್ಬಾರ್’

ಪ್ರಜಾವಾಣಿ ವಾರ್ತೆ


ಶ್ರೀನಿವಾಸ್

ತುಮಕೂರು: ತಮ್ಮ ಪತ್ನಿಗೆ ತುಮುಲ್ ಅಧ್ಯಕ್ಷ ಪಟ್ಟ ಕೈ ತಪ್ಪಿದ್ದಕ್ಕೆ ಅಸಮಾಧಾನ ಗೊಂಡಿರುವ ಗುಬ್ಬಿ ಕಾಂಗ್ರೆಸ್ ಶಾಸಕ ಹಾಗೂ ಕೆಎಸ್‌ಆರ್‌ಟಿಸಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್ ಅವರು ಸಚಿವರಾದ ಜಿ. ಪರಮೇಶ್ವರ ಮತ್ತು ಕೆ.ಎನ್.ರಾಜಣ್ಣ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಜಿಲ್ಲೆಯಲ್ಲಿ ಇಬ್ಬರು ಸಚಿವರು ಸೇರಿಕೊಂಡು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಜಿಲ್ಲೆಯಲ್ಲಿ ಏನು ನಡೆಯುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ. ಯಾರದ್ದು ನಡೆಯುತ್ತಿದೆ, ಏನಾಗುತ್ತಿದೆ ಎಂಬುದೇ ತಿಳಿಯುತ್ತಿಲ್ಲ. ನಮ್ಮಿಂದ ತಾನೇ ಅವರು ಗೆದ್ದು ಸಚಿವರಾಗಿರುವುದು’ ಎಂದು ಅವರು ಆಕ್ರೋಶ ಹೊರ ಹಾಕಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತುಮುಲ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ನಾಮ ನಿರ್ದೇಶಿತ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಈಗಾಗಲೇ ಎಚ್.ವಿ. ವೆಂಕಟೇಶ್ ಶಾಸಕರಾಗಿದ್ದು, ಈಗ ಮತ್ತೊಂದು ಅಧಿಕಾರ ನೀಡಲಾಗಿದೆ. ಅವರನ್ನು ನಾಮ ನಿರ್ದೇಶಿತ ಸದಸ್ಯರನ್ನಾಗಿ ಮಾಡುತ್ತೇವೆ ಎಂದು ಒಂದು ಮಾತು ಕೇಳಲಿಲ್ಲ. ಇವರು (ಇಬ್ಬರು ಸಚಿವರು) ಮಾತೆತ್ತಿದರೆ ಶೋಷಿತ ವರ್ಗಕ್ಕೆ ನ್ಯಾಯ ಕೊಡುತ್ತೇವೆ ಎನ್ನುತ್ತಾರೆ. ನೋಡಿದರೆ ಶೋಷಿತರನ್ನೇ ನಿಕೃಷ್ಟವಾಗಿ ಕಾಣುತ್ತಾರೆ’ ಎಂದು ಟೀಕಿಸಿದರು.

‘ತುಮುಲ್ ಅಧ್ಯಕ್ಷರ ಆಯ್ಕೆ ಬಗ್ಗೆ ಜಿಲ್ಲೆಯ ಯಾವೊಬ್ಬ ಶಾಸಕರ ಜತೆಯೂ ಮಾತನಾಡಲಿಲ್ಲ. ಎಲ್ಲರನ್ನೂ ನಿರ್ಲಕ್ಷ್ಯ ಮಾಡಿದ್ದಾರೆ. ಇವರಿಬ್ಬರೇ ಜಿಲ್ಲೆ ನಿಯಂತ್ರಣ ಮಾಡುತ್ತಾರೆ. ಇವರಿಬ್ಬರು ಇದ್ದರೆ ಸಾಕು, ಎಲ್ಲವೂ ನಡೆಯುತ್ತದೆ. ಯಾರೂ ಬೇಕಾಗಿಲ್ಲ. ಮುಂದಿನ ದಿನಗಳಲ್ಲಿ ಎಲ್ಲ 11 ಕ್ಷೇತ್ರಗಳಲ್ಲಿ ಶಾಸಕರನ್ನು ಗೆಲ್ಲಿಸಿಕೊಂಡು ಬರುತ್ತಾರೆ’ ಎಂದು ಕುಟುಕಿದರು.

‘ಶಾಸಕಾಂಗ ಪಕ್ಷದ ಸಭೆಯ ಬಳಿಕ ಗೃಹ ಸಚಿವ ಜಿ.ಪರಮೇಶ್ವರ ಜತೆ ಮಾತನಾಡಿದೆ. ಆಗ ಸಚಿವ ಕೆ.ಎನ್. ರಾಜಣ್ಣ ಸಹ ಇದ್ದರು. ಮುಂದೆ ಸಭೆ ಕರೆದು ಚರ್ಚಿಸಲಾಗುವುದು ಎಂದು ರಾಜಣ್ಣ ಹೇಳಿದರು. ಅದಾದ ಮೇಲೆ ನೀವು ಎಲ್ಲಿದ್ದೀರಾ? ನೀವು ಯಾರು? ಎಂದು ಕೇಳಲಿಲ್ಲ’ ಎಂದರು.

> **ತುಮಕೂರು ಹಾಲು ಒಕ್ಕೂಟಕ್ಕೆ ನಾಮ ನಿರ್ದೇಶಿತ ಸದಸ್ಯನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದು ರೈತರ ಕೆನ್ನೆ ಮೇಲೆ ಹೊಡೆದಂತಾಗಿದೆ. ಈಗ ಬಂದಿರುವ ಸ್ಥಿತಿ ಹಾಲು ಒಕ್ಕೂಟಕ್ಕೆ ಎಂದೂ ಬಂದಿರಲಿಲ್ಲ**
> **ಜೆ.ಸಿ.ಮಾಧುಸ್ವಾಮಿ,** ಬಿಜೆಪಿ ಮುಖಂಡ

‘ಇಬ್ಬರೂ ಸಚಿವರು ಸಾಮಾಜಿಕ ನ್ಯಾಯದ ಹರಿಕಾರರು. ಆದರೆ ಎಡಗೈ ಜನಾಂಗಕ್ಕೆ ಅನ್ಯಾಯ ಮಾಡುವುದು ಚೆನ್ನಾಗಿ ಗೊತ್ತಿದೆ. ಬಲಗೈ ಸಮುದಾಯದವರು ಸಚಿವರಿದ್ದು (ಪರಮೇಶ್ವರ), ಎಡಗೈನವರಿಗೆ ಅವಕಾಶ ಸಿಕ್ಕಿಲ್ಲ. ಇವರು ಸಾಮಾಜಿಕ ನ್ಯಾಯ ಪಾಲನೆ ಮಾಡುವುದಾದರೆ ಮುಂಬರುವ ಡಿಸಿಸಿ ಬ್ಯಾಂಕ್ ಚುನಾವಣೆ ಸಮಯದಲ್ಲಿ ಎಡಗೈ ಸಮುದಾಯದ ಒಬ್ಬರನ್ನು ನಾಮನಿರ್ದೇಶನ ಮಾಡಿ, ಅಧ್ಯಕ್ಷರನ್ನಾಗಿ ಮಾಡಲಿ’ ಎಂದು ಸವಾಲು ಹಾಕಿದರು. ತಮ್ಮ ಪತ್ನಿ ಕೆ.ಪಿ. ಭಾರತೀದೇವಿ ಅವರನ್ನು ತುಮುಲ್ ಅಧ್ಯಕ್ಷರನ್ನಾಗಿ ಮಾಡಲು ಶ್ರೀನಿವಾಸ್ ಪ್ರಯತ್ನಿಸಿದ್ದರು. ಆದರೆ ಅದು ಸಾಧ್ಯವಾಗಿರಲಿಲ್ಲ. ಹಿಂದೆ ದಳಪತಿಗಳ ಜತೆ ಮುನಿಸಿಕೊಂಡಿದ್ದ ಶ್ರೀನಿವಾಸ್, ಕಳೆದ ವಿಧಾನಸಭೆ ಚುನಾವಣೆಗೆ ಮುನ್ನ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದರು.

‘ದಲಿತರ ಏಳಿಗೆ ಸಹಿಸುತ್ತಿಲ್ಲ’



ತುಮಕೂರು: ‘ದಲಿತರೊಬ್ಬರು ತುಮುಲ್ ಅಧ್ಯಕ್ಷರಾಗಿದ್ದನ್ನು ಶಾಸಕ ಎಸ್.ಆರ್.ಶ್ರೀನಿವಾಸ್ ಅವರಿಗೆ ಸಹಿಸಲಾಗುತ್ತಿಲ್ಲ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಾನು ಯಾರ ಮಾತನ್ನೂ ಕೇಳುವುದಿಲ್ಲ. ದೇವರು ಹೇಗೆ ಬುದ್ಧಿ ಕೊಡುತ್ತಾನೊ ಆ ರೀತಿ ಮಾಡುತ್ತೇನೆ. ಇವರಿಗೆ (ಶ್ರೀನಿವಾಸ್) ತಾಕತ್ತು ಇದ್ದರೆ ಮುಂದಿನ ಡಿಸಿಸಿ ಬ್ಯಾಂಕ್ ಚುನಾವಣೆ ಎದುರಿಸಿ ಗೆದ್ದು ಬರಲಿ’ ಎಂದು ಸವಾಲು ಹಾಕಿದರು.

‘ಶ್ರೀನಿವಾಸ್ ಅವರನ್ನು ಕರೆದು ಸಮಾಧಾನ ಮಾಡುವ ದರ್ದು ನನಗೇನೂ ಬಂದಿಲ್ಲ. ತಿಪಟೂರು ಶಾಸಕ ಕೆ.ಷಡಕ್ಷರಿ ಸಹ ನಾಮಿನಿ ಸದಸ್ಯರಾಗಿ ಲ್ಯಾಂಡ್ ಬ್ಯಾಂಕ್ ಅಧ್ಯಕ್ಷರಾಗಿದ್ದರು. ಆಗ ಯಾಕೆ ಯಾರೂ ವಿರೋಧಿಸಲಿಲ್ಲ’ ಎಂದು ಕೇಳಿದರು. ‘ಎಚ್.ವಿ.ವೆಂಕಟೇಶ್ ಅವರನ್ನು ನಾಮ ನಿರ್ದೇಶಿತ ಸದಸ್ಯರನ್ನಾಗಿ ಮಾಡಿ, ಅಧ್ಯಕ್ಷ ಸ್ಥಾನ ಕೊಡಿಸಿದ್ದು ನಾನೇ. ಈ ವಿಚಾರದಲ್ಲಿ ಬೇರೆಯವರನ್ನು ದೂಷಿಸುವುದಿಲ್ಲ’ ಎಂದರು.

ರಾಜ್ಯ ಪ್ರಶಸ್ತಿ ನಿರಾಕರಿಸಿದ ಸುದೀಪ್

ಒಂದನೇ ಪುಟದಿಂದ...

‘ಸಿನಿಮಾಗಾಗಿ ತಮ್ಮನ್ನು ತಾವು ಧಾರೆ ಎರೆದ ಹಲವು ಅರ್ಹ ನಟರು ಇನ್ನೂ ಇದ್ದಾರೆ. ಅವರಲ್ಲಿ ಒಬ್ಬರು ಈ ಪ್ರಶಸ್ತಿ ಸ್ವೀಕರಿಸುವುದನ್ನು ನೋಡುವುದೇ ನನಗೆ ಸಂತೋಷ. ನಾನು ಜನರಿಗೆ ನೀಡುವ ಮನರಂಜನೆಯ ಮುಂದೆ ಯಾವುದೇ ಪ್ರಶಸ್ತಿಗಳ ನಿರೀಕ್ಷೆ ನನಗೆ ಇಲ್ಲ. ನನ್ನನ್ನು ಗುರುತಿಸಿರುವುದೇ ನನಗೆ ಪ್ರಶಸ್ತಿಯಂತೆ. ಈ ಗುರುತಿಸುವಿಕೆ ಮತ್ತಷ್ಟು ಉತ್ಸುಕತೆಯನ್ನು ನನ್ನಲ್ಲಿ ತುಂಬಿದೆ. ಈ ನನ್ನ ನಿರ್ಧಾರಕ್ಕಾಗಿ ಸರ್ಕಾರ ಹಾಗೂ ತೀರ್ಪುಗಾರರ ಕ್ಷಮೆ ಕೋರುತ್ತೇನೆ. ಈ ನಿರ್ಧಾರವನ್ನು ಗೌರವಿಸುತ್ತೀರಿ ಎಂದು ಭಾವಿಸಿದ್ದೇನೆ’ ಎಂದು ತಿಳಿಸಿದ್ದಾರೆ.


ಈ ಬಗ್ಗೆ ಪ್ರತಿಕ್ರಿಯೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರು ಲಭ್ಯವಾಗಲಿಲ್ಲ.

‘ಮುಂದಿನ ನಿರ್ಧಾರ ಸರ್ಕಾರದ್ದು’

ಈ ಕುರಿತು ಪ್ರತಿಕ್ರಿಯೆ ನೀಡಿರುವ 2019ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿ ಅಧ್ಯಕ್ಷ, ನಿರ್ದೇಶಕ–ನಿರ್ಮಾಪಕ ನಂಜುಂಡೇಗೌಡ ಅವರು, ‘ಈ ರೀತಿಯ ಸೂಚನೆ ಇಲ್ಲದೇ ಇದ್ದ ಕಾರಣ ನಾವು ಪ್ರಾಮಾಣಿಕವಾಗಿ ಆಯ್ಕೆ ಮಾಡಿದ್ದೇವೆ. ಅತ್ಯುತ್ತಮ ನಟ ವಿಭಾಗದಲ್ಲಿ ಇರುವ ನಾಲ್ಕೈದು ನಟರಲ್ಲಿ ಯಾರು ಅತ್ಯುತ್ತಮ ಎಂದು ಬಂದಾಗ ಅವರ ಸೇವೆ, ಪಾತ್ರ ನಿರ್ವಹಿಸಲು ಹಾಕಿದ ಶ್ರಮ, ವಿಶೇಷವಾದ ತಾಲೀಮು ಗಮನದಲ್ಲಿ ಇಟ್ಟುಕೊಂಡು ಸಮಿತಿಯು ಅವರನ್ನು ಶ್ರೇಷ್ಠ ನಟರನ್ನಾಗಿ ಗುರುತಿಸಿದೆ. ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದಾರೆ ಎನ್ನುವ ಕಾರಣಕ್ಕೆ ವಿವೇಚನೆಗಳನ್ನು ಅಳೆದು ತೂಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಿಯೇ ಆಯ್ಕೆ ಮಾಡಲಾಗಿದೆ. ಮುಂದಿನ ನಿರ್ಧಾರ ಸರ್ಕಾರದ್ದು’ ಎಂದಿದ್ದಾರೆ.

‘ತತ್ವಶಾಸ್ತ್ರದಲ್ಲಿ ಕಣ್ಮರೆಯಾದ ಕರ್ನಾಟಕದ ದಾರ್ಶನಿಕರು’

ಪ್ರಜಾವಾಣಿ ವಾರ್ತೆ


ರಹಮತ್ ತರೀಕೆರೆ

ಮೈಸೂರು: ‘ವಿಶ್ವವಿದ್ಯಾಲಯಗಳ ತತ್ವಶಾಸ್ತ್ರ ವಿಭಾಗದಲ್ಲಿ ಕರ್ನಾಟಕದ ದಾರ್ಶನಿಕರ ಅಧ್ಯಯನ ಇಲ್ಲವಾಗಿರುವುದು ವಿಷಾದನೀಯ. ಸಂಸ್ಕೃತ ಹಾಗೂ ಪಶ್ಚಿಮದ ದಾರ್ಶನಿಕರ ಅಧ್ಯಯನ ವನ್ನಷ್ಟೇ ಮಾಡಬೇಕೆನ್ನುವುದು ಶೈಕ್ಷಣಿಕ ಅಪರಾಧ’ ಎಂದು ಪ್ರೊ.ರಹಮತ್ ತರೀಕೆರೆ ಪ್ರತಿಪಾದಿಸಿದರು.

ನಗರದ ಮಾನಸಗಂಗೋತ್ರಿಯ ತತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅಂಬೇಡ್ಕರ್ ಸಂಶೋಧನೆ ಮತ್ತು ಅಧ್ಯಯನ ಕೇಂದ್ರವು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ, ‘ಅಂಬೇಡ್ಕರ್ ಅವರನ್ನು ಪ್ರಭಾವಿಸಿದ ಸಂತ ಕಬೀರ್‌ದಾಸ್ ಚಿಂತನೆಗಳ ತಾತ್ವಿಕ ನೆಲೆಗಳು’ ಕುರಿತು ಗುರುವಾರ ಮಾತನಾಡಿದರು.

‘ತತ್ವಶಾಸ್ತ್ರದಲ್ಲಿ ಆರೂಢ, ಅವಧೂತರ ತತ್ವಪದ, ಶರಣ, ಸೂಫಿಗಳ ಅಧ್ಯಯನವಿಲ್ಲ. ಅಭಿನವಗುಪ್ತರಿಗೆ ಸಮಾನವಾಗಿ ಚಿಂತಿಸಿದ ಅಲ್ಲಮಪ್ರಭು, ಅಂಬೇಡ್ಕರ್ ತಮ್ಮ ಗುರುವಾಗಿ ಸ್ವೀಕರಿಸಿದ ಕಬೀರ್‌ದಾಸ್ ಕುರಿತು ಅಧ್ಯಯನವೇ ಇಲ್ಲ. ನಮ್ಮ ನೆಲದ ತತ್ವಶಾಸ್ತ್ರವನ್ನು ಯಾಕೆ ಬಿಟ್ಟಿದ್ದೀರಿ’ ಎಂದು ಪ್ರಶ್ನಿಸಿದರು.

‘ರಾಜ್ಯದ ಎಲ್ಲಾ ತತ್ವಶಾಸ್ತ್ರ ಅಧ್ಯಯನ ಕೇಂದ್ರಗಳಲ್ಲಿ ಕರ್ನಾಟಕದ ದಾರ್ಶನಿಕರ ಕುರಿತ ಅಧ್ಯಯನಕ್ಕೆ ಅವಕಾಶವಿರಬೇಕು’ ಎಂದು ಆಗ್ರಹಿಸಿದರು.

ತಪಸ್ವಿ ರಾಮಕೃಷ್ಣ ಮಹಾರಾಜರು ಇನ್ನಿಲ್ಲ



ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): ಯಲ್ಲಟ್ಟಿ ಗ್ರಾಮದ ನರಸಿಂಹೇಶ್ವರ ಮಠದ ರಾಮಕೃಷ್ಣ ಮಹಾರಾಜರು (94) ಗುರುವಾರ ಮಧ್ಯಾಹ್ನ ಲಿಂಗೈಕ್ಯರಾದರು. ಅವರ ಅಂತ್ಯಕ್ರಿಯೆ ಶುಕ್ರವಾರ (ಜ.24) ಬೆಳಿಗ್ಗೆ 9ಕ್ಕೆ ಆಶ್ರಮದ ಆವರಣದಲ್ಲಿ ನಡೆಯಲಿದೆ.

ಮೂಲತಃ ಅಥಣಿ ತಾಲ್ಲೂಕಿನ ಐಗಳಿ ಗ್ರಾಮದವರಾದ ಅವರು ಎಂಜಿನಿಯರ್ ಪದವೀಧರರು. ರೈಲ್ವೆ ಇಲಾಖೆಯಲ್ಲಿ 22 ವರ್ಷ ಕೆಲಸ ಮಾಡಿದ್ದರು. ನಂತರ ಇಂಚಗೇರಿ ಸಂಪ್ರದಾಯದ ಸಮರ್ಥ ಸದ್ಗುರು ನರಸಿಂಹೇಶ್ವರ ಮಹಾರಾಜರ ಶಿಷ್ಯರಾದರು. ಹಿಮಾಲಯಕ್ಕೆ ತೆರಳಿ ಆರು ವರ್ಷ ತಪಸ್ಸು ಮಾಡಿ, ಗುರುಗಳ ಆಶಯದಂತೆ ಕರ್ನಾಟಕಕ್ಕೆ ಮರಳಿ ರಬಕವಿ ಬನಹಟ್ಟಿ ಸಮೀಪದ ಯಲ್ಲಟ್ಟಿಯಲ್ಲಿ ಆಧ್ಯಾತ್ಮಿಕ ಕೇಂದ್ರ ಆರಂಭಿಸಿದರು. ಹತ್ತಕ್ಕೂ ಹೆಚ್ಚು ಆಶ್ರಮ ನಿರ್ಮಿಸಿದ್ದರು.

ಎಸ್.ಜಿ.ಸಿದ್ದರಾಮಯ್ಯ, ಮೀನಾಕ್ಷಿ ಬಾಳಿ, ಮಿರ್ಜಾ ಬಷೀರ್ ಪ್ರಶಸ್ತಿಗೆ ಆಯ್ಕೆ


ಪ್ರಜಾವಾಣಿ ವಾರ್ತೆ

ಸಾಗರ: ಇಲ್ಲಿನ ಪರಸ್ಪರ ವೇದಿಕೆಯ ಪ್ರಸಕ್ತ ಸಾಲಿನ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರು ರೆ. ಫರ್ಡಿನಾಂಡ್ ಕಿಟೆಲ್ ಪ್ರಶಸ್ತಿಗೆ, ಕವಯಿತ್ರಿ ಮೀನಾಕ್ಷಿ ಬಾಳಿ ಅವರು ಅಕ್ಕಮಹಾದೇವಿ ಪ್ರಶಸ್ತಿಗೆ ಹಾಗೂ ಕತೆಗಾರ ಡಾ.ಮಿರ್ಜಾ ಬಷೀರ್ ಅವರು ಶಿಶುನಾಳ ಷರೀಫ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.


ಮೀನಾಕ್ಷಿ ಬಾಳಿ


ಮಿರ್ಜಾ ಬಷೀರ್


ಎಸ್.ಜಿ. ಸಿದ್ದರಾಮಯ್ಯ

₹10,000 ನಗದು, ಫಲಕ ಒಳಗೊಂಡಿರುವ ಪ್ರಶಸ್ತಿಯನ್ನು ಜ. 26ರಂದು ಇಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ವೇದಿಕೆಯ ಅಧ್ಯಕ್ಷ ಸರ್ಫ್ರಾಜ್ ಚಂದ್ರಗುತ್ತಿ ಗುರುವಾರ ತಿಳಿಸಿದ್ದಾರೆ.

ವೇದಿಕೆ ಸ್ಥಾಪನೆಗೊಂಡು ಎರಡು ದಶಕಗಳು ಕಳೆದಿವೆ. ಸಾಹಿತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಕನ್ನಡದಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ಮೇಳದಲ್ಲಿ ಸಿ.ಎಂ ಸಿದ್ದರಾಮಯ್ಯ ಭರವಸೆ

‘ಎಪಿಎಂಸಿ: ಸಾವಯವ ಉತ್ಪನ್ನ ಖರೀದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಆರ್ಥಿಕ ವರ್ಷದಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎಪಿಎಂಸಿ) ಪ್ರಾಂಗಣದಲ್ಲಿ ಸಾವಯವ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅರಮನೆ ಆವರಣದ ತ್ರಿಪುರವಾಸಿನಿಯಲ್ಲಿ ಕೃಷಿ ಇಲಾಖೆ ಆಯೋಜಿಸಿರುವ ಮೂರು ದಿನಗಳ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳವನ್ನು ಸಾವಯವ ನವ ಧಾನ್ಯಗಳನ್ನು ಕಣಜಕ್ಕೆ ಸುರಿಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಸಾವಯವ ಕೃಷಿ ವಿಸ್ತೀರ್ಣದಲ್ಲಿ ಭಾರತವು ವಿಶ್ವದಲ್ಲಿ ಎರಡನೇ ಸ್ಥಾನ ಹಾಗೂ ಒಟ್ಟು ಸಾವಯವ ಆಹಾರ ಉತ್ಪಾದನೆಯಲ್ಲಿ ಮೊದಲನೇ ಸ್ಥಾನದಲ್ಲಿದೆ. ವಿಶ್ವದಲ್ಲಿ ಅಂದಾಜು 9.03 ಕೋಟಿ ಟನ್‌ಗಳಷ್ಟು ಸಿರಿಧಾನ್ಯಗಳ ಉತ್ಪಾದನೆ ಆಗುತ್ತದೆ. ಇದರಲ್ಲಿ ಶೇಕಡ 38.50ರಷ್ಟು ಪಾಲು ನಮ್ಮ ದೇಶದ್ದಾಗಿದೆ. ನಮ್ಮ ರಾಜ್ಯ ಸಿರಿಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆಯಲ್ಲಿ ದೇಶದಲ್ಲಿಯೇ ಮೂರನೇ ಸ್ಥಾನದಲ್ಲಿದೆ’ ಎಂದು ಮಾಹಿತಿ ನೀಡಿದರು.

‘ಭಾರತದ ಒಟ್ಟು ಸಾವಯವ ರಫ್ತು ಪ್ರಮಾಣ 2.61 ಲಕ್ಷ ಟನ್ ಇದೆ. ಇದರಲ್ಲಿ ಸಾವಯವ ಆಹಾರ ರಫ್ತಿನಿಂದ ಸುಮಾರು ₹4 ಸಾವಿರ ಕೋಟಿ ಆದಾಯ ಬಂದಿದೆ. ಸಾವಯವ ಮತ್ತು ಸಿರಿಧಾನ್ಯಗಳಿಗೆ ವ್ಯವಸ್ಥಿತ ಮಾರುಕಟ್ಟೆ ಮತ್ತು ಸರಬರಾಜು ಸರಪಳಿಯನ್ನು ಕಲ್ಪಿಸುವ ಉದ್ದೇಶದೊಂದಿಗೆ ಪರಿಷ್ಕೃತ ಸಾವಯವ ಕೃಷಿ ನೀತಿಯನ್ನು 2017ರಲ್ಲಿ ನಮ್ಮ ಸರ್ಕಾರ ಜಾರಿಗೊಳಿಸಿದೆ’ ಎಂದರು.


ಸಾವಯವ ಮತ್ತು ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಸಾವಯವ ನವ ಧಾನ್ಯಗಳನ್ನು ಕಣಜಕ್ಕೆ ಸುರಿಯುವ ಮೂಲಕ ಚಾಲನೆ ನೀಡಿದರು. ಸಚಿವ ಬೈರತಿ ಸುರೇಶ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವ ಎನ್. ಚಲುವರಾಯಸ್ವಾಮಿ, ಜಾರ್ಖಂಡ್ ಕೃಷಿ ಸಚಿವೆ ಶಿಲ್ಪಿ ನೇಹಾ ಟರ್ಕಿ, ಸಚಿವ ಕೃಷ್ಣ ಬೈರೇಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

> **ರೈತರ ಬಹುದಿನಗಳ ಬೇಡಿಕೆಯಾದ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕಾಯ್ದೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಬೇಕು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

‘ರೈತ ಸಿರಿ ಯೋಜನೆಯಡಿ ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ₹10 ಸಾವಿರದಂತೆ ಗರಿಷ್ಠ 2 ಹೆಕ್ಟೇರ್‌ಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಸಿರಿಧಾನ್ಯಗಳ ಉತ್ತೇಜನದಲ್ಲಿ ರಾಜ್ಯ ಸರ್ಕಾರವು ಕೈಗೊಂಡಿರುವ ವಿಶೇಷ ಪ್ರಯತ್ನಗಳನ್ನು ಗುರುತಿಸಿ ನಮ್ಮ ರಾಜ್ಯದ ಕೃಷಿ ಇಲಾಖೆಗೆ ಕೇಂದ್ರ ಸರ್ಕಾರ ಪ್ರಶಂಸನಾ ಪತ್ರವನ್ನು ನೀಡಿದೆ’ ಎಂದರು.

ಬೆಂಗಳೂರಿನ ಹೆಬ್ಬಾಳದಲ್ಲಿ ನಿರ್ಮಾಣವಾಗಲಿರುವ ‘ಸಾವಯವ–ಸಿರಿಧಾನ್ಯ ಹಬ್’ಗೆ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು. ಹೊಸದುರ್ಗದ ಶಾಸಕ ಗೋವಿಂದಪ್ಪ ಅವರು ಸಿರಿಧಾನ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಪುದುಚೇರಿ ಕೃಷಿ ಸಚಿವ ಡಿ.ಜೆ. ಕುಮಾರ್, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಉಪಸ್ಥಿತರಿದ್ದರು.

‘ಕೃಷಿ ಇಲಾಖೆಯಲ್ಲಿ ರಫ್ತು ವಿಭಾಗ ಪ್ರಾರಂಭಿಸಿ’

ಪ್ರಸ್ತುತ ಆಹಾರ ಧಾನ್ಯಗಳು, ಹೂವು, ತರಕಾರಿ, ಹಣ್ಣುಗಳನ್ನು ವಿದೇಶಗಳಿಗೆ ರಫ್ತು ಮಾಡಲು ಕೈಗಾರಿಕೆ ಇಲಾಖೆಯಲ್ಲಿರುವ ರಫ್ತು ವಿಭಾಗವನ್ನು ಸಂಪರ್ಕಿಸಬೇಕು. ಆದರೆ ಅಲ್ಲಿ ಐಟಿಬಿಟಿ, ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿದ ಉತ್ಪನ್ನಗಳ ರಫ್ತಿಗೆ ಆದ್ಯತೆ ನೀಡಲಾಗುತ್ತದೆ. ಆದ್ದರಿಂದ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೃಷಿ ಇಲಾಖೆ ಅಥವಾ ತೋಟಗಾರಿಕೆ ಇಲಾಖೆಯಲ್ಲಿ ಪ್ರತ್ಯೇಕ ರಫ್ತು ವಿಭಾಗವನ್ನು ಪ್ರಾರಂಭಿಸಬೇಕು. ಇದರಿಂದ ರೈತರು ಬೆಳೆಯುವ ಉತ್ಪನ್ನಗಳು ವಿದೇಶಕ್ಕೆ ರಫ್ತು ಮಾಡಲು ಅನುಕೂಲವಾಗುತ್ತದೆ’ ಎಂದು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಒತ್ತಾಯಿಸಿದರು.

ಸುದ್ದಿ 2 ನಿಮಿಷ

3 ಸಾವಿರ ಪವರ್‌ಮೆನ್ ಹುದ್ದೆಗೆ 3 ಲಕ್ಷ ಅರ್ಜಿ: ಸಚಿವ ಜಾರ್ಜ್

ಬೀದರ್: ‘ಮೂರು ಸಾವಿರ ಪವರ್‌ಮೆನ್ ಹುದ್ದೆಗಳಿಗೆ ಮೂರು ಲಕ್ಷ ಅರ್ಜಿಗಳು ಬಂದಿವೆ’ ಎಂದು ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿಯಲ್ಲಿ ಗುರುವಾರ ಕೆಪಿಟಿಸಿಎಲ್ ಮತ್ತು ಜೆಸ್ಕಾಂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಈಗಾಗಲೇ ಪವರ್‌ಮನ್ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಆರಂಭಗೊಂಡಿದೆ. ಬರುವ ಏಪ್ರಿಲ್‌ನೊಳಗೆ



ನೇಮಕಾತಿ ಪ್ರಕ್ರಿಯೆ ಮುಗಿಯಲಿದೆ. ಮೊದಲ ಬಾರಿಗೆ ಇಡೀ ರಾಜ್ಯದಲ್ಲಿ ಒಂದೇ ದಿನ ದೈಹಿಕ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಬಳಿಕ ಎಇಇ, ಜೆಇ ಸೇರಿದಂತೆ ಇತರೆ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲಾಗುವುದು’ ಎಂದು ಹೇಳಿದರು.

‘ತುಮಕೂರು ಜಿಲ್ಲೆಯ ಪಾವಗಡದಲ್ಲಿ ಈಗಾಗಲೇ 10 ಸಾವಿರ ಎಕರೆಗೂ ಅಧಿಕ ಪ್ರದೇಶದಲ್ಲಿ ಸೋಲಾರ್ ಪಾರ್ಕ್ ನಿರ್ಮಿಸಲಾಗಿದೆ. ಪಾವಗಡ, ಶಿರಾ ಸುತ್ತಮುತ್ತ ಹೊಸದಾಗಿ ಹತ್ತು ಸಾವಿರ ಎಕರೆ ಪ್ರದೇಶದಲ್ಲಿ ಸೋಲಾರ್ ಪಾರ್ಕ್ ನಿರ್ಮಿಸ ಲಾಗುವುದು. ಜಮೀನು ಕೊಡಲು ರೈತರೇ ಮುಂದೆ ಬಂದಿದ್ದಾರೆ. ಈ ಯೋಜನೆ ಅನುಷ್ಠಾನಗೊಂಡರೆ ಮೂರು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗಲಿದೆ’ ಎಂದು ಹೇಳಿದರು.

‘ಕಾಂತಾರ: ಉಲ್ಲಂಘನೆ ಆಗಿಲ್ಲ’

ಹಾಸನ: ‘ಸಕಲೇಶಪುರ ತಾಲ್ಲೂಕಿನ ಹೆರೂರು ಬಳಿ ಅರಣ್ಯದಲ್ಲಿ ಚಿತ್ರೀಕರಣ ನಡೆಸುತ್ತಿರುವ ಕಾಂತಾರ ಪ್ರೀಕ್ವೆಲ್ ಚಿತ್ರತಂಡದಿಂದ ನಿಯಮ ಉಲ್ಲಂಘನೆಯಾಗಿಲ್ಲ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ.

‘ಚಿತ್ರೀಕರಣದ ವೇಳೆ ಸ್ಫೋಟಕ ಬಳಸಿ, ಮರ ಕಡಿಯಲಾಗಿದೆ. ವನ್ಯಜೀವಿಗಳಿಗೆ ತೊಂದರೆಯಾಗಿದೆ’ ಎಂದು ಗ್ರಾಮಸ್ಥರು ಆರೋಪಿಸಿದ್ದರಿಂದ ವಲಯ ಅರಣ್ಯಾಧಿಕಾರಿ ನೇತೃತ್ವದ ತಂಡ ಸ್ಥಳ ಪರಿಶೀಲಿಸಿ ಮಂಗಳವಾರ ವರದಿ ಸಲ್ಲಿಸಿದೆ.

‘ಮರದ ಮಾದರಿಯ ಬಣ್ಣ ಬಳಿದಿರುವ ಕೃತಕ ಮರವನ್ನು ಚಿತ್ರೀಕರಣಕ್ಕೆ ಬಳಸಲಾಗಿದೆ. ಮರಗಳನ್ನು ಕಡಿದಿಲ್ಲ. ಅರಣ್ಯ ಪ್ರದೇಶಕ್ಕೆ ಹಾನಿ ಯಾಗಿಲ್ಲವೆಂದು ಅಧಿಕಾರಿಗಳು ವರದಿಯಲ್ಲಿ ತಿಳಿಸಿದ್ದಾರೆ’ ಎಂದು ಡಿಎಫ್‌ಒ ಸೌರಭ್‌ಕುಮಾರ್ ಪ್ರತಿಕ್ರಿಯಿಸಿದ್ದಾರೆ. ‘ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ಅನಾಹುತ ಸಂಭವಿಸದಂತೆ ಸುರಕ್ಷತಾ ಕ್ರಮ ಕೈಗೊಳ್ಳಬೇಕು. ಅಗ್ನಿಶಾಮಕ ವಾಹನ ಸ್ಥಳದಲ್ಲಿರಿಸಿಕೊಂಡು ಚಿತ್ರೀಕರಣ ಮಾಡುವಂತೆ ಚಿತ್ರತಂಡಕ್ಕೆ ಸೂಚಿಸಲಾಗಿದೆ’ ಎಂದಿದ್ದಾರೆ.

ಸಚಿವೆ ಲಕ್ಷ್ಮೀಗೆ ಇನ್ನಷ್ಟು ದಿನ ಆಸ್ಪತ್ರೆಯಲ್ಲೇ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅಪಘಾತದಲ್ಲಿ ಗಾಯಗೊಂಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ 11 ದಿನಗಳಿಂದ ಆಸ್ಪತ್ರೆಯಲ್ಲೇ ಚಿಕಿತ್ಸೆ ಮುಂದುವರಿದಿದ್ದು, ಚೇತರಿಸಿಕೊಂಡಿದ್ದಾರೆ. ಆದರೆ, ಇನ್ನೂ ಕೆಲ ದಿನ ಮನೆಗೆ ಕಳುಹಿಸಲು ಆಗದು ಎಂದು ವೈದ್ಯರು ತಿಳಿಸಿದ್ದಾರೆ.


ಲಕ್ಷ್ಮೀ ಹೆಬ್ಬಾಳಕರ

ಜನವರಿ 14ರಂದು ಸಂಭವಿಸಿದ ಅಪಘಾತದಲ್ಲಿ ಸಚಿವೆಯ ಬೆನ್ನು ಮೂಳೆ ಸ್ವಲ್ಪ ಮುರಿದಿತ್ತು. ನಾಲ್ಕು ದಿನ ಆಸ್ಪತ್ರೆಯಲ್ಲಿದ್ದು, ಮನೆಗೆ ಮರಳಬಹುದು.

> **ಹೆಬ್ಬಾಳಕರ ಅವರು ಅಪಘಾತದ ಬಗ್ಗೆ ಮಾಹಿತಿ ನೀಡಬೇಕು. ಬೆಂಗಾವಲು ಪಡೆ, ಗನ್ ಮ್ಯಾನ್ ಯಾಕಿರಲಿಲ್ಲ? ಕಾರಿನಲ್ಲಿ ಹಣ ಸಾಗಿಸಲಾಗುತ್ತಿತ್ತೇ? ತನಿಖೆ ನಡೆಯಬೇಕು**
> **ಈರಣ್ಣ ಕಡಾಡಿ,** ಬಿಜೆಪಿ ರಾಜ್ಯಸಭಾ ಸದಸ್ಯ

ಒಂದು ತಿಂಗಳು ವಿಶ್ರಾಂತಿ ಪಡೆಯಲು ವೈದ್ಯರು ಆರಂಭದಲ್ಲಿ ತಿಳಿಸಿದ್ದರು.

‘ಸಚಿವೆ ಚೇತರಿಸಿಕೊಂಡಿದ್ದಾರೆ. ಆದರೆ, ಎದ್ದು ಕೂತಾಗ ಮತ್ತು ನಡೆದಾಡುವಾಗ ಅವರಿಗೆ ತಲೆ ಸುತ್ತು ಬರುತ್ತಿದೆ. ಕುತ್ತಿಗೆ, ಬೆನ್ನು, ಭುಜ, ಕಾಲುಗಳಿಗೂ ಒಳಪೆಟ್ಟು ಬಿದ್ದಿದ್ದರಿಂದ ಇನ್ನೂ ಕೆಲವು ದಿನ ಆಸ್ಪತ್ರೆಯಲ್ಲಿ ಇರಲು ವೈದ್ಯರು ತಿಳಿಸಿದ್ದಾರೆ’ ಎಂದು ಸಚಿವೆಯ ಕುಟುಂಬದವರು ತಿಳಿಸಿದ್ದಾರೆ.

ಕುರ್ಚಿಗಾಗಿ ಕುಸ್ತಿ ಬಿಡಿ: ಬೃಂದಾ

ಕೊರಗರ ಉದ್ಧಾರಕ್ಕೆ ಕ್ರಮ ವಹಿಸಿ • ಆದಿವಾಸ್ ರ‍್ಯಾಲಿಯಲ್ಲಿ ಕಾರಟ್ ಆಗ್ರಹ

ಮಂಗಳೂರು: ‘ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕೊರಗರೂ ಸೇರಿದಂತೆ ಆದಿವಾಸಿಗಳ ಉದ್ಧಾರಕ್ಕಾಗಿ ಏನನ್ನೂ ಮಾಡಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರಸ್ಪರ ಜಗಳವಾಡಲು ತಮ್ಮ ಶಕ್ತಿಯನ್ನು ವ್ಯಯಿಸುತ್ತಿದ್ದಾರೆ. ಕುರ್ಚಿಗಾಗಿ ಕುಸ್ತಿ ಮಾಡುವುದನ್ನು ಬಿಟ್ಟು ಕೊರಗರ ಅಭಿವೃದ್ಧಿಗೆ ಅವರು ಕ್ರಮ ವಹಿಸಬೇಕು’ ಎಂದು ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್‌ನ ರಾಷ್ಟ್ರೀಯ ಉಪಾಧ್ಯಕ್ಷೆ ಬೃಂದಾ ಕಾರಟ್ ಹೇಳಿದರು.

ಆದಿವಾಸಿ ಕೊರಗ ಸಮುದಾಯದ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಇಲ್ಲಿ ಗುರುವಾರ ಏರ್ಪಡಿಸಿದ್ದ ಆದಿವಾಸ್ ಆಕ್ರೋಶ್ ರ‍್ಯಾಲಿಯಲ್ಲಿ ಅವರು ಮಾತನಾಡಿದರು.


ಆದಿವಾಸ್ ಆಕ್ರೋಶ್ ರ‍್ಯಾಲಿಯಲ್ಲಿ ಭಾಗವಹಿಸಿದ ಕೊರಗ ಸಮುದಾಯದ ಮಹಿಳೆಯರು ತಮ್ಮ ಮನೆಯ ಫೋಟೊವನ್ನು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

‘ಸರ್ಕಾರಿ ಅಂಕಿಅಂಶಗಳ ಪ್ರಕಾರ ಕೊರಗರ ಸಂಖ್ಯೆ 16 ಸಾವಿರಕ್ಕೆ ಇಳಿದಿದೆ. ಆದರೆ ವಾಸ್ತವದಲ್ಲಿ ಅವರ ಸಂಖ್ಯೆ 12 ಸಾವಿರದಷ್ಟೂ ಇಲ್ಲ. ಶಿಶುಮರಣ ದರ ಹಾಗೂ ಬಾಣಂತಿ ಸಾವು ಈ ಸಮುದಾಯದವರಲ್ಲಿ ಜಾಸ್ತಿ ಇದೆ. ಫಲವಂತಿಕೆ ದರವೂ ಕುಸಿದಿದೆ. ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆ ಅವರ ಬದುಕನ್ನೇ ನಾಶಪಡಿಸುತ್ತಿದ್ದು ಈ ಸಮುದಾಯವನ್ನು ಉಳಿಸಿಕೊಳ್ಳುವುದೇ ಸವಾಲಾಗಿದೆ’ ಎಂದರು.

ಸಮಿತಿಯ ರಾಜ್ಯ ಘಟಕದ ಸಂಚಾಲಕ ಎಸ್.ವೈ.ಗುರುಶಾಂತ್, ‘ಆದಿವಾಸಿಗಳ ಸಮಸ್ಯೆಗಳ ಇತ್ಯರ್ಥಕ್ಕೆ ಮುಖ್ಯಮಂತ್ರಿ ಶೀಘ್ರ ಸಭೆ ಕರೆಯಬೇಕು. ಇಲ್ಲದಿದ್ದರೆ ಅವರ ಮನೆಮುಂದೆ ಧರಣಿ ನಡೆಸಲಿದ್ದೇವೆ’ ಎಂದರು. ಸಮಿತಿಯ ರಾಜ್ಯ ಘಟಕದ ಸಹಸಂಚಾಲಕ ಶ್ರೀಧರ ನಾಡ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಮಾತನಾಡಿದರು. ಪತ್ರಕರ್ತ ನವೀನ್ ಸೂರಿಂಜೆ ರಚಿಸಿರುವ ‘ಕೊರಗರು–ತುಳುನಾಡಿನ ಮಾತೃ ಸಮುದಾಯ’ ಕೃತಿಯನ್ನು ಬೃಂದಾ ಕಾರಟ್ ಬಿಡುಗಡೆ ಮಾಡಿದರು.

ಸಿದ್ದರಾಮಯ್ಯಗೆ ಕ್ಲೀನ್ ಚಿಟ್?

ಒಂದನೇ ಪುಟದಿಂದ...

ರಾಜ್ಯ ರಾಜಕಾರಣದಲ್ಲಿ ಭಾರಿ ಗದ್ದಲಕ್ಕೆ ಕಾರಣವಾಗಿದ್ದ ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ಮೊದಲನೇ ಆರೋಪಿ ಮತ್ತು ಅವರ ಪತ್ನಿ ಪಾರ್ವತಿ ಅವರನ್ನು ಎರಡನೇ ಆರೋಪಿಯನ್ನಾಗಿಸಿ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ವಿರೋಧ ಪಕ್ಷಗಳ ನಾಯಕರು, ಕೆಲ ಸಾಮಾಜಿಕ ಕಾರ್ಯಕರ್ತರು ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿದ್ದರು. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ಬೆಂಗಳೂರಿನ ಕೆಂಗೇರಿಯಿಂದ ಮೈಸೂರಿನ ಮುಡಾ ಕಚೇರಿವರೆಗೂ ಪಾದಯಾತ್ರೆ ನಡೆಸಿದ್ದರು.

‘ನಿವೇಶನ ಹಂಚಿಕೆಯಲ್ಲಿ ಸಿದ್ದರಾಮಯ್ಯ ಅವರ ಪ್ರಭಾವ ಬಳಕೆಯಾಗಿಲ್ಲ ಎಂದು ಲೋಕಾಯುಕ್ತ ವರದಿಯಲ್ಲಿದೆ’ ಎಂದು ಮೂಲಗಳು ದೃಢಪಡಿಸಿವೆ.

ಆದರೆ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಸಹ ತನಿಖೆ ನಡೆಸುತ್ತಿದ್ದು, ನಿವೇಶನ ಹಂಚಿಕೆಯಲ್ಲಿ ಅವರ ಪ್ರಭಾವ ಬಳಕೆಯಾಗಿದೆ ಎಂದು ತನ್ನ ಎರಡು ಪತ್ರಿಕಾ ಪ್ರಕಟಣೆಗಳಲ್ಲಿ ತಿಳಿಸಿದೆ. ಹೀಗಾಗಿ ಮುಖ್ಯಮಂತ್ರಿ ಅವರ ಮೇಲೆ ಇ.ಡಿ ತನಿಖೆಯ ಕತ್ತಿ ಇದ್ದೇ ಇದೆ.

ಜಾರಿ ನಿರ್ದೇಶನಾಲಯವು ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಜತೆಗೆ 50:50 ಅನುಪಾತದಲ್ಲಿ ಪರಿಹಾರ ನಿವೇಶನಗಳನ್ನು ಹಂಚಿಕೆ ಮಾಡಲಾದ ಇತರ ಎಲ್ಲ ಪ್ರಕರಣಗಳನ್ನೂ ಪರಿಶೀಲಿಸುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಹಿಂದಿನ ವಾರ, ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತು ಮುಡಾ ಅಧಿಕಾರಿಗಳಾಗಿದ್ದವರ 142 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ಜತೆಗೆ ಇತರ 631 ನಿವೇಶನಗಳ ಮಾಹಿತಿ ನೀಡುವಂತೆ ಮುಡಾಗೆ ಪತ್ರ ಬರೆದಿತ್ತು.

‘ಅಧಿಕಾರಿಗಳ ವಿರುದ್ಧ ದೋಷಾರೋಪ’

ಕೆಸರೆ ಗ್ರಾಮದ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವ ಪ್ರಕ್ರಿಯೆಯಿಂದ ಆರಂಭವಾಗಿ, ಪಾರ್ವತಿ ಅವರಿಗೆ ಪರಿಹಾರದ ನಿವೇಶನ ಹಂಚಿಕೆ ಮಾಡುವವರೆಗೂ ಹಲವು ಹಂತದಲ್ಲಿ ಮುಡಾ ಅಧಿಕಾರಿಗಳು ಕರ್ತವ್ಯಲೋಪ ಎಸಗಿದ್ದಾರೆ ಎಂದು ಲೋಕಾಯುಕ್ತ ಪೊಲೀಸರು ಉಲ್ಲೇಖಿಸಿದ್ದಾರೆ ಎಂಬ ಸುದ್ದಿಯೂ ಹರಿದಾಡಿದೆ.

ಲೋಕಾಯುಕ್ತ ವರದಿಯಲ್ಲಿ ಲೋಪಗಳ ಪಟ್ಟಿ ಇದೆ ಎಂದೂ ಸುದ್ದಿವಾಹಿನಿಗಳು ಬಿತ್ತರಿಸಿವ. ಅವು ಹೀಗಿವೆ

- ಮುಡಾ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಿದ್ದ ಜಮೀನಿನ ಸ್ಥಳ ಪರಿಶೀಲನೆ ನಡೆಸಿದ್ದ ಅಧಿಕಾರಿಗಳಿಂದ ಕರ್ತವ್ಯ ಲೋಪ
- ದಾಖಲೆಯಲ್ಲಿ ಇರುವ ಜಮೀನೇ ಒಂದಾದರೆ, ಸ್ಥಳ ಪರಿಶೀಲನೆ ನಡೆಸಿದ ಜಮೀನೇ ಇನ್ನೊಂದಾಗಿದೆ. ಒಂದು ದಾಖಲೆಯಲ್ಲಿ ಜಮೀನು ಬಡಾವಣೆಯ ಮಧ್ಯದಲ್ಲಿ ಇದ್ದರೆ, ಮತ್ತೊಂದರಲ್ಲಿ ಬಡಾವಣೆಯ ಅಂಚಿನಲ್ಲಿದೆ ಎಂಬಂತೆ ತೋರಿಸಲಾಗಿದೆ
- ಮುಡಾ ಈಗಾಗಲೇ ಅಭಿವೃದ್ಧಿಪಡಿಸಿರುವ ಜಮೀನನ್ನು ಕೃಷಿಯೇತರ ಬಳಕೆಗೆ ಎಂದು ಮತ್ತೆ ಭೂಪರಿವರ್ತನೆ ಮಾಡುವಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಸಂಬಂಧಿತ ಅಧಿಕಾರಿಯು ಸ್ಥಳ ಪರಿಶೀಲನೆ ಮಾಡದೆಯೇ ಭೂಪರಿವರ್ತನೆ
- ಪಾರ್ವತಿ ಅವರಿಗೆ 50:50 ಅನುಪಾತದಲ್ಲಿ ಪರಿಹಾರ ನಿವೇಶನಗಳನ್ನು ಹಂಚಿಕೆ ಮಾಡುವಾಗ ಹಲವು ನಿಯಮಗಳ ಉಲ್ಲಂಘನೆ
- ಭೂಮಿ ಬಳಕೆಯಾದ ಬಡಾವಣೆಯಲ್ಲೇ ಅಥವಾ ಅದಕ್ಕೆ ಸಮಾನಾಂತರವಾದ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಬೇಕಿತ್ತು. ಆದರೆ ಹೆಚ್ಚಿನ ಮಾರುಕಟ್ಟೆ ಮೌಲ್ಯ ಇರುವ ಬಡಾವಣೆಯಲ್ಲಿ ನಿವೇಶನ ಹಂಚಿಕೆ
- ಮುಡಾವು ಸ್ವಾಧೀನಪಡಿಸಿಕೊಳ್ಳದೇ ಅಭಿವೃದ್ಧಿಪಡಿಸಿದ ಜಮೀನಿನ ಮೌಲ್ಯ ಮತ್ತು 50:50ರ ಅನುಪಾತದಲ್ಲಿ ಪರಿಹಾರದ ನಿವೇಶನಗಳನ್ನು ನೀಡುವಲ್ಲಿ ಮೌಲ್ಯವನ್ನು ಸರಿಯಾಗಿ ತಾಳೆ ಮಾಡಿಲ್ಲ

ದುಬೈನಿಂದ ಬಂದ ವ್ಯಕ್ತಿಗೆ ಮಂಕಿಪಾಕ್ಸ್

ಮಂಗಳೂರು: ದುಬೈನಿಂದ ಮಂಗಳೂರಿಗೆ ಬಂದಿರುವ ವ್ಯಕ್ತಿಯೊಬ್ಬರಿಗೆ ಮಂಕಿಪಾಕ್ಸ್ ತಗುಲಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ದೃಢಪಟ್ಟಿದೆ.

19 ವರ್ಷಗಳಿಂದ ದುಬೈನಲ್ಲಿ ನೆಲೆಸಿರುವ ಉಡುಪಿ ಜಿಲ್ಲೆ ಕಾರ್ಕಳದ ಈ ವ್ಯಕ್ತಿಯು (40 ವರ್ಷ) ಜ.17ರಂದು ಮಂಗಳೂರಿಗೆ ಬಂದಿದ್ದರು. ಎರಡು ದಿನಗಳಿಂದ ಜ್ವರದಿಂದ ಬಳಲುತ್ತಿದ್ದ ಅವರಿಗೆ ಚರ್ಮದ ಮೇಲೆ ದದ್ದಿನ ಲಕ್ಷಣಗಳು ಇದ್ದವು. ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರನ್ನು ಪ್ರತ್ಯೇಕ ಕೊಠಡಿಯಲ್ಲಿಟ್ಟು (ಐಸೊಲೇಟ್), ಮಾದರಿಯನ್ನು ಬೆಂಗಳೂರಿನ ವೈದ್ಯಕೀಯ ಕಾಲೇಜು (ಬಿಎಂಸಿ) ಮತ್ತು ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ (ಎನ್‌ಐವಿ) ಕಳುಹಿಸಲಾಗಿತ್ತು. ಬುಧವಾರ ಬಂದ ವರದಿಯಲ್ಲಿ ಅವರಿಗೆ ಮಂಕಿಪಾಕ್ಸ್ ಇರುವುದು ದೃಢಪಟ್ಟಿದೆ.

‘ರೋಗಿಯ ಆರೋಗ್ಯ ಸ್ಥಿರವಾಗಿದ್ದು, ಯಾವುದೇ ಗಂಭೀರ ಸಮಸ್ಯೆಗಳಿಲ್ಲ. ಶೀಘ್ರ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಮಂಕಿಪಾಕ್ಸ್ ಸಾಮಾನ್ಯವಾಗಿ ಅತ್ಯಂತ ನಿಕಟ ಸಂಪರ್ಕದ ಮೂಲಕ ಮಾತ್ರ ಹರಡುತ್ತದೆ. ಜನರು ಆತಂಕ ಪಡುವ ಅಗತ್ಯವಿಲ್ಲ’ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ರೋಗಿಯನ್ನು ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡ ಅವರ ಪತ್ನಿಯನ್ನು ಪ್ರಾಥಮಿಕ ಸಂಪರ್ಕಿತರೆಂದು ಗುರುತಿಸಿದ್ದು, ಕೆಲವು ದಿನಗಳವರೆಗೆ ಪ್ರತ್ಯೇಕ ವಾಸ ಇರುವಂತೆ ಸೂಚಿಸಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಫೈನಾನ್ಸ್ ಕಂಪನಿ ಕಿರುಕುಳ: ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಜಿಲ್ಲೆಯಲ್ಲಿ ಫೈನಾನ್ಸ್ ಕಂಪನಿ ಪ್ರತಿನಿಧಿಗಳಿಂದ ಕಿರುಕುಳ ಹೆಚ್ಚಾಗಿದ್ದು, ಬೆದರಿಕೆ ಬರುತ್ತಿವೆ. ಕಿರುಕುಳ ತಪ್ಪಿಸಿ ಪತಿಯಂದಿರನ್ನು ರಕ್ಷಿಸಿ ನಮ್ಮ ಮಾಂಗಲ್ಯ ಉಳಿಸಬೇಕು’ ಎಂದು ಆಗ್ರಹಿಸಿ ನಗರದಲ್ಲಿ ಮಹಿಳೆಯರು ಪ್ರತಿಭಟನೆ ನಡೆಸಿದರು. ತಮ್ಮ ಮಾಂಗಲ್ಯ ಸರದ ಸಮೇತ ಮನವಿ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳುಹಿಸಿದರು.

ರಾಣೆಬೆನ್ನೂರು ರೈತ ಸಂಘಟನೆ ನೇತೃತ್ವದಲ್ಲಿ ನಗರದ ಅಂಚೆ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಮಹಿಳೆಯರು, ಫೈನಾನ್ಸ್ ಕಂಪನಿಗಳ ವಿರುದ್ಧ ಘೋಷಣೆ ಕೂಗಿದರು. ‘ರಾಣೆಬೆನ್ನೂರು ಮತ್ತು ಸುತ್ತಮುತ್ತಲ ತಾಲ್ಲೂಕಿನಲ್ಲಿ ಹಲವರಿಗೆ ಫೈನಾನ್ಸ್ ಕಂಪನಿಯವರು ಸಾಲ ನೀಡಿದ್ದಾರೆ. ದುಪ್ಪಟ್ಟು ಬಡ್ಡಿ ವಸೂಲಿ ಮಾಡಿದ್ದಾರೆ. ನಿಗದಿತ ಬಡ್ಡಿ ಸಮೇತ ಹಣ ಮರಳಿಸಿದರೆ, ಸಾಲ ಬಾಕಿ ಇರುವುದಾಗಿ ವಾದಿಸುತ್ತಾರೆ. ಮೀಟರ್ ಬಡ್ಡಿ ದಂಧೆ ಮೂಲಕ ನಮ್ಮನ್ನು ಸುಲಿಗೆ ಮಾಡುತ್ತಾರೆ’ ಎಂದು ಮಹಿಳೆಯರು ದೂರಿದರು.

‘ದುಪ್ಪಟ್ಟು ಬಡ್ಡಿ ಸಮೇತ ಸಾಲ ವಾಪಸ್ಸು ನೀಡುವಂತೆ ಒತ್ತಾಯಿಸುತ್ತಿರುವ ಪ್ರತಿನಿಧಿಗಳು, ಮನೆಗಳಿಗೆ ಬೀಗ ಹಾಕಿ ನಮ್ಮನ್ನು ಹೊರಗೆ ಕಳುಹಿಸುತ್ತಾರೆ. ನಮ್ಮ ಪತಿಯಂದಿರಿಗೂ ಜೀವ ಬೆದರಿಕೆಯೊಡ್ಡುತ್ತಾರೆ. ಫೈನಾನ್ಸ್ ಕಿರುಕುಳದಿಂದ ಹಲವರು ಮನೆ ಬಿಟ್ಟು ಹೋಗಿದ್ದಾರೆ. ಕೆಲವರು ಆತ್ಮಹತ್ಯೆಗೂ ಪ್ರಯತ್ನಿಸಿದ್ದಾರೆ’ ಎಂದರು.


‘ಹಾವೇರಿ ಜಿಲ್ಲೆಯಲ್ಲಿ ಫೈನಾನ್ಸ್ ಕಂಪನಿಗಳ ಪ್ರತಿನಿಧಿಗಳಿಂದ ಕಿರುಕುಳ ಹೆಚ್ಚಾಗಿದ್ದು, ಪತಿಯಂದಿರಿಗೆ ಬೆದರಿಕೆಗಳು ಬರುತ್ತಿವೆ’ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ ಮಹಿಳೆಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಂಚೆ ಮೂಲಕ ಪತ್ರ ಕಳುಹಿಸಿದರು

‘ಫೈನಾನ್ಸ್ ಕಂಪನಿಯವರು ಸಾಲಕ್ಕಿಂತಲೂ ಹೆಚ್ಚಿನ ಬಡ್ಡಿ ವಿಧಿಸಿ ಜನರನ್ನು ಸುಲಿಗೆ ಮಾಡುತ್ತಾರೆ. ರೈತರು, ಗೃಹಿಣಿಯರು ಹಾಗೂ ಇತರರು ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ. ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೆ ಖಡಕ್ ಸೂಚನೆ ನೀಡಬೇಕು’ ಎಂದು ಮುಖ್ಯಮಂತ್ರಿಗೆ ಬರೆದಿರುವ ಪತ್ರದಲ್ಲಿ ಪ್ರತಿಭಟನಕಾರರು ಒತ್ತಾಯಿಸಿದ್ದಾರೆ.

ರೈತ ಸಂಘದ ರಾಣೆಬೆನ್ನೂರು ತಾಲ್ಲೂಕು ಘಟಕದ ಅಧ್ಯಕ್ಷ ಹನುಮಂತಪ್ಪ ಕಬ್ಬಾರ, ಶಿವಕುಮಾರ ತಳವಾರ, ರೂಪಾ ಕುಲಕರ್ಣಿ ಪ್ರತಿಭಟನೆಯಲ್ಲಿದ್ದರು.

ನಾಳೆ ಸಭೆ ಕರೆದ ಮುಖ್ಯಮಂತ್ರಿ

ಬೆಂಗಳೂರು: ಮೈಕ್ರೊ ಫೈನಾನ್ಸ್ ಸಂಸ್ಥೆಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ (ಜ.25) ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸಭೆಯನ್ನು ಕರೆದಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೈಕ್ರೊ ಫೈನಾನ್ಸ್ ಸಂಸ್ಥೆಗಳಿಂದ ಸಾರ್ವಜನಿಕರು ಸಾಲ ಪಡೆದು ತೊಂದರೆ ಸಿಲುಕಿದ್ದಾರೆ. ಸಂಸ್ಥೆಗಳ ಪ್ರತಿನಿಧಿಗಳು ಸಾಲ ಮತ್ತು ಬಡ್ಡಿ ವಸೂಲಿಗಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಜನರು ದೂರಿದ್ದಾರೆ. ಕಿರುಕುಳದಿಂದ ಪಾರಾಗಲು ಬಡವರು ತಮ್ಮ ಊರುಗಳನ್ನೇ ತೊರೆದಿರುವ ಬಗ್ಗೆ ವರದಿಗಳು ಪ್ರಕಟವಾಗಿವೆ.

ಈ ಎಲ್ಲ ಬೆಳವಣಿಗೆಗಳ ಬಗ್ಗೆ ಚರ್ಚಿಸಿ, ಪರಿಹಾರ ಸೂಚಿಸಲು ಮುಖ್ಯಮಂತ್ರಿ ಸಭೆ ಕರೆದಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಹಾಗೂ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ (ಎಸ್‌ಎಲ್‌ಬಿಸಿ) ಸಂಯೋಜಕರನ್ನೂ ಸಭೆಗೆ ಆಹ್ವಾನಿಸಲಾಗಿದೆ.

ಸಾಲಬಾಧೆ: ನಾಲ್ವರು ಆತ್ಮಹತ್ಯೆ

ಹುಬ್ಬಳ್ಳಿ: ಸಾಲ ಬಾಧೆ ಮತ್ತು ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ಹೊರವಲಯದ ಘಟಪ್ರಭಾ ನದಿಯ ಯಾದವಾಡ ಸೇತುವೆಯ ಪೈಪ್‌ಗೆ ನೇಣು ಹಾಕಿಕೊಂಡು ಸೋರಗಾವಿ ಗ್ರಾಮದ ಮಲ್ಲಪ್ಪ ಮುರುಗೆಪ್ಪ ಲಾಳಿ (55) ಹಾಗೂ ಮಹಾದೇವಿ ಲಾಳಿ (50) ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

‘ಈ ದಂಪತಿ 10 ವರ್ಷಗಳ ಹಿಂದೆ ಮೆಟಗುಡ್ಡ ಗ್ರಾಮದಲ್ಲಿ ಸಣ್ಣ ಕಿರಾಣಿ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು. ವ್ಯವಹಾರದಲ್ಲಿ ನಷ್ಟವಾಗಿತ್ತು. ಪುತ್ರಿಯರ ಮದುವೆ ಸೇರಿ ವಿವಿಧ ಕಾರಣಕ್ಕೆ ₹15 ಲಕ್ಷಕ್ಕೂ ಅಧಿಕ ಸಾಲ ಮಾಡಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಫೈನಾನ್ಸ್ ಕಂಪನಿ ಸಿಬ್ಬಂದಿ ಕಿರುಕುಳದಿಂದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಶಿರೂರ ಗ್ರಾಮದ ಸರೋಜಾ ಕಿರಬಿ (52) ಬುಧವಾರ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ. ಶಿಗ್ಗಾವಿ ತಾಲ್ಲೂಕಿನ ಬಂಕಾಪುರ ಪಟ್ಟಣದ ಕೊಟ್ಟಿಗೇರಿಯಲ್ಲಿ ನಾಗಪ್ಪ ಪುಟ್ಟಪ್ಪ ಗುಂಜಾಳ (36) ಎಂಬುವರು ಗುರುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ‘ಪುಟ್ಟಪ್ಪ ಅವರು ಕಿರಾಣಿ ಅಂಗಡಿ ನಡೆಸಲು ಫೈನಾನ್ಸ್ ಕಂಪನಿಗಳಲ್ಲಿ ಮತ್ತು ಕೈಗಡವಾಗಿ ₹15 ಲಕ್ಷ ಸಾಲ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಆರು ದಿನಗಳವರೆಗೆ ವೈವಿಧ್ಯಮಯ ಕಾರ್ಯಕ್ರಮ

‘ಜನಜಾಗೃತಿ’ಯ ಸುತ್ತೂರು ಜಾತ್ರೆ 26ರಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ‘ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವನ್ನು ಜ.26ರಿಂದ 31ರವರೆಗೆ ‘ಜನಜಾಗೃತಿ ಯಾತ್ರೆ’ಯನ್ನಾಗಿ ನಡೆಸಲಾಗುವುದು’ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ತಿಳಿಸಿದರು.

‘ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಹಲವು ಸೇವಾ ಚಟುವಟಿಕೆಗಳು ನಡೆಯಲಿವೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘26ರಂದು ಬೆಳಿಗ್ಗೆ ಗಣರಾಜ್ಯೋತ್ಸವ,ಸಂಜೆ 4ಕ್ಕೆ ವಸ್ತು-ಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣೆ ಶಿಬಿರ, ದೋಣಿವಿಹಾರ ಇರಲಿದ್ದು ಕ್ರಮವಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ಡಾ.ಕೆ. ಸುಧಾಕರ್, ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಉದ್ಘಾಟಿಸುವರು. ಸಂಸದ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆ ವಹಿಸುವರು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಆಲಗೂರು–ಬಬಲೇಶ್ವರ ಪಂಚಮಸಾಲಿ ಪೀಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು’ ಎಂದು ತಿಳಿಸಿದರು.


ಸುತ್ತೂರಿನಲ್ಲಿರುವ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃಗದ್ದುಗೆ

‘27ರಂದು ಸಾಮೂಹಿಕ ವಿವಾಹ, ಹಾಲರವಿ ಉತ್ಸವ, 28ರಂದು ರಥೋತ್ಸವ, ವೀರಭದ್ರೇಶ್ವರ ಕೊಂಡೋತ್ಸವ, 29ರಂದು ಮಹದೇಶ್ವರ ಕೊಂಡೋತ್ಸವ, ಲಕ್ಷ-ದೀಪೋತ್ಸವ, 30ರಂದು ತೆಪ್ಪೋತ್ಸವ ಹಾಗೂ 31ರಂದು ಅನ್ನಬ್ರಹ್ಮೋತ್ಸವ ನಡೆಯಲಿದೆ. ವೈವಿಧ್ಯಮಯ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ವಿವರ ನೀಡಿದರು.

‘ಭಜನಾ ಮೇಳ, ಕೃಷಿ ವಿಚಾರಸಂಕಿರಣ, ಚಿತ್ರಸಂತೆ, ಕುಸ್ತಿ ಟೂರ್ನಿ, ದೇಸಿ ಆಟಗಳು, ದನಗಳ ಪರಿಷೆ, ಕಪಿಲಾರತಿ, ನಾಟಕೋತ್ಸವ, ಕೃಷಿ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿದೆ. 20 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ದಿನದ ಮೂರೂ ಹೊತ್ತು ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. 31ರಂದು ಬೆಳಿಗ್ಗೆ 10.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ’ ಎಂದು ತಿಳಿಸಿದರು.

ಬೋಳಂತೂರು: ಇ.ಡಿ ಅಧಿಕಾರಿಗಳ ಸೋಗಿನಲ್ಲಿ ದರೋಡೆ

ಆರೋಪಿ ಸೆರೆ: ಕಾರು, ₹ 5 ಲಕ್ಷ ವಶ

ಪ್ರಜಾವಾಣಿ ವಾರ್ತೆ

ವಿಟ್ಲ (ದಕ್ಷಿಣ ಕನ್ನಡ): ಇಲ್ಲಿಗೆ ಸಮೀಪದ ಕೊಳ್ನಾಡು ಗ್ರಾಮದ ಬೋಳಂತೂರು, ನಾರ್ಶದ ಬೀಡಿ ಉದ್ಯಮಿಯ ಮನೆ ಮೇಲೆ ಈಚೆಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಸೋಗಿನಲ್ಲಿ ದಾಳಿ ನಡೆಸಿ ದರೋಡೆ ಮಾಡಿದ್ದ ಪ್ರಕರಣದ ಒಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೇರಳದ ಕೊಲ್ಲಂ ಜಿಲ್ಲೆಯ ಪೆರಿನಾಡ್, ತ್ರಿಕ್ಕಡವೂರಿನ ಅನಿಲ್ ಫರ್ನಾಂಡಿಸ್ (49) ಬಂಧಿತ ಆರೋಪಿ. ಆತನಿಂದ ಕೇರಳ ನೋಂದಣಿಯ ಎರ್ಟಿಗಾ ಕಾರು ಹಾಗೂ ಕೃತ್ಯ ನಡೆಸುವಾಗ ಆ ಕಾರಿಗೆ ಅಳವಡಿಸಿದ್ದ ನಕಲಿ ನಂಬರ್ ಪ್ಲೇಟ್ ಹಾಗೂ ₹5 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಸ್ವತ್ತುಗಳ ಒಟ್ಟು ಮೌಲ್ಯ ₹11 ಲಕ್ಷ ಆಗಬಹುದು ಎಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



ಆರೋಪಿ ಹಾಗೂ ಆತನಿಂದ ವಶಕ್ಕೆ ಪಡೆದ ಕಾರು

‘ಆರೋಪಿಯನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಆತ ಅಂತರರಾಜ್ಯ ದರೋಡೆಕೋರ ಎಂಬುದು ತನಿಖೆ ವೇಳೆ ಬೆಳಕಿಗೆ ಬಂದಿದೆ. ಆತ ನೀಡಿರುವ ಸುಳಿವಿನ ಆಧಾರದಲ್ಲಿ, ಈ ಪ್ರಕರಣದಲ್ಲಿ ಭಾಗಿಯಾದ ಇತರ ಆರೋಪಿಗಳ ಪತ್ತೆಗೆ ಕ್ರಮ ವಹಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಕನ್ನಡದಲ್ಲಿ ಮಾತನಾಡಿದ್ದ ಆರೋಪಿ: ‘ಅನಿಲ್ ಕೇರಳದವನಾದರೂ ಬೆಂಗಳೂರಿನಲ್ಲಿ ಹೆಚ್ಚು ಒಡನಾಟ ಹೊಂದಿದ್ದ. ಹಾಗಾಗಿ ಕನ್ನಡ ಮಾತನಾಡಲು ಕಲಿತಿದ್ದ. ದರೋಡೆ ನಡೆಸಿದ ತಂಡದಲ್ಲಿದ್ದ ಇತರರು ಮನೆಯವರ ಬಳಿ ಹಿಂದಿಯಲ್ಲಿ ಮಾತನಾಡಿದ್ದರು. ಆದರೆ ಅನಿಲ್ ಮಾತ್ರ ಕನ್ನಡದಲ್ಲಿ ಮಾತನಾಡಿದ್ದ. ಮನೆಯವರಿಗೆ ‘ನಾವು ಇ.ಡಿ ಅಧಿಕಾರಿಗಳು’ ಎಂದು ತಿಳಿಸಿದ್ದು, ಅನಿಲ್’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬಂಟ್ವಾಳ ತಾಲ್ಲೂಕಿನ ಕೊಳ್ನಾಡು ಗ್ರಾಮದ ನಾರ್ಶದ ಬೀಡಿ ಉದ್ಯಮಿ ಸುಲೇಮಾನ್ ಅವರ ಮನೆಗೆ ಜ. 3ರಂದು ರಾತ್ರಿ ನುಗ್ಗಿದ್ದ ಆರು ಜನರು ತಮ್ಮನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಎಂದು ಪರಿಚಯಿಸಿಕೊಂಡಿದ್ದರು. ಉದ್ಯಮಿ ವಿರುದ್ಧ ಹಣಕಾಸು ವಂಚನೆ ಆರೋಪವಿದೆ ಎಂದು ನಂಬಿಸಿ, ಅವರ ಮನೆಯ ಶೋಧ ನಡೆಸಿದ್ದರು. ಈ ವೇಳೆ ಸಿಕ್ಕಿದ್ದ ಸುಮಾರು ₹30 ಲಕ್ಷ ನಗದನ್ನು ದರೋಡೆ ಮಾಡಿ ಪರಾರಿಯಾಗಿದ್ದರು. ಅವರ ನಡವಳಿಕೆ ಬಗ್ಗೆ ಸಂದೇಹ ಬಂದಿದ್ದರಿಂದ ಉದ್ಯಮಿಯ ಮನೆಯವರು ಪೊಲೀಸರಿಗೆ ದೂರು ನೀಡಿದ್ದರು. ಈ ಸಂಬಂಧ ವಿಟ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ಅವರು ಈ ಪ್ರಕರಣದ ಆರೋಪಿಗಳ ಪತ್ತೆಗಾಗಿ ನಾಲ್ಕು ವಿಶೇಷ ತಂಡಗಳನ್ನು ರಚಿಸಿದ್ದರು.

ಸಿನಿಮಾ ಪುರವಣಿ



ರಿಷಿ

ಹೆಚ್ಚು ಪ್ರೇಕ್ಷಕರನ್ನು ತಲುಪುವ ಗುರಿ

‘ಆಪರೇಷನ್ ಅಲಮೇಲಮ್ಮ’, ‘ಕವಲುದಾರಿ’ ಖ್ಯಾತಿಯ ನಟ ರಿಷಿ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವೊಂದರ ಮೂಲಕ ಪೊಲೀಸ್ ಅಧಿಕಾರಿಯಾಗಿ ತೆರೆ ಮೇಲೆ ಬರುತ್ತಿದ್ದಾರೆ. ರಿಷಿ ನಟನೆಯ ‘ರುದ್ರ ಗರುಡ ಪುರಾಣ’ ಇಂದು(ಜ.24) ರಿಲೀಸ್ ಆಗುತ್ತಿದೆ. ತೆಲುಗಿನ ‘ಶೈತಾನ್’ ಎಂಬ ವೆಬ್‌ಸಿರೀಸ್‌ನಲ್ಲಿ ರಗಡ್ ಆಗಿ ಕಾಣಿಸಿಕೊಂಡ ಬಳಿಕ ರಿಷಿ ತೆಲುಗಿನಲ್ಲೂ ಹೀರೊ ಆಗಿ ಕಾಣಿಸಿಕೊಳ್ಳಲಿದ್ದಾರೆ. ರಿಷಿ ಸಿನಿಪಯಣದ ಕುರಿತು ಮಾತುಕತೆ...

ಅಭಿಲಾಷ್ ಪಿ.ಎಸ್.

- **‘ರುದ್ರ ಗರುಡ ಪುರಾಣ’ ಒಪ್ಪಿಕೊಂಡಿದ್ದಕ್ಕೆ ಕಾರಣ...**

ಈ ಸಿನಿಮಾ ಆರಂಭವಾಗಿ ಒಂದು ವರ್ಷ ಉರುಳಿತು. ನಿರ್ದೇಶಕ ನಂದೀಶ್ ಒಂದೊಳ್ಳೆ ಸಿನಿಮಾ ಮಾಡುತ್ತಾರೆ ಎನ್ನುವ ನಂಬಿಕೆ ಮೇಲೆಯೇ ಈ ಪ್ರಾಜೆಕ್ಟ್ ಒಪ್ಪಿಕೊಂಡಿದ್ದೆ. ಕಥೆಯನ್ನು ಪ್ರಸ್ತುತಪಡಿಸಿದಾಗಲೇ ನಾನು ಈ ಪಾತ್ರ ಮಾಡಬೇಕು ಎಂದು ನಿರ್ಧರಿಸಿದ್ದೆ. ಪ್ರೇಕ್ಷಕನ ದೃಷ್ಟಿಕೋನದಿಂದಲೂ ಇದು ಕುತೂಹಲಕಾರಿ ಕಥೆಯಾಗಿ ಕಂಡಿತು. ‘ಕವಲುದಾರಿ’ಯಲ್ಲಿ ನಾನು ಟ್ರಾಫಿಕ್ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆ. ಈ ಸಿನಿಮಾದಲ್ಲೂ ಪೊಲೀಸ್ ಅಧಿಕಾರಿಯಾಗಿದ್ದೇನೆ. ಈ ಎರಡೂ ಸಿನಿಮಾಗಳ ಸ್ಟೋರಿ ಲೈನ್ ಬಹಳ ತೀವ್ರವಾಗಿದೆ. ನೋಡುಗರನ್ನು ತಲ್ಲೀನಗೊಳಿಸುವ ಶಕ್ತಿ ಇವುಗಳಲ್ಲಿ ಇದೆ. ಒಂದು ಕಥೆಯನ್ನು ಹೇಗೆ ಕೊಂಡೊಯ್ಯಬೇಕು ಎನ್ನುವ ದೃಷ್ಟಿಕೋನ ನಿರ್ದೇಶಕನಿಂದ ನಿರ್ದೇಶಕನಿಗೆ ಬದಲಾಗುತ್ತದೆ. ಈ ಸಿನಿಮಾದಿಂದ ಒಂದು ಭಿನ್ನ ಅನುಭವ ಜನರಿಗೆ ಸಿಗುತ್ತದೆ. ಇದೂ ಪೊಲೀಸ್ ಜಗತ್ತಿನಲ್ಲಿ ಸುತ್ತುವ ಕಥೆಯಾಗಿರುವುದರಿಂದ ಸಾಮ್ಯತೆಗಳು ಮೂಡುವುದು ಸಹಜ. ನನ್ನ ‘ಕವಲುದಾರಿ’ ಪಾತ್ರದ ನಡವಳಿಕೆ ಹಾಗೂ ಈ ಸಿನಿಮಾದ ಪಾತ್ರದ ನಡವಳಿಕೆ ಭಿನ್ನವಾಗಿದೆ. ಕಥೆಯೂ ವಿಭಿನ್ನವಾಗಿದೆ.

- **ಚಿತ್ರದಲ್ಲಿನ ನಿಮ್ಮ ಪಾತ್ರ ಹಾಗೂ ಜಾನರ್ ಬಗ್ಗೆ..**

‘ರುದ್ರ’ ಎನ್ನುವುದು ನನ್ನ ಪಾತ್ರದ ಹೆಸರು. ಆತನದ್ದು ಹೊಸ ರಕ್ತ. ಅವನೊಳಗೆ ವೈಯಕ್ತಿಕ ಸಂಘರ್ಷಗಳೂ ಇವೆ. ಜೊತೆಗೆ ಒಂದು ರೋಚಕ ಪ್ರಕರಣ ಆತನ ಕೈಗೆ ಸಿಗುತ್ತದೆ. ಮುಂದೆ ಏನಾಗುತ್ತದೆ ಎನ್ನುವ ಕುತೂಹಲ ಹುಟ್ಟುತ್ತದೆ. ಈ ಸಿನಿಮಾ ಒಂದು ಸಸ್ಪೆನ್ಸ್ ಆ್ಯಕ್ಷನ್ ಡ್ರಾಮಾ. ಡ್ರಾಮಾ ಏತಕ್ಕೆ ಎಂದರೆ ಪ್ರತಿ ಪಾತ್ರವನ್ನು ಸೂಕ್ಷ್ಮವಾಗಿ ಹೆಣೆದಿದ್ದಾರೆ. ಆ ಪಾತ್ರದ ಜಗತ್ತನ್ನು ತೋರಿಸುತ್ತೇವೆ. ಹಲವು ಪದರಗಳು ಸಿನಿಮಾದೊಳಗಿವೆ. ಈ ರೀತಿ ಮಾಡಿದಾಗ ಪ್ರೇಕ್ಷಕನೂ ಪಾತ್ರದೊಂದಿಗೆ ಹೆಜ್ಜೆ ಹಾಕುತ್ತಾನೆ. ‘ರುದ್ರ’ನ ಕಷ್ಟ, ಆತನಿಗಿರುವ ಕುತೂಹಲ, ಯೋಚನೆಗಳೊಂದಿಗೆ ಪ್ರೇಕ್ಷಕರೂ ಒಂದಾಗುತ್ತಾರೆ. ತಮಿಳಿನ ಸಿನಿಮಾ ‘ಡೈರಿ’ಯಲ್ಲಿ ಬರುವ ಒಂದು ದೃಶ್ಯಕ್ಕೂ ಈ ಸಿನಿಮಾದ ಒಂದು ದೃಶ್ಯಕ್ಕೆ ಸಾಮ್ಯತೆ ಇದೆ. ಆದರೆ ಇದು ರಿಮೇಕ್ ಅಲ್ಲ. ಈಗಿನ ಕಾಲಘಟ್ಟದಲ್ಲಿ ರಿಮೇಕ್ ಮಾಡುವ ಆಸಕ್ತಿಯೂ ನನಗೆ ಇಲ್ಲ. ರಿಮೇಕ್‌ನಿಂದ ದೂರ ಉಳಿಯುತ್ತಿದ್ದೇನೆ.

- **ಪಾತ್ರಗಳ ಆಯ್ಕೆಯಲ್ಲಿ ರಿಷಿ ಒಂದು ಚೌಕಟ್ಟಿನಲ್ಲಿ ಇದ್ದಾರೆಯೇ?**

ನಾನು ಒಂದೊಂದೇ ಹೆಜ್ಜೆ ಇಡುತ್ತಿದ್ದೇನೆ. ಕನ್ನಡದಲ್ಲಿ ಜನರು ನನ್ನನ್ನು ನಾಯಕನನ್ನಾಗಿ ಒಪ್ಪಿದ್ದಾರೆ. ಹೀಗಿರುವಾಗ ಅದಕ್ಕಿಂತ ಚಿಕ್ಕಪಾತ್ರಗಳನ್ನು ಮಾಡುವ ಆಸಕ್ತಿ ನನಗಿಲ್ಲ. ಜನರು ಒಬ್ಬನನ್ನು ಹೀರೊ ಆಗಿ ಒಪ್ಪುತ್ತಾರೆ ಇಲ್ಲವೇ ಒಪ್ಪುವುದಿಲ್ಲ. ಹೀಗಿರುವಾಗ ಪಾತ್ರಗಳ ಆಯ್ಕೆ ಬಗ್ಗೆ ಬಹಳ ಜಾಗರೂಕತೆಯಿಂದ ಇರಬೇಕು. ಬೇರೆ ಪಾತ್ರಗಳಲ್ಲಿ ಕಾಣಿಸಿಕೊಂಡರೆ ಜನರಿಗೆ ಗೊಂದಲ ಉಂಟಾಗುತ್ತದೆ. ಹೀಗೆ ಹೇಳಿದರೂ ನಾನು ಭಿನ್ನವಾದ ಯಾವುದೇ ಪಾತ್ರಗಳನ್ನು ತಿರಸ್ಕರಿಸಿಲ್ಲ. ಕನ್ನಡದ ನಿರ್ದೇಶಕರಿಂದ ಆ ರೀತಿಯ ಆಫರ್‌ಗಳು ಬಂದಿಲ್ಲ. ‘ಶೈತಾನ್’ ಬಳಿಕ ತೆಲುಗಿನಲ್ಲಿ ಇಂತಹ ಆಫರ್‌ಗಳು ಬರುತ್ತಿವೆ. ನನ್ನ ಕನ್ನಡದ ಇಮೇಜ್ ನೋಡದೆ ಅವರು ಪಾತ್ರಗಳನ್ನು ಬರೆಯುತ್ತಿದ್ದಾರೆ. ನನ್ನನ್ನು ಓರ್ವ ನಟನಾಗಿ ನೋಡಿಯೇ ಕರೆಗಳು ಬರುತ್ತಿವೆ. ಒಂದೊಂದು ಇಂಡಸ್ಟ್ರಿಯಲ್ಲಿ ಒಬ್ಬೊಬ್ಬ ನಟನನ್ನು ನೋಡುವ ರೀತಿ ಬೇರೆ ಬೇರೆ ಇರುತ್ತದೆ. ನನ್ನ ಗುರಿ ಇರುವುದು ಒಂದೇ. ನಮ್ಮ ನಾಡಿನ ಸಿನಿಮಾಗಳನ್ನು ಅಲ್ಲಿಗೆ ಕೊಂಡೊಯ್ಯಬೇಕು, ಹೆಚ್ಚು ಪ್ರೇಕ್ಷಕರಿಗೆ ತಲುಪಿಸಬೇಕು ಎನ್ನುವುದು. ನನ್ನ ನಟನೆಯ ಸಾಮರ್ಥ್ಯದ ರುಚಿಯನ್ನು ಅಲ್ಲಿಯವರಿಗೆ ನೀಡುತ್ತಿದ್ದೇನೆ. ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇನೆ. ಹೀಗಾಗಿ ಬಾಲಯ್ಯ ಅವರ ‘ಡಾಕು ಮಹಾರಾಜ್’ ಸಿನಿಮಾದಲ್ಲಿ ಖಳನಟನಾಗಿ ನಟಿಸಿದೆ. ಈ ಸಿನಿಮಾಗೆ ಸಿಕ್ಕಿರುವ ಪ್ರತಿಕ್ರಿಯೆಯಿಂದ ಖುಷಿ ಇದೆ. ನೆಗಟಿವ್ ಶೇಡ್ ಮಾಡಬೇಕೋ ಬೇಡವೋ ಎಂಬ ಹಿಂಜರಿಕೆ ಮೊದಲು ಬಹಳ ಇತ್ತು. ನಂದಮೂರಿ ಬಾಲಕೃಷ್ಣ ಅವರೊಂದಿಗೆ ತೆರೆಹಂಚಿಕೊಳ್ಳುವ ಅವಕಾಶ ಖುಷಿ ನೀಡಿತು.

ಹೀರೊ ಆಗಿಯೇ ಇರಬೇಕು ಅಥವಾ ಖಳನಟನಾಗಿ ನಟಿಸಬೇಕು ಎಂಬ ಚೌಕಟ್ಟು ನನಗಿಲ್ಲ. ಜಾಸ್ತಿ ಪ್ರೇಕ್ಷಕರನ್ನು ತಲುಪಬೇಕು ಎನ್ನುವುದು ಗುರಿ. ನಮ್ಮ ಮಣ್ಣಿನಲ್ಲಿ ಮಾಡಿದ ಸಿನಿಮಾವನ್ನು ದೇಶದಾದ್ಯಂತ ಕೊಂಡೊಯ್ಯಬೇಕು ಎನ್ನುವ ಕಿಚ್ಚು ಇದೆ. ನಟನಾಗಿ ಗುರುತಿಸಿಕೊಂಡು ಸಿನಿಮಾ ಮಾಡಿದಾಗ ಸಿನಿಮಾಗಳು ತಾನಾಗಿಯೇ ಪ್ಯಾನ್ ಇಂಡಿಯಾ ಆಗುತ್ತವೆ.

- **ರಿಷಿ ಮುಂದಿನ ಪ್ರಾಜೆಕ್ಟ್‌ಗಳು..**

ಸದ್ಯ ಕನ್ನಡದ ಮತ್ತೊಂದು ಸಿನಿಮಾದ ಶೂಟಿಂಗ್ ಶೇ 90ರಷ್ಟು ಪೂರ್ಣಗೊಂಡಿದೆ. ಇದು ಇನ್ನಷ್ಟೇ ಘೋಷಣೆಯಾಗಬೇಕಿದೆ. ಇದು ಮುಗಿದ ಬಳಿಕ ತೆಲುಗಿನಲ್ಲಿ ಎರಡು ಸಿನಿಮಾಗಳನ್ನು ಮಾಡುತ್ತಿದ್ದೇನೆ. ಇದರಲ್ಲಿ ಒಂದು ಸಿನಿಮಾದಲ್ಲಿ ಇಬ್ಬರು ಹೀರೊಗಳಿದ್ದು ಅದರಲ್ಲಿ ನಾನು ಒಬ್ಬ. ಈ ಎರಡೂ ಪ್ರಾಜೆಕ್ಟ್ ಪೂರ್ಣಗೊಳ್ಳುವುದಕ್ಕೆ ಏಪ್ರಿಲ್ ಆಗಬಹುದು. ಕಥೆಗಳನ್ನು ಕೇಳುತ್ತಿದ್ದು ಮೇ ಬಳಿಕ ಹೊಸ ಸಿನಿಮಾಗಳನ್ನು ಕೈಗೆತ್ತಿಕೊಳ್ಳಲಿದ್ದೇನೆ.

ಯುವ ರಾಜ್‌ಕುಮಾರ್‌ಗೆ ಸಂಜನಾ ಜೋಡಿ



ಸಂಜನಾ

‘ರತ್ನನ್ ಪ್ರಪಂಚ’ ಖ್ಯಾತಿಯ ರೋಹಿತ್ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್ ನಟನೆಯ ‘ಎಕ್ಕ’ ಸಿನಿಮಾ ಸದ್ಯ ಚಿತ್ರೀಕರಣ ಹಂತದಲ್ಲಿದೆ. ಸಿನಿಮಾ ಜೂನ್ 6ರಂದು ತೆರೆಕಾಣಲಿದ್ದು, ಚಿತ್ರದ ಎರಡನೇ ನಾಯಕಿಯನ್ನು ಚಿತ್ರತಂಡ ಪರಿಚಯಿಸಿದೆ.

ಭೂಗತ ಜಗತ್ತಿನ ಕಥೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ಸಂಪದ ನಟಿಸುತ್ತಿದ್ದಾರೆ. ಮತ್ತೋರ್ವ ನಾಯಕಿಯಾಗಿ ‘ಸಲಗ’ ಸಿನಿಮಾ ಖ್ಯಾತಿಯ ಸಂಜನಾ ಆನಂದ್ ತಂಡ ಸೇರಿಕೊಂಡಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೋಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾಗೆ ಇತ್ತೀಚೆಗೆ ಪುನೀತ್ ರುದ್ರನಾಗ್ ಪ್ರವೇಶಿಸಿದ್ದರು. ‘ಕೆಮಿಸ್ಟ್ರಿ ಆಫ್ ಕರಿಯಪ್ಪ’ ಚಿತ್ರದ ಮೂಲಕ ಚಿತ್ರರಂಗಕ್ಕೆ ಮೊದಲ ಹೆಜ್ಜೆ ಇಟ್ಟಿದ್ದ ಸಂಜನಾ ನಂತರ ‘ದುನಿಯಾ’ ವಿಜಯ್ ಜೊತೆಗೆ ‘ಸಲಗ’ ಚಿತ್ರದಲ್ಲಿ ನಟಿಸಿದ್ದರು. ದಿನಕರ್ ತೂಗುದೀಪ ನಿರ್ದೇಶನದ ‘ರಾಯಲ್’ ಚಿತ್ರದಲ್ಲೂ ಸಂಜನಾ ನಾಯಕಿಯಾಗಿದ್ದಾರೆ. ‘ಎಕ್ಕ’ ರಾ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾವಾಗಿದ್ದು ಚಿತ್ರದಲ್ಲಿ ಅತುಲ್ ಕುಲಕರ್ಣಿ, ಶ್ರುತಿ ಕೃಷ್ಣ ಮತ್ತು ರಾಹುಲ್ ದೇವ್ ಶೆಟ್ಟಿ ಇದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ ನಿರ್ದೇಶನವಿದ್ದು, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ದೀಪು ಎಸ್. ಕುಮಾರ್ ಸಂಕಲನವಿದೆ.

ಮೂರು ಸಿನಿಮಾಗಳು ತೆರೆಗೆ

ಚಂದನವನದ ತೆರೆಗಳಲ್ಲಿ ಇಂದು(ಜ.24) ಮೂರು ಸಿನಿಮಾಗಳು ತೆರೆಕಾಣುತ್ತಿವೆ.

ಫಾರೆಸ್ಟ್: ಅಡ್ವೆಂಚರ್ ಕಾಮಿಡಿ ಜಾನರ್‌ನ ಚಿತ್ರ ಇದಾಗಿದ್ದು, ರಂಗಾಯಣ ರಘು, ಚಿಕ್ಕಣ್ಣ, ಅನೀಶ್ ತೇಜೇಶ್ವರ್, ಗುರುನಂದನ್, ಅರ್ಚನಾ ಕೊಟ್ಟಿಗೆ ಮುಖ್ಯಭೂಮಿಕೆಯಲ್ಲಿದ್ದಾರೆ. ಎನ್‌ಎಂಕೆ ಸಿನಿಮಾಸ್ ಲಾಂಛನದಲ್ಲಿ ಎನ್.ಎಂ. ಕಾಂತರಾಜ್ ಅವರು ನಿರ್ಮಿಸಿರುವ ಈ ಚಿತ್ರವನ್ನು ಚಂದ್ರಮೋಹನ್ ನಿರ್ದೇಶಿಸಿದ್ದಾರೆ. ಐದು ಪಾತ್ರಗಳ ಸುತ್ತ ಈ ಚಿತ್ರದ ಕಥೆಯಿದ್ದು, ಶರಣ್ಯ ಶೆಟ್ಟಿ ಅವರೂ ತಾರಾಬಳಗದಲ್ಲಿದ್ದಾರೆ. ಮಡಿಕೇರಿಯ ಸಂಪಾಜೆ ಕಾಡಿನಲ್ಲಿ ಈ ಚಿತ್ರದ ಚಿತ್ರೀಕರಣ ನಡೆದಿದೆ. ಮಲೆ ಮಹದೇಶ್ವರ ಬೆಟ್ಟ, ಬೆಂಗಳೂರಿನಲ್ಲೂ ಚಿತ್ರೀಕರಣವಾಗಿದೆ. ಕಾಡಿನಲ್ಲಿರುವ ಚಿನ್ನದ ನಿಧಿಯನ್ನು ಹುಡುಕುವ ಕಥೆ ಇದಾಗಿದೆ. ಮಾಟ ಮಂತ್ರದ ಅಂಶಗಳೂ ಸಿನಿಮಾದಲ್ಲಿದೆ. ಮಂತ್ರವಾದಿಯಾಗಿ ರಂಗಾಯಣ ರಘು ನಟಿಸಿದ್ದಾರೆ. ಚಿತ್ರಕ್ಕೆ ಚಂದ್ರಮೋಹನ್, ಸತ್ಯ ಶೌರ್ಯ ಸಾಗರ್ ಕಥೆ, ಚಿತ್ರಕಥೆ ಬರೆದಿದ್ದಾರೆ.

ರಾಯಲ್: ಜಯಣ್ಣ ಕಂಬೈನ್ಸ್ ಬ್ಯಾನರ್‌ನಡಿ ಜಯಣ್ಣ ಮತ್ತು ಭೋಗೇಂದ್ರ ಜೊತೆಯಾಗಿ ನಿರ್ಮಿಸಿರುವ, ದಿನಕರ್ ತೂಗುದೀಪ ನಿರ್ದೇಶನದ ಚಿತ್ರ ಇದಾಗಿದೆ. ‘ಕಿಸ್’ ಚಿತ್ರದ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ನಟ ವಿರಾಟ್ ಈ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದು, ‘ಸಲಗ’ ಖ್ಯಾತಿಯ ಸಂಜನಾ ನಾಯಕಿಯಾಗಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ. ಬೆಂಗಳೂರು, ಮೈಸೂರು, ಮಂಗಳೂರು, ಗೋವಾ ಮುಂತಾದೆಡೆ ಚಿತ್ರೀಕರಣ ನಡೆದಿದೆ. ರಘು ಮುಖರ್ಜಿ, ಛಾಯಾ ಸಿಂಗ್, ಅಚ್ಯುತ್ ಕುಮಾರ್, ರಂಗಾಯಣ ರಘು, ಪ್ರಮೋದ್ ಶೆಟ್ಟಿ, ರವಿ ಭಟ್, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಸಂಕೇತ್ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ, ಕೆ.ಎಂ. ಪ್ರಕಾಶ್ ಸಂಕಲನ, ಮೋಹನ್ ಬಿ. ಕೆರೆ ಕಲಾ ನಿರ್ದೇಶನ, ರವಿ ವರ್ಮ ಸಾಹಸ ನಿರ್ದೇಶನವಿದೆ.

ರುದ್ರ ಗರುಡ ಪುರಾಣ: ನಟ ರಿಷಿ ಅಭಿನಯದ ಚಿತ್ರವಿದು. ಸಿನಿಮಾದಲ್ಲಿ ರಿಷಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಿಯಾಂಕ ಕುಮಾರ್ ಚಿತ್ರದ ನಾಯಕಿ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ಲೋಹಿತ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಈ ಹಿಂದೆ ‘ಡಿಯರ್ ವಿಕ್ರಮ್’ ಚಿತ್ರವನ್ನು ನಿರ್ದೇಶಿಸಿದ್ದ ಕೆ.ಎಸ್ ನಂದೀಶ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ‘25 ವರ್ಷಗಳ ಹಿಂದೆ ಬಸ್ಸೊಂದು ಅಪಘಾತವಾಗಿ ಅದರಲ್ಲಿದ್ದ ಎಲ್ಲರೂ ಸಾವನ್ನಪ್ಪಿರುತ್ತಾರೆ. ಆದರೆ ಅದೇ ಬಸ್ಸು ಮತ್ತು ಅದರಲ್ಲಿದ್ದ ಜನಗಳು ಮತ್ತೆ ವಾಪಸ್ ಬರುವ ರೋಚಕ ತಿರುವುಗಳನ್ನು ಅನ್ವೇಷಣೆ ಮಾಡುವ ಚಿತ್ರವಿದು’ ಎಂದಿದ್ದಾರೆ ನಂದೀಶ್.



ವಿರಾಟ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಯಾವ ಜಾಗಕ್ಕೆ ನೀವು ಹೋದರೆ ಜನ ಹರುಷಗೊಳ್ಳುವುದಿಲ್ಲವೋ ಎಲ್ಲಿ ಜನರ ಕಣ್ಣುಗಳಲ್ಲಿ ನಿಮ್ಮ ಬಗ್ಗೆ ಪ್ರೇಮ ಮತ್ತು ಸ್ನೇಹ ಕಾಣುವುದಿಲ್ಲವೋ ಅಲ್ಲಿಗೆ ಎಂದಿಗೂ ಹೋಗದಿರಿ.

–ಸಂತ ತುಳಸೀದಾಸ

ಉಚಿತ ಕೊಡುಗೆಗಳ ಪೈಪೋಟಿ ಆರೋಗ್ಯಕರ ರಾಜಕಾರಣದ ಲಕ್ಷಣವಲ್ಲ

ದೆಹಲಿ ವಿಧಾನಸಭೆ ಚುನಾವಣಾ ಅಖಾಡವು ವಿವಿಧ ಪಕ್ಷಗಳ ನಡುವೆ ಮತದಾರರಿಗೆ ಉಚಿತ ಕೊಡುಗೆಗಳನ್ನು ಘೋಷಿಸುವ ಸ್ಪರ್ಧೆಯಾಗಿ ಮಾರ್ಪಟ್ಟಿದೆ. ನಗದು, ಉಚಿತವಾಗಿ ವಸ್ತುಗಳು ಮತ್ತು ಸೇವೆಗಳು ಇದರಲ್ಲಿ ಸೇರಿವೆ. ಪಕ್ಷಗಳ ಪ್ರಣಾಳಿಕೆಗಳು ಭವಿಷ್ಯದ ಯೋಜನೆಗಳು ಹಾಗೂ ನೀತಿಗಳನ್ನು ವಿವರಿಸುವ ದಾಖಲೆಯಾಗಿ ಈಗ ಉಳಿದಿಲ್ಲ, ಬದಲಿಗೆ ಪ್ರಾಮಿಸರಿ ನೋಟ್ ರೀತಿಯಲ್ಲಿ ಆಗಿವೆ. ಒಂದು ಬಾರಿ ಹಲವು ಭರವಸೆಗಳನ್ನು ನೀಡಿದ ಬಳಿಕ, ಉಳಿದ ಪಕ್ಷಗಳು ಯಾವ ಭರವಸೆ ನೀಡಿವೆ ಎಂಬುದನ್ನು ನೋಡಿಕೊಂಡು ಪೂರಕ ಕೊಡುಗೆಗಳ ಭರವಸೆಗಳನ್ನೂ ನೀಡಲಾಗಿದೆ. ಆಮ್ ಆದ್ಮಿ ಪಕ್ಷವು ಒಂದು ದಶಕದ ಹಿಂದೆ ಉಚಿತ ನೀರು ಮತ್ತು ವಿದ್ಯುತ್‌ನ ಭರವಸೆಯನ್ನು ನೀಡುವ ಮೂಲಕ ಈ ಪ್ರವೃತ್ತಿಯನ್ನು ಆರಂಭಿಸಿತು. ಈಗ, ತನ್ನ ಭರವಸೆಗಳನ್ನು ಇನ್ನೂ ಒಂದು ಹಂತ ಮುಂದಕ್ಕೆ ಒಯ್ದಿದೆ. ನಿರುದ್ಯೋಗಿ ಮಹಿಳೆಯರಿಗೆ ತಿಂಗಳಿಗೆ ₹2,100, ಹಿಂದೂ ಮತ್ತು ಸಿಖ್ ಅರ್ಚಕರಿಗೆ ತಿಂಗಳಿಗೆ ₹18,000, ವಿದೇಶದಲ್ಲಿ ವಿದ್ಯಾಭ್ಯಾಸ ಪಡೆಯಲು ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಮತ್ತು ಇತರ ಸೌಲಭ್ಯಗಳು ಇದರಲ್ಲಿ ಸೇರಿವೆ. ಬಳಿಕ, ಹೆಚ್ಚುವರಿ ಭರವಸೆಗಳನ್ನೂ ನೀಡಲಾಗಿದೆ. ಬಡ ಮಹಿಳೆಯರಿಗೆ ತಿಂಗಳಿಗೆ ₹2,500, ಗರ್ಭಿಣಿಯರಿಗೆ ₹21,000, ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ಮತ್ತು ಇತರ ಸೌಲಭ್ಯಗಳು ಬಿಜೆಪಿಯ ಭರವಸೆಗಳಲ್ಲಿ ಒಳಗೊಂಡಿವೆ. ಕಾಂಗ್ರೆಸ್ ಪಕ್ಷದ ಭರವಸೆಗಳು ಕೂಡ ಸ್ಪರ್ಧಾತ್ಮಕವಾಗಿಯೇ ಇವೆ.



ಚುನಾವಣೆಯ ಸಂದರ್ಭದಲ್ಲಿ ಕೊಟ್ಟ ಉಚಿತ ಕೊಡುಗೆಗಳ ಭರವಸೆಯನ್ನು ಜಾರಿ ಮಾಡಿದ್ದರಿಂದ ಹಲವು ರಾಜ್ಯಗಳು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿರುವುದು ಇತರರಿಗೆ ಪಾಠವಾಗಬೇಕು

ಕುಕ್ಕರ್ ನೀಡುವ ಭರವಸೆ, ಕೂಪನ್ ಹಂಚಿಕೆ ಮತ್ತು ಇಂತಹ ಇತರ ಉಡುಗೊರೆಗಳು ಈ ಹಿಂದೆಯೂ ಚುನಾವಣಾ ಪ್ರಚಾರದ ಭಾಗವಾಗಿದ್ದವು. ಮತದಾನದ ಮುನ್ನಾದಿನ ದೊಡ್ಡ ಮಟ್ಟದಲ್ಲಿ ಹಣ ಹಂಚುವಿಕೆ ಸಾಮಾನ್ಯವಾಗಿತ್ತು. ಆದರೆ, ಈಗಿನ ವ್ಯವಸ್ಥೆಯು ಹೆಚ್ಚು ಚಾತುರ್ಯದಿಂದ ಕೂಡಿದೆ. ಹಣ ಹಂಚುವಿಕೆಯನ್ನು ಕಾನೂನುಬದ್ಧಗೊಳಿಸಲಾಗಿದೆ ಮತ್ತು ವ್ಯವಸ್ಥಿತ ಮಾಡಲಾಗಿದೆ. ಹರಿಯಾಣ ಮತ್ತು ಮಹಾರಾಷ್ಟ್ರದಲ್ಲಿ ಬಿಜೆಪಿ ಗೆಲುವು, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ಉಚಿತ ಕೊಡುಗೆಗಳ ಭರವಸೆ ನೀಡಿಕೆ ಈ ಪ್ರಮಾಣದಲ್ಲಿ ಹೆಚ್ಚಲು ಪ್ರಮುಖ ಕಾರಣ. ಉಚಿತ ಕೊಡುಗೆಗಳ ವಿಚಾರದಲ್ಲಿ ವಿರೋಧ ಪಕ್ಷಗಳಿಗಿಂತ ಆಡಳಿತ ಪಕ್ಷಕ್ಕೆ ಅನುಕೂಲ ಹೆಚ್ಚು. ಏಕೆಂದರೆ, ಚುನಾವಣೆ ಘೋಷಣೆಗೂ ಮುನ್ನವೇ ಆಡಳಿತ ಪಕ್ಷವು ಉಚಿತ ಕೊಡುಗೆಗಳನ್ನು ವಿತರಿಸಲು ಆರಂಭಿಸಬಹುದು. ಮಹಾರಾಷ್ಟ್ರ ಇದಕ್ಕೆ ತೀರಾ ಇತ್ತೀಚಿನ ಉದಾಹರಣೆ. ಕಲ್ಯಾಣ ಕಾರ್ಯಕ್ರಮಗಳ ಹೆಸರಿನಲ್ಲಿ ಉಚಿತ ಕೊಡುಗೆಗಳನ್ನು ಹಂಚಲಾಗುತ್ತಿದೆಯಾದರೂ ವಾಸ್ತವದಲ್ಲಿ ಇದು ಮತದಾರರಿಗೆ ನೀಡುವ ಲಂಚವೇ ಆಗಿದೆ. ದುರ್ಬಲ ವರ್ಗಗಳ ಜನರ ಕೈಗೆ ಹಣ ದೊರೆಯುವಂತೆ ಮಾಡುವ ಯೋಜನೆಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯ ಇದೆ. ಆದರೆ, ಕೊಡುಗೆಗಳನ್ನು ನೀಡಲು ಯಾವುದೇ ಮಿತಿ ಇಲ್ಲದೆ ಪೈಪೋಟಿ ಆರಂಭವಾದರೆ ಅದು ಚುನಾವಣೆಯಲ್ಲಿನ ನ್ಯಾಯಸಮ್ಮತತೆಯ ಪರೀಕ್ಷೆಯೇ ಆಗುತ್ತದೆ. ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಆಗುತ್ತದೆ, ರಾಜಕಾರಣ ಮತ್ತು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ ಉಂಟು ಮಾಡುತ್ತದೆ.

ಚುನಾವಣೆಗೆ ಮೊದಲು ಮತ್ತು ನಂತರ ವ್ಯಕ್ತಿಗಳು ಅಥವಾ ಗುಂಪುಗಳಿಗೆ ನೀಡುವ ಹಣವು ಸರ್ಕಾರದ ಬೊಕ್ಕಸದಿಂದಲೇ ಬರುತ್ತದೆ. ತೆರಿಗೆ ಮತ್ತು ಇತರ ರೀತಿಯ ಪಾವತಿಗಳ ಮೂಲಕ ಜನರೇ ಬೊಕ್ಕಸವನ್ನು ತುಂಬಿಸುತ್ತಾರೆ ಮತ್ತು ಅದಕ್ಕೆ ಅವರೇ ಮಾಲೀಕರು. ಆದರೆ, ಪಕ್ಷಗಳು ತಮ್ಮ ರಾಜಕೀಯ ಪ್ರಯೋಜನಕ್ಕಾಗಿ ಈ ಹಣವನ್ನು ಬಳಸಿಕೊಳ್ಳುತ್ತಿವೆ. ಈ ಉಚಿತ ಕೊಡುಗೆಗಳು ಜನರಿಗೆ ತಮ್ಮ ಕೊಡುಗೆ ಎಂದೇ ಪಕ್ಷಗಳು ಹೇಳಿಕೊಳ್ಳುತ್ತವೆ. ಉಚಿತವಾಗಿ ನೀಡುವ ವಸ್ತುಗಳ ಮೇಲೆ ಪ್ರಧಾನಿ ಅಥವಾ ಮುಖ್ಯಮಂತ್ರಿಯ ಚಿತ್ರವನ್ನೂ ಮುದ್ರಿಸಿ, ಅವರ ವೈಯಕ್ತಿಕ ಕೊಡುಗೆ ಎಂಬಂತೆ ಬಿಂಬಿಸುತ್ತವೆ. ಕೆಲವೇ ವರ್ಗಗಳಿಗೆ ನೀಡುವ ಸೌಲಭ್ಯಕ್ಕೆ ದೊಡ್ಡ ಮೊತ್ತ ವ್ಯಯವಾಗುತ್ತದೆ ಎಂದಾದರೆ, ಎಲ್ಲರಿಗೂ ಅನುಕೂಲ ಆಗುವಂತಹ ಮೂಲಸೌಕರ್ಯ ನಿರ್ಮಾಣ, ಸಾರ್ವಜನಿಕ ಸೇವೆಗಳು ಮುಂತಾದ ಕಾರ್ಯಕ್ರಮಗಳಿಗೆ ಬೇಕಾದ ನಿಧಿಗೆ ಕೊರತೆಯಾಗುತ್ತದೆ. ಉಚಿತ ಕೊಡುಗೆಗಳಿಗೆ ವೆಚ್ಚವಾಗುವ ಹಣವು ಎಲ್ಲಿಂದ ಬರುತ್ತದೆ ಎಂಬುದನ್ನು ಯಾವ ರಾಜಕೀಯ ಪಕ್ಷವೂ ಜನರಿಗೆ ಹೇಳುವುದಿಲ್ಲ. ಚುನಾವಣೆಯ ಸಂದರ್ಭದಲ್ಲಿ ಕೊಟ್ಟ ಉಚಿತ ಕೊಡುಗೆಗಳ ಭರವಸೆಗಳನ್ನು ಜಾರಿ ಮಾಡಿದ್ದರಿಂದಾಗಿ ಹಲವು ರಾಜ್ಯಗಳು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿವೆ. ಇದು ಇತರರಿಗೆ ಪಾಠವಾಗಬೇಕು.

ದಿನದ ಟ್ವೀಟ್

ಬದಲಾಗಬೇಕಿದೆ ಆದ್ಯತೆ



144 ವರ್ಷಗಳ ನಂತರ ನಡೆಯುತ್ತಿರುವ ಮಹಾ ಕುಂಭಮೇಳವು ಜೀವನದಲ್ಲಿ ಒಮ್ಮೆ ಮಾತ್ರ ಸಿಗುವಂಥದ್ದು. ಅದನ್ನು ನೋಡುವ ಅಥವಾ ಅದರಲ್ಲಿ ಭಾಗಿಯಾಗುವ ಭಾಗ್ಯ ನಮಗೆ ಲಭಿಸಿದೆ. ಅಷ್ಟಾದರೂ ಕೆಲವು ಮಾಧ್ಯಮ ಮಂದಿ ಮತ್ತು ವ್ಯಕ್ತಿಗಳು ಸಂಪೂರ್ಣವಾಗಿ ಮೊನಾಲಿಸಾ ಎಂಬ ಹೆಸರಿನ ಹುಡುಗಿಯ ಹಿಂದೆ ಬಿದ್ದಿದ್ದಾರೆ. ಶೋಚನೀಯ!

ಗಿರೀಶ್ ಭಾರದ್ವಾಜ್, ವಕೀಲ

ಕಿಡಿನುಡಿ



ಬೆಂಗಳೂರಿನ ಶಾಲೆಯೊಂದರಲ್ಲಿ 3ನೇ ತರಗತಿಗೆ ₹2.1 ಲಕ್ಷ ಶುಲ್ಕ. ಎಷ್ಟೇ ಹಣದುಬ್ಬರ ಇದ್ದರೂ ಈ ಮಟ್ಟಿಗಿನ ಶಾಲಾ ಶುಲ್ಕವನ್ನು ಸಮರ್ಥಿಸಿಕೊಳ್ಳಲು ಆಗದು. ಸರ್ಕಾರವು ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕವನ್ನು ನಿಯಂತ್ರಿಸಬಹುದು, ಆದರೆ ಶಾಲಾ ಶುಲ್ಕದ ವಿಷಯಕ್ಕೆ ಕೈಹಾಕುವ ಧೈರ್ಯ ಮಾಡುವುದಿಲ್ಲ. ಶಾಲೆಗಳು ಆ ಮಟ್ಟಿಗಿನ ಭಯ ಸೃಷ್ಟಿಸಿವೆ. ಶಾಲೆಯ ಹೆಸರಿನಲ್ಲಿ ನಡೆಯುವ ವ್ಯಾಪಾರದಂತಹ ವ್ಯಾಪಾರ ಮತ್ತೊಂದಿಲ್ಲ.

ವಾಯ್ಸ್ ಆಫ್ ಪೇರೆಂಟ್ಸ್ ಅಸೋಸಿಯೇಷನ್

25 ವರ್ಷಗಳ ಹಿಂದೆ

ಸೋಮವಾರ, 24-1-2000

● **ಪದೇ ಪದೇ ಮುಖ್ಯಮಂತ್ರಿ ಬದಲಿಲ್ಲ: ಕಾಂಗ್ರೆಸ್**

ಭುವನೇಶ್ವರ, ಜ. 23 (ಪಿಟಿಐ)– ಕಾಂಗ್ರೆಸ್ ಪಕ್ಷದ ಆಳ್ವಿಕೆಯಿರುವ ರಾಜ್ಯಗಳಲ್ಲಿ ಪದೇ ಪದೇ ಮುಖ್ಯಮಂತ್ರಿಗಳನ್ನು ಬದಲಿಸುವ ಬಗ್ಗೆ ಕಾಂಗ್ರೆಸ್ ಪಕ್ಷವು ಇಂದಿಲ್ಲಿ ವಿಷಾದ ವ್ಯಕ್ತಪಡಿಸಿದೆ.

‘ಇನ್ನು ಮುಂದೆ ಚುನಾವಣೆ ನಂತರ ಒಮ್ಮೆ ಆಯ್ಕೆಯಾದ ಮುಖ್ಯಮಂತ್ರಿಯನ್ನು ಸಂಪೂರ್ಣ ಅವಧಿಯವರೆಗೆ ಮುಂದುವರಿಸಲು ಅನುವು ಮಾಡಿಕೊಡಲಾಗುವುದು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಗುಲಾಂ ನಬಿ ಆಜಾದ್ ಅವರು ಹೇಳಿದರು.

‘ಪದೇ ಪದೇ ಮುಖ್ಯಮಂತ್ರಿಗಳ ಬದಲಾವಣೆಯಿಂದ ಪಕ್ಷಕ್ಕೆ ಯಾವುದೇ ನೆರವಾಗುವುದಿಲ್ಲ. ಅಲ್ಲದೆ ಚುನಾವಣೆ ನಂತರ ಮುಖ್ಯಮಂತ್ರಿಯ ಆಯ್ಕೆಯಾಗುವುದರಿಂದ ಅವರು ಸಂಪೂರ್ಣ ಅವಧಿ ಪೂರೈಸಲು ಅವಕಾಶ ಕಲ್ಪಿಸುವುದು ಅತ್ಯಗತ್ಯ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

● **ಖರ್ಗೆ, ಧರ್ಮಸಿಂಗ್‌ಗೆ ಘೇರಾವ್**

ಕಲ್ಬುರ್ಗಿ, ಜ. 23– ತೊಗರಿ ಬೆಳೆಗಾರರ ಹಿತಾಸಕ್ತಿಗಳನ್ನು ಕಾಪಾಡಲು ತೊಗರಿ ಮಂಡಳಿಯನ್ನು ರಚಿಸಬೇಕು ಮತ್ತು ಕ್ವಿಂಟಲ್‌ಗೆ 2,000 ರೂಪಾಯಿ ಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿ ಇಂದು ಕರ್ನಾಟಕ ರಾಜ್ಯ ರೈತ ಸಂಘಗಳ ಸದಸ್ಯರು ಜಂಟಿಯಾಗಿ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕೋಪಯೋಗಿ ಸಚಿವ ಧರ್ಮಸಿಂಗ್ ಅವರಿಗೆ ಘೇರಾವ್ ಮಾಡಿದರು.

ಸಚಿವರು ಇಂದು ಬೆಳಿಗ್ಗೆ ಉದ್ಯಾನ್ ಎಕ್ಸ್‌ಪ್ರೆಸ್ ಮುಖಾಂತರ ನಗರಕ್ಕೆ ಬರುತ್ತಿದ್ದಂತೆ ರೈತ ಸಂಘದ ಸದಸ್ಯರು ಘೇರಾವ್ ಮಾಡಿದರು.

50 ವರ್ಷಗಳ ಹಿಂದೆ

ಶುಕ್ರವಾರ, 24-1-1975

● **ಸಾಮಾಜಿಕ, ಆರ್ಥಿಕ ಸಮೀಕ್ಷೆ ಮುಗಿಯದೆ ವರದಿ ಅಸಂಭವ**

ಬೆಂಗಳೂರು, ಜ. 23– ಸಾಮಾಜಿಕ, ಆರ್ಥಿಕ ಸಮೀಕ್ಷೆ ಕಾರ್ಯ ಪೂರ್ಣವಾಗದ ಹೊರತು ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ತನ್ನ ವರದಿಯನ್ನು ಸಲ್ಲಿಸುವಂತಿಲ್ಲ.

ಆಯೋಗದ ಶಿಫಾರಸುಗಳು ನ್ಯಾಯಾಲಯದಲ್ಲಿ ನಿಲ್ಲಬೇಕಾದರೆ ಅವುಗಳಿಗೆ ಸಮೀಕ್ಷೆಯ ಆಧಾರ ಅಗತ್ಯ ಎಂದು ಅದರ ಅಧ್ಯಕ್ಷ ಎಲ್.ಜಿ. ಹಾವನೂರ ಅವರು ಇಂದು ಇಲ್ಲಿ ಸುದ್ದಿಗಾರರಿಗೆ ಸ್ಪಷ್ಟಪಡಿಸಿದರು.

ಸಾಮಾಜಿಕ, ಆರ್ಥಿಕ ಸಮೀಕ್ಷೆ ಕಾರ್ಯ ಶೇ 50ರಷ್ಟು ಮಾತ್ರ ಈವರೆಗೆ ಮುಗಿದಿದೆ. ಉಳಿದದ್ದು ಜುಲೈ ಹೊತ್ತಿಗೆ ಸಿದ್ಧವಾಗುವ ನಿರೀಕ್ಷೆಯಿದೆ. ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ಅದು ಮುಗಿದಿದೆ. ಸಂಕಲನ ಕಾರ್ಯ ಇನ್ನೂ ಶೇ 5ರಷ್ಟು ಮಾತ್ರ ಸಿದ್ಧವಾಗಿದೆ. ಸಮೀಕ್ಷೆ ಕಾರ್ಯ ಕಳೆದ ಅಕ್ಟೋಬರ್ ಅಂತ್ಯದಲ್ಲಿ ಪ್ರಾರಂಭವಾಯಿತು.

ಕೇರಳ ಮತ್ತಿತರ ರಾಜ್ಯಗಳಿಗೆ ಹೋಲಿಸಿದರೆ ಹಿಂದುಳಿದ ವರ್ಗಗಳ ಆಯೋಗದ ಕಾರ್ಯ ಪ್ರಗತಿ ವಿಳಂಬವೇನೂ ಆಗಿಲ್ಲ ಎಂದು ಹಾವನೂರ ಅವರು ಹೇಳಿದರು.

ಕೆಲ ಸಸ್ಯಗಳಲ್ಲಿನ ಪೋಷಕಾಂಶ ಕೊರತೆಯು ಸಸ್ಯಾಹಾರಿ ಪ್ರಾಣಿಗಳ ಸಂಕಷ್ಟ ಹೆಚ್ಚಿಸಿದೆ

ಸಸ್ಯಗಳಲ್ಲಿ ಕುಪೋಷಣೆ: ಯಾರು ಹೊಣೆ?



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಮಕ್ಕಳಿಗೆ ಪೋಷಕಾಂಶಭರಿತ ಸಮತೋಲಿತ ಆಹಾರ ಸಮೃದ್ಧವಾಗಿ ಲಭ್ಯವಾಗದಿದ್ದಲ್ಲಿ, ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಅವರು ಕುಗ್ಗುತ್ತಾರೆ. ಇಂತಹವರನ್ನು ಕುಪೋಷಣೆಪೀಡಿತ ಮಕ್ಕಳು ಎಂದು ಕರೆಯಲಾಗುತ್ತದೆ. ಸಸ್ಯಾಹಾರವನ್ನು ಸೇವಿಸುವ ಜೀವಿಗಳು, ಅನ್ಯಜೀವಿಗಳನ್ನು ಅವಲಂಬಿಸಿ ಬದುಕುವ ಮಾಂಸಾಹಾರಿ ಪ್ರಾಣಿಗಳು ಸಹ ಕುಪೋಷಣೆಯಿಂದ ಬಳಲುವುದನ್ನು ಕಾಣಬಹುದು. ಮನುಕುಲಕ್ಕೆ ಕುಪೋಷಣೆ ದೊಡ್ಡ ಕಂಟಕವಾಗಿ ಪರಿಣಮಿಸಿದೆ.

ಹವಾಮಾನ ಬದಲಾವಣೆಯಿಂದಾಗಿ ಏನೆಲ್ಲಾ ಅವಘಡಗಳು ಸಂಭವಿಸುತ್ತವೆ ಎಂಬುದನ್ನು ಪತ್ತೆ ಮಾಡಲು ವಿಜ್ಞಾನಿಗಳು, ಹವಾಮಾನ ತಜ್ಞರು, ಪರಿಸರ ಸಂಘಟನೆಗಳವರು ಶ್ರಮಿಸುತ್ತಿದ್ದಾರೆ. ಭೂಮಿಯ ಮೇಲಿನ ಜೀವಿಗಳ ಪೈಕಿ ಮೂರನೇ ಒಂದು ಭಾಗದಷ್ಟು ಜೀವಿ-ಪ್ರಭೇದಗಳ ಆಹಾರದ ಮೂಲ ಸಸ್ಯಗಳು. ದೇಹದ ಶಕ್ತಿ ಸಂಚಯನಕ್ಕೆ ಅವು ಸಸ್ಯಗಳನ್ನೇ ಅವಲಂಬಿಸಿಕೊಂಡಿವೆ. ಸ್ವಾಭಾವಿಕವಾಗಿ ಸಸ್ಯಗಳಲ್ಲಿ ಕ್ಯಾಲರಿ ಅಂಶ ಕಡಿಮೆ ಇರುವುದರಿಂದ, ಸಸ್ಯಾಹಾರಿ ಪ್ರಾಣಿಗಳು ಹೆಚ್ಚು ಹೆಚ್ಚು ಸಸ್ಯಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಹವಾಗುಣ ಬದಲಾವಣೆಯಿಂದಾಗಿ ಕೆಲವು ಸಸ್ಯಗಳಲ್ಲಿ ಪೋಷಕಾಂಶಗಳ ಕೊರತೆಯಾಗುತ್ತಿರುವುದು ಈ ನಿರ್ದಿಷ್ಟ ಸಸ್ಯಗಳನ್ನು ಅವಲಂಬಿಸಿಕೊಂಡಿರುವ ಶಾಕಾಹಾರಿ ಪ್ರಾಣಿಗಳ ಸಂಕಷ್ಟವನ್ನು ಹೆಚ್ಚು ಮಾಡಿದೆ.

ಭೂಮಿಯ ವಾತಾವರಣದಲ್ಲಿ ಇಂಗಾಲಾಮ್ಲದ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಸಸ್ಯವೂ ಹೆಚ್ಚು ಹೆಚ್ಚು ಇಂಗಾಲಾಮ್ಲವನ್ನು ಹೀರಿಕೊಂಡು ವೇಗವಾಗಿ ಬೆಳೆಯುತ್ತದೆ. ಈ ಪ್ರಕ್ರಿಯೆಯಲ್ಲಿ ಸಸ್ಯಗಳಲ್ಲಿ ಸಂಚಯವಾಗಬೇಕಾದ ಇತರ ಪೋಷಕಾಂಶಗಳ ಕೊರತೆ ಕಂಡುಬರುತ್ತಿದೆ ಎಂದು ಸಸ್ಯ ವಿಜ್ಞಾನಿ ಎಲೆನ್ ವಿಟ್ಟಿ ವರದಿ ಮಾಡಿದ್ದಾರೆ. ಮೇಲ್ನೋಟಕ್ಕೆ ಗೋಚರಿಸದ ಈ ವಿದ್ಯಮಾನವು ಮುಂದಿನ ದಿನಗಳಲ್ಲಿ ಇಡೀ ಆಹಾರ ಸರಪಳಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ‘ದಿ ಕನ್ವರ್ಸೇಷನ್’ ಪತ್ರಿಕೆ ವರದಿ ಮಾಡಿದೆ.

ಹವಾಗುಣ ಬದಲಾವಣೆ ಎಂಬುದು ಪ್ರತಿನಿತ್ಯದ ವಿದ್ಯಮಾನವಾದರೆ, ಮುಂದೆ ಬರಲಿರುವ ಶಾಖದಲೆಗಳು ಸಸ್ಯಗಳ ಒಟ್ಟಾರೆ ಬೆಳವಣಿಗೆ ಮತ್ತು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿವೆ ಎಂದು ‘ನಾಸಾ’ದ ಉಪನಿರ್ದೇಶಕ ಅಲೆಕ್ಸ್ ರೂನೆ ಹೇಳುತ್ತಾರೆ.

ಮಾನವ ತನ್ನ ದೇಹಕ್ಕೆ ಯಾವ ಪೋಷಕಾಂಶಗಳ ಕೊರತೆಯಿದೆ ಎಂದು ತಾನಾಗಿಯೇ ತಿಳಿದುಕೊಳ್ಳಲಾರ. ಆದರೆ, ಬಹುತೇಕ ವನ್ಯಜೀವಿಗಳು ತಮ್ಮ ಪೋಷಕಾಂಶಗಳ ಕೊರತೆಯನ್ನು ತಿಳಿದುಕೊಂಡು, ಅದನ್ನು ನಿವಾರಿಸಿಕೊಳ್ಳುವ ಗುಣವನ್ನು ಅಂತರ್ಗತವಾಗಿಯೇ ಹೊಂದಿರುತ್ತವೆ. ಉದಾಹರಣೆಗೆ, ಆನೆಗೆ ಉಪ್ಪಿನಂಶದ ಕೊರತೆಯಾದಾಗ, ಉಪ್ಪಿನಂಶವಿರುವ ಮಣ್ಣನ್ನು ತಿನ್ನುವ ಮೂಲಕ ಕೊರತೆಯನ್ನು ನೀಗಿಸಿಕೊಳ್ಳುವ ವಿದ್ಯಮಾನವನ್ನು ತಜ್ಞರು ದಾಖಲಿಸಿದ್ದಾರೆ. ಜೀವಜಾಲದ ಸರಪಳಿಯಲ್ಲಿ ಕೀಟಗಳದ್ದು ಬಹುಮುಖ್ಯ ಪಾತ್ರ. ಹಲವು ಕೀಟಗಳು ಪರಾಗಸ್ಪರ್ಶದ ಮೂಲಕ ತಮ್ಮ ನೈಸರ್ಗಿಕ ಸೇವೆಯನ್ನು ನೀಡಿದರೆ, ಸಸ್ಯಗಳ ಎಲೆಯಂತಹ ಭಾಗಗಳನ್ನು ಭಕ್ಷಿಸುವ ಕೀಟಗಳು ಪಕ್ಷಿಗಳಿಗೆ ಹಾಗೂ ಕೆಲವು ಪ್ರಾಣಿಗಳಿಗೆ ಆಹಾರವಾಗುತ್ತವೆ. ಕಂಬಳಿಹುಳು ಮತ್ತು ಹುಲ್ಲು ಮಿಡತೆ ಕೀಟ ಪ್ರಭೇದಗಳು ಸಸ್ಯವನ್ನು ಅವಲಂಬಿಸಿ ಬದುಕುತ್ತವೆ. ಅವು ಅವಲಂಬಿಸಿದ ಸಸ್ಯಗಳಲ್ಲಿ ಪೋಷಕಾಂಶಗಳ ಕೊರತೆ ಕಂಡುಬಂದಿದ್ದರಿಂದ, ಅವುಗಳ ಗಾತ್ರ ಮತ್ತು ವಂಶಾಭಿವೃದ್ಧಿಯಲ್ಲಿ ಏರುಪೇರು ಆಗಿದ್ದನ್ನು ವಿಜ್ಞಾನಿಗಳು ದಾಖಲಿಸಿದ್ದಾರೆ. ವಾತಾವರಣದಲ್ಲಿ ಇಂಗಾಲಾಮ್ಲದ ಪ್ರಮಾಣ ಹೆಚ್ಚಾದಂತೆ, ಈ ಕೀಟಗಳ ಸಂಖ್ಯೆಯು ಗಮನಾರ್ಹವಾಗಿ ಇಳಿಮುಖವಾಗುತ್ತಿದೆ. ಸಸ್ಯಗಳಲ್ಲಿ ಇಂಗಾಲಾಮ್ಲದ ಪ್ರಮಾಣ ಜಾಸ್ತಿ ಆಗಿರುವ ಕಾರಣಕ್ಕೆ ಪೀಡೆಕೀಟಗಳೆಂದು ಕರೆಯಲಾಗುವ ಗಿಡಹೇನುಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಜನವರಿಯಿಂದ ಏಪ್ರಿಲ್‌ವರೆಗೆ ಕಾಡು ಮರಗಳು ಹಣ್ಣು ಬಿಡುವ ಕಾಲ. ಕೆಲವು ದಶಕಗಳ ಹಿಂದೆ ಕಾಡಿಗೆ ಹೋದರೆ ಮುಳ್ಳಣ್ಣು, ಸಂಪಿಗೆ, ಪರಿಗೆ, ದ್ಯಾವಣಿಗೆ, ಗುಡ್ಡೇಗೇರು, ಹಲಗೆ ಹಣ್ಣು, ನೆಲ್ಲಿ, ಬುಕ್ಕೆ, ನುರುಕಲು, ತುಂಬ್ರೆ ಹೀಗೆ ಲೆಕ್ಕವಿಲ್ಲದಷ್ಟು ಪೋಷಕಾಂಶಭರಿತ ಕಾಡಿನ ಹಣ್ಣುಗಳು ಸಮಾರಾಧನೆಗೆ ಸಿಗುತ್ತಿದ್ದವು. ಕ್ಷೀಣವಾದ ಕಾಡಿನಲ್ಲಿ ಅದು ಹೇಗೋ ಉಳಿದಿರುವ ಕಾಡುಮರ, ಬಳ್ಳಿಗಳ ಫಲ ನೀಡುವ ಕ್ಷಮತೆ ತೀರಾ ಇಳಿಮುಖವಾಗಿದೆ. ಬುಟ್ಟಿಗಟ್ಟಲೆ ನೆಲ್ಲಿಕಾಯಿ ಬಿಡುತ್ತಿದ್ದ ಮರಗಳಲ್ಲಿ ಕೈಬೆರಳೆಣಿಕೆಯಷ್ಟು ನೆಲ್ಲಿಕಾಯಿ ಸಿಗುತ್ತಿದೆ. ಕೆಲವು ಭಾಗಗಳಲ್ಲಿ ಹೂ ಬಿಟ್ಟರೂ ಕಾಯಿ ಕಚ್ಚುತ್ತಿಲ್ಲವೆಂಬುದನ್ನು ಮಲೆನಾಡು ಭಾಗದ ಕೃಷಿ ತಜ್ಞರು ತೋರಿಸಬಲ್ಲರು.

ಹವಾಗುಣ ಬದಲಾವಣೆಯಿಂದಾಗಿ ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಬದುಕು ಕೂಡಾ ಕಷ್ಟಕರವಾಗಿದೆ. ಕಾಡಿನ ಕಿರು ಉತ್ಪನ್ನಗಳನ್ನು ನಂಬಿಕೊಂಡಿರುವ ಸೋಲಿಗರಿಗೆ ಋತುಮಾನದಲ್ಲಿ ಆಗುತ್ತಿರುವ ಏರುಪೇರಿನಿಂದಾಗಿ ಪೋಷಕಾಂಶಭರಿತ ನೆಲ್ಲಿಕಾಯಿ, ಜೇನು ಮತ್ತು ಔಷಧೀಯ ಸಸ್ಯಗಳ ಲಭ್ಯತೆ ಕಡಿಮೆಯಾಗಿರುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಲಂಟಾನದಂತಹ ಕಳೆಸಸ್ಯಗಳು ಸ್ಥಳೀಯ ಸಸ್ಯ ಪ್ರಭೇದಗಳನ್ನು ನಾಶ ಮಾಡುತ್ತಿದ್ದು, ವನ್ಯಜೀವಿಗಳ ಆವಾಸಸ್ಥಾನವೂ ಕ್ಷೀಣಿಸುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಅರಣ್ಯ ದಟ್ಟಣೆ ಹೆಚ್ಚಿದೆ. ಹಿಂದೆ ಜೇನುಗಳ ಸಂಖ್ಯೆಯೂ ಸಮೃದ್ಧವಾಗಿತ್ತು. ಹತ್ತು-ಹನ್ನೆರಡು ವರ್ಷಗಳಿಂದ ಜೇನು ಹುಟ್ಟಿನ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇದಕ್ಕೆ ವಾತಾವರಣದಲ್ಲಿನ ಬಿಸಿಯೇರಿಕೆ ಒಂದು ಕಾರಣವಾದರೆ, ಬಲಿಷ್ಠವಾದ ಹಾಗೂ ಜೇನನ್ನೇ ಆಹಾರವನ್ನಾಗಿ ಮಾಡಿಕೊಂಡ ಕಣಜಗಳ ಸಂಖ್ಯೆ ಹೆಚ್ಚುತ್ತಿರುವುದು ಮತ್ತೊಂದು ಕಾರಣವಾಗಿದೆ ಎಂದು ಸ್ಥಳೀಯ ರೈತರು ಪ್ರತಿಪಾದಿಸುತ್ತಾರೆ. ಕೀಟಶಾಸ್ತ್ರಜ್ಞರು ಈ ಕುರಿತು ಸಂಶೋಧನೆ ಮಾಡಿದಲ್ಲಿ, ಇನ್ನೂ ಹೆಚ್ಚಿನ ನಿಖರ ಕಾರಣಗಳನ್ನು ತಿಳಿದುಕೊಳ್ಳಲು ಸಾಧ್ಯ.



ಮಲೆನಾಡಿನ ಹಳ್ಳಿಗಾಡುಗಳಲ್ಲಿ ನವಿಲುಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುವವರು ಇದ್ದಾರೆ. ಅವರ ಪ್ರಕಾರ, ಆ ಪ್ರದೇಶದ ‘ಪರಿಸರ ಸ್ಥಿತಿಗತಿ’ ಉತ್ತಮವಾಗಿದೆಯೆಂದು ಅರ್ಥ. ವಾಸ್ತವಿಕ ಪರಿಸ್ಥಿತಿ ಬೇರೆಯದೇ ಆಗಿದೆ. ಜೀವಿವೈವಿಧ್ಯ ಸಾಂದ್ರತೆ ಹೆಚ್ಚು ಇದ್ದಷ್ಟೂ ಅಲ್ಲಿನ ಪರಿಸರ ಸ್ಥಿತಿಗತಿ ಉತ್ತಮವಾಗಿದೆ ಎಂದು ಪರಿಗಣಿಸುವ ಸಿದ್ಧ ಮಾದರಿ ನಮ್ಮ ಕಣ್ಣೆದುರು ಇರುವಾಗ, ಯಾವುದೋ ಒಂದು ಪ್ರಭೇದ, ಅದು ರಾಷ್ಟ್ರಪಕ್ಷಿಯೇ ಆಗಿದ್ದರೂ ಅವುಗಳ ಸಂಖ್ಯೆ ಹೆಚ್ಚಾಗುವುದರಿಂದ ಪರಿಸರದಲ್ಲಿ ಮತ್ತು ಜೀವಿವೈವಿಧ್ಯ ಆರೋಗ್ಯದಲ್ಲಿ ಏರುಪೇರಾಗುತ್ತದೆ. ಸಾಮಾನ್ಯವಾಗಿ ನವಿಲು ಪ್ರಭೇದ ಬಯಲು ಪ್ರದೇಶಗಳಲ್ಲಿ ಕಂಡುಬರುತ್ತದೆ. ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಆವರಣದಲ್ಲಿ ಕೋಳಿಗಳಂತೆ ಅವು ಆಹಾರ ಹುಡುಕುವುದನ್ನು ಈಗಲೂ ಕಾಣಬಹುದು.

ಹಲವು ಕಾರಣಗಳಿಂದಾಗಿ ಪಶ್ಚಿಮಘಟ್ಟಗಳಲ್ಲಿ ಅರಣ್ಯ ನಾಶವಾಗಿದ್ದು, ಅಲ್ಲಿನ ಭೌಗೋಳಿಕ ರಚನೆ ಬಯಲುನಾಡಿನಂತೆ ಬದಲಾಗುತ್ತಿದೆ. ಅರಣ್ಯ ನಾಶ ಮತ್ತು ಬದಲಾದ ಭೌಗೋಳಿಕ ರಚನೆಯಿಂದಾಗಿ ನವಿಲುಗಳು ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿವೆ ಎಂಬ ಸಂಗತಿ ಆಘಾತಕಾರಿ. ಎಲ್ಲಾ ತರಹದ ಹಾವುಗಳನ್ನು ಭಕ್ಷಿಸುವ ನವಿಲುಗಳಿಂದಾಗಿ, ಉರಗ ಸಂತತಿ ಕ್ಷೀಣಿಸುತ್ತಿದೆ ಮತ್ತು ರೈತಸ್ನೇಹಿ ಉರಗಗಳ ಸಂತತಿ ಕಡಿಮೆ ಆಗುತ್ತಿರುವುದು ಆಹಾರಭದ್ರತೆ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಂತೂ ಅಲ್ಲವೇ ಅಲ್ಲ. ಉರಗಗಳ ಆಹಾರ ಮುಖ್ಯವಾಗಿ ಇಲಿ, ಹೆಗ್ಗಣಗಳು. ಹಾವು ಸಂತತಿ ನಾಶದಿಂದ, ದಂಶಕಗಳ ಸಂಖ್ಯೆ ವಿಪರೀತ ಹೆಚ್ಚುತ್ತದೆ. ಇಂಗಾಲಾಮ್ಲವನ್ನು ಹೀರಿಕೊಳ್ಳುವ ಅರಣ್ಯ ಪ್ರದೇಶಗಳ ಕುಗ್ಗುವಿಕೆ ಮತ್ತೆ ನೇರವಾಗಿ ಇನ್ನಷ್ಟು ಭೂ ಬಿಸಿಯೇರಿಕೆಗೆ ಕಾರಣವಾಗುತ್ತಿದೆ.

ಒಂದು ಪ್ರದೇಶದ ಪರಿಸರ ಅವನತಿ ಆ ನಿರ್ದಿಷ್ಟ ಪ್ರದೇಶಕ್ಕೆ ನೇರವಾಗಿ ಹಾನಿ ಮಾಡುತ್ತಲೇ, ಜಾಗತಿಕವಾದ ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ. ಪಶ್ಚಿಮ ಘಟ್ಟಗಳ ಪತನ ಇತರ ದ್ವೀಪ ರಾಷ್ಟ್ರಗಳನ್ನು ಮುಳುಗಿಸುವಲ್ಲಿ ನೇರ ಪಾತ್ರ ವಹಿಸುತ್ತದೆ. ಆಸ್ಟ್ರೇಲಿಯಾ ಮೂಲದ ಅಕೇಶಿಯಾದಂತಹ ವಿದೇಶಿ ಕಳೆ ಸಸ್ಯಗಳು ಬಂದು ಮಧ್ಯ ಪಶ್ಚಿಮಘಟ್ಟದಲ್ಲಿ ವಿಜೃಂಭಿಸಿದ ಕಾರಣಕ್ಕೆ ಇಲ್ಲಿನ ನದಿ ಹರಿವಿನಲ್ಲಿ ಅಪಾರ ಪ್ರಮಾಣದ ವ್ಯತ್ಯಯ ಉಂಟಾಯಿತು. ಇಲ್ಲೇ ಇಂಗಬೇಕಿದ್ದ ಮಳೆನೀರು ನೆರೆಯನ್ನುಂಟು ಮಾಡಿ, ಇತ್ತ ಬರದ ಸ್ಥಿತಿಗೂ ಅತ್ತ ಸಮುದ್ರ ಮಟ್ಟ ಏರಿಕೆಗೂ ಕಾರಣವಾಯಿತು.

ಪರಿಸರ ನಾಶ ಯಾವ ರೀತಿಯಿಂದ ಆದರೂ ಅದರ ಪರಿಣಾಮ ಮನುಕುಲದ ಮೇಲೆ ನೇರವಾಗಿ ಆಗುತ್ತದೆ ಎಂಬುದು ನಿರ್ವಿವಾದದ ಸಂಗತಿ. ಜೇನು ಅಳಿದರೆ, ನಾಲ್ಕೇ ವರ್ಷದಲ್ಲಿ ಮನುಕುಲವು ಅಳಿಯುತ್ತದೆ ಎಂಬ ಮೇರು ವಿಜ್ಞಾನಿ ಐನ್‌ಸ್ಟೀನ್ ಮಾತು ನಮಗೆ ಎಚ್ಚರಿಕೆಯ ಪಾಠವಾಗಬೇಕು.

ಚುರುಮುರಿ



ಗಾಂಧಿಗಿರಿ!

● ಬಿ.ಎನ್.ಮಲ್ಲೇಶ್

‘ಏನೋ ಗುಡ್ಡೆ, ಬೆಳಗಾವೀಲಿ ನಿಮ್ ಕೈ ಪಕ್ಷದೋರು ಮಹಾತ್ಮ ಗಾಂಧೀನ ಭರ್ಜರಿ ನೆನಪು ಮಾಡ್ಕಂಡ್ರಂತೆ? ಗಾಂಧಿ ಟೋಪಿ ಹಾಕಿದ್ದೇನು, ಚರಕ ತಿರುಗಿಸಿದ್ದೇನು, ಗಾಂಧಿ ಮಂತ್ರ ಹೇಳಿದ್ದೇನು... ಅದೇನು ಇದ್ದಕ್ಕಿದ್ದಂಗೆ ಗಾಂಧಿ ಮೇಲೆ ನಿಮಗೆ ಅಟಾಕಂದು ಪ್ರೀತಿ?’ ಮಂಜಮ್ಮ ನಕ್ಕಳು.

‘ನಮ್ದು ಗಾಂಧಿ ಫ್ಯಾಮಿಲಿ ಅಲ್ವ, ಅದ್ಕೆ ಏನೋ ಮಾಡಿದ್ವಿ. ನಿಮಗ್ಯಾಕೆ ಹೊಟ್ಟೆಉರಿ?’ ಗುಡ್ಡೆ ಕೇಳಿದ.

‘ಅಲ್ಲ, ಪೇಪರ್ ಜಾಹೀರಾತಲ್ಲಿ ಗಾಂಧಿ ಹಿಂದೆ ಸಿದ್ರಾಮಣ್ಣ, ಡಿಕೆಶಿ ಕಂಡ್ರು, ನೀನೆಲ್ಲಿದ್ದೆ?’

‘ನಾನೂ ಅವರಿಂದ್ನೇನೇ ಇದ್ದೆ, ಯಾಕೆ?’

‘ಅಲ್ಲ, ನೀವು ಎಲ್ಲ ಬಣದೋರೂ ಒಂದಾಗಿಬಿಟ್ರಾ? ಜಗಳ ಗಿಗಳ ಏನಿಲ್ವ?’

‘ಮತ್ತೆ, ಏನ್ ತಿಳಿದಿದಿ? ನಮ್ ಅಧ್ಯಕ್ಷರು ‘ಬಾಯಿ ಮುಚ್ಕಂಡಿರಿ’ ಅಂದ ಕೂಡ್ಲೆ ಅವತ್ತಿಂದ ಒಬ್ರೂ ಪಿಟಿಕ್ಕಂದಿಲ್ಲ. ‘ಶಾಂತಿ, ಶಿಸ್ತು’ ಅಂತಿದ್ದ ನಿಮ್ ಕಮಲ ಪಕ್ಷದಾಗೇನು ಭೂಕಂಪ ಆಗ್ತಾ ಐತಿ? ನಿಮ್ಮೋರು ಹಾದಿ ಬೀದೀಲಿ ಹೊಡೆದಾಡ್ತದಾರೆ?’ ಗುಡ್ಡೆ ತಿರುಗೇಟು ಕೊಟ್ಟ.

‘ಭಿನ್ನಮತ, ಕಿತ್ತಾಟ ಇವೆಲ್ಲ ಪ್ರಜಾಪ್ರಭುತ್ವದ ಲಕ್ಷಣ ಕಣೋ ಗುಡ್ಡೆ...’ ದುಬ್ಬೀರ ಮಂಜಮ್ಮನ ಪರ ವಹಿಸಿದ.

‘ಹೌದಾ? ಮತ್ತೆ ಈ ದಾದಾಗಿರಿ, ಬಚ್ಚಾಗಿರಿ ಯಾವುದರ ಲಕ್ಷಣ?’

‘ನಮ್ಮಲ್ಲಿ ಅದೆಲ್ಲ ಏನಿಲ್ಲ. ಅದಿರ್‍ಲಿ, ನಿಮ್ ಪಕ್ಷದಾಗೇನು ಎಲ್ರೂ ಈಗ ತ್ಯಾಗದ ಬಗ್ಗೆ ಮಾತಾಡ್ತದಾರೆ? ಸಿಎಂ ಕುರ್ಚಿ ಬಂದಾಗ ಬರ್ಲಿ ಅಂತದಾರೆ?’

‘ನಮ್ಮಲ್ಲೀಗ ಗಾಂಧಿಗಿರಿ, ಮಂಜಮ್ಮನ ಪಕ್ಷದಲ್ಲಿ ದಾದಾಗಿರಿ’ ಗುಡ್ಡೆ ನಕ್ಕ.

‘ಲೇ ಗುಡ್ಡೆ ಬ್ಯಾಡ ನೋಡು’ ಮಂಜಮ್ಮ ಸಿಟ್ಟಿಗೆದ್ದಳು.

ಗುಡ್ಡೆನೂ ಎದ್ದು ನಿಂತ. ಜಗಳ ಜೋರಾಯಿತು.

‘ಸಾಕು ನಿಲ್ಸಿ, ಈಗ ರಾಜಕೀಯ ಬಿಟ್ಟು ಬೇರೆ ಮಾತಾಡ್ರಿ’ ತೆಪರೇಸಿ ಆದೇಶಿಸಿದ.

‘ಏನು? ಬೇರೆ ಮಾತಾಡ್ಬೇಕಾ? ಓಕೆ... ಲೇ ತೆಪರ, ನಿನ್ನ ಟೂತ್‌ಪೇಸ್ಟಲ್ಲಿ ಉಪ್ಪು ಇದೆಯಾ?’ ಎಂದ ಕೊಟ್ರೇಶಿ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಸೆಬಿ ಆಶಯಕ್ಕೆ ಭಾಷೆಯ ಆಯಾಮ ಇರಲಿ

ಮ್ಯೂಚುವಲ್ ಫಂಡ್‌ಗಳು ಜನಸಮುದಾಯವನ್ನು ವ್ಯಾಪಕವಾಗಿ ತಲುಪಿಲ್ಲ ಎಂಬುದನ್ನು ಅಂಕಿ–ಅಂಶಗಳು ಹೇಳುತ್ತಿವೆ

● ವಿಜಯ್ ಜೋಷಿ


ಹೂಡಿಕೆಗಳ ಜಗತ್ತಿಗೆ ಎಲ್ಲರೂ ಪ್ರವೇಶಿಸುವಂತೆ ಆಗಬೇಕು ಎಂಬ ಉದ್ದೇಶದಿಂದ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಹೊಸ ಪ್ರಸ್ತಾವವೊಂದನ್ನು ಸಿದ್ಧಪಡಿಸಿದೆ. ಬರೀ ₹250ಕ್ಕೆ ಮ್ಯೂಚುವಲ್ ಫಂಡ್ ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಷೇರುಗಳಲ್ಲಿ ಹೂಡಿಕೆ ಮಾಡುವ ಅವಕಾಶವು ಸಮಾಜದಲ್ಲಿನ ‘ಕಡಿಮೆ ಆದಾಯದ ಸಮುದಾಯ’ಗಳಿಗೆ ಸಿಗಬೇಕು, ಹಣಕಾಸಿನ ಒಳಗೊಳ್ಳುವಿಕೆಯ ಉದ್ದೇಶ ಈಡೇರಬೇಕು ಎಂಬುದು ಸೆಬಿ ಪ್ರಸ್ತಾವದ ಹಿಂದಿರುವ ಆಶಯ.

ಇದಕ್ಕೆ ಸಂಬಂಧಿಸಿದಂತೆ ಸಮಾಲೋಚನಾ ಪತ್ರವೊಂದನ್ನು ಸಿದ್ಧಪಡಿಸಿರುವ ಸೆಬಿ, ಅದರ ಬಗ್ಗೆ ಫೆಬ್ರುವರಿ 6ಕ್ಕೆ ಮೊದಲು ಸಲಹೆಗಳನ್ನು ನೀಡಬೇಕು ಎಂದು ಸಾರ್ವಜನಿಕರನ್ನು ಕೋರಿದೆ. ₹250ಕ್ಕೆ ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ಹೂಡಿಕೆ ಮಾಡುವುದು ಸಾಧ್ಯವಾದರೆ, ಇದುವರೆಗೆ ಈ ಹೂಡಿಕೆಗಳ ಪ್ರಯೋಜನ ಲಭ್ಯವಾಗಿರದ ಸಮುದಾಯಗಳ ಹಣಕಾಸಿನ ಸಬಲೀಕರಣ ಸಾಧ್ಯವಾಗುತ್ತದೆ, ಮ್ಯೂಚುವಲ್ ಫಂಡ್ ಹೂಡಿಕೆ ಸೇವೆ ಒದಗಿಸುವ ಕಂಪನಿಗಳಿಗೆ ತಮ್ಮ ವ್ಯಾಪ್ತಿಯನ್ನು ದೇಶದ ಮೂಲೆಮೂಲೆಗಳಿಗೂ ವಿಸ್ತರಿಸಲು ಅವಕಾಶವಾಗುತ್ತದೆ ಎಂಬ ಮಾತನ್ನು ಸೆಬಿ ಹೇಳಿದೆ.

ದೇಶದಲ್ಲಿ ಉಳಿತಾಯದ ಹಣವನ್ನು ಜಮೀನು ಮತ್ತು ಚಿನ್ನದ ಬದಲು ಹಣಕಾಸು ಉತ್ಪನ್ನಗಳಲ್ಲಿ (ಮ್ಯೂಚುವಲ್ ಫಂಡ್‌ಗಳು, ಷೇರುಗಳು, ಬಾಂಡ್‌ಗಳು ಇತ್ಯಾದಿ) ತೊಡಗಿಸುವ ಪ್ರವೃತ್ತಿಗೆ ಈಗ ಕೆಲವು ವರ್ಷಗಳಿಂದ ಹೆಚ್ಚಿನ ಬಲ ಬಂದಿದೆ. ಈ ಪ್ರವೃತ್ತಿಯು ಮುಂದಿನ ದಿನಗಳಲ್ಲಿ ಇನ್ನಷ್ಟು ವ್ಯಾಪಕವಾಗಲಿದೆ ಎಂಬ ಮಾತನ್ನು ಹಣಕಾಸು ತಜ್ಞರು ಹಲವು ಬಾರಿ ಹೇಳಿದ್ದಾರೆ. ಈ ಮಾತನ್ನು ಪುಷ್ಟೀಕರಿಸುವ ಅಂಕಿ–ಅಂಶಗಳು ಹಲವು ಇವೆ. ದೇಶದ ಮ್ಯೂಚುವಲ್ ಫಂಡ್ ಕಂಪನಿಗಳು ನಿರ್ವಹಿಸುತ್ತಿರುವ ಹಣದ ಒಟ್ಟು ಮೊತ್ತವು 2014ರಲ್ಲಿ ₹10 ಲಕ್ಷ ಕೋಟಿ ಇದ್ದದ್ದು 2024ರ ನವೆಂಬರ್ 30ರ ವೇಳೆಗೆ ₹68.08 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ಅಂದರೆ, ಈ ಮೊತ್ತ ಹತ್ತು ವರ್ಷಗಳಲ್ಲಿ ಆರು ಪಟ್ಟು ಏರಿದೆ. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರ ಒಟ್ಟು ಸಂಖ್ಯೆಯು 2018ರ ಮಾರ್ಚ್ 31ಕ್ಕೆ 1.7 ಕೋಟಿ ಇದ್ದದ್ದು 2024ರ ನವೆಂಬರ್ 30ಕ್ಕೆ 5.18 ಕೋಟಿಗೆ ಏರಿಕೆ ಆಗಿದೆ (ಹೂಡಿಕೆದಾರರ ಸಂಖ್ಯೆಯು ಆರು ವರ್ಷಗಳಲ್ಲಿ ಸರಿಸುಮಾರು ಮೂರು ಪಟ್ಟು ಹೆಚ್ಚಾಗಿದೆ) ಎಂಬ ಅಂಕಿ–ಅಂಶವು ಸೆಬಿ ಬಳಿ ಇದೆ.

ಮ್ಯೂಚುವಲ್ ಫಂಡ್ ಹೂಡಿಕೆದಾರರ ಖಾತೆಗಳ ಸಂಖ್ಯೆಯು 2019ರ ನವೆಂಬರ್ 30ರಂದು 8.65 ಕೋಟಿ ಇದ್ದದ್ದು 2024ರ ನವೆಂಬರ್ 30ರ ವೇಳೆಗೆ 22.08 ಕೋಟಿಗೆ ಹೆಚ್ಚಳವಾಗಿದೆ. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಸುಲಭ ಮತ್ತು ಸರಳ, ಇಲ್ಲಿ ಹೂಡಿಕೆ ಮಾಡಿದ ಹಣವನ್ನು ಹಣಕಾಸು ನಿರ್ವಹಣಾ ತಜ್ಞರು ಆಯ್ದ ಕಂಪನಿಗಳ ಷೇರುಗಳಲ್ಲಿ ವೃತ್ತಿಪರವಾಗಿ ತೊಡಗಿಸುತ್ತಾರೆ, ಚಿನ್ನವನ್ನು ಅಡಮಾನವಾಗಿ ಇರಿಸಿ ಹೇಗೆ ಸಾಲ ಪಡೆಯಬಹುದೋ ಅದೇ ರೀತಿಯಲ್ಲಿ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ಅಡಮಾನವಾಗಿ ಇರಿಸಿ ಆರ್‌ಬಿಐ ನೋಂದಾಯಿತ ಹಣಕಾಸು ಸಂಸ್ಥೆಗಳಿಂದ ತ್ವರಿತವಾಗಿ ಸಾಲ ಪಡೆಯಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ, ಮ್ಯೂಚುವಲ್ ಫಂಡ್‌ಗಳ ಮೂಲಕ ಆಗುವ ಹೂಡಿಕೆಗಳು ದೀರ್ಘಾವಧಿಯಲ್ಲಿ ಹೂಡಿಕೆದಾರರಿಗೆ ಕೆಲವು ಸಾಂಪ್ರದಾಯಿಕ ಹೂಡಿಕೆ ಉತ್ಪನ್ನಗಳಿಗಿಂತ ಹೆಚ್ಚಿನ ಪ್ರಮಾಣದ ಲಾಭ ತಂದುಕೊಡುವ ಸಾಮರ್ಥ್ಯ ಹೊಂದಿವೆ. ಇವೆಲ್ಲವೂ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯ ಮಹತ್ವವನ್ನು ಹೇಳುತ್ತಿವೆ.

ಆದರೆ, ಇಷ್ಟೆಲ್ಲ ಪ್ರಯೋಜನಗಳು ಇದ್ದರೂ ಅಂದಾಜು 142 ಕೋಟಿ ಜನಸಂಖ್ಯೆ ಇರುವ ಈ ದೇಶದಲ್ಲಿ ಈ ಯೋಜನೆಗಳಲ್ಲಿ ಹಣ ತೊಡಗಿಸಿದವರ ಸಂಖ್ಯೆ 5.18 ಕೋಟಿ ಮಾತ್ರ ಎನ್ನುವುದು ಇವು ಜನಸಾಮಾನ್ಯರನ್ನು ವ್ಯಾಪಕವಾಗಿ ಇನ್ನೂ ತಲುಪಿಲ್ಲ ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದೆ.



ಸೆಬಿ ಹೇಳಿರುವ ‘ಕಡಿಮೆ ಆದಾಯದ ಸಮುದಾಯ’ಗಳನ್ನು ಮ್ಯೂಚುವಲ್ ಫಂಡ್ ಕಂಪನಿಗಳು ಪರಿಣಾಮಕಾರಿಯಾಗಿ ತಲುಪಬೇಕು ಎಂದಾದರೆ, ಹೂಡಿಕೆ ಮೊತ್ತವು ಕಡಿಮೆ ಇದ್ದರಷ್ಟೇ ಸಾಕಾಗುವುದಿಲ್ಲ. ಕಡಿಮೆ ಮೊತ್ತಕ್ಕೆ ಹೂಡಿಕೆ ಸಾಧ್ಯವಾಗಿಸುವುದು ಮೆಚ್ಚುವಂಥದ್ದೇ ಆದರೂ, ಹೂಡಿಕೆಗೆ ಸಂಬಂಧಿಸಿದ ಅಷ್ಟೂ ಮಾಹಿತಿಯು ‘ಕಡಿಮೆ ಆದಾಯದ ಹಾಗೂ ಹೂಡಿಕೆ ಯೋಜನೆಗಳ ಪ್ರಯೋಜನ ಹೆಚ್ಚಾಗಿ ದೊರೆತಿರದ’ ಸಮುದಾಯಗಳ ಜನರಿಗೆ ಅವರ ಭಾಷೆಯಲ್ಲೇ ಸಿಗುವಂತೆ ಮಾಡಬೇಕಿರುವುದು ಹೆಚ್ಚು ಮಹತ್ವದ್ದಾಗುತ್ತದೆ. ದೇಶದ ಮುಂಚೂಣಿ ಮ್ಯೂಚುವಲ್ ಫಂಡ್ ಕಂಪನಿಗಳ ವೆಬ್‌ಸೈಟ್‌ಗಳಲ್ಲಿ ವಿವಿಧ ಫಂಡ್‌ಗಳ ಬಗ್ಗೆ ಬಹಳ ವಿಸ್ತೃತವಾದ ವಿವರಗಳು, ವಿಡಿಯೊ ಮಾಹಿತಿ ಇವೆ. ಆದರೆ ಇಂಗ್ಲಿಷ್, ಹಿಂದಿ ಹೊರತುಪಡಿಸಿ ಬೇರೆ ಭಾಷೆಗಳಲ್ಲಿ ವಿವರಗಳು ಇಲ್ಲದಿರುವುದು ‘ಕಡಿಮೆ ವರಮಾನ’ದ ವರ್ಗಗಳು ಈ ಹೂಡಿಕೆ ಜಗತ್ತನ್ನು ಪ್ರವೇಶಿಸುವುದಕ್ಕೆ ಒಂದು ಅಡ್ಡಿ.

ಮ್ಯೂಚುವಲ್ ಫಂಡ್ ಯೋಜನೆಗಳಿಗೆ ಸಂಬಂಧಿಸಿದ ಎಲ್ಲ ವಿವರಗಳು ಜನರ ಭಾಷೆಯಲ್ಲಿ ಲಭ್ಯವಾಗುವಂತೆ ಮಾಡಬೇಕಿರುವುದು ಸೆಬಿ ತನ್ನ ಗುರಿ ತಲುಪಲು ಅಗತ್ಯವಾಗಿ ಮಾಡಬೇಕಿರುವ ಕೆಲಸ. ಜನರಿಗೆ ಹೂಡಿಕೆ ಮಾಹಿತಿ ತಮ್ಮ ಭಾಷೆಯಲ್ಲೇ ಲಭ್ಯವಾದರೆ, ಅವರು ಹೂಡಿಕೆಗಳ ಹೆಸರಿನಲ್ಲಿ ವಂಚನೆಗೆ ತುತ್ತಾಗುವುದು ಕೂಡ ಕಡಿಮೆಯಾಗಬಹುದು.

ವಾಚಕರ ವಾಣಿ

ಸಮಾನತೆಯ ಮೌಲ್ಯ ಎತ್ತಿಹಿಡಿದ ಕೋರ್ಟ್

‘ಕೌಟುಂಬಿಕ ಕಲಹಗಳಲ್ಲಿ ಎಷ್ಟೋ ಬಾರಿ ಪುರುಷರೂ ಕ್ರೌರ್ಯ ಅನುಭವಿಸಿರುತ್ತಾರೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ (ಪ್ರ.ವಾ., ಜ. 23) ಹೈಕೋರ್ಟ್, ಸಾಂವಿಧಾನಿಕ ಸಮಾನತೆಯ ಮೌಲ್ಯಗಳನ್ನು ಎತ್ತಿಹಿಡಿದಿರುವುದು ಶ್ಲಾಘನೀಯ. ಮಹಿಳೆಯರು ಹೆಚ್ಚಾಗಿ ಕ್ರೌರ್ಯಕ್ಕೀಡಾಗುವ ಸತ್ಯವನ್ನು ಒಪ್ಪಿಕೊಳ್ಳುವುದರ ಜೊತೆಗೆ, ಪುರುಷರ ಮೇಲೂ ಕಿರುಕುಳಗಳಾಗುವ ಸಾಧ್ಯತೆಯನ್ನು ಗಮನಿಸುವುದು ಪ್ರಸ್ತುತ ಸಂದರ್ಭದಲ್ಲಿ ಅಗತ್ಯವಾಗಿದೆ. ಇದು, ನ್ಯಾಯಕ್ಕೆ ಲಿಂಗತಾರತಮ್ಯವಿಲ್ಲ ಎಂಬುದನ್ನು ತಿಳಿಸುತ್ತದೆ. ಸಂವಿಧಾನ ಸಾರುವಂತೆ ಸಮಾನತೆ, ಸ್ಥಾನಮಾನ ನೀಡುವ ಅವಶ್ಯಕತೆಯನ್ನು ನೆನಪಿಸುತ್ತದೆ.

ಮಹಿಳಾ ಸಬಲೀಕರಣದ ಸಲುವಾಗಿ ಸರ್ಕಾರ ಎಷ್ಟೋ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಆದರೆ ಪುರುಷರ ವಿರುದ್ಧ ನಡೆಯುವ ದೌರ್ಜನ್ಯ ಅನೇಕ ಸಲ ಸಮಾಜದ ಗಮನಕ್ಕೇ ಬರುವುದಿಲ್ಲ. ಗಂಡು ಎನಿಸಿಕೊಂಡವ ತಾನು ಅನುಭವಿಸುವ ಹಿಂಸೆಯ ಕುರಿತು, ಕೇಳಿದವರು ಏನನ್ನುತ್ತಾರೋ ಎಂದು ಅಂಜಿ ಹೇಳಿಕೊಳ್ಳಲು ಇಚ್ಛಿಸುವುದಿಲ್ಲ. ಕಾನೂನಿನ ಹೊರತಾಗಿ ಗಂಡಸಿಗೆ ಬಹಿರಂಗವಾಗಿ ಅಳುವ ಅಥವಾ ಅಳಲು ತೋಡಿಕೊಳ್ಳುವ ಸ್ವಾತಂತ್ರ್ಯ ಇಲ್ಲ. ಈಗ ಹೈಕೋರ್ಟ್ ಈ ವಿಚಾರವನ್ನು ಪ್ರಸ್ತಾಪಿಸುವ ಮೂಲಕ, ಯಾವುದೇ ಕ್ರೌರ್ಯವು ಮಹಿಳೆಯರಿಗೆ ಮಾತ್ರ ಸೀಮಿತವಾಗಿಲ್ಲ ಎಂಬುದನ್ನು ತಿಳಿಸಿದೆ. ಇದರಿಂದ, ಸಾಮಾಜಿಕ ನ್ಯಾಯವನ್ನು ಸಾಧಿಸುವ ದಿಸೆಯಲ್ಲಿ ಮಹತ್ವದ ಕರೆ ಕೊಟ್ಟಂತಾಗಿದೆ. ಮಹಿಳೆಯರ ಹಕ್ಕುಗಳ ರಕ್ಷಣೆಯ ಜೊತೆಗೆ ಪುರುಷರ ಮೇಲಿನ ಹಿಂಸೆಯನ್ನೂ ಗುರುತಿಸಿ ಸಕಾರಾತ್ಮಕ ತೀರ್ಮಾನಗಳನ್ನು ಕೈಗೊಳ್ಳಲು ಇದು ಪ್ರೇರಣೆಯಾಗುತ್ತದೆ.

ಮಂಜುನಾಥ್ ಹಾಲವರ್ತಿ, ಕೊಪ್ಪಳ

ಗ್ರಾಮಸ್ಥರ ಸೌಹಾರ್ದದ ನಡೆ ಸ್ತುತ್ಯರ್ಹ

ಮುಸ್ಲಿಮರ ಮನೆಯಲ್ಲಿ ಕುಟುಂಬದ ಸದಸ್ಯೆಯಂತೆ ವಾಸವಾಗಿದ್ದು ಸಾವಿಗೀಡಾದ ಹಿಂದೂ ಮಹಿಳೆಯ ಅಂತ್ಯ-ಸಂಸ್ಕಾರವನ್ನು ಹಿಂದೂ ಸಂಪ್ರದಾಯದಂತೆ ನೆರವೇರಿಸುವ ಮೂಲಕ ಉಡುಪಿ ಜಿಲ್ಲೆಯ ಕಾಪು ಮಲ್ಲಾರು ಗ್ರಾಮಸ್ಥರು ಸೌಹಾರ್ದ ಮೆರೆದಿರುವುದು (ಪ್ರ.ವಾ., ಜ. 23) ಶ್ಲಾಘನೀಯ. ಇತ್ತೀಚಿನ ವರ್ಷಗಳಲ್ಲಿ ಇಡೀ ದೇಶದಲ್ಲಿ ಕೋಮು ಮತ್ತು ಧರ್ಮದ ಆಧಾರದ ಮೇಲೆ ಎಲ್ಲವನ್ನೂ ನೋಡುವ ಮನೋಭಾವ ಪ್ರಬಲವಾಗಿದೆ. ಹೀಗಿರುವಾಗ, ಗ್ರಾಮಸ್ಥರ ನಡೆ ಅಮಾವಾಸ್ಯೆಯ ಕಾರ್ಗತ್ತಲಲ್ಲಿ ಹೊಳೆಯುವ ಕೋಲ್ಮಿಂಚಿನಂತೆ ಕಂಡುಬರುತ್ತಿದೆ. ಉಭಯ ಕೋಮಿನ ಜನ ಒಂದಾಗಿ ಶವಸಂಸ್ಕಾರದಲ್ಲಿ ಭಾಗಿಯಾಗಿರುವುದು ಹೃದಯವಂತಿಕೆ ಇನ್ನೂ ಸತ್ತಿಲ್ಲವೆಂಬುದನ್ನು ರುಜುವಾತು ಮಾಡಿದೆ. ಮೃತ ಜಾನಕಿ ಪೂಜಾರಿ ಅವರನ್ನು ಬಹುಕಾಲ ಆರೈಕೆ ಮಾಡಿರುವುದಲ್ಲದೆ ಸ್ವಂತ ತಾಯಿಯಂತೆ ಪೊರೆದಿರುವ ರಫೀಕ್ ಕುಟುಂಬದ ಮಾನವೀಯತೆ ನಿಜಕ್ಕೂ ಸ್ತುತ್ಯರ್ಹವಾದುದು. ಇದೇ ಸಮಯದಲ್ಲಿ ತಮ್ಮ ಸ್ವಂತ ಮನೆಯಿದ್ದರೂ ರಫೀಕ್ ಅವರ ಮನೆಯಲ್ಲೇ ಬದುಕಿದ ಜಾನಕಿಯವರ ಧರ್ಮನಿರಪೇಕ್ಷ ಸಹಬಾಳ್ವೆಯನ್ನು ಸಹ ಮೆಚ್ಚಲೇಬೇಕು. ಈ ರೀತಿಯ ಚಿಕ್ಕಪುಟ್ಟ ಘಟನೆಗಳು ಕೋಮುದಳ್ಳುರಿಯನ್ನು ಸ್ವಲ್ಪಮಟ್ಟಿಗಾದರೂ ನಂದಿಸಿ ಧರ್ಮಾಂಧರ ಕಣ್ಣು ತೆರೆಸಲು ಸಫಲವಾದರೆ ಬಹುತ್ವ ಭಾರತವನ್ನು ನೋಡಲು ಸಾಧ್ಯವಾಗುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಸಕಾಲದಲ್ಲಿ ನೆರವಾದವರ ನೆನೆಯೋಣ

ಬಾಲಿವುಡ್ ನಟ ಸೈಫ್ ಅಲಿ ಖಾನ್ ತಮ್ಮ ಮೇಲೆ ಹಲ್ಲೆ ನಡೆದ ರಾತ್ರಿ ತಾವು ಸಕಾಲದಲ್ಲಿ ಆಸ್ಪತ್ರೆ ತಲುಪಲು ನೆರವಾಗಿದ್ದ ಆಟೊ ಚಾಲಕ ಭಜನ್ ಸಿಂಗ್ ರಾಣಾ ಅವರನ್ನು ಮನೆಗೆ ಕರೆಸಿಕೊಂಡು ಧನ್ಯವಾದ ಹೇಳಿರುವುದರಿಂದ ರಾಣಾ ಖುಷಿಯಾಗಿದ್ದಾಗಿ ವರದಿಯಾಗಿದೆ. ಇದನ್ನು ನೋಡಿದಾಗ, ಈ ಹಿಂದೆ ನಾನು ಮೂಡಿಗೆರೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಡೆದ ಪ್ರಕರಣವೊಂದು ನೆನಪಾಯಿತು.

ಆಗ ಒಬ್ಬ ಯುವಕ ಬೆಳಗಿನ 5 ಗಂಟೆಯಲ್ಲಿ ದ್ವಿಚಕ್ರ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ನಮ್ಮ ಮನೆಯ ಮುಂದಿನ ಮರಕ್ಕೆ ಡಿಕ್ಕಿ ಹೊಡೆಸಿದ. ಕೆಲಸಕ್ಕೆ ಹೊರಡಲು ಅದೇ ತಾನೆ ಮನೆಯಿಂದ ಹೊರಬಂದಿದ್ದ ನಾನು ಓಡಿಹೋಗಿ ವಾಹನವನ್ನೆತ್ತಿ, ರಕ್ತ ಬಸಿಯುತ್ತಿದ್ದ ಅವನ ಮೂಗಿಗೆ ಪ್ರಥಮ ಚಿಕಿತ್ಸೆ ಮಾಡಿ, ಹತ್ತಿರದಲ್ಲಿದ್ದ ನಿಲ್ದಾಣಕ್ಕೆ ಹೋಗಿ ಆಟೊರಿಕ್ಷಾ ಗೊತ್ತುಪಡಿಸಿಕೊಂಡು ಬಂದೆ. ಬಳಿಕ ಆತನನ್ನು ಆಸ್ಪತ್ರೆಗೆ ದಾಖಲಿಸಿ, ಅದೇ ಆಟೊದಲ್ಲಿ ಅವನ ಪಾಲಕರ ಮನೆಗೆ ಹೋಗಿ ವಿಷಯ ತಿಳಿಸಿದೆ. ಇದಾಗಿ ನಾಲ್ಕೈದು ದಿನಗಳ ನಂತರ ಅವನ ಪಾಲಕರು ಮನೆಗೆ ಬಂದು, ನನ್ನನ್ನು ಅತ್ಯಂತ ಪ್ರೀತಿಯಿಂದ ಕಂಡು, ಅವರ ಬಂಧುಗಳಿಗೆಲ್ಲಾ ನನ್ನನ್ನು ಪರಿಚಯಿಸಿದಾಗ ಆದ ಆನಂದಕ್ಕೆ ಪಾರವೇ ಇರಲಿಲ್ಲ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಅರಿವಿದ್ದೂ ವಂಚನೆಗೊಳಗಾಗುವುದೇಕೆ?

ಖಾಸಗಿ ಹಣಕಾಸು ಸಂಸ್ಥೆಗಳನ್ನು ನಂಬಿ ಹಣ ಹೂಡಿಕೆ ಮಾಡಿ, ವಂಚನೆಗೊಳಗಾದ ಸಂತ್ರಸ್ತೆಯರಿಂದ 7.80 ಲಕ್ಷ ದೂರುಗಳು ದಾಖಲಾಗಿರುವ ಸುದ್ದಿಯನ್ನು (ಪ್ರ.ವಾ., ಜ. 23) ಓದಿ, ಸಂತಾಪ ವ್ಯಕ್ತವಾಗುವ ಬದಲು ಸಿಟ್ಟು ಬಂತು. ನಮ್ಮ ಜನರಿಗೆ ಎಷ್ಟೇ ತಿಳಿವಳಿಕೆ ನೀಡಿದರೂ ದುರಾಸೆಯಿಂದ, ಇರುವುದನ್ನೂ ಕಳೆದುಕೊಂಡು ಗೋಳಾಡುತ್ತಾರೆ. ರಾಷ್ಟ್ರೀಕೃತ ಬ್ಯಾಂಕುಗಳು, ಅಂಚೆ ಕಚೇರಿಗಳಲ್ಲಿ ಎಲ್ಲಾ ವರ್ಗದ ಜನರಿಗೆ ಉಪಯೋಗವಾಗುವಂತಹ ಠೇವಣಿ ಯೋಜನೆಗಳು ಚಾಲ್ತಿಯಲ್ಲಿ ಇರುತ್ತವೆ. ಆದರೆ ಖಾಸಗಿಯವರು ಕೊಡುವ ಹೆಚ್ಚಿನ ಬಡ್ಡಿಯಾಸೆಯ ಹಿಂದೆ ಬಿದ್ದು ಮೂಲ ಠೇವಣಿಯನ್ನೇ ಕಳೆದುಕೊಳ್ಳುತ್ತಾರೆ. ಅತಿ ವೇಗವಾಗಿ ದುಪ್ಪಟ್ಟು ಅಥವಾ ಇನ್ನೂ ಹೆಚ್ಚು ಪಟ್ಟು ಹಣ ಮಾಡುವ ಯೋಜನೆಗಳ ಮೋಸದ ಬಲೆಗೆ ಬಿದ್ದು ಕೊನೆಗೆ ಸಂತ್ರಸ್ತರಾಗುತ್ತಾರೆ.

ಸಾಲವನ್ನೂ ರಾಷ್ಟ್ರೀಕೃತ ಬ್ಯಾಂಕುಗಳು, ಜೀವ ವಿಮಾ ನಿಗಮದಂತಹ ಅಧಿಕೃತ ಸಂಸ್ಥೆಗಳಿಂದ ಪಡೆಯದೆ, ಖಾಸಗಿಯವರ ಬಳಿ ಹೋಗಿ ಪಡೆಯುತ್ತಾರೆ. ಏಕೆಂದರೆ ಬ್ಯಾಂಕುಗಳಲ್ಲಿ ಹಣ ದುರುಪಯೋಗ ತಡೆಯಲು ಸ್ವಲ್ಪ ಕಠಿಣ ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ. ಕೆಲವರು ದುರುಪಯೋಗ ಮಾಡಿಕೊಳ್ಳುವ ಉದ್ದೇಶದಿಂದಲೇ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳಲ್ಲಿ ಸಾಲ ಪಡೆದು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಮೋಸ ಮಾಡುವವರಿಗೆ ಶಿಕ್ಷೆ ವಿಧಿಸಬಹುದು. ಆದರೆ ಮೋಸ ಹೋಗುವ ಸಾಧ್ಯತೆ ಇದೆ ಎಂದು ತಿಳಿದಿದ್ದರೂ ಅದೇ ಕೆಲಸಕ್ಕೆ ಮುಂದಾಗುವವರಿಗೆ ಏನು ಹೇಳಬೇಕು? ಇವರಿಗೆ ತೆರಿಗೆದಾರರ ಹಣದಿಂದ ಸರ್ಕಾರ ಪರಿಹಾರ ಒದಗಿಸಬೇಕೇ?

ಟಿ.ವಿ.ಬಿ.ರಾಜನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.




ಮುಖ ತಿರುವಿದ ಮೆಟಾ

ಫೇಸ್‌ಬುಕ್ ಸೇರಿದಂತೆ ನಾಲ್ಕು ಸಾಮಾಜಿಕ ಜಾಲತಾಣಗಳ ಮಾಲೀಕತ್ವ ಹೊಂದಿರುವ, ಮಾರ್ಕ್ ಜುಕರ್‌ಬರ್ಗ್ ನೇತೃತ್ವದ ಮೆಟಾ ಕಂಪನಿಯು ಅಮೆರಿಕದಲ್ಲಿ ತನ್ನ ಜಾಲತಾಣಗಳಲ್ಲಿ ಪ್ರಕಟವಾಗುವ ವಿಷಯಗಳ ಬಗ್ಗೆ ಮೂರನೇ ವ್ಯಕ್ತಿ/ಸಂಸ್ಥೆಯಿಂದ ಫ್ಯಾಕ್ಟ್ ಚೆಕ್ ಮಾಡಿಸುವುದನ್ನು ನಿಲ್ಲಿಸುವುದಾಗಿ ಹೇಳಿದೆ. 'ಎಕ್ಸ್' ಮಾದರಿಯಲ್ಲಿ 'ಸಮುದಾಯದಿಂದ ಟಿಪ್ಪಣಿ' (ಕಮ್ಯುನಿಟಿ ನೋಟ್ಸ್) ನೀತಿಯನ್ನು ಜಾರಿಗೆ ತರುವುದಾಗಿ ಹೇಳಿದೆ. ಮೆಟಾ ಫ್ಯಾಕ್ಟ್ ಚೆಕ್ ನೀತಿ ಅಳವಡಿಸಿಕೊಂಡದ್ದಕ್ಕೂ, ಈಗ ಅದನ್ನು ರದ್ದುಪಡಿಸುತ್ತಿರುವುದಕ್ಕೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೇ ಕಾರಣ ಎನ್ನಲಾಗುತ್ತಿದೆ. ಮೆಟಾದ ಈ ನಿರ್ಧಾರಕ್ಕೆ ಜಾಗತಿಕ ಮಟ್ಟದಲ್ಲಿ ವಿರೋಧ ವ್ಯಕ್ತವಾಗಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಸಾಮಾಜಿಕ ಜಾಲತಾಣಗಳ ಮಟ್ಟಿಗೆ ಬಹುಮುಖ್ಯ ಮಾಹಿತಿಯೊಂದು ಅಮೆರಿಕದಿಂದ ಬಂದಿದೆ. ಫೇಸ್‌ಬುಕ್, ವಾಟ್ಸ್ ಆ್ಯಪ್, ಇನ್‌ಸ್ಟಾಗ್ರಾಂ, ಥ್ರೆಡ್ಸ್ ಒಡೆತನ ಹೊಂದಿರುವ ಮೆಟಾ ಕಂಪನಿಯು ಅಮೆರಿಕದ ಮಟ್ಟಿಗೆ ಫ್ಯಾಕ್ಟ್ ಚೆಕ್ ವ್ಯವಸ್ಥೆಯಿಂದ ಹೊರಬರುತ್ತಿರುವುದಾಗಿ ಅದರ ಸಿಇಒ ಮಾರ್ಕ್ ಜುಕರ್‌ಬರ್ಗ್ ಇದೇ 7ರಂದು ಘೋಷಿಸಿದ್ದಾರೆ. ತಮ್ಮ ವೇದಿಕೆಗಳಲ್ಲಿ ಪ್ರಕಟ ಮಾಡುವ ಮಾಹಿತಿಗಳ ಬಗೆಗಿನ ನಿರ್ಬಂಧಗಳನ್ನು ಸಡಿಲಗೊಳಿಸಿ, ನಿಯಮಗಳನ್ನು ಸರಳಗೊಳಿಸಿರುವುದಾಗಿ ತಿಳಿಸಿದ್ದಾರೆ. ಬಳಕೆದಾರರಿಗೆ ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡುವುದಾಗಿ ಹೇಳಿದ್ದಾರೆ. ತಮ್ಮ ವೇದಿಕೆಗಳು 'ಮುಖ್ಯವಾಹಿನಿಯ ಚರ್ಚೆಗಳಿಂದ ದೂರ ಸರಿದಿರುವುದು' ಈ ಬದಲಾವಣೆಗೆ ಕಾರಣ ಎಂದಿದ್ದಾರೆ.

ಫ್ಯಾಕ್ಟ್ ಚೆಕ್ ವ್ಯವಸ್ಥೆಯು 'ಅತಿಯಾದ ರಾಜಕೀಯ ಪಕ್ಷಪಾತ' ಅನುಸರಿಸಿ, ವಿಶ್ವಾಸ ಮೂಡಿಸಿದ್ದಕ್ಕಿಂತಲೂ ಹೆಚ್ಚಿನ ಮಟ್ಟದ ಅಪನಂಬಿಕೆಗೆ ಕಾರಣವಾಗಿವೆ. ಹೀಗಾಗಿ, ಕಂಪನಿಯು ತನ್ನ ಮೂಲ ಸಿದ್ಧಾಂತಕ್ಕೆ ಹಿಂದಿರುಗುತ್ತಿದೆ ಎಂದು ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಜತೆಗೆ, ಪೋಸ್ಟ್‌ಗಳ ವಾಸ್ತವಾಂಶ ಬಯಲಿಗೆ ತರಲು 'ಸಮುದಾಯದಿಂದ ಟಿಪ್ಪಣಿ' ಪದ್ಧತಿ ಅಳವಡಿಸಿಕೊಂಡಿರುವುದಾಗಿ ಜುಕರ್‌ಬರ್ಗ್ ಹೇಳಿದ್ದಾರೆ. ಸಮುದಾಯದಿಂದ ಟಿಪ್ಪಣಿ ಎಂದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿ/ಮಾಹಿತಿಯ ಸತ್ಯಾಸತ್ಯತೆಯನ್ನು ಬಳಕೆದಾರರೇ ನಿರ್ಧರಿಸುವುದು (ಬಳಕೆದಾರರ ಪ್ರತಿಕ್ರಿಯೆ). ಒಂದು ಪೋಸ್ಟ್‌ಗೆ ಸಂಬಂಧಿಸಿದಂತೆ ಅದು ವಾಸ್ತವವೋ, ಸುಳ್ಳೋ ಎನ್ನುವುದರ ಬಗ್ಗೆ ಪ್ರತಿಕ್ರಿಯಿಸಲು ಬಳಕೆದಾರರಿಗೆ ಅವಕಾಶವಿರುತ್ತದೆ. ಎಲಾನ್ ಮಸ್ಕ್ ಅವರ 'ಎಕ್ಸ್' ವೇದಿಕೆಯಲ್ಲಿ ಈ ಮಾದರಿಯನ್ನು ಜಾರಿಗೆ ತಂದಿದ್ದಾರೆ.



ಟ್ರಂಪ್ ಕಾರಣವೇ?: ಆದರೆ, ಸಾಮಾಜಿಕ ಜಾಲತಾಣಗಳ ತಜ್ಞರು ಮತ್ತು ವಿಶ್ಲೇಷಕರು ಹೇಳುತ್ತಿರುವ ವಿಚಾರ ಬೇರೆಯೇ ಇದೆ. ಮೆಟಾ ಕಂಪನಿಯು 2016ರಲ್ಲಿ ಫ್ಯಾಕ್ಟ್ ಚೆಕ್ ನೀತಿಯನ್ನು ಅಳವಡಿಸಿಕೊಳ್ಳುವುದಕ್ಕೆ ಮತ್ತು ಇಂದು ಅದರಿಂದ ಹೊರಬರುತ್ತಿರುವುದಕ್ಕೆ ಕಾರಣ ಡೊನಾಲ್ಡ್ ಟ್ರಂಪ್ ಎನ್ನಲಾಗಿದೆ. 2016ರ ಅಮೆರಿಕದ ಸಾರ್ವತ್ರಿಕ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಆರಿಸಿ ಬಂದಿದ್ದರು. ಚುನಾವಣೆಯ ಸಂದರ್ಭದಲ್ಲಿ ಟ್ರಂಪ್ ಪರವಾದ ಪೋಸ್ಟ್‌ಗಳನ್ನು ಹೆಚ್ಚಾಗಿ ಹರಡಿ, ಫಲಿತಾಂಶ ಅವರಿಗೆ ಅನುಕೂಲಕರವಾಗಿ ಬರಲು ನೆರವು ನೀಡಿದೆ ಎಂದು ಫೇಸ್‌ಬುಕ್ ವಿರುದ್ಧ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಆ ಅಪಖ್ಯಾತಿಯನ್ನು ಹೋಗಲಾಡಿಸುವ ಸಲುವಾಗಿ ಫೇಸ್‌ಬುಕ್ ಜಾಗತಿಕ ಮಟ್ಟದಲ್ಲಿ ಫ್ಯಾಕ್ಟ್ ಚೆಕ್ ಮಾಡುವ ನೀತಿಯನ್ನು ಜಾರಿಗೆ ತಂದು, ಮೂರನೇ ವ್ಯಕ್ತಿ/ಸಂಸ್ಥೆಯಿಂದ ಫ್ಯಾಕ್ಟ್ ಚೆಕ್ ಮಾಡಿಸುವ ಕ್ರಮವನ್ನು ಅನುಸರಿಸತೊಡಗಿತು. ಅಪಾಯಕಾರಿ ಪೋಸ್ಟ್‌ಗಳನ್ನು ತೆಗೆದುಹಾಕುವಂಥ ತಂತ್ರಜ್ಞಾನ ಅಳವಡಿಸಿಕೊಂಡಿತು. ಈಗ ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಅವರಿಗೆ ಅನುಕೂಲ ಮಾಡಿಕೊಡಲು ಕಂಪನಿ ಈ ನಿರ್ಧಾರ ತಳೆದಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಜಗತ್ತಿನ ಅಗ್ರ 10 ಸಾಮಾಜಿಕ ಜಾಲತಾಣಗಳಲ್ಲಿ ನಾಲ್ಕು ಮೆಟಾ ಕಂಪನಿಗೆ ಸೇರಿವೆ. ಜಾಗತಿಕ ಮಟ್ಟದಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವ ಹೆಚ್ಚಾಗುತ್ತಿದೆ. ವಿಶ್ವದ ಮೂರನೇ ಎರಡರಷ್ಟು ಜನರು ಇಂಟರ್‌ನೆಟ್ ಬಳಸುತ್ತಿದ್ದಾರೆ; ಅಂದಾಜು 500 ಕೋಟಿ ಜನ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಪ್ಯೂ ರಿಸರ್ಚ್ ಸಂಸ್ಥೆಯು 27 ರಾಷ್ಟ್ರಗಳಲ್ಲಿ ಸಮೀಕ್ಷೆ ನಡೆಸಿದ್ದು, ಸಾಮಾಜಿಕ ಜಾಲತಾಣಗಳಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಳಿತಾಗಿದೆ ಎಂದು 20 ರಾಷ್ಟ್ರಗಳ ಬಹುತೇಕ ಮಂದಿಯು ಅಭಿಪ್ರಾಯಪಟ್ಟಿದ್ದಾರೆ.

ಆದರೆ, ಸಾಮಾಜಿಕ ಜಾಲತಾಣವು ಸುಳ್ಳು ಸುದ್ದಿಯ ಪ್ರಮುಖ ಮೂಲವೂ ಆಗಿದೆ. ಈ ವೇದಿಕೆಗಳಲ್ಲಿ ಹರಿಯುತ್ತಿರುವ ಮಾಹಿತಿ ಪ್ರವಾಹದ ನಡುವೆ ಸುಳ್ಳು ಸುದ್ದಿ ಯಾವುದು, ವಿಶ್ವಾಸಾರ್ಹ ಮಾಹಿತಿ ಯಾವುದು ಎಂಬುದರ ಬಗ್ಗೆ ಶೇ 59ರಷ್ಟು ಬಳಕೆದಾರರಿಗೆ ಗೊಂದಲ ಇದೆ ಎಂದು ರಾಯಿಟರ್ಸ್ ಇನ್‌ಸ್ಟಿಟ್ಯೂಟ್‌ನ ವರದಿಯೊಂದು ಹೇಳಿದೆ. ಉದ್ದೇಶಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಸುಳ್ಳು ಮಾಹಿತಿ ಹರಡುವುದು ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಅಪಾಯವಾಗಿದೆ ಎಂದು ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಗ್ಲೋಬಲ್ ರಿಸ್ಕ್ಸ್ ರಿಪೋರ್ಟ್ ಉಲ್ಲೇಖಿಸಿದೆ.

ಸುಳ್ಳು ಸುದ್ದಿಯ ಮೂಲಕ ಒಂದು ದೇಶದ ಮತದಾರರ ಮೇಲೆ ವಿದೇಶಿ ಸಂಸ್ಥೆಗಳು ಪ್ರಭಾವ ಬೀರುವುದು, ಬಿಕ್ಕಟ್ಟಿನ ವಲಯಗಳಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಗೊಂದಲ ಸೃಷ್ಟಿಸುವುದು, ಮತ್ತೊಂದು ದೇಶದ ವಸ್ತು, ಸೇವೆಗಳ ಬಗ್ಗೆ ಅನುಮಾನ ಮೂಡಿಸುವುದು ಮಾಡಬಹುದಾಗಿದೆ. ಇಂಥ ಅಪಾಯಗಳನ್ನು ಎದುರಿಸಲು ಫ್ಯಾಕ್ಟ್ ಚೆಕ್ ಮಾಡುವ ವ್ಯವಸ್ಥೆ ಅತ್ಯವಶ್ಯಕ ಎಂದು ಡಬ್ಲ್ಯುಇಎಫ್ ವರದಿ ಹೇಳಿದೆ. ಮೆಟಾ ಸದ್ಯ ಅಮೆರಿಕದ ಮಟ್ಟಿಗೆ ಫ್ಯಾಕ್ಟ್ ಚೆಕ್ ಮಾಡುವುದಿಲ್ಲ ಎಂದಿದ್ದರೂ ಮುಂದೆ ಇದನ್ನು ವಿಶ್ವದ ಇತರೆಡೆಯೂ ವಿಸ್ತರಿಸುವ ಸಾಧ್ಯತೆ ಇದೆ.

ಅಮೆರಿಕದ ಮಾಜಿ ಅಧ್ಯಕ್ಷ ಜೋ ಬೈಡನ್, ಫ್ಯಾಕ್ಟ್ ಚೆಕ್ ಸಂಸ್ಥೆಗಳು, ವಿವಿಧ ವಲಯಗಳ ತಜ್ಞರು ಮೆಟಾ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದ ದ್ವೇಷ ಭಾಷಣ, ಸುಳ್ಳು ಸುದ್ದಿ, ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ ಪೋಸ್ಟ್‌ಗಳು ಹೆಚ್ಚಬಹುದು ಎನ್ನುವ ಆತಂಕ ವ್ಯಕ್ತಪಡಿಸಿದ್ದಾರೆ.

ಮೆಟಾವು ಸ್ವತಂತ್ರ ಫ್ಯಾಕ್ಟ್ ಚೆಕ್ ಸಂಸ್ಥೆಗಳಿಂದ ಫ್ಯಾಕ್ಟ್‌ಚೆಕ್ ಮಾಡಿಸುತ್ತಿದ್ದು, 119 ರಾಷ್ಟ್ರಗಳಲ್ಲಿ ಈ ವ್ಯವಸ್ಥೆಯನ್ನು ಹೊಂದಿದೆ. ಅಂತರರಾಷ್ಟ್ರೀಯ ಫ್ಯಾಕ್ಟ್ ಚೆಕ್ ನೆಟ್‌ವರ್ಕ್‌ನ (ಐಎಫ್‌ಸಿಎನ್) 90 ಸಂಸ್ಥೆಗಳೊಂದಿಗೆ ಮೆಟಾ ಸಹಯೋಗ ಹೊಂದಿದ್ದು, 60 ಭಾಷೆಗಳಲ್ಲಿ ಸೇವೆ ಒದಗಿಸುತ್ತಿದೆ. ಮೆಟಾ ಯುರೋಪಿಯನ್ ಫ್ಯಾಕ್ಟ್ ಚೆಕಿಂಗ್ ಸ್ಟ್ಯಾಂಡರ್ಡ್ಸ್ ನೆಟ್‌ವರ್ಕ್ ಸೇವೆಯನ್ನೂ ಬಳಸುತ್ತಿದೆ. ಇದರ ಹೊರತಾಗಿಯೂ ಫ್ಯಾಕ್ಟ್ ಚೆಕ್ ಸಂಸ್ಥೆಗಳು ಹಣಕಾಸಿನ ಕೊರತೆ ಎದುರಿಸುತ್ತಿವೆ ಎಂದು ಐಎಫ್‌ಸಿಎನ್ ಹೇಳಿದೆ. ಈಗ ಮೆಟಾ ಫ್ಯಾಕ್ಟ್ ಚೆಕ್ ಮಾಡುವುದಿಲ್ಲ ಎಂದಿರುವುದರಿಂದ ಈ ಸಂಸ್ಥೆಗಳಿಗೆ ಮತ್ತಷ್ಟು ಹಣಕಾಸಿನ ಮುಗ್ಗಟ್ಟಿನ ಆತಂಕ ಉಂಟಾಗಿದ್ದು, ಅವು ಬೇರೆ ಆದಾಯ ಮೂಲಗಳನ್ನು ಹುಡುಕಿಕೊಳ್ಳಬೇಕಾಗಿದೆ.

ಜನಪ್ರಿಯ ಜಾಲತಾಣಗಳ ಬಳಕೆದಾರರು

(ಕೋಟಿಗಳಲ್ಲಿ) (2024ರ ಏಪ್ರಿಲ್ 30ಗಳ ಅಂಕಿ ಅಂಶ)

ಜಾಲತಾಣ	ಬಳಕೆದಾರರು
ಫೇಸ್‌ಬುಕ್	306.5
ಯುಟ್ಯೂಬ್	250.4
ಇನ್‌ಸ್ಟಾಗ್ರಾಂ	200
ವಾಟ್ಸ್‌ಆ್ಯಪ್	200
ಟಿಕ್‌ಟಾಕ್	158.2
ವಿಚಾಟ್	134.3
ಫೇಸ್‌ಬುಕ್ ಮೆಸೆಂಜರ್	101
ಟೆಲಿಗ್ರಾಂ	90
ಸ್ನ್ಯಾಪ್‌ಚಾಟ್	80
ಎಕ್ಸ್ (ಟ್ವಿಟರ್)	61.1



ಆರ್ಥಿಕ ಸ್ಥಿರತೆ: ಫ್ಯಾಕ್ಟ್ ಚೆಕ್ ಸಂಸ್ಥೆಗಳ ಸವಾಲು

ಸಾಮಾಜಿಕ ಜಾಲತಾಣಗಳಲ್ಲಿನ ಮಾಹಿತಿ ಮಹಾಪೂರದಲ್ಲಿ ಸುಳ್ಳು ಯಾವುದು, ಸತ್ಯ ಯಾವುದು ಎಂಬುದನ್ನು ಪತ್ತೆ ಹಚ್ಚುವುದಕ್ಕಾಗಿ ಜಾಗತಿಕ ಮಟ್ಟದಲ್ಲಿ ಇಂಟರ್‌ನ್ಯಾಷನಲ್ ಫ್ಯಾಕ್ಟ್ ಚೆಕಿಂಗ್ ನೆಟ್‌ವರ್ಕ್ (ಐಎಫ್‌ಸಿಎನ್) ಎಂಬ ಜಾಲವೊಂದು ಕಾರ್ಯನಿರ್ವಹಿಸುತ್ತಿದೆ. ವಿವಿಧ ರಾಷ್ಟ್ರಗಳ 138 ಸಂಸ್ಥೆಗಳು ಈ ಜಾಲದ ಸದಸ್ಯತ್ವ ಹೊಂದಿವೆ. ಇಲ್ಲಿನ ಅರ್ಧಕ್ಕೂ ಹೆಚ್ಚು ಸಂಸ್ಥೆಗಳು (ಶೇ 53ರಷ್ಟು) ಲಾಭರಹಿತ ಸಂಸ್ಥೆಗಳು. ಇವುಗಳು ಆದಾಯಕ್ಕಾಗಿ ತಂತ್ರಜ್ಞಾನ ಕಂಪನಿಗಳು ನೀಡುವ ಆರ್ಥಿಕ ನೆರವು, ತರಬೇತಿ ಕಾರ್ಯಕ್ರಮಗಳು, ಸದಸ್ಯತ್ವ ಶುಲ್ಕ ಅಥವಾ ಬಳಕೆದಾರರ ದೇಣಿಗೆಯನ್ನು ಅವಲಂಬಿಸಿವೆ.

ಮೆಟಾವು 2016ರಿಂದ ಇಲ್ಲಿಯವರೆಗೆ ಫ್ಯಾಕ್ಟ್ ಚೆಕಿಂಗ್‌ಗಾಗಿ 10 ಕೋಟಿ ಡಾಲರ್ (₹865 ಕೋಟಿ) ವ್ಯಯಿಸಿದ್ದು, ಅದರಲ್ಲಿ ಸಿಂಹಪಾಲು ಈ ಜಾಲದ ಸಂಸ್ಥೆಗಳಿಗೆ ಹೋಗಿವೆ. ಈಗ ಮೆಟಾವು ಫ್ಯಾಕ್ಟ್ ಚೆಕಿಂಗ್ ನೀತಿ ಬದಲಾಯಿಸುತ್ತಿರುವುದರಿಂದ ಸ್ವತಂತ್ರವಾಗಿ ಫ್ಯಾಕ್ಟ್ ಚೆಕ್ ಮಾಡುವ ಸಂಸ್ಥೆಗಳಿಗೆ ಆರ್ಥಿಕ ಸಂಕಷ್ಟ ಎದುರಾಗುವ ಕಳವಳ ವ್ಯಕ್ತವಾಗಿದೆ.

ಐಎಫ್‌ಸಿಎನ್ ಪ್ರತಿ ವರ್ಷ ಫ್ಯಾಕ್ಟ್ ಚೆಕ್ ಮಾಡುವವರ ಸ್ಥಿತಿಗತಿ ವರದಿಯನ್ನು ಪ್ರಕಟಿಸುತ್ತದೆ. ಅದರ ಭಾಗವಾಗಿ ಸಂಸ್ಥೆಗಳಿಗೆ ವಿವಿಧ ಪ್ರಶ್ನೆಗಳನ್ನು ಕೇಳಲಾಗುತ್ತದೆ. 2023ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಸಂಸ್ಥೆಗಳು ಎದುರಿಸುತ್ತಿರುವ ದೊಡ್ಡ ಸವಾಲುಗಳು ಯಾವುವು ಎಂಬ ಪ್ರಶ್ನೆ ಕೇಳಲಾಗಿತ್ತು. 136 ಸಂಸ್ಥೆಗಳು ಇದಕ್ಕೆ ಉತ್ತರಿಸಿವೆ. ಈ ಪೈಕಿ ಶೇ 83.70ರಷ್ಟು ಸಂಸ್ಥೆಗಳು ಹಣಕಾಸಿನ ನೆರವು ಪಡೆಯುವುದು ಮತ್ತು ಆರ್ಥಿಕ ಸ್ಥಿರತೆ ಕಾಪಾಡಿಕೊಳ್ಳುವುದು ಅತ್ಯಂತ ದೊಡ್ಡ ಸವಾಲು ಎಂದು ಹೇಳಿವೆ. ಕಾನೂನು ತೊಡಕುಗಳು, ನಂಬಲರ್ಹ ಮಾಹಿತಿಗಳ ಲಭ್ಯತೆ, ಫ್ಯಾಕ್ಟ್ ಚೆಕ್ ಮಾಡುವ ತಂತ್ರಜ್ಞಾನ ಟೂಲ್‌ಗಳ ಅಲಭ್ಯತೆ ಇನ್ನಿತರ ಸವಾಲುಗಳು ಎಂದು ಅವು ತಿಳಿಸಿವೆ.

ಸವಾಲುಗಳು: ಸಮೀಕ್ಷೆ ಹೇಳುವುದೇನು?

ಸವಾಲು	ಪ್ರಮಾಣ
ಹಣಕಾಸಿನ ನೆರವು ಮತ್ತು ಆರ್ಥಿಕ ಸ್ಥಿರತೆ	83.70%
ನಂಬಲರ್ಹ ಮಾಹಿತಿಗಳ ಲಭ್ಯತೆ	22.22%
ತಂತ್ರಜ್ಞಾನ ಟೂಲ್‌ಗಳ ಲಭ್ಯತೆ	45.93%
ಕಾನೂನು ಮತ್ತು ನಿಯಂತ್ರಣ ನಿಯಮಗಳ ತೊಡಕು	14.81%
ಸಿಬ್ಬಂದಿ ಮತ್ತು ಪರಿಣತಿ	42.96%

ಆಧಾರ: ಪಿಟಿಐ, ಮೆಟಾ ವೆಬ್‌ಸೈಟ್, ಸ್ಟೇಟ್ ಆಫ್ ಫ್ಯಾಕ್ಟ್ ಚೆಕರ್ಸ್ ರಿಪೋರ್ಟ್–2023, ರಾಯಿಟರ್ಸ್ ಇನ್‌ಸ್ಟಿಟ್ಯೂಟ್ ಆಫ್ ಡಿಜಿಟಲ್ ನ್ಯೂಸ್ ರಿಪೋರ್ಟ್–2024, ಸ್ಟ್ಯಾಟಿಸ್ಟಾ.ಕಾಮ್

ಸುದ್ದಿ ವಿಶ್ವಾಸಾರ್ಹತೆ: ಅರ್ಧಕ್ಕೂ ಹೆಚ್ಚು ಬಳಕೆದಾರರಲ್ಲಿ ಗೊಂದಲ

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ರಾಯಿಟರ್ಸ್ ಇನ್‌ಸ್ಟಿಟ್ಯೂಟ್ ಫಾರ್ ಜರ್ನಲಿಸಂನ ಅಧ್ಯಯನಕಾರರು ಕಳೆದ ವರ್ಷ (2024) ಜಾಗತಿಕ ಮಟ್ಟದಲ್ಲಿ ಡಿಜಿಟಲ್ ಸುದ್ದಿಗಳು, ಅವುಗಳ ವಿಶ್ವಾಸಾರ್ಹತೆಯ ಬಗ್ಗೆ ಸಮೀಕ್ಷೆ ನಡೆಸಿದ್ದಾರೆ. ಭಾರತ ಸೇರಿದಂತೆ ಆರು ಖಂಡಗಳ 47 ರಾಷ್ಟ್ರಗಳ 94,943 ಸಾಮಾಜಿಕ ಜಾಲತಾಣ ಬಳಕೆದಾರರನ್ನು ಆನ್‌ಲೈನ್‌ನಲ್ಲಿ ಸಂದರ್ಶಿಸಿ ವರದಿ ಸಿದ್ಧಪಡಿಸಿದೆ (ಭಾರತದಲ್ಲಿ 2,016 ಮಂದಿಯ ಅಭಿಪ್ರಾಯ ಸಂಗ್ರಹಿಸಿದೆ). ಇದರ ಪ್ರಕಾರ, ಆನ್‌ಲೈನ್ ಸುದ್ದಿಗಳಲ್ಲಿ ಯಾವುದು ಸುಳ್ಳು, ಯಾವುದು ನಿಜ ಎಂಬ ಗೊಂದಲ ಜಾಗತಿಕವಾಗಿ ಪ್ರತಿ 10 ಜನರ ಪೈಕಿ ಆರು ಮಂದಿಯಲ್ಲಿದೆ. ಸುದ್ದಿಗಳ ವಿಶ್ವಾಸಾರ್ಹತೆ ಬಗ್ಗೆ ಕಳವಳ ಇದೆ ಎಂದು ಶೇ 59 ಮಂದಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 2023ಕ್ಕೆ ಹೋಲಿಸಿದರೆ ಈ ನಿಲುವು ಹೊಂದಿರುವವರ ಪ್ರಮಾಣದಲ್ಲಿ ಶೇ 3ರಷ್ಟು ಹೆಚ್ಚಳವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಅತಿ ಹೆಚ್ಚು ಶೇ 81ರಷ್ಟು ಮಂದಿಗೆ ಗೊಂದಲ ಇದ್ದರೆ, ಅಮೆರಿಕದಲ್ಲಿ ಶೇ 72ರಷ್ಟು ಜನ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತದಲ್ಲಿ ಈ ಪ್ರಮಾಣ ಶೇ 58ರಷ್ಟಿದೆ. 2023ಕ್ಕೆ ಹೋಲಿಸಿದರೆ ಮೂರು ರಾಷ್ಟ್ರಗಳ ಪ್ರಮಾಣದಲ್ಲಿ ಕ್ರಮವಾಗಿ ಶೇ 6, ಶೇ 8 ಮತ್ತು ಶೇ 5ರಷ್ಟು ಏರಿಕೆಯಾಗಿದೆ.

ಆನ್‌ಲೈನ್ ಸುದ್ದಿ ವಿಶ್ವಾಸಾರ್ಹತೆ ದೃಢಪಡಿಸಲು ಕಷ್ಟಪಡುವವರ ಪ್ರಮಾಣ (%ಗಳಲ್ಲಿ)

ವೇದಿಕೆ	ಸುಲಭ	ಗೊತ್ತಿಲ್ಲ	ಕಷ್ಟ
ಟಿಕ್‌ಟಾಕ್	44	29	27
ಎಕ್ಸ್	41	35	24
ಫೇಸ್‌ಬುಕ್	41	28	21
ಇನ್‌ಸ್ಟಾಗ್ರಾಂ	49	31	20
ಲಿಂಕ್ಡ್‌ಇನ್	41	41	18
ವಾಟ್ಸ್‌ಆ್ಯಪ್	51	32	17
ಯುಟ್ಯೂಬ್	54	29	17
ಗೂಗಲ್ ಸರ್ಚ್	60	27	13

ಸಿನಿ ಬಿಟ್ಸ್


ಅಸ್ತಿತ್ವದ ಹೋರಾಟ ಈ 'ಲ್ಯಾಂಡ್ ಲಾರ್ಡ್'

'ಸಾರಥಿ' ಚಿತ್ರ ನಿರ್ಮಿಸಿದ್ದ ಕೆ.ವಿ.ಸತ್ಯಪ್ರಕಾಶ್ ಹನ್ನೆರಡು ವರ್ಷಗಳ ನಂತರ 'ಸಾರಥಿ ಫಿಲಂಸ್' ಮೂಲಕ 'ದುನಿಯಾ' ವಿಜಯ್ ನಟನೆಯ 'ಲ್ಯಾಂಡ್ ಲಾರ್ಡ್' ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

'ಗುರುಶಿಷ್ಯರು' ಸಿನಿಮಾ ನಿರ್ದೇಶಕ ಜಡೇಶ ಕೆ. ಹಂಪಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಚಿತ್ರದ ಚಿತ್ರೀಕರಣ ಸದ್ಯ ನೆಲಮಂಗಲದ ಬಳಿ ನಿರ್ಮಿಸಲಾಗಿರುವ ಸೆಟ್‌ನಲ್ಲಿ ನಡೆಯುತ್ತಿದೆ.

ಇತ್ತೀಚೆಗೆ ಚಿತ್ರತಂಡ ಸುದ್ದಿಗೋಷ್ಠಿ ನಡೆಸಿ ಚಿತ್ರದ ಕುರಿತು ಮಾಹಿತಿ ಹಂಚಿಕೊಂಡಿತು. 'ಇದೊಂದು ಹಳ್ಳಿ ಹಿನ್ನೆಲೆಯ ಕಥೆ. 'ಕಾಟೇರ'ಕ್ಕೂ ಇದಕ್ಕೂ ಸಂಬಂಧವಿಲ್ಲ. ಇಲ್ಲಿಯೂ ಅಸ್ತಿತ್ವದ ಹೋರಾಟ ಇರುತ್ತದೆ. 80–90ರ ದಶಕದ ಕಥೆ ಇದಾಗಿದೆ. ಕೋಲಾರ ಸುತ್ತಮುತ್ತ ನಡೆದ ಈಗಲೂ ನಡೆಯುತ್ತಿರುವ ಘಟನೆಯನ್ನು ಕಥೆ ಹೊಂದಿದೆ. ಈ ಕಥೆಯ ಒನ್‌ಲೈನ್ ಅನ್ನು ವಿಜಯ್ ಇಷ್ಟಪಟ್ಟರು. ವಿಜಯ್ ಅವರು ಇಲ್ಲದೇ ಈ ಸಿನಿಮಾವನ್ನು ಮಾಡಲು ಸಾಧ್ಯವೇ ಆಗುತ್ತಿರಲಿಲ್ಲ' ಎಂದರು ಜಡೇಶ.

'ಇದು ಒಬ್ಬ ಬಡವನ ಮನೆ ಕಥೆ. ಇಡೀ ಸಿನಿಮಾದಲ್ಲಿ ನಾನು ಇದೇ ಗೆಟಪ್‌ನಲ್ಲಿ ಇರುತ್ತೇನೆ. ನನ್ನ ಸ್ವಂತ ಮಗಳೇ ಚಿತ್ರದಲ್ಲಿ ಮಗಳ ಪಾತ್ರವನ್ನು ನಿಭಾಯಿಸಿದ್ದಾಳೆ. ಈ ಸಿನಿಮಾ ಮೂಲಕ ಒಂದೊಳ್ಳೆಯ ಕಥೆಯನ್ನು ಪ್ರೇಕ್ಷಕರ ಎದುರಿಗೆ ಇಡುತ್ತಿದ್ದೇನೆ ಎನ್ನುವ ಸಾರ್ಥಕತೆ ಇದೆ. ಈ ಸಿನಿಮಾದಲ್ಲಿ ವಿಷಯದ ಜೊತೆಗೆ ಆ್ಯಕ್ಷನ್ ಇದೆ. ವಿನಃ ಸಾಹಸವೇ ಎಲ್ಲ ಅಲ್ಲ' ಎಂದರು 'ದುನಿಯಾ' ವಿಜಯ್. ವಿಜಯ್ ನಟನೆಯ 29ನೇ ಸಿನಿಮಾ ಇದಾಗಿದ್ದು, ಮೇ ಅಥವಾ ಜೂನ್‌ನಲ್ಲಿ ಈ ಸಿನಿಮಾ ತೆರೆಗೆ ಬರುವ ಸಾಧ್ಯತೆ ಇದೆ. ❖


ದುನಿಯಾ ವಿಜಯ್


ಚಿತ್ರತಂಡ

'ಪುನೀತ್ ನಿವಾಸ'ಕ್ಕೆ ಅಶ್ವಿನಿ ಸಾಥ್

ಪುನೀತ್ ರಾಜಕುಮಾರ್ ಅವರ ಆದರ್ಶಗಳನ್ನೇ ಕಥೆಯಾಗಿಸಿಕೊಂಡಿರುವ 'ಪುನೀತ್ ನಿವಾಸ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಅಶ್ವಿನಿ ಪುನೀತ್ ರಾಜಕುಮಾರ್, ರಾಘವೇಂದ್ರ ರಾಜಕುಮಾರ್ ಚಿತ್ರದ ಫಸ್ಟ್‌ಲುಕ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಪುಟ್ಟಣ್ಣ ಕಣಗಾಲ್‌ರಂಥ ಹಿರಿಯ ನಿರ್ದೇಶಕರ ಜತೆ ಸಹಾಯಕರಾಗಿ ಕೆಲಸ ಮಾಡಿದ್ದ ನಾಗೇಂದ್ರ ಪ್ರಸಾದ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಪುನೀತ್ ರಾಜಕುಮಾರ್ ಅವರ ಅಪ್ಪಟ ಅಭಿಮಾನಿಯಾದ 'ಮಲ್ಲು' ಎಂಬ ಹುಡುಗನ ಕಥೆಯಿದು. ತಾನೊಂದು ಸಿನಿಮಾ ಮಾಡಬೇಕೆಂದು ಕೂಡಿಟ್ಟುಕೊಂಡಿದ್ದ ಹಣದಿಂದ ಬಡ ಹುಡುಗಿಗೆ ಮನೆ ಕಟ್ಟಿಸಿಕೊಟ್ಟು, ಅದಕ್ಕೆ ಪುನೀತ್ ನಿವಾಸ ಎಂದು ಹೆಸರಿಡುತ್ತಾನೆ. ಬೆಂಗಳೂರು ಸುತ್ತಮುತ್ತ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸುವ ಯೋಜನೆ ಹಾಕಿಕೊಳ್ಳಲಾಗಿದೆ' ಎಂದರು ನಿರ್ದೇಶಕರು.

ಪಂಚಮಿ ಸಿನಿ ಕ್ರಿಯೇಶನ್ಸ್ ಮೂಲಕ ಮೋಹನ್ ಎಸ್. ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಅಭಿಜಿತ್, ಮಾಸ್ಟರ್ ವಿಠ್ಠಲ್ ಪ್ರಮುಖ ಪಾತ್ರದಲ್ಲಿದ್ದಾರೆ. ಎಂ.ಎಸ್.ಉಮೇಶ್, ಡಿಂಗ್ರಿ ನಾಗರಾಜ್, ಟೆನ್ನಿಸ್ ಕೃಷ್ಣ, ಲಕ್ಷ್ಮಿ ಭಟ್, ರೇಖಾ ದಾಸ್, ಗಣೇಶ್ ರಾವ್ ಕೇಸರಕರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಕೃಪಾಕರ್ ಸಂಗೀತ ಸಂಯೋಜನೆ, ಬಾಲು ಛಾಯಾಚಿತ್ರಗ್ರಹಣ, ಮುತ್ತುರಾಜ್ ಸಂಕಲನ ಈ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಎರಡನೆಯ** ಬಾರಿಗೆ ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರು ಅಧಿಕಾರ ಸ್ವೀಕರಿಸಿದ ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿಡಿಯೊ ಅನ್ನು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆ ಸಮಾರಂಭದಲ್ಲಿ ಭಾರತದ ಪರವಾಗಿ ಭಾಗವಹಿಸಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರನ್ನು ಕಾರ್ಯಕ್ರಮದಿಂದ ಹೊರಗೆ ಹೋಗುವಂತೆ ಅಲ್ಲಿನ ಅಧಿಕಾರಿಯೊಬ್ಬರು ಸೂಚಿಸಿದ್ದು, ಅವರನ್ನು ಅವಮಾನಿಸಲಾಗಿದೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ಈ ಬಗ್ಗೆ** ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ವಿಡಿಯೊ ಹಂಚಿಕೊಳ್ಳುತ್ತಿರುವವರ ಪ್ರತಿಪಾದನೆಯನ್ನು ಬೆಂಬಲಿಸುವಂಥ ಯಾವುದೇ ವರದಿ ದೊರೆಯಲಿಲ್ಲ. ವಿಡಿಯೊ ಅನ್ನು ಇನ್‌ವಿಡ್ ಟೂಲ್ ಸರ್ಚ್‌ಗೆ ಒಳಪಡಿಸಿ, ಅದರ ಕೀಫ್ರೇಮ್‌ಗಳನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ ಶ್ವೇತಭವನದ ಯು ಟ್ಯೂಬ್ ಚಾನೆಲ್‌ನಲ್ಲಿ ಟ್ರಂಪ್ ಅಧಿಕಾರ ಸ್ವೀಕಾರ ಸಮಾರಂಭದ ಸಂಪೂರ್ಣ ವಿಡಿಯೊ ಲಭ್ಯವಾಯಿತು. ಅದರಲ್ಲಿ ಜೈಶಂಕರ್ ಅವರ ಬಳಿ ಛಾಯಾಗ್ರಾಹಕಿ ಒಬ್ಬರು ನಿಂತಿರುವುದು ಕಾಣಿಸಿತು. ಶ್ವೇತಭವನದ ಸಿಬ್ಬಂದಿಯೊಬ್ಬರು ಆ ಛಾಯಾಗ್ರಾಹಕಿ ಬಳಿ ಬಂದು, ಹಿಂದೆ ಹೋಗಿ ಅಲ್ಲಿಂದ ಕಾರ್ಯಕ್ರಮವನ್ನು ಚಿತ್ರೀಕರಿಸುವಂತೆ ಸೂಚಿಸಿರುವುದು ಕಂಡುಬಂತು. ಆದರೆ, ಕೆಲವರು ಇದು ಜೈಶಂಕರ್ ಅವರಿಗೆ ನೀಡಿದ ಸೂಚನೆ ಎಂದು ತಪ್ಪಾಗಿ ಪ್ರತಿಪಾದಿಸುತ್ತಿದ್ದಾರೆ. ಜೈಶಂಕರ್ ಅವರು ಕಾರ್ಯಕ್ರಮ ಮುಗಿಯುವವರೆಗೆ ಅಲ್ಲಿಯೇ ಇದ್ದರು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಸತ್ಯಯುಗ ನಿರ್ಮಿಸುವುದು ಹೇಗೆ?

ನುಡಿ ಬೆಳಗು — ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 117



ನಾವು ಯುಗಗಳನ್ನು ಕೇಳಿದ್ದೇವೆ. ಸತ್ಯಯುಗ, ತ್ರೇತಾಯುಗ, ದ್ವಾಪರ ಯುಗ ಮತ್ತು ಕಲಿಯುಗ. ನಾವೆಲ್ಲ ಹೇಳೋದು ಏನೆಂದರೆ, ಇದು ಕಲಿಯುಗ, ಕಾಲ ಕೆಟ್ಟೈತಿ ಅಂತ. ಕಾಲ ಯಾವಾಗ ಬದಲಾಗತೈತಿ. ಸತ್ಯಯುಗ, ತ್ರೇತಾಯುಗ, ದ್ವಾಪರ ಯುಗದಲ್ಲಿ ಸೂರ್ಯ, ಭೂಮಿ, ಆಕಾಶ, ನೀರು ಎಲ್ಲಾ ಬೇರೆ ಇದ್ದವೇನು? ನೀವು ಜ್ಯೋತಿಷಿಗಳನ್ನು ಕೇಳಿದರೆ, ಏನೇನೋ ಲೆಕ್ಕ ಹಾಕಿ ಇನ್ನು ಇಷ್ಟು ವರ್ಷಗಳ ನಂತರ ಸತ್ಯಯುಗ ಮತ್ತೆ ಬರುತ್ತದೆ ಎಂದು ಹೇಳುತ್ತಾರೆ. ಆದರೆ, ಅದು ನಿಜವಲ್ಲ. ನಿಮ್ಮ ಹೃದಯದಲ್ಲಿ ಪ್ರೇಮ, ನಾಲಿಗೆಯಲ್ಲಿ ಒಳ್ಳೆಯ ಮಾತು, ಇನ್ನೊಬ್ಬರ ನೋವಿಗೆ ಸ್ಪಂದಿಸಿ ಸಹಾಯ ಮಾಡಲು ನಿಮ್ಮ ಕೈ ಮುಂದಾದರೆ, ಅದೇ ಸತ್ಯಯುಗ. ನಮ್ಮ ನಾಲಿಗೆಯ ಮೇಲಿನ ಒಳ್ಳೆಯ ಮಾತುಗಳೇ ಸತ್ಯಯುಗವನ್ನು ಸೃಷ್ಟಿಸುತ್ತವೆ. ಮಾತು ಬದುಕನ್ನೇ ಬದಲಾಯಿಸುತ್ತದೆ.

ಒಬ್ಬರು ಬಿಇಒ ಇದ್ದರು. ಅವರ ಹೆಸರು ಜಾಲಿ ಅಂತ. ಈಗ ಶಿಕ್ಷಕರ ನೇಮಕಕ್ಕೆ ಪರೀಕ್ಷೆ ನಡೀತದೆ. ಅವಾಗೆಲ್ಲ ಬಿಇಒಗಳೇ ಸಂದರ್ಶನ ಮಾಡಿ ಶಿಕ್ಷಕರ ನೇಮಕ ಮಾಡಿಕೊಳ್ಳುತ್ತಿದ್ದರು. ಒಂದು ಸಲ ಒಬ್ಬ ಕುರಿ ಎಂಬ ಅಡ್ಡ ಹೆಸರಿನ ವ್ಯಕ್ತಿ ಸಂದರ್ಶನಕ್ಕೆ ಬಂದ. 'ಕುರಿ ಇಲ್ಯಾಕೆ ಬಂದಿಯೋ' ಎಂದು ಬಿಇಒ ಕೇಳಿದರಂತೆ. ಅದಕ್ಕೆ ಅವನು 'ಜಾಲಿ ಮೇಯಾಕೆ ಬಂದೆ' ಎಂದು ಉತ್ತರಿಸಿದನಂತೆ. ಅವನ ಹಾಸ್ಯ ಇಷ್ಟವಾಗಿ ಅವನಿಗೆ ನೌಕರಿ ಕೊಟ್ಟರಂತೆ. ಅಂದರೆ, ಮಾತು ಬದುಕನ್ನು ಬದಲಿಸುತ್ತದೆ. ಸತ್ಯಯುಗ ಯಾವತ್ತೋ ಇತ್ತು, ಇನ್ಯಾವತ್ತೋ ಬರುತ್ತದೆ ಎನ್ನುವುದು ಸರಿಯಲ್ಲ. ನಮ್ಮ ಮಾತು, ನಮ್ಮ ಹೃದಯದಲ್ಲಿ ಇರುವ ಪ್ರೇಮ ಈ ಕ್ಷಣದಲ್ಲಿಯೇ ಸತ್ಯಯುಗವನ್ನು ನಿರ್ಮಾಣ ಮಾಡುತ್ತವೆ. ಇಂತಹ ಸತ್ಯಯುಗವನ್ನು ನಿರ್ಮಾಣ ಮಾಡಲಿಕ್ಕೆ ಶ್ರಮಿಸಿದ ಮತ್ತು ಈಗಲೂ ಶ್ರಮಿಸುತ್ತಿರುವ ಹಲವಾರು ಜನ ಇದ್ದಾರೆ.

ದೇಶದಲ್ಲಿ ಪ್ರತಿ ವರ್ಷ 50 ಸಾವಿರ ಜನ ಕ್ಯಾನ್ಸರ್ ರೋಗದಿಂದ ನರಳುತ್ತಾರೆ. ಅದರಲ್ಲಿ 25–30 ಸಾವಿರ ಮಂದಿಗೆ ಧ್ವನಿಪೆಟ್ಟಿಗೆ ಕ್ಯಾನ್ಸರ್ ಬರತೈತಿ. ಒಮ್ಮೆ ಧ್ವನಿಪೆಟ್ಟಿಗೆ ಹೋತು ಎಂದರೆ, ಅದನ್ನು ಹೊಸದಾಗಿ ಹಾಕಲು ಸಾಕಷ್ಟು ಖರ್ಚಾಗುತ್ತೈತಿ. ಅದನ್ನು ಅಮೆರಿಕ ಮತ್ತು ಯುರೋಪ್‌ದವರು ಕಂಡುಹಿಡಿದಿದ್ದಾರೆ. ಶ್ರೀಮಂತರೇನೋ ಧ್ವನಿಪೆಟ್ಟಿಗೆ ಹಾಕಿಸಿಕೊಳ್ಳುತ್ತಾರೆ. ಆದರೆ, ಬಡವರಿಗೆ ಇದು ಕಷ್ಟ. ಇದು ಒಬ್ಬ ವೈದ್ಯನಿಗೆ ಬಹಳ ತಲೆಕೆಡಿಸಿತು. ಅಮೆರಿಕದಲ್ಲಿ 50 ಸಾವಿರ ರೂಪಾಯಿ ಇರುವ ಧ್ವನಿಪೆಟ್ಟಿಗೆಯನ್ನು ಕೇವಲ 50 ರೂಪಾಯಿಗೆ ಸಿಗುವಂತೆ ಕನ್ನಡದ ವೈದ್ಯರೊಬ್ಬರು ಮಾಡಿದರು. ವಿಶ್ವದಲ್ಲಿ ಕೃತಕ ಧ್ವನಿಪೆಟ್ಟಿಗೆಯನ್ನು ತಯಾರು ಮಾಡಿದವರು ಮೂರೇ ಮಂದಿ. ಅದರಲ್ಲಿ ನಮ್ಮ ಕನ್ನಡಿಗ ಡಾ.ವಿಶಾಲ್ ರಾವ್ ಒಬ್ಬರು. ಬೇರೆ ದೇಶದಲ್ಲಿ ತಯಾರು ಮಾಡಿದ ಧ್ವನಿಪೆಟ್ಟಿಗೆಯನ್ನು ವರ್ಷಕ್ಕೊಮ್ಮೆ ಬದಲಾಯಿಸಬೇಕು. ಆದರೆ, ಡಾ.ವಿಶಾಲ್ ಅವರು ತಯಾರು ಮಾಡಿದ್ದು ಒಮ್ಮೆ ಹಾಕಿಕೊಂಡರೆ ಮತ್ತೆ ತೆಗೆಯಬೇಕಿಲ್ಲ. ಅದು ಶಾಶ್ವತ. ಅವರ ಧ್ವನಿಪೆಟ್ಟಿಗೆಗೆ ವಿದೇಶಗಳಿಂದಲೂ ಬೇಡಿಕೆ ಬಂದಿದೆ. ಅವರು ಅದರ ಪೇಟೆಂಟ್ ಇಟ್ಟುಕೊಂಡಿದ್ದರೆ ಸಾವಿರಾರು ಕೋಟಿ ರೂಪಾಯಿ ಗಳಿಸಬಹುದಿತ್ತು. ಆದರೆ, ಅವರು ಅದನ್ನು ಉಚಿತವಾಗಿ ಸಾರ್ವಜನಿಕರಿಗೆ ಕೊಟ್ಟಿದ್ದಾರೆ. ಅಂತಹ ಅದ್ಭುತ ವ್ಯಕ್ತಿ ಅವರು. ಈ ರೀತಿಯ ವ್ಯಕ್ತಿಗಳೇ ಸತ್ಯಯುಗವನ್ನು ಮತ್ತೆ ನಿರ್ಮಾಣ ಮಾಡಬಲ್ಲರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜನವರಿ 24, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ದಶಮಿ ಗಂ. 19-26 ನಕ್ಷತ್ರ: ಅನುರಾಧ ಅಹೋರಾತ್ರ ಯೋಗ: ವೃದ್ಧಿ ಗಂ. 29-08 ಕರಣ: ವಿಷ್ಟಿ ಗಂ. 19-26, ಮಕರ ಮಾಸದ 10 ನೇ ದಿನ, ಮಳೆನಕ್ಷತ್ರ: ಶ್ರವಣ 1.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 07-01 ಸೂರ್ಯಾಸ್ತ : 06-24
ಮುಸ್ಲಿಂ ದಿನಾಂಕ : 23 ರಜಬ್
ಅದೃಷ್ಟ ಸಂಖ್ಯೆ : 8, 10

ಮೇಷ: ಸಾಂಸಾರಿಕ ಬದುಕಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಉತ್ತಮ ಬದುಕಿಗೆ ದಾರಿ. ಬಹಳ ದಿನದ ನಂತರದ ಹಳೆಯ ಮಿತ್ರನೊಬ್ಬನ ಭೇಟಿ ಮನಸ್ಸಿಗೆ ಮುದ ತರುವುದು. ಕೌಟುಂಬಿಕವಾಗಿ ನೆಮ್ಮದಿ ಪಡೆಯುವಿರಿ.

ವೃಷಭ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಮುಂದೊಂದು ದಿನ ಅವರ ಸಹಾಯ ಪಡೆಯಬೇಕಾಗಬಹುದು. ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ನಿರೀಕ್ಷಿತ ಫಲ ಲಭಿಸಲಿದೆ.

ಮಿಥುನ: ಕ್ಷಣಿಕ ಸುಖಕ್ಕಾಗಿ ಅಧಿಕ ಮಟ್ಟದ ಹಣ ವ್ಯಯ ಮಾಡುವುದು ಸರಿಯಲ್ಲ. ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ.

ಕರ್ಕಾಟಕ: ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನವನ್ನೂ ತೆಗೆದುಕೊಳ್ಳಬೇಡಿ. ಈ ದಿನ ಕೃಷಿ ಕಾರ್ಮಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುತ್ತದೆ. ಹೆಂಡತಿಯ ಮಾತು ಮುಖ್ಯವೆನಿಸುತ್ತದೆ.

ಸಿಂಹ: ಈಶ್ವರನ ಅನುಗ್ರಹ ಸಂಪೂರ್ಣವಿದ್ದು ತೊಂದರೆಗಳನ್ನು ನಿವಾರಿಸುತ್ತಾನೆ. ವೃತ್ತಿರಂಗದಲ್ಲಿ ಏಳಿಗೆ ಇದೆ. ವಿದ್ಯಾರ್ಥಿಗಳಿಗೆ ಸಾಧನೆಗಾಗಿ ಹೆಚ್ಚಿನ ಅವಕಾಶಗಳು ಸಿಗಲಿವೆ.

ಕನ್ಯಾ: ಧ್ಯಾನ , ಯೋಗದ ಕಡೆ ಗಮನ ಹರಿಸಿ. ಇದು ಆರೋಗ್ಯದ ಲವಲವಿಕೆಗೆ ಬಹಳ ಸಹಾಯವಾಗಲಿದೆ. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನವಿದ್ದು ಸಂತೋಷವಾಗಲಿದೆ. ಹಣದ ವಿಚಾರದಲ್ಲಿ ಬಿಗಿ ನಿಲುವು ಉತ್ತಮ.

ತುಲಾ: ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವು ಭವಿಷ್ಯದ ಆಲೋಚನೆಗಳನ್ನು ಉತ್ತಮಗೊಳಿಸಲು ಕಾರಣವಾಗುವುದು. ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ.

ವೃಶ್ಚಿಕ: ಕುಟುಂಬ ಅಭಿವೃದ್ಧಿಗೆ ಉತ್ತಮ ಯೋಚನೆಗಳು ನಿಮ್ಮೆಡೆಗೆ ಬರಲಿದೆ, ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಬೆಲೆಬಾಳುವ ವಸ್ತು ಕಳೆದುಹೋಗುವ ಸಾಧ್ಯತೆಯಿದೆ. ಪುಣ್ಯಕ್ಷೇತ್ರಗಳ ದರ್ಶನದ ಯೋಗವಿದೆ.

ಧನು: ಮೌನದ ಉತ್ತರದಿಂದ ಭಿನ್ನಾಭಿಪ್ರಾಯದ ಸಮಸ್ಯೆಗೆ ಅಂತ್ಯವನ್ನು ನೋಡಬಹುದು. ಬಾಕಿಯುಳಿದ ಕಾರ್ಯಕ್ಕೆ ಇಂದು ಹೊಸ ಜೀವ ಬರುವುದು. ಕ್ರೀಡಾಪಟುಗಳು ಎಲ್ಲ ಸ್ಪರ್ಧೆಗಳಲ್ಲೂ ಜಯವನ್ನು ಗಳಿಸುವಿರಿ.

ಮಕರ: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆತಾಯಿಯ ಆಶೀರ್ವಾದ ಮತ್ತು ಆರ್ಥಿಕ ಸಹಾಯ ದೊರೆಯಲಿದೆ. ಹೋಟೆಲ್ ಉದ್ಯಮದವರಿಗೆ ಇತರ ಕಾರ್ಯದಿಂದ ಆದಾಯದಲ್ಲಿ ಬಹಳ ವ್ಯತ್ಯಾಸ ಉಂಟಾಗುವುದು.

ಕುಂಭ: ಐಷಾರಾಮಿ ಮಟ್ಟದ ಜೀವನ ನಿರ್ವಹಣೆ ಆರ್ಥಿಕ ನಷ್ಟಕ್ಕೆ ಕಾರಣ. ಈವರೆಗೆ ಬಾಕಿಯಿದ್ದ ವ್ಯಾಜ್ಯಗಳು ಒಡಹುಟ್ಟಿದವರ ಸಹಾಯ ದಿಂದ ಬಗೆಹರಿಯಲಿವೆ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷ.


ಮೀನ: ಮನೆಯ ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು. ಪ್ರಭಾವಿ ವ್ಯಕ್ತಿಗಳ ಜತೆಗಿನ ಒಡನಾಟ ಮತ್ತು ಓಡಾಟ ಸ್ಥಾನಮಾನ ತಂದು ಕೊಡಲಿದೆ.

ಪದಬಂಧ 5932

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಊಟದ ಮನೆಯಿದು (5)
5.ತಟಕ್ಕನೆ ಕಾಣಿಸಿದ ಜಲಾಶಯ (3)
7.ನಿಯಮಿತ ಕಾಲದವರೆಗೆ ಮಾತನಾಡದ ವ್ರತ (4)
9.ತೀಡೀ ತೀಡೀ ಸರಿಪಡಿಸುವಿಕೆ! (4)
10.ಪುರದಲ್ಲಿ ಖರೀದಿಸಿದ ಕಾಲಂದಿಗೆ (3)
11.ಕರಾರು ಹಾಕಿದ್ದಕ್ಕೇ ಈ ಆಕ್ಷೇಪಣೆ! (4)
13.ಕೊಂಡಿಗಳಿಂದ ಕೂಡಿದ ಲೋಹದ ಹಗ್ಗ (4)
15.ಬಲ ತೋರಿಸಿ ನೀಡಿದ ಉತ್ತೇಜನ (3)
16.ಹೃದಯದಿಂದ ಇತರೆಡೆಗೆ ರಕ್ತ ಸಾಗಿಸುವ ನಾಳ (5)

ಮೇಲಿಂದ ಕೆಳಕ್ಕೆ
1.ದಾನ ನೀಡಿದ್ದು ಕಡೆದ ಮೊಸರು (4)
2.ಸಾಮೂಹಿಕ ವಾಗಿ ಉಲ್ಟಾ ನಿಂತು ಮಾಡಿದ ಕಸರತ್ತು! (2)
3.ಅಟವಿಯಲ್ಲಿ ಪ್ರದರ್ಶಿಸಿದ ಆಡಂಬರ (4)
6.ರಸವುಳ್ಳ ಭಕ್ಷ್ಯ (4)
8.ಮೈಮೇಲಿನ ರೋಮ (4)
12.ಕತ್ತು ಹೊರಳಿಸಿ ನೋಡಿ! ಔಷಧಿ ಅರೆಯುವ ಒರಳು ಮತ್ತು ಗುಂಡು ಕಂಡೀತು! (4)
14.ಈ ಪರಿ ಹರಡಿದ ಸುವಾಸನೆ (4)
17.ತಾಪತ್ರಯದಲ್ಲಿ ಬರೆದ ಓಲೆ! (2)



5931ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಲಾಪ 4.ಕಡಾಣಿ
6.ರಿವಾಜು 7.ಕೊಳಗದಪ್ಪಲೆ
11.ಪ್ರಣಯಕಲಹ
14.ಅಂಡಜ 15.ಹರಾಮಿ
16.ಮೆಲುಕು

ಮೇಲಿಂದ ಕೆಳಕ್ಕೆ:
1.ಆಯುಧ 2.ಪರಿಮಳ 3.ಗಿಂಜು
4.ಕಡಿತಲೆ 5.ಣಿಹಣಾಹ
7.ಕೊಟ್ಟೆ 8.ದಡಿಯ 9.ಗ್ರಹ
10.ಅವರೋಹ 11.ಪ್ರಸ್ಥಭೂಮಿ
12.ಲವಾಜಮೆ 13.ಉಸುಕು
14.ಅಂಘಿ,

ಸುಡೊಕು 6317

				6		1		
9							7	8
	8		7			2		6
6		1		5		7		9
			8	9	6			
8				7		5		2
3		9		1				
			6		7	9		4
7		8		2			1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6316 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಎನ್.ಆರ್.ಪುರ ರಬ್ಬರ್


ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹444-685
ದ್ವಿತಳಿ (ಬಿ.ವಿ)	₹305-849

ಷೇರುಪೇಟೆ ವಹಿವಾಟು 115



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	23,155
ಇಂದಿನ ಅಂತ್ಯ	23,205
▲	50
ದಿನದ ಗರಿಷ್ಠ	23,270

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹3200-4000
ಮಧ್ಯಮ	₹2500-3200
ಸಣ್ಣ	₹1500-2500

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1450 (1455)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1365 (1375)
ಪಾಮೋಲಿನ್	₹1310 (1310)

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹23500
ಎಸಿ	₹13580
ಆರ್‌ಪಿ	₹20000
ಆರ್‌ಸಿ	₹12400

ಐಫೋನ್, ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಬುಕಿಂಗ್ ದರ ವ್ಯತ್ಯಾಸ: ಆರೋಪ

ಓಲಾ, ಉಬರ್‌ಗೆ ನೋಟಿಸ್

ನವದೆಹಲಿ (ಪಿಟಿಐ): ನ್ಯಾಯಸಮ್ಮತ-ವಲ್ಲದ ದರ ನಿಗದಿಯಲ್ಲಿ ತೊಡಗಿರುವ ಆರೋಪದ ಮೇರೆಗೆ ಆ್ಯಪ್ ಆಧರಿತ ಕ್ಯಾಬ್ ಸೇವೆ ಒದಗಿಸುವ ಓಲಾ ಮತ್ತು ಉಬರ್ ಕಂಪನಿಗೆ, ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ನೋಟಿಸ್ ನೀಡಿದೆ.



ಪ್ರಲ್ಹಾದ ಜೋಶಿ

ಬಳಕೆದಾರರು ಐಫೋನ್‌ನಲ್ಲಿ ಬುಕಿಂಗ್ ಮಾಡುತ್ತಿದ್ದಾರೆಯೇ ಅಥವಾ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಬುಕಿಂಗ್ ಮಾಡುತ್ತಿದ್ದಾರೆಯೇ ಎಂಬ ಆಧಾರದ ಮೇಲೆ ಈ ಕಂಪನಿಗಳು ಒಂದೇ ಸ್ಥಳಕ್ಕೆ ವಿಭಿನ್ನ ದರ ನಿಗದಿಪಡಿಸುತ್ತಿವೆ ಎಂದು ದೂರಲಾಗಿದೆ.

ದರ ವ್ಯತ್ಯಾಸದ ಮೂಲಕ ಕಂಪನಿಗಳು ಗ್ರಾಹಕರ ಹಕ್ಕುಗಳಿಗೆ ಧಕ್ಕೆ ತರುತ್ತಿವೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬಳಕೆದಾರರು ಮಾಹಿತಿ ಹಂಚಿಕೊಂಡಿದ್ದರು.

'ಗ್ರಾಹಕರಿಂದ ಕೇಳಿಬಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಸಿಸಿಪಿಎ ವಿಚಾರಣೆ ಆರಂಭಿಸಿದ್ದು, ಎರಡು ಕಂಪನಿಗಳಿಂದ ವಿವರಣೆ ಕೇಳಿ ನೋಟಿಸ್ ನೀಡಿದೆ' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಗುರುವಾರ ತಿಳಿಸಿದ್ದಾರೆ.

ಗ್ರಾಹಕರಿಗೆ ಆಗುತ್ತಿರುವ ಶೋಷಣೆ ತಪ್ಪಿಸಲು ಕೇಂದ್ರ ಸರ್ಕಾರ ಬದ್ಧವಿದೆ. ಮೇಲ್ನೋಟಕ್ಕೆ ದರ ವ್ಯತ್ಯಾಸ ಇರುವುದು ಕಂಡುಬರುತ್ತಿದೆ ಎಂದು ಇತ್ತೀಚೆಗೆ ಸಚಿವರು ಪ್ರತಿಕ್ರಿಯೆ ನೀಡಿದ್ದರು.

ಆ್ಯಪಲ್‌ಗೂ ನೋಟಿಸ್ ಜಾರಿ



ಐಫೋನ್ ಬಳಕೆಯಲ್ಲಿ ಕಂಡು ಬಂದಿರುವ ತಾಂತ್ರಿಕ ಸಮಸ್ಯೆಗೆ ಸಂಬಂಧಿಸಿದಂತೆ ಆ್ಯಪಲ್ ಕಂಪನಿಗೂ ಸಿಸಿಪಿಎ ನೋಟಿಸ್ ಜಾರಿಗೊಳಿಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಆ್ಯಪಲ್ ಕಂಪನಿಯು ಐಒಎಸ್ 18 ಪ್ಲಸ್ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಿಕೊಳ್ಳಲು ಬಳಕೆದಾರರಿಗೆ ಅವಕಾಶ ಕಲ್ಪಿಸಿತ್ತು. ಅಪ್‌ಡೇಟ್ ವೇಳೆ ಬಳಕೆದಾರರು ತೊಂದರೆ ಎದುರಿಸುತ್ತಿದ್ದಾರೆ ಎಂದು ಹೇಳಲಾಗಿದೆ.

ಈ ಬಗ್ಗೆ ಸಮೀಕ್ಷೆ ನಡೆಸಿದ್ದ ಲೋಕಲ್ ಸರ್ಕಲ್ ಸಂಸ್ಥೆಯು ಶೇ 60ರಷ್ಟು ಐಫೋನ್ ಬಳಕೆದಾರರು ತೊಂದರೆ ಅನುಭವಿಸುತ್ತಿರುವ ಕುರಿತು ಬೆಳಕು ಚೆಲ್ಲಿತ್ತು.

'ಗ್ರಾಹಕರು ಎದುರಿಸು-ತ್ತಿರುವ ಸಮಸ್ಯೆ ಸಂಬಂಧ ವಿವರಣೆ ನೀಡುವಂತೆ ಕಂಪನಿಗೆ ಸೂಚಿಸಲಾಗಿದೆ' ಎಂದು ಸಚಿವರು ತಿಳಿಸಿದ್ದಾರೆ.

ಸ್ವಿಗ್ಗಿ, ಜೊಮಾಟೊ ವಿರುದ್ಧ ಸಿಸಿಐಗೆ ಮೊರೆ

ನವದೆಹಲಿ (ಪಿಟಿಐ): ಸ್ವಿಗ್ಗಿ ಮತ್ತು ಜೊಮಾಟೊ ಕಂಪನಿಯು ಖಾಸಗಿ ಲೇಬಲ್ ಬಳಕೆ ಮೂಲಕ ನ್ಯಾಯಸಮ್ಮತವಲ್ಲದ ವ್ಯಾಪಾರದಲ್ಲಿ ತೊಡಗಿವೆ ಎಂದು ಭಾರತೀಯ ರಾಷ್ಟ್ರೀಯ ರೆಸ್ಟೊರೆಂಟ್ ಸಂಘ (ಎನ್‌ಆರ್‌ಎಐ) ಆರೋಪಿಸಿದೆ. ಈ ಕುರಿತು ಭಾರತೀಯ ಸ್ಪರ್ಧಾತ್ಮಕ ಆಯೋಗಕ್ಕೆ (ಸಿಸಿಐ) ದೂರು ಸಲ್ಲಿಸಲು ಮುಂದಾಗಿದೆ.

'ಆನ್‌ಲೈನ್‌ನಲ್ಲಿ ಆಹಾರ ವಿತರಿಸುವ ಈ ಕಂಪನಿಗಳು ತಮ್ಮ ಪಾಲುದಾರ ರೆಸ್ಟೊರೆಂಟ್‌ಗಳಿಂದ ದತ್ತಾಂಶ ಸಂಗ್ರಹಿಸುತ್ತವೆ. ನಮ್ಮ ಗ್ರಾಹಕರು ಯಾರೆಂಬುದು ಅವುಗಳಿಗೆ ಸ್ಪಷ್ಟವಾದ ಅರಿವಿದೆ. ಆದರೆ, ಈ ಮಾಹಿತಿ ಹಂಚಿಕೊಳ್ಳಲು ನಿರಾಕರಿಸುತ್ತಿವೆ. ಇದೇ ರೀತಿಯ ಉತ್ಪನ್ನಗಳನ್ನು ತಯಾರಿಸಿ ಖಾಸಗಿ ಲೇಬಲ್ ಅಂಟಿಸುವ ಮೂಲಕ ಮಾರಾಟ ಮಾಡುವ ಸಾಧ್ಯತೆಯಿದೆ. ಇದರಿಂದ ರೆಸ್ಟೊರೆಂಟ್ ವಲಯವು ಸಂಕಷ್ಟಕ್ಕೆ ಸಿಲುಕಲಿದೆ' ಎಂದು ಸಂಘದ ಅಧ್ಯಕ್ಷ ಸಾಗರ್ ದರಿಯಾನಿ ಆತಂಕ ವ್ಯಕ್ತಪಡಿಸಿದ್ದಾರೆ.

ಹತ್ತು ನಿಮಿಷದಲ್ಲಿ ಆಹಾರ ಪೂರೈಸುವುದಕ್ಕೆ ಸಂಬಂಧಿಸಿದಂತೆ ಸ್ವಿಗ್ಗಿಯಿಂದ 'ಸ್ನಾಕ್' ಹೆಸರಿನ ಆ್ಯಪ್ ಹಾಗೂ ಬ್ಲಿಂಕಿಟ್‌ನಿಂದ 'ಬಿಸ್ಟ್ರೊ' ಆ್ಯಪ್ ರೂಪಿಸಲಾಗಿದೆ. ಆ ಮೂಲಕ ಈ ಹಿಂದೆ ನೀಡಿದ್ದ ಭರವಸೆಗಳನ್ನು ಮೂಲೆಗೆ ಸರಿಸಿವೆ ಎಂದು ದೂರಿದ್ದಾರೆ.



ಈಗಾಗಲೇ, ಹಲವು ರೆಸ್ಟೊರೆಂಟ್‌ಗಳು ಬಾಗಿಲು ಮುಚ್ಚಿವೆ. ಕಾರ್ಮಿಕರು ಕೆಲಸವಿಲ್ಲದೆ ಬೀದಿ ಪಾಲಾಗಿದ್ದಾರೆ ಎಂದು ಹೇಳಿದ್ದಾರೆ.

ಡಿಜಿಟಲ್ ವ್ಯಾಪಾರಕ್ಕಾಗಿನ ಮುಕ್ತ ವ್ಯವಸ್ಥೆಯನ್ನು (ಒಎನ್‌ಡಿಸಿ) ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿದೆ. ಇದರಡಿ ರೆಸ್ಟೊರೆಂಟ್‌ಗಳು ತಯಾರಿಸುವ ಆಹಾರವನ್ನು ನೇರವಾಗಿ ಆರ್ಡರ್ ಮಾಡಬಹುದಾಗಿದೆ. ಈ ವ್ಯವಸ್ಥೆಯು ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಂಡಿದೆ. ದೇಶದಾದ್ಯಂತ ಇದನ್ನು ಜಾರಿಗೊಳಿಸುವ ಬಗ್ಗೆ ಸಂಘವು ಗಮನಹರಿಸುತ್ತಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ವಾಟ್ಸ್‌ಆ್ಯಪ್ ಪ್ರಕರಣ ಸಿಸಿಐ ಆದೇಶಕ್ಕೆ ತಡೆಯಾಜ್ಞೆ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಮತ್ತು ಮೆಟಾ ಕಂಪನಿ ನಡುವೆ ದತ್ತಾಂಶ ವಿನಿಮಯ ಮಾಡಿಕೊಳ್ಳದಂತೆ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ವಿಧಿಸಿದ್ದ ನಿರ್ಬಂಧಕ್ಕೆ, ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ಗುರುವಾರ ತಡೆಯಾಜ್ಞೆ ನೀಡಿದೆ.

2021ರಲ್ಲಿ ವಾಟ್ಸ್‌ಆ್ಯಪ್‌ನಿಂದ ನವೀಕೃತ ನೀತಿಯನ್ನು ಪ್ರಕಟಿಸಲಾಗಿತ್ತು. ಇದರನ್ವಯ ಎಲ್ಲಾ ಬಳಕೆದಾರರು ಮೆಟಾದೊಂದಿಗೆ ದತ್ತಾಂಶ ಹಂಚಿ-ಕೊಳ್ಳುವುದನ್ನು ಕಡ್ಡಾಯಗೊಳಿಸಲಾ-ಗಿತ್ತು. ವಾಟ್ಸ್‌ಆ್ಯಪ್‌ನಲ್ಲಿ ಸಂಗ್ರಹಿಸುವ ಬಳಕೆದಾರರ ಮಾಹಿತಿಯನ್ನು ಜಾಹೀರಾತು ಉದ್ದೇಶಗಳಿಗೆ ಮೆಟಾ ಕಂಪನಿಯು, ತನ್ನ ಇತರೆ ಅಪ್ಲಿಕೇಷನ್‌ಗಳಲ್ಲಿ ಬಳಸುತ್ತಿತ್ತು.



ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಆಯೋಗವು ವಾಟ್ಸ್‌ಆ್ಯಪ್‌ನಿಂದ ಗೋಪ್ಯತೆ ನೀತಿಯ ಉಲ್ಲಂಘನೆ-ಯಾಗುತ್ತಿದೆ. ಮೆಟಾ ಕಂಪನಿಯು ನ್ಯಾಯಸಮ್ಮತವಲ್ಲದ ಕಾರ್ಯದಲ್ಲಿ ತೊಡಗಿದೆ ಎಂದು ಹೇಳಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ₹213 ಕೋಟಿ ದಂಡ ವಿಧಿಸುವ ಜೊತೆಗೆ, ಈ ಚಟುವಟಿಕೆಗೆ ಐದು ವರ್ಷದವರೆಗೆ ನಿರ್ಬಂಧ ವಿಧಿಸಿತ್ತು.

ಆಯೋಗದ ಕ್ರಮ ಪ್ರಶ್ನಿಸಿ ಮೆಟಾ ಕಂಪನಿಯು ನ್ಯಾಯಮಂಡಳಿಯ ಮೆಟ್ಟಿಲೇರಿತ್ತು.

ಎನ್‌ಸಿಎಲ್‌ಎಟಿ ನೀಡಿರುವ ತಡೆಯಾಜ್ಞೆ-ಯನ್ನು ಸ್ವಾಗತಿಸಿರುವ ಮೆಟಾ, ಇದು ತನ್ನ ಮುಂದಿನ ಹಂತದ ಅರ್ಹತೆಯ ನಿರ್ಣಯಕ್ಕೆ ಸಹಕಾರಿಯಾಗಲಿದೆ ಎಂದು ಪ್ರತಿಕ್ರಿಯಿಸಿದೆ.

ಫೆ.1ರಿಂದ ಮಾರುತಿ ಸುಜುಕಿ ಕಾರುಗಳ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಎಲ್ಲಾ ಮಾದರಿಯ ಕಾರುಗಳ ಬೆಲೆ ಹೆಚ್ಚಿಸಲು ಮುಂದಾಗಿದೆ. ಫೆಬ್ರುವರಿ 1ರಿಂದ ಈ ಪರಿಷ್ಕೃತ ದರ ಜಾರಿಗೆ ಬರಲಿದೆ.

ಕಂಪನಿಯು ಸೆಲೆರಿಯೊ ಕಾರಿನ ಬೆಲೆಯನ್ನು ₹32,500ರ ವರೆಗೆ ಹೆಚ್ಚಿಸಿದೆ. ಪ್ರೀಮಿಯಂ ಮಾದರಿ ಇನ್ವಿಕ್ಟೊ ₹30 ಸಾವಿರ, ವ್ಯಾಗನ್ ಆರ್ ₹15 ಸಾವಿರ, ಸ್ವಿಫ್ಟ್ ₹5 ಸಾವಿರ, ಎಸ್‌ಯುವಿ ಬ್ರೆಜಾ ಮತ್ತು ಗ್ರ್ಯಾಂಡ್ ವಿಟಾರಾ ಬೆಲೆಯನ್ನು ಕ್ರಮವಾಗಿ ₹20 ಸಾವಿರ ಮತ್ತು ₹25 ಸಾವಿರದ ವರೆಗೆ ಹೆಚ್ಚಿಸಿದೆ.

ಆಲ್ಟೊ ಕೆ10 ₹19,500, ಎಸ್-ಪ್ರೆಸ್ಸೊ ₹5 ಸಾವಿರ, ಬಲೆನೊ ₹9 ಸಾವಿರ, ಎಸ್‌ಯುವಿ ಫ್ರಾಂಕ್ಸ್ ₹5,500 ಮತ್ತು ಡಿಸೈರ್ ಕಾರಿನ ಬೆಲೆಯನ್ನು ₹10 ಸಾವಿರದವರೆಗೆ ಹೆಚ್ಚಿಸಿದೆ.

'ತಯಾರಿಕೆ ಮತ್ತು ಕಾರ್ಯಾಚರಣೆ ವೆಚ್ಚ ಏರಿಕೆಯಾಗಿದೆ. ಹೀಗಾಗಿ, ಬೆಲೆ ಹೆಚ್ಚಳವು ಅನಿವಾರ್ಯವಾಗಿದೆ' ಎಂದು ಕಂಪನಿಯು ಗುರುವಾರ ಷೇರುಪೇಟೆಗೆ ತಿಳಿಸಿದೆ.

ವಿನಿಮಯ ದರ

$ ಡಾಲರ್	86.44
£ ಪೌಂಡ್	106.48
€ ಯುರೊ	90.02
¥ ಯೆನ್ (100ಕ್ಕೆ)	55

ರಷ್ಯಾ ಮೇಲೆ ಅಮೆರಿಕ ನಿರ್ಬಂಧ

ತೈಲ ಪೂರೈಕೆಗೆ ಅಡ್ಡಿ ನಿರೀಕ್ಷೆ

ನವದೆಹಲಿ (ಪಿಟಿಐ): ರಷ್ಯಾದ ತೈಲ ವ್ಯಾಪಾರ ವಲಯದ ಮೇಲೆ ಅಮೆರಿಕ ವಿಧಿಸಿರುವ ನಿರ್ಬಂಧಗಳು ಭಾರತಕ್ಕೆ ಪೂರೈಕೆಯಾಗುವ ಕಚ್ಚಾ ತೈಲದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಮಾರ್ಚ್‌ನಿಂದ ತೈಲ ಪೂರೈಕೆಯಲ್ಲಿ ವ್ಯತ್ಯಯ ಆಗಬಹುದೆಂದು ಅಂದಾಜಿಸಿರುವುದಾಗಿ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಹೇಳಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಅತಿದೊಡ್ಡ ತೈಲ ರಫ್ತುದಾರ ರಾಷ್ಟ್ರಗಳ ಪೈಕಿ ರಷ್ಯಾವೂ ಒಂದಾಗಿದೆ. ಸದ್ಯ ಉಕ್ರೇನ್ ಮೇಲೆ ನಡೆಸುತ್ತಿರುವ ಯುದ್ಧ ಸ್ಥಗಿತಗೊಳಿಸಲು ಮುಂದಾಗಿಲ್ಲ. ಹಾಗಾಗಿ, ರಷ್ಯಾವನ್ನು ಆರ್ಥಿಕವಾಗಿ ಮತ್ತಷ್ಟು ಕುಗ್ಗಿಸುವ ನಿಟ್ಟಿನಲ್ಲಿ ಅಲ್ಲಿನ ತೈಲ ವ್ಯಾಪಾರವನ್ನು ಗುರಿಯಾಗಿಟ್ಟುಕೊಂಡು ಅಮೆರಿಕವು ನಿರ್ಬಂಧಗಳನ್ನು ಹೇರಿದೆ ಎಂದು ಹೇಳಲಾಗಿದೆ.



ರಷ್ಯಾದ ಎರಡು ತೈಲ ಉತ್ಪಾದಕ ಕಂಪನಿಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ. ರಷ್ಯಾದಿಂದ ಇತರೆ ದೇಶಗಳಿಗೆ ತೈಲ ಪೂರೈಸುವ 183 ಸರಕು ಸಾಗಣೆ ಹಡಗುಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಭಾರತದ ತೈಲ ಸಂಸ್ಕರಣೆಗಾರರು, ಮಾರ್ಚ್ ತಿಂಗಳಿನಲ್ಲಿ ತೈಲ ಪೂರೈಕೆಗೆ ಸಂಬಂಧಿಸಿದಂತೆ ಮಾತುಕತೆ ನಡೆಸುತ್ತಿದ್ದ ವೇಳೆಯೇ ಈ ನಿರ್ಬಂಧ ವಿಧಿಸಲಾಗಿದೆ ಎಂದು ಹೇಳಲಾಗಿದೆ.

'ಈಗಾಗಲೇ, ಜನವರಿ ಮತ್ತು ಫೆಬ್ರುವರಿಯಲ್ಲಿ ತೈಲ ಪೂರೈಕೆಗೆ ಸಂಬಂಧಿಸಿದಂತೆ ಮಾತುಕತೆ ಮುಗಿದಿದೆ. ಮಾರ್ಚ್‌ನಲ್ಲಿ ನಮಗೆ ನಿರೀಕ್ಷಿತ ಪ್ರಮಾಣದಲ್ಲಿ ಸರಕು ಸಾಗಣೆ ಹಡಗುಗಳ ಸೇವೆ ಲಭಿಸುವ ಸಾಧ್ಯತೆಯಿಲ್ಲ' ಎಂದು ಬಿಪಿಸಿಎಲ್ ನಿರ್ದೇಶಕ (ಹಣಕಾಸು) ವೆತ್ಸ ರಾಮಕೃಷ್ಣ ಗುಪ್ತಾ ತಿಳಿಸಿದ್ದಾರೆ.

'ಮಾರ್ಚ್‌ನಲ್ಲಿ ತೈಲ ಪೂರೈಕೆಯಲ್ಲಿ ಶೇ 20ರಷ್ಟು ಕೊರತೆಯಾಗಬಹುದು' ಎಂದು ಹೇಳಿದ್ದಾರೆ.

'ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಲಭ್ಯತೆ ಹೆಚ್ಚಿದೆ. ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಈ ಕೊರತೆ ನೀಗಿಸಲು ಕ್ರಮವಹಿಸಲಾಗುವುದು' ಎಂದು ತಿಳಿಸಿದ್ದಾರೆ. 2024ರಲ್ಲಿ ರಷ್ಯಾವು ಪ್ರತಿದಿನ 17 ಲಕ್ಷ ಬ್ಯಾರೆಲ್‌ನಷ್ಟು ಕಚ್ಚಾ-ತೈಲವನ್ನು ಭಾರತಕ್ಕೆ ಪೂರೈಕೆ ಮಾಡಿದೆ.

ಚಿನ್ನದ ದರ: 11 ತಿಂಗಳಿನಲ್ಲಿ ₹20,180 ಹೆಚ್ಚಳ



ನವದೆಹಲಿ (ಪಿಟಿಐ): ಕಳೆದ 11 ತಿಂಗಳಿನಲ್ಲಿ ಚಿನ್ನದ ದರವು 10 ಗ್ರಾಂಗೆ ₹20,180 ಹೆಚ್ಚಳವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಗುರುವಾರ ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿ 23ರಂದು ಚಿನ್ನದ ದರವು ₹62,720 ಇತ್ತು. ಪ್ರಸಕ್ತ ವರ್ಷದ ಜನವರಿ 23ರ ವೇಳೆಗೆ ₹82,900ಕ್ಕೆ ಏರಿಕೆಯಾಗಿದೆ. ಶೇ 32ರಷ್ಟು ದರ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಗುರುವಾರದ ವಹಿವಾಟಿನಲ್ಲಿ ದೆಹಲಿಯ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹170 ಹೆಚ್ಚಳವಾಗಿ ₹82,900ರಂತೆ ಮಾರಾಟವಾಗಿದೆ.

ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠವಾಗಿದೆ.

ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ ₹82,500ಕ್ಕೆ ತಲುಪಿದೆ ಎಂದು ತಿಳಿಸಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಕಡಿಮೆಯಾಗಿ, ₹93,500 ಆಗಿದೆ.

ಆಭರಣ ತಯಾರಕರು ಮತ್ತು ಚಿಲ್ಲರೆ ಮಾರಾಟಗಾರರಿಂದ ಚಿನ್ನದ ಖರೀದಿ ಹೆಚ್ಚಳವಾಗಿದೆ. ಜೊತೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲೂ ಚಿನ್ನಕ್ಕೆ ಬೇಡಿಕೆ ಹೆಚ್ಚಾಗಿದೆ. ಇದರಿಂದ ಹಳದಿ ಲೋಹದ ದರ ಏರಿಕೆಯಾಗಿದೆ ಎಂದು ತಿಳಿಸಿದೆ.

ಬಾವಿಗೆ ಬಿದ್ದ ಕಾಡಾನೆ ರಕ್ಷಣೆಗೆ ಸ್ಥಳೀಯರ ಅಡ್ಡಿ

ಮಲಪ್ಪುರ (ಕೇರಳ) (ಪಿಟಿಐ): ಜಿಲ್ಲೆಯ ಊರ್ಜಾಟ್ಟರಿಯಲ್ಲಿ ಆನೆಯೊಂದು ಬಾವಿಗೆ ಬಿದ್ದಿದೆ. ಅದನ್ನು ರಕ್ಷಿಸಲು ಅರಣ್ಯ ಇಲಾಖೆಯ ಸಿಬ್ಬಂದಿಗೆ ಸ್ಥಳೀಯರಿಂದಲೇ ತೊಡಕು ಎದುರಾಗಿದೆ.

'ರಕ್ಷಣೆ ಬಳಿಕ ಆನೆಯನ್ನು ಇಲ್ಲಿಯೇ ಬಿಡಬಾರದು. ಈ ಬಗ್ಗೆ ಸ್ಪಷ್ಟ ಭರವಸೆ ನೀಡದೇ ರಕ್ಷಣೆಗೆ ಅವಕಾಶ ನೀಡೆವು' ಎಂದು ಬಾವಿಯುಳ್ಳ ಭೂಮಿ ಮಾಲೀಕ, ಸ್ಥಳೀಯರು ಪಟ್ಟುಹಿಡಿದಿದ್ದಾರೆ. ನಿಲಂಬೂರ್ ವಲಯದ ಡಿಎಫ್‌ಒ ಅವರಿಗೆ ಈ ಕುರಿತು ಅಹವಾಲು ಸಲ್ಲಿಸಿರುವ ಸ್ಥಳೀಯರು, 'ಆನೆಯ ನಿರಂತರ ದಾಳಿಯಿಂದ ಬೆಳೆಗಳು ಹಾಳಾಗಿವೆ. ನಷ್ಟ ಭರಿಸಬೇಕು' ಎಂದೂ ಒತ್ತಾಯಿಸಿದರು.

ಪತ್ನಿ ಕೊಂದು ಮೃತದೇಹ ಬೇಯಿಸಿದ!

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇಲ್ಲಿ ಮೀರ್‌ಪೇಟ್‌ನಲ್ಲಿ ಮಾಜಿ ಸೈನಿಕನೊಬ್ಬ ಪತ್ನಿಯನ್ನು ಕೊಂದು, ಕೃತ್ಯವನ್ನು ಮರೆಮಾಚಲು ಮೃತದೇಹ ಕತ್ತರಿಸಿ ಬೇಯಿಸಿದ್ದಾನೆ ಎಂದು ಆರೋಪಿಸಲಾಗಿದೆ. ಈಗ ಖಾಸಗಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿರುವ ಪುಟ್ಟ ಗುರುಸ್ವಾಮಿ ಎಂಬಾತ ಪತ್ನಿ ವೆಂಕಟ ಮಾಧವಿ ಲತಾಳನ್ನು ಕೊಂದ ಆರೋಪ ಎದುರಿಸುತ್ತಿದ್ದಾನೆ.

ಈ ಘಟನೆ ಜನವರಿ 15ರಂದು ನಡೆದಿದ್ದು, ಗುರುಮೂರ್ತಿಯು ತನ್ನ ಪತ್ನಿ ಕಾಣೆಯಾಗಿದ್ದಾಳೆ ಎಂದು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ. ಪೊಲೀಸರು ಜನವರಿ 18ರಂದು ಎಫ್‌ಐಆರ್ ದಾಖಲಿಸಿದ್ದರು. ಸಿ.ಸಿ.ಟಿ.ವಿ ದೃಶ್ಯಾವಳಿ-ಗಳನ್ನು ಪರಿಶೀಲಿಸಿದಾಗ ಗುರುಮೂರ್ತಿಯ ಮೇಲೆ ಪೊಲೀಸರಿಗೆ ಅನುಮಾನ ಬಂದಿದೆ. ಆತನನ್ನು ವಿಚಾರಣೆಗೆ ಒಳಪಡಿಸಿದಾಗ, ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ.ಗುರುಮೂರ್ತಿ ಹೇಳಿಕೆಯ ಸತ್ಯಾ-ಸತ್ಯತೆಯನ್ನು ಪೊಲೀಸರು ಇನ್ನೂ ದೃಢಪಡಿಸಿಲ್ಲ.

ನ್ಯಾಯಾಂಗ ತನಿಖೆಗೆ ಆದೇಶ

ಅಮರಾವತಿ (ಪಿಟಿಐ): ತಿರುಪತಿಯಲ್ಲಿ ಇತ್ತೀಚೆಗೆ ನಡೆದಿದ್ದ ಕಾಲ್ತುಳಿತ ಅವಘಡ ಕುರಿತು ನ್ಯಾಯಾಂಗ ತನಿಖೆಗೆ ಆಂಧ್ರ ಪ್ರದೇಶ ಸರ್ಕಾರ ಆದೇಶಿಸಿದೆ. ಅವಘಡದಲ್ಲಿ ಆರು ಜನರು ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಠಾಕ್ರೆಗೆ ಭಾರತರತ್ನ: ಶಿವಸೇನಾ (ಯುಬಿಟಿ) ಆಗ್ರಹ

ಮುಂಬೈ: ಶಿವಸೇನಾ ಪಕ್ಷದ ಸಂಸ್ಥಾಪಕ ಬಾಳಾಸಾಹೇಬ್ ಠಾಕ್ರೆ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವಾದ 'ಭಾರತರತ್ನ' ನೀಡಬೇಕು ಎಂದು ಶಿವಸೇನಾ (ಯುಬಿಟಿ) ಒತ್ತಾಯಿಸಿದೆ. ಠಾಕ್ರೆ ಅವರ 99ನೆಯ ಜನ್ಮದಿನಾಚರಣೆ ಸಂದರ್ಭದಲ್ಲಿ ಪಕ್ಷವು ಈ ಕೋರಿಕೆ ಮಂಡಿಸಿದೆ.

ಶಿವಸೇನಾ (ಯುಬಿಟಿ) ಸಂಸದ ಹಾಗೂ ಠಾಕ್ರೆ ಕುಟುಂಬದ ಆಪ್ತ ಸಂಜಯ್ ರಾವುತ್ ಅವರು ಈ ಬೇಡಿಕೆಯನ್ನು ಮಂಡಿಸಿದ್ದಾರೆ. 'ಬಾಳಾಸಾಹೇಬ್ ಠಾಕ್ರೆ ಅವರಿಗೆ ಭಾರತರತ್ನ ಪುರಸ್ಕಾರ ನೀಡಬೇಕು. ಅವರು ಶಿವಸೇನಾ ಸ್ಥಾಪಿಸಿ ಮರಾಠಿ ಜನರ ಹಕ್ಕುಗಳಿಗಾಗಿ ಹೋರಾಡಿದರು' ಎಂದು ರಾವುತ್ ಅವರು ಹೇಳಿದ್ದಾರೆ.

ಬಾಳಾಸಾಹೇಬ್ ಅವರಿಗೆ 'ಎಕ್ಸ್' ಮೂಲಕ ಗೌರವ ಅರ್ಪಿಸಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಡೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ರಾವುತ್, 'ಭಾರತರತ್ನ ಪುರಸ್ಕಾರ ನೀಡುವುದು ನಿಜವಾದ ಗೌರವ' ಎಂದಿದ್ದಾರೆ.

ವೃತ್ತಿ ತರಬೇತಿ ವಿಸ್ತರಣೆ ಸಾಧ್ಯತೆ

ನವದೆಹಲಿ: 2024ರ ಜುಲೈನಲ್ಲಿ ಮಂಡನೆಯಾದ ಬಜೆಟ್‌ನಲ್ಲಿ ಘೋಷಿಸಿದ ಪ್ರಧಾನ ಮಂತ್ರಿ ವೃತ್ತಿ ತರಬೇತಿ ಯೋಜನೆಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈಗಿರುವ ನಿಯಮಗಳ ಪ್ರಕಾರ ಈ ಯೋಜನೆಯಲ್ಲಿ ಭಾಗಿಯಾಗಲು 500 ಕಂಪನಿಗಳಿಗೆ ಅವಕಾಶ ಇದೆ. ಯೋಜನೆಯಲ್ಲಿ ಭಾಗಿಯಾಗಲು ಕಂಪನಿಗಳು ಹೊಂದಿರುವ ಅರ್ಹತೆಗೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ತರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ ಅವರ ಅರ್ಹತೆಗೆ ಸಂಬಂಧಿಸಿದ ನಿಯಮಗಳಲ್ಲಿಯೂ ಬದಲಾವಣೆ ತರುವ ಸಾಧ್ಯತೆ ಇದೆ. ಯೋಜನೆಯಲ್ಲಿನ ಬದಲಾವಣೆಗಳ ಬಗ್ಗೆ ಫೆಬ್ರುವರಿ 1ರಂದು ಮಂಡಿಸುವ ಬಜೆಟ್‌ನಲ್ಲಿ ಘೋಷಣೆ ಹೊರಡಿಸುವ ನಿರೀಕ್ಷೆ ಇದೆ.

'ನೇತಾಜಿ ಚಿತಾಭಸ್ಮ ತರಲು ಅರ್ಚಕರಿಂದ ಅಡ್ಡಿಯಿಲ್ಲ'

ಕೋಲ್ಕತ್ತ (ಪಿಟಿಐ): 'ಸ್ವಾತಂತ್ರ್ಯ ಹೋರಾಟಗಾರ ಸುಭಾಷ್‌ಚಂದ್ರ ಬೋಸ್ ಅವರ ಚಿತಾಭಸ್ಮವನ್ನು ಟೋಕಿಯೊದ ರೆಂಕೋಜಿ ಬೌದ್ಧ ದೇವಾಲಯದಿಂದ ಭಾರತಕ್ಕೆ ತರಲು ಅಲ್ಲಿನ ಅರ್ಚಕರಿಂದ ಯಾವುದೇ ಅಡ್ಡಿಯಿಲ್ಲ. ಹೀಗಾಗಿ ಚಿತಾಭಸ್ಮವನ್ನು ತರಲು ಕ್ರಮ ಕೈಗೊಳ್ಳಬೇಕು' ಎಂದು ಅವರ ಕುಟುಂಬದ ಸದಸ್ಯರು ಸರ್ಕಾರಕ್ಕೆ ಮರು ಮನವಿ ಸಲ್ಲಿಸಿದ್ದಾರೆ.

1945ರ ಆಗಸ್ಟ್ 18ರಂದು ನೇತಾಜಿ ಅವರು ವಿಮಾನ ದುರಂತದಲ್ಲಿ ಮೃತಪಟ್ಟಿದ್ದರು.

'ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಹಾಗೂ ದೇಶದ ಪ್ರಧಾನಿಯಾದ ಮೇಲೆ ಹಲವು ಸಲ ಜಪಾನ್‌ಗೆ ಭೇಟಿ ನೀಡಿದ್ದಾರೆ. ಆದರೂ, ರೆಂಕೋಜಿ ದೇವಾಲಯಕ್ಕೆ ಏಕೆ ಭೇಟಿ ನೀಡಲಿಲ್ಲ ಎಂದು ಕೇಳಲು ಬಯಸುತ್ತೇನೆ' ಎಂದು ಅವರ ಸಂಬಂಧಿ ಸೂರ್ಯಕುಮಾರ್ ಬೋಸ್ ಪ್ರಶ್ನಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಚಾಲಿ	18099-34311	ರಾಶಿ	43099-49699
ಕೋಕ	20000-27500	ಕೋಕ	7099-20199	ತಟ್ಟಿಬೆಟ್ಟೆ	27609-48099
ಹೊಸತು	30000-36000	ಕೆಂಪುಗೋಟು	14199-32199	**ಶಿರಸಿ**	
ಹಳತು	45000-49000	ರಾಶಿ	23019-51509	ಬೆಟ್ಟೆ	27199-42809
ಚಿತ್ರದುರ್ಗ		ಸಿಪ್ಪೆಗೋಟು	7000-17299	ಬಿಳಿಗೋಟು	19300-28599
ಅಪಿ	49619-50029	**ಶಿವಮೊಗ್ಗ**		ಚಾಲಿ	35218-39399
ಬೆಟ್ಟೆ	23849-24299	ಬೆಟ್ಟೆ	48556-57100	ಕೆಂಪುಗೋಟು	12999-24698
ಕೆಂಪುಗೋಟು	21109-21510	ಗೊರಬಲು	17109-32169	ರಾಶಿ	42199-46409
ರಾಶಿ	49139-49569	ರಾಶಿ	30009-51399	**ಯಲ್ಲಾಪುರ**	
ಕುಮಟ		ಸರಕು	50510-86540	ಅಪಿ	60779-78295
ಚಾಲಿ	31001-37099	**ಸಿದ್ದಾಪುರ**		ಬಿಳಿಗೋಟು	12899-27019
ಚಿಪ್ಪು	15100-26819	ಬಿಳಿಗೋಟು	23689-25279	ಚಾಲಿ	28169-39131
ಕೋಕ	4010-25209	ಚಾಲಿ	32599-37739	ಕೋಕ	4801-15601
ಹಳೆಚಾಲಿ	33669-37669	ಕೋಕ	11399-12899	ಕೆಂಪುಗೋಟು	14099-27299
ಹೊಸಚಾಲಿ	24010-37099	ಹೊಸಚಾಲಿ	23709-28439	ರಾಶಿ	40699-58690
ಸಾಗರ		ಕೆಂಪುಗೋಟು	19699-21609	ತಟ್ಟಿಬೆಟ್ಟೆ	27820-39109
ಬಿಳಿಗೋಟು	8099-26599				

ಲಾಸ್ ಏಂಜಲೀಸ್: ಮತ್ತೆ ಕಾಳ್ಗಿಚ್ಚು

ಕ್ಯಾಸ್ಟೈಕ್ (ಅಮೆರಿಕ) (ಎಎಫ್‌ಪಿ): ಲಾಸ್ ಏಂಜಲೀಸ್‌ನ ಉತ್ತರ ಭಾಗದಲ್ಲಿ ಬುಧವಾರ ಮತ್ತೆ ಭಾರಿ ಪ್ರಮಾಣ ಕಾಳ್ಗಿಚ್ಚು ಸಂಭವಿಸಿದ್ದು, ಸಾವಿರಾರು ಜನರನ್ನು ಸ್ಥಳಾಂತರಿಸಲಾಗುತ್ತಿದೆ.

ಕಾಸ್ಟೈಕ್ ನದಿ ಸಮೀಪದ ಬೆಟ್ಟವನ್ನು ಆವರಿಸಿದ ಕಾಳ್ಗಿಚ್ಚು, ಕೆಲವೇ ಗಂಟೆಗಳಲ್ಲಿ 9,400 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ.

ಪ್ರಬಲ 'ಸಂತಾ ಅನಾ' ಮಾರುತಗಳಿಂದಾಗಿ ಬೆಂಕಿಯ ತೀವ್ರತೆ ಹೆಚ್ಚಿದೆ. ನದಿಯ ಸುತ್ತಮುತ್ತಲಿನ ಪ್ರದೇಶದಲ್ಲಿರುವ 31 ಸಾವಿರ ಜನರನ್ನು ಸ್ಥಳಾಂತರಿಸಲು ಆದೇಶಿಸಲಾಗಿದೆ.

'ಪರಿಸ್ಥಿತಿ ತುಂಬಾ ಕಠಿಣವಾಗಿದೆ. ಅಗ್ನಿಶಾಮಕದ ಸುಮಾರು 4,000 ಸಿಬ್ಬಂದಿ ಹೆಲಿಕಾಪ್ಟರ್ ಮತ್ತು ಬುಲ್ಡೋಜರ್‌ಗಳ ಮೂಲಕ ಬೆಂಕಿ ನಂದಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಲಾಸ್ ಏಂಜಲೀಸ್‌ನ ಅಗ್ನಿಶಾಮಕ ಮುಖ್ಯಸ್ಥ ಆ್ಯಂಟೋನಿ ಮರೋನೆ ಅವರು ತಿಳಿಸಿದ್ದಾರೆ.

'ಕ್ಯಾಸ್ಟೈಕ್ ಕಾರಾಗೃಹದಲ್ಲಿನ 500 ಕೈದಿಗಳನ್ನು ನೆರೆಯ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಸಮೀಪದ ಇತರ ಜೈಲುಗಳಲ್ಲಿ 4,600 ಕೈದಿಗಳಿದ್ದು, ಪರಿಸ್ಥಿತಿ ಕೈಮೀರಿದರೆ ಅವರನ್ನೂ ಸ್ಥಳಾಂತರಿಸಲು ವ್ಯವಸ್ಥೆ ಮಾಡಲಾಗಿದೆ' ಎಂದು ಲಾಸ್ ಏಂಜಲೀಸ್‌ನ ಪೊಲೀಸ್ ಅಧಿಕಾರಿ ರಾಬರ್ಟ್ ಲೂನಾ ಅವರು ಹೇಳಿದ್ದಾರೆ.

ಕ್ಯಾಲಿಫೋರ್ನಿಯಾ ರಾಜ್ಯವು ಕಾಳ್ಗಿಚ್ಚು ಉಂಟಾಗುತ್ತಿರುವ ಪ್ರದೇಶದಲ್ಲಿನ ನೀರಿನ ಹರಿವನ್ನು ಬೇರೆಡೆಗೆ ತಿರುಗಿಸಿದೆ. ಇದರಿಂದ ಸಮಸ್ಯೆಯಾಗುತ್ತಿದೆ. ನೀರಿನ ಹರಿವನ್ನು ಮೂಲ ಸ್ಥಿತಿಗೆ ತರುವವರೆಗೆ ನಾವು ಯಾವುದೇ ನೆರವನ್ನು ನೀಡುವುದಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಹೇಳಿಕೆ

'ದಾಖಲೆರಹಿತರ ವಾಪಸ್‌ಗೆ ಮುಕ್ತ'

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ದಾಖಲೆ ರಹಿತವಾಗಿ ನೆಲಸಿರುವ ಭಾರತೀಯರನ್ನು ಕಾನೂನುಬದ್ಧವಾಗಿ ವಾಪಸ್ ಕರೆಸಿಕೊಳ್ಳಲು ಭಾರತ ಮುಕ್ತವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಬುಧವಾರ ತಿಳಿಸಿದ್ದಾರೆ.

ಅಮೆರಿಕದಿಂದ ಭಾರತಕ್ಕೆ ಗಡೀಪಾರು ಮಾಡಬಹುದಾದವರ ಸಂಖ್ಯೆಯನ್ನು ನವದೆಹಲಿ ಪರಿಶೀಲಿಸುತ್ತಿದೆ ಎಂದು ಅವರು ಹೇಳಿದ್ದಾರೆ.

'ಈ ರೀತಿಯ ಕಾನೂನು ಪಾಲನೆಯನ್ನು ಸರ್ಕಾರವಾಗಿ ನಾವು ಬೆಂಬಲಿಸುತ್ತೇವೆ. ಜಾಗತಿಕ ಮಟ್ಟದಲ್ಲಿ ಭಾರತೀಯ ಪ್ರತಿಭಾವಂತರು ಗರಿಷ್ಠ ಅವಕಾಶಗಳನ್ನು ಪಡೆಯಬೇಕು ಎಂದೂ ಬಯಸುತ್ತೇವೆ. ಅದರ ಜತೆಗೆ ನಾವು ಅಕ್ರಮ ವಲಸೆಯನ್ನೂ ದೃಢವಾಗಿ ವಿರೋಧಿಸುತ್ತೇವೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.



ಎಸ್‌. ಜೈಶಂಕರ್

'ನಮ್ಮ ಪ್ರಜೆಗಳು ಅಮೆರಿಕದಲ್ಲಿ ಅಕ್ರಮವಾಗಿ ಉಳಿದುಕೊಂಡಿದ್ದರೆ, ಅವರನ್ನು ಕಾನೂನುಬದ್ಧವಾಗಿ ವಾಪಸ್ ಕರೆತರಲು ಮುಕ್ತರಾಗಿದ್ದೇವೆ' ಎಂದು ಜೈಶಂಕರ್ ಪ್ರತಿಪಾದಿಸಿದ್ದಾರೆ.

'ದಾಖಲೆಯಿಲ್ಲದೆ ಅಥವಾ ವೀಸಾ ಅವಧಿ ಮುಗಿದಿದ್ದರೂ ಉಳಿದುಕೊಂಡಿರು-ವವರ ಗಡೀಪಾರಿಗೆ ಭಾರತವು ಅಮೆರಿಕದ ಜತೆ ಕಾರ್ಯನಿರ್ವಹಿಸುತ್ತಿದೆಯೇ' ಎಂಬ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ.

'ವೀಸಾ ಪಡೆಯಲು 400 ದಿನಗಳವರೆಗೆ ಕಾಯುವುದು ಸರಿಯಲ್ಲ. ಹೀಗಾದರೆ, ಈ ಸಂಬಂಧ ಉತ್ತಮವಾಗಿದೆ ಎಂದು ಭಾವಿಸಲು ಆಗುವುದಿಲ್ಲ' ಎಂಬುದನ್ನು ಅಮೆರಿಕದ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರಿಗೆ ಹೇಳಿರುವುದಾಗಿ ಜೈಶಂಕರ್ ತಿಳಿಸಿದ್ದಾರೆ.

ಅಕ್ರಮ ವಲಸಿಗರ ಸೆರೆ: ಮಸೂದೆಗೆ ಅಸ್ತು

ವಾಷಿಂಗ್ಟನ್ (ಎಪಿ): ಹಿಂಸೆ, ಕಳ್ಳತನ ಸೇರಿದಂತೆ ಇತರ ಅಪರಾಧಗಳ ಆರೋಪಗಳನ್ನು ಎದುರಿಸುತ್ತಿರುವ ಅಕ್ರಮ ವಲಸಿಗರನ್ನು ಬಂಧಿಸುವ ಕುರಿತ ಮಸೂದೆಗೆ ಅಮೆರಿಕದ ಸಂಸತ್ತು ಬುಧವಾರ ಅಂತಿಮ ಅನುಮೋದನೆ ನೀಡಿದೆ.

ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಮಸೂದೆಗೆ ಸಹಿ ಹಾಕಿದ ಬಳಿಕ ಅದು ಕಾನೂನಾಗಲಿದೆ. ರಿಪಬ್ಲಿಕನ್ ಸದಸ್ಯರೇ ಹೆಚ್ಚಿರುವ ಸದನದಲ್ಲಿ ಈ ಮಸೂದೆಗೆ ಹಲವು ಡೆಮಾಕ್ರಟಿಕ್ ಸದಸ್ಯರೂ ಬೆಂಬಲ ಸೂಚಿಸಿದ್ದು ವಿಶೇಷವಾಗಿತ್ತು.

ಇದು ಅಕ್ರಮ ವಲಸೆಯನ್ನು ತಡೆಯುವ ಟ್ರಂಪ್ ಅವರ ಯೋಜನೆಗಳಿಗೆ ಅನುಗುಣವಾಗಿದೆ. ವೆನೆಜುವೆಲಾದ ವ್ಯಕ್ತಿಯೊಬ್ಬರಿಂದ ಕಳೆದ ವರ್ಷ ಕೊಲೆಯಾದ ಜಾರ್ಜಿಯಾದ ನರ್ಸಿಂಗ್ ವಿದ್ಯಾರ್ಥಿ ಲೇಕನ್ ರಿಲೆ ಅವರ ಹೆಸರನ್ನು ಈ ಮಸೂದೆಗೆ ಇಡಲಾಗಿದೆ. ಈ ಮಸೂದೆಯ ಪರ 263 ಮತ್ತು ವಿರುದ್ಧ 156 ಮತಗಳು ಚಲಾವಣೆಯಾದವು. ಡೆಮಾಕ್ರಟಿಕ್ ಪಕ್ಷದ 46 ಸದಸ್ಯರು ರಿಪಬ್ಲಿಕ್ ಪಕ್ಷವನ್ನು ಬೆಂಬಲಿಸಿದರು.

ಘರ್ ವಾಪಸಿ ಸರಳ ಸೇರಿ ಹಲವು ಅಂಶಗಳನ್ನು ಒಳಗೊಂಡ ಸಂಹಿತೆ ಇದೇ 27ಕ್ಕೆ ಪ್ರಕಟ ನಿರೀಕ್ಷೆ

ರಾತ್ರಿ ಮದುವೆ ಸಲ್ಲ: ಹಿಂದೂ ನೀತಿ

• ಸಂಜಯ್ ಪಾಂಡೆ

ಲಖನೌ: ಸನಾತನ ಧರ್ಮ ಪರಿಪಾಲನೆಗೆ ಏನು ಮಾಡಬೇಕು, ಏನು ಮಾಡಬಾರದು ಹಾಗೂ ವೇದಜ್ಞಾನ ಹರಡಲು ಏನು ಮಾಬೇಕು ಎಂಬುದೂ ಸೇರಿ ಹಲವು ಅಂಶಗಳನ್ನು ಒಳಗೊಂಡಿರುವ 'ಹಿಂದೂ ನೀತಿ ಸಂಹಿತೆ'ಯು ಕುಂಭಮೇಳದಲ್ಲಿ ಇದೇ 27ರಂದು ಬಿಡುಗಡೆಯಾಗಲಿದೆ.

ವಾರಾಣಸಿಯಲ್ಲಿನ ಕಾಶಿ ವಿದ್ವತ್ ಪರಿಷತ್ ಇದನ್ನು ಸಿದ್ಧಪಡಿಸಿದೆ.

ವಿಶ್ವಹಿಂದೂಪರಿಷತ್‌ಪ್ರಾಯೋಜಿಸಿರುವ, ಮಠಾಧೀಶರ ಸಭೆಯಲ್ಲಿ ಮುನ್ನೂರು ಪುಟಗಳ 'ಹಿಂದೂ ನೀತಿ ಸಂಹಿತೆ'ಯ ಕುರಿತು ಶನಿವಾರದಿಂದ ಚರ್ಚೆ ನಡೆಯಲಿದೆ ಎನ್ನಲಾಗಿದೆ.

ದೇಶದ ವಿವಿಧ ಮಠಾಧೀಶರು ಕಳೆದ 15 ವರ್ಷಗಳಿಂದ ಪ್ರತಿಪಾದಿಸುತ್ತಾ ಬಂದಿರುವ ವಿಚಾರಗಳನ್ನು ಒಳಗೊಂಡ 'ಹಿಂದೂ ನೀತಿ ಸಂಹಿತೆ'ಯಲ್ಲಿನ ಸಾರಾಂಶ ಏನು ಎನ್ನುವುದು ಅಧಿಕೃತವಾಗಿ ಬಹಿರಂಗವಾಗಿಲ್ಲ.

ಹಿಂದೂಗಳ ಸಾಮಾಜಿಕ ಬದುಕು ಹೇಗಿರಬೇಕು ಹಾಗೂ ರೀತಿ–ರಿವಾಜುಗಳನ್ನು ಹೇಗೆಲ್ಲ ಪಾಲಿಸಬೇಕು ಎನ್ನುವುದನ್ನು ನೀತಿ ಸಂಹಿತೆಯು ಒಳಗೊಳ್ಳಲಿದೆ ಎಂದಷ್ಟೆ ಅಖಿಲ ಭಾರತ ಸಂತ ಸಮಿತಿಯ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಸರಸ್ವತಿ ಹೇಳಿದರು.

ಪುರಾಣಗಳ ಉಲ್ಲೇಖಗಳನ್ನು ಆಧರಿಸಿ ನೀತಿ ಸಂಹಿತೆ ರೂಪಿಸಲಾಗಿದೆ ಎನ್ನಲಾಗಿದ್ದು, ಕರ್ಮ ಸಿದ್ಧಾಂತವನ್ನೇ ಹೆಚ್ಚಾಗಿ ಆಧರಿಸಿದೆ ಎಂದೂ ಹೇಳಲಾಗಿದೆ.

ಕುಂಭಮೇಳದಲ್ಲಿ ಹಿಂದೂ ನೀತಿ ಸಂಹಿತೆಯ ಸಾವಿರಾರು ಪ್ರತಿಗಳನ್ನು ಮುದ್ರಿಸಿ, ಮಾರಾಟ ಮಾಡುವ ಉದ್ದೇಶವೂ ಮಠಾಧೀಶರಿಗೆ ಇದೆ.



ಕುಂಭಮೇಳಕ್ಕೆ ಬಂದ ಜನರು ಗುರುವಾರ ಪೋಂಟೂನ್ ಸೇತುವೆಯಲ್ಲಿ ಸಾಗಿದರು

ಸಂಹಿತೆಯಲ್ಲಿ ಇರಲಿವೆ ಎನ್ನಲಾದ ಅಂಶಗಳು...

- ರಾತ್ರಿ ಹೊತ್ತು ಹಿಂದೂ ವಿವಾಹಗಳನ್ನು ನಡೆಸಕೂಡದು. ಸೂರ್ಯರಶ್ಮಿಯಲ್ಲಿ ವಿವಾಹ ನಡೆಸುವುದೇ ಸನಾತನ ಧರ್ಮದ ಪ್ರಕಾರ ಶ್ರೇಷ್ಠ
- ಹೆಣ್ಣುಭ್ರೂಣ ಹತ್ಯೆ ಕೂಡದು. ಮಹಿಳೆ, ಪುರುಷರು ಸಮಾನರು. ಮಹಿಳೆಯರು ಯಜ್ಞವನ್ನೂ ಮಾಡಬಹುದು
- ಪರಿಶಿಷ್ಟ ಜಾತಿಯವರಿಗೆ ದೇವಸ್ಥಾನ ಪ್ರವೇಶಿಸದಂತೆ ನಿರ್ಬಂಧಿಸಕೂಡದು. ವೇದಗಳಲ್ಲಿ ಜಾತಿಯ ಕಾರಣದಿಂದಾಗಿ ಅಸ್ಪೃಶ್ಯತೆಯ ಪ್ರತಿಪಾದನೆ ಇಲ್ಲ. ಅದು ಗುಲಾಮಗಿರಿಯ ವ್ಯವಸ್ಥೆಯ ಫಲ
- ಬೇರೆ ಧರ್ಮಗಳಿಗೆ ಮತಾಂತರ ಹೊಂದಿದ ಹಿಂದೂಗಳು ತಮ್ಮ ಧರ್ಮಕ್ಕೆ ಇಚ್ಛಾನುಸಾರ ಮರಳುವ 'ಘರ್ ವಾಪಸಿ'ಯನ್ನು (ವಿಎಚ್‌ಪಿ ಹೇಳುವ ಪದಪುಂಜ) ಸರಳಗೊಳಿಸಲಾಗುವುದು



ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಪಾಲ್ಗೊಂಡ ಸಾಧುವೊಬ್ಬರು ಮುಖಕ್ಕೆ ಭಸ್ಮ ಬಳಿದರು

– ಪಿಟಿಐ ಚಿತ್ರಗಳು


'ಸನಾತನ ಮಂಡಳಿ ಅಗತ್ಯ'

ಮಹಾಕುಂಭ ನಗರ (ಪಿಟಿಐ): ಇದೇ 27ರಂದು ಇಲ್ಲಿ ನಡೆಯಲಿರುವ ಧರ್ಮ ಸಭೆಯಲ್ಲಿ ಸನಾತನ ಮಂಡಳಿಯ 'ಹಿಂದೂ ನೀತಿ ಸಂಹಿತೆ'ಯನ್ನು ಮಂಡಿಸಲಾಗುವುದು ಎಂದು ಆಧ್ಯಾತ್ಮಿಕ ಪ್ರವಚನಕಾರ ದೇವಕಿನಂದನ್ ಠಾಕೂರ್ ಗುರುವಾರ ತಿಳಿಸಿದರು.

ನಿರಂಜನಿ ಅಖಾಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ದೇಗುಲಗಳು ಸರ್ಕಾರಗಳ ನಿಯಂತ್ರಣದಲ್ಲಿ ಇರುವುದರಿಂದ ನಮ್ಮ ಧರ್ಮ ಮುಕ್ತವಾಗಿಲ್ಲ, ನಮ್ಮ ಗುರುಕುಲಗಳನ್ನು ಮುಚ್ಚಲಾಗಿದೆ ಮತ್ತು ಗೋವುಗಳು ಬೀದಿಗಳಲ್ಲಿ ಅಲೆದಾಡುತ್ತಿವೆ. ಹೀಗಾಗಿ ನಮ್ಮ ಉದ್ದೇಶವನ್ನು ಮುನ್ನಡೆಸಲು ನಮಗೆ ಸನಾತನ ಮಂಡಳಿ ಅಗತ್ಯ' ಎಂದು ಅವರು ಪ್ರತಿಪಾದಿಸಿದರು.

'ಅಹಿಂಸಾ ತತ್ವ ಕಾಪಾಡಲು ಕೆಲವೊಮ್ಮೆ ಹಿಂಸೆ ಅನಿವಾರ್ಯ'

ಅಹಮದಾಬಾದ್ (ಪಿಟಿಐ): ಅಹಿಂಸಾ ತತ್ವದ ರಕ್ಷಣೆಗೆ ಕೆಲವೊಮ್ಮೆ ಹಿಂಸೆ 'ಅನಿವಾರ್ಯ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹಿರಿಯ ನಾಯಕ ಭಯ್ಯಾಜಿ ಜೋಶಿ ಹೇಳಿದ್ದಾರೆ.



ಭಯ್ಯಾಜಿ

ಗುಜರಾತ್ ವಿಶ್ವ ವಿದ್ಯಾಲಯದ ಮೈದಾನದಲ್ಲಿ ಗುರುವಾರ ನಡೆದ 'ಹಿಂದೂ ಆಧ್ಯಾತ್ಮಿಕ ಸೇವಾ ಮೇಳ'ದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಹಿಂದೂಗಳು ತಮ್ಮ ಧರ್ಮವನ್ನು ರಕ್ಷಿಸಲು ಯಾವಾಗಲೂ ಬದ್ಧರಾಗಿದ್ದಾರೆ. ನಮ್ಮ 'ಧರ್ಮ'ವನ್ನು ರಕ್ಷಿಸಲು, ಇತರರು 'ಅಧರ್ಮ' ಎಂದು ಕರೆಯುವ ಕೆಲಸಗಳನ್ನೂ ನಮಗೆ ಮಾಡಬೇಕಾಗುತ್ತದೆ. ನಮ್ಮ ಪೂರ್ವಜರು ಅಂತಹದ್ದನ್ನು ಮಾಡಿದ್ದಾರೆ' ಎಂದರು.

ಮಹಾಭಾರತ ಯುದ್ಧವನ್ನು ಉಲ್ಲೇಖಿಸಿದ ಅವರು, ಅಧರ್ಮವನ್ನು ತೊಡೆದುಹಾಕಲಿಕ್ಕಾಗಿ ಪಾಂಡವರು ಯುದ್ಧದ ವೇಳೆ ಪಾಲಿಸಬೇಕಾದ ನಿಯಮಗಳನ್ನು ಬದಿಗಿಟ್ಟರು ಎಂದು ಹೇಳಿದರು.

'ಅಹಿಂಸೆಯ ಕಲ್ಪನೆ ಹಿಂದೂ ಧರ್ಮದಲ್ಲಿ ಮಿಳಿತಗೊಂಡಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ, ಕೆಲವೊಮ್ಮೆ ಅಹಿಂಸಾ ತತ್ವವನ್ನು ಕಾಪಾಡಲು ನಾವು ಹಿಂಸೆಯನ್ನು ಆಶ್ರಯಿಸಬೇಕಾಗುತ್ತದೆ. ಇಲ್ಲದಿದ್ದರೆ, ಅಹಿಂಸಾ ತತ್ವಕ್ಕೆ ಉಳಿಗಾಲ ಇಲ್ಲ. ಪೂರ್ವಜರು ನಮಗೆ ಅಂತಹ ಸಂದೇಶ ನೀಡಿದ್ದಾರೆ' ಎಂದು ಪ್ರತಿಪಾದಿಸಿದರು.

'ಇತರರ ನಂಬಿಕೆಗಳಿಗೆ ಗೌರವ ನೀಡಿ'

'ಎಲ್ಲರನ್ನೂ ತನ್ನ ಜತೆ ಕೊಂಡೊಯ್ಯಬಲ್ಲ ಸಾಮರ್ಥ್ಯವಿರುವವರಿಗೆ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯ. ಒಂದು ಧರ್ಮವು ಇತರರಿಗೆ ಅವರ ನಂಬಿಕೆಗಳನ್ನು ಅನುಸರಿಸಲು ಅವಕಾಶ ನೀಡದಿದ್ದರೆ ಅಲ್ಲಿ ಶಾಂತಿ ಇರುವುದಿಲ್ಲ' ಎಂದು ಭಯ್ಯಾಜಿ ಜೋಶಿ ತಿಳಿಸಿದರು.

'ಚರ್ಚ್ ಅಥವಾ ಮಿಷನರಿಗಳಂತಹ ಕೆಲವು ಸಂಸ್ಥೆಗಳು ಮಾತ್ರ ಜನರ ಸೇವೆಯಲ್ಲಿ ತೊಡಗಿಕೊಂಡಿವೆ ಎಂಬ ತಪ್ಪು ಕಲ್ಪನೆ ಹರಡಿಕೊಂಡಿದೆ. ನಮ್ಮ ದೇವಾಲಯಗಳು ಅಥವಾ ಗುರುದ್ವಾರಗಳಲ್ಲಿ ಪ್ರತಿದಿನ ಸುಮಾರು 1 ಕೋಟಿ ಮಂದಿಗೆ ಆಹಾರ ವಿತರಿಸಿದ ಪ್ರಾಚೀನ ಸಂಪ್ರದಾಯವನ್ನು ನಾವು ಹೊಂದಿದ್ದೇವೆ. ಹಿಂದೂ ಧಾರ್ಮಿಕ ಸಂಘಟನೆಗಳು ಆಚರಣೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಶಾಲೆಗಳು, ಗುರುಕುಲಗಳು ಮತ್ತು ಆಸ್ಪತ್ರೆಗಳನ್ನು ನಡೆಸಿಕೊಂಡು ಹೋಗುತ್ತಿವೆ' ಎಂದರು.

ಜಲಗಾಂವ್ ರೈಲು ಅಪಘಾತ: ಮೃತರ ಸಂಖ್ಯೆ 13ಕ್ಕೆ ಏರಿಕೆ

ಜಲಗಾಂವ್ (ಮಹಾರಾಷ್ಟ್ರ) (ಪಿಟಿಐ): ಜಲಗಾಂವ್‌ನಲ್ಲಿ ಸಂಭವಿಸಿದ ರೈಲು ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ರೈಲ್ವೆ ಹಳಿಯಲ್ಲಿ ರುಂಡವಿಲ್ಲದ ದೇಹಗಳು ಪತ್ತೆಯಾಗಿವೆ.

'ಮೃತಪಟ್ಟ 13 ಮಂದಿ ಪೈಕಿ 8 ಮಂದಿಯ ಮೃತದೇಹವನ್ನು ಗುರುತಿಸಲಾಗಿದೆ. ಆಧಾರ್ ಕಾರ್ಡ್ ಆಧರಿಸಿ, ಇಬ್ಬರ ದೇಹಗಳನ್ನು ಗುರುತಿಸಲಾಗಿದೆ' ಎಂದು ಐಜಿಪಿ ದತ್ತಾತ್ರೇಯ ಕರಾಳೆ ತಿಳಿಸಿದ್ದಾರೆ.

'ಮೃತರಲ್ಲಿ 7 ಮಂದಿ ನೇಪಾಳಕ್ಕೆ ಸೇರಿದವರು' ಎಂದು ಜಲಗಾಂವ್ ಜಿಲ್ಲಾ ಮಾಹಿತಿ ಅಧಿಕಾರಿ ಯುವರಾಜ್ ಪಾಟೀಲ್ ತಿಳಿಸಿದರು.

'ದುರಂತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ರಾಜ್ಯ ಸರ್ಕಾರವು ₹5 ಲಕ್ಷ ಪರಿಹಾರ ನೀಡಲಾಗುವುದು' ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಘೋಷಿಸಿದರು.

'ವದಂತಿ ಹಬ್ಬಿಸಿದ್ದು ಚಹಾ ಮಾರಾಟಗಾರ': 'ಪುಷ್ಪಕ್ ಎಕ್ಸ್‌ಪ್ರೆಸ್'ನ ಒಳಗಡೆ ಚಹಾ ಮಾರುತ್ತಿದ್ದ ವ್ಯಕ್ತಿಯೇ ಬೆಂಕಿ ಹರಡಿದ್ದ ವದಂತಿ ಹಬ್ಬಿಸಿದ್ದರಿಂದ, ಕೆಲವು ಪ್ರಯಾಣಿಕರು ರೈಲಿನಿಂದ ಕೆಳಗಿಳಿದು ಓಡಿದ್ದರಿಂದ ಅನಾಹುತ ಸಂಭವಿಸಿದೆ' ಎಂದು ಉಪಮುಖ್ಯಮಂತ್ರಿ ಅಜಿತ್ ಪವಾರ್ ತಿಳಿಸಿದರು.

'ರೈಲಿನ ಅಡುಗೆ ತಯಾರಿಕಾ ಬೋಗಿಯಲ್ಲಿದ್ದ ಚಹಾ ಮಾರುತ್ತಿದ್ದ ವ್ಯಕ್ತಿಯೇ ಬೆಂಕಿ ಹರಡಿದ ಕುರಿತು ಜೋರಾಗಿ ಕಿರುಚಿದ್ದ. ಇದನ್ನು ಕೇಳಿಸಿಕೊಂಡು ಉತ್ತರ ಪ್ರದೇಶದ ಶ್ರಾವಸ್ತಿಯ ಇಬ್ಬರು ಪ್ರಯಾಣಿಕರು ಚೈನ್ ಎಳೆದಿದ್ದರು' ಎಂದು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

6,415 ಹುದ್ದೆಗಳು ಖಾಲಿ

ಒಂದನೇ ಪುಟದಿಂದ...

'ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಪರಿಷ್ಕೃತ ನಿಯಮಾವಳಿಗಳ ಅನ್ವಯ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಗೆ ಅಗತ್ಯ ಇರುವ ಬೋಧಕ, ಬೋಧಕೇತರ ಮತ್ತು ಆಡಳಿತ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಅಲ್ಲದೆ, ಮಂಜೂರಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸದ್ಯ ಚಾಲ್ತಿಯಲ್ಲಿರುವ ಎಐಸಿಟಿಇ ನಿಯಮಾವಳಿಗಳ ಪ್ರಕಾರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಬೇಕಿದೆ. ಕರಡು ನಿಯಮಾವಳಿಗೆ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ನಿಯಮಗಳನ್ನು ಅಂತಿಮಗೊಳಿಸಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'2025–26ನೇ ಸಾಲಿಗೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಎಐಸಿಟಿಇ ಗುರುತಿಸಿದ ನ್ಯೂನತೆಗಳಲ್ಲಿ ಸಾಕಷ್ಟನ್ನು ಸರಿತೂಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇಲಾಖೆಯ ಅಡಿಯಲ್ಲಿರುವ ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವಿದ್ಯಾರ್ಥಿ–ಬೋಧಕ ಸಿಬ್ಬಂದಿಯ ಅನುಪಾತವನ್ನು ಸರಿತೂಗಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿದೆ' ಎಂದೂ ಅವರು ವಿವರಿಸಿದರು.

₹78 ಲಕ್ಷ ವಿದ್ಯುತ್ ಬಿಲ್ ಬಾಕಿ

'ಕೊಪ್ಪಳ ಜಿಲ್ಲೆಯ ತಳಕಲ್‌ನಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ನಿರ್ಮಾಣಕ್ಕೆ ಸರ್ಕಾರ ₹230 ಕೋಟಿಗೂ ಹೆಚ್ಚು ವೆಚ್ಚ ಮಾಡಿದೆ. ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳನ್ನು ಮೀರಿಸುವ ರೀತಿಯಲ್ಲಿರುವ ಈ ಕಾಲೇಜು, ವಿದ್ಯುತ್ ಬಿಲ್‌ನ ಮೊತ್ತ ₹78 ಲಕ್ಷ ಪಾವತಿಸಲು ಬಾಕಿಯಿದೆ. ಹುದ್ದೆಗಳನ್ನು ಸೃಜಿಸದ ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಗಳಿಗೆ ನಿಯೋಜನೆ ಮೇಲೆ ಅಥವಾ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ತಾಂತ್ರಿಕ ಸಮಸ್ಯೆಗಳಿವೆ. ಹೀಗಾಗಿ, ಬೇರೊಂದು ಸಂಸ್ಥೆಯ ಕಾಯಂ ಸಿಬ್ಬಂದಿಯನ್ನು ವಿಶೇಷ ಅಧಿಕಾರಿಯಾಗಿ ನಿಯೋಜಿಸಲಾಗುತ್ತಿದೆ. ಕೆಲವು ಪಾಲಿಟೆಕ್ನಿಕ್‌ಗಳಲ್ಲಿ ಈ ವಿಶೇಷ ಅಧಿಕಾರಿಯೇ ಪ್ರಾಂಶುಪಾಲ ಹುದ್ದೆಯ ಹೊಣೆಯ ಜೊತೆಗೆ ಬೀಗ ತೆಗೆಯುವ, ಕಸ ಗುಡಿಸುವ ಕೆಲಸವನ್ನೂ ಮಾಡಬೇಕಿದೆ' ಎಂದೂ ತಾಂತ್ರಿಕ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ನ್ಯೂನತೆ ಪತ್ತೆ: ಶೇ 25 ಪ್ರವೇಶ ಕಡಿತ

ಹಾವೇರಿ, ತಳಕಲ್ ಮತ್ತು ಗಂಗಾವತಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಿಸಿದಂತೆ ಎಐಸಿಟಿಇ ಸ್ಥಾಯಿ ವಿಚಾರಣಾ ಸಮಿತಿಯು ಅ. 14ರಂದು ಆನ್‌ಲೈನ್ ಮೂಲಕ ಸಭೆ ನಡೆಸಿದೆ. ನಿಯಮಾನುಸಾರ ಅವಶ್ಯ ಇರುವ ಬೋಧನಾ ಸಿಬ್ಬಂದಿ ಮತ್ತು ಇತರ ಸೌಲಭ್ಯ ಇಲ್ಲದೇ ಇರುವುದನ್ನು ಗಮನಿಸಿದ ಸಮಿತಿಯು, 2025–26ನೇ ಸಾಲಿಗೆ ಈ ಕಾಲೇಜುಗಳಿಗೆ ಅನುಮೋದಿಸಿದ್ದ ಪ್ರವೇಶಾತಿಯಲ್ಲಿ ಶೇ 25ರಷ್ಟು ಕಡಿತಗೊಳಿಸುವಂತೆ ನಿರ್ದೇಶನ ನೀಡಿದೆ. ಕಡಿತಗೊಳಿಸಿರುವ ಪ್ರವೇಶಾತಿಯನ್ನು ಮರು ಸ್ಥಾಪಿಸಲು ವಿದ್ಯಾರ್ಥಿ– ಬೋಧಕ ಅನುಪಾತ ಕಾಯ್ದುಕೊಳ್ಳಬೇಕು, ಕಾಯಂ ಪ್ರಾಂಶುಪಾಲರನ್ನು ನೇಮಿಸಬೇಕು, ಬೋಧಕ ಸಿಬ್ಬಂದಿಯ ಅರ್ಹತೆ ಮಟ್ಟ ಸುಧಾರಿಸಬೇಕು, ತಾತ್ಕಾಲಿಕ ಬೋಧಕ, ಬೋಧಕೇತರರ ಬದಲು ಕಾಯಂ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು, ಗ್ರಂಥಾಲಯ ಸೌಲಭ್ಯವನ್ನು ಹೆಚ್ಚಿಸಿಕೊಳ್ಳಬೇಕು ಮತ್ತಿತರ ಸಲಹೆಗಳನ್ನು ಎಐಸಿಟಿಇ ನೀಡಿದೆ.

ಎಂಜಿನಿಯರ್‌ಗಳಿಗೆ 'ಅಧಿಕಾರ'

ಒಂದನೇ ಪುಟದಿಂದ...

ಈ ಆದೇಶದ ನಂತರವೂ ಕೆಪಿಟಿಸಿಎಲ್, ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಗೆ ಪ್ರಾಮುಖ್ಯ ನೀಡದೆ, ಮಂಜೂರಾದ ಹುದ್ದೆಗಳ ಕೆಲಸವನ್ನು ನಿವೃತ್ತ ಎಂಜಿನಿಯರ್‌ಗಳಿಗೆ ನೀಡಲಾಗಿದೆ.

'ಕೆಪಿಟಿಸಿಎಲ್‌ನ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನಿವೃತ್ತರನ್ನು ಯಾವುದೇ ರೀತಿಯಲ್ಲೂ ನೇಮಿಸಿಕೊಳ್ಳುವಂತಿಲ್ಲ. ಅಲ್ಲದೆ, ಮಂಜೂರಾದ ಹುದ್ದೆಗಳಿಗೆ ಗುತ್ತಿಗೆ/ ತಾತ್ಕಾಲಿಕ ಆಧಾರದಲ್ಲೂ ನೇಮಕ ಮಾಡಿಕೊಳ್ಳುವಂತಿಲ್ಲ. 60 ನಿವೃತ್ತ ಎಂಜಿನಿಯರ್‌ಗಳನ್ನು 'ತಾತ್ಕಾಲಿಕ ಆಧಾರ' ಎಂದು ಹೆಸರಿಗಷ್ಟೇ ಹೇಳಿಕೊಂಡು, ಮಂಜೂರಾದ ಹುದ್ದೆಗಳ ಎಂಜಿನಿಯರ್‌ಗಳು ನಿರ್ವಹಿಸುವ ಕಾರ್ಯಗಳನ್ನು ನೀಡಲಾಗಿದೆ. ನಿವೃತ್ತರಿಗೆ ಲಕ್ಷಾಂತರ ರೂಪಾಯಿ ಪಿಂಚಣಿ ಬರುತ್ತಿದ್ದರೂ ಅವರಿಗೇ ಮಣೆ ಹಾಕಲಾಗಿದೆ. ಯುವಕರು ಅರ್ಜಿ ಸಲ್ಲಿಸಿ ನೇಮಕಕ್ಕೆ ಕಾಯುತ್ತಿದ್ದರೂ ಅತ್ತ ಅಧಿಕಾರಿಗಳು ಗಮನಹರಿಸುತ್ತಿಲ್ಲ. ಅಲ್ಲದೆ, ನಿವೃತ್ತರಾದ ಮೇಲೆ ಅವರ ಕಾರ್ಯದಕ್ಷತೆಯೂ ಹೆಚ್ಚಿರುವುದಿಲ್ಲ' ಎಂದು ಕೆಪಿಟಿಸಿಎಲ್‌ನ ನಿವೃತ್ತ ಅಧಿಕಾರಿ ಮನಮೋಹನ್ ದೂರಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಪ್ರತಿಕ್ರಿಯಿಸಲಿಲ್ಲ. ನಿವೃತ್ತ ಎಂಜಿನಿಯರ್ ನೇಮಕಕ್ಕೆ ಅನುಮೋದನೆ ನೀಡಿರುವ ಹಾಗೂ ವೇತನವನ್ನೂ ನೀಡುವ ಕೆಪಿಟಿಸಿಎಲ್‌ನ ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಬಿ.ಪಿ. ವಿಜಯ್ ಅವರು 'ತಾಂತ್ರಿಕ ನಿರ್ದೇಶಕರನ್ನು ಕೇಳಿ' ಎಂದಷ್ಟೇ ಪ್ರತಿಕ್ರಿಯಿಸಿದರು.

ಎಲ್ಲೆಲ್ಲಿಗೆ ಎಷ್ಟು ನಿವೃತ್ತ ಎಂಜಿನಿಯರ್?


2	ಎಸ್‌ಇ (ಸಿವಿಲ್), ಕೆಪಿಟಿಸಿಎಲ್ ಕಾರ್ಪೊರೇಟ್ ಕಚೇರಿ
2	ಡಿಜಿಎಂ (ಸಿವಿಲ್), ಕೆಪಿಟಿಸಿಎಲ್ ಕಾರ್ಪೊರೇಟ್ ಕಚೇರಿ
9	ಪ್ರಸರಣ ವಲಯ, ಬೆಂಗಳೂರು
10	ಪ್ರಸರಣ ವಲಯ, ತುಮಕೂರು
8	ಪ್ರಸರಣ ವಲಯ, ಮೈಸೂರು
12	ಪ್ರಸರಣ ವಲಯ, ಹಾಸನ
9	ಪ್ರಸರಣ ವಲಯ, ಬಾಗಲಕೋಟೆ
8	ಪ್ರಸರಣ ವಲಯ, ಕಲಬುರಗಿ

ಮನೆಯಿಂದ ಒಂದು ಕಿ.ಮೀ ದೂರದ ಕೆರೆಯಲ್ಲಿ ಪತ್ತೆ

ಚಾಕುವಿನ ತುಂಡು ವಶಕ್ಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ/ಪುಣೆ: ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರ ಮೇಲೆ ಹಲ್ಲೆ ನಡೆದಾಗ ಬಳಸಿದ ಚಾಕುವಿನ ಮೂರನೆಯ ತುಂಡನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.



ಸೈಫ್ ಅಲಿ ಖಾನ್

'ಮೂರನೆಯ ತುಂಡು ಸೈಫ್ ಅವರ ಮನೆಯಿಂದ ಒಂದು ಕಿಲೊ ಮೀಟರ್‌ಗಿಂತ ಹೆಚ್ಚು ದೂರದಲ್ಲಿರುವ ಕೆರೆಯೊಂದರ ಬಳಿ ದೊರೆತಿದೆ. ನಾವು ಆರೋಪಿಯನ್ನು ಕೆರೆಯ ಬಳಿ ಕರೆದೊಯ್ದು ಚಾಕುವನ್ನು ವಶಪಡಿಸಿಕೊಂಡಿದ್ದೇವೆ' ಎಂದು ಬಾಂದ್ರಾ ಪೊಲೀಸ್ ಠಾಣೆಯ ಅಧಿಕಾರಿಗಳು ಹೇಳಿದ್ದಾರೆ.

ಸೈಫ್ ಮೇಲೆ ಶರೀಫುಲ್ ಹಲ್ಲೆ ನಡೆಸಿದಾಗ ಚಾಕುವಿನ ಒಂದು ತುಂಡು ನಟನ ಬೆನ್ನುಹುರಿ ಬಳಿ ಸಿಕ್ಕಿಹಾಕಿಕೊಂಡಿತ್ತು.

ಇನ್ನೊಂದು ತುಂಡು ನಟನ ಮನೆಯಲ್ಲಿ ಪೊಲೀಸರು ಪಂಚನಾಮೆ ನಡೆಸುವ ಸಂದರ್ಭದಲ್ಲಿ ಸಿಕ್ಕಿತ್ತು. ಈಗ ಮೂರನೆಯ ತುಂಡು ದೊರೆತಿದೆ.

'ಚಿತ್ರ ನನ್ನ ಮಗನದ್ದಲ್ಲ'

ಸೈಫ್ ಅಲಿ ಖಾನ್ ಮೇಲೆ ಹಲ್ಲೆ ನಡೆಸಿದ ಆರೋಪಿಯದ್ದು ಎಂದು ಪೊಲೀಸರು ಮೊದಲು ಬಿಡುಗಡೆ ಮಾಡಿದ್ದ ಚಿತ್ರವು ತನ್ನ ಮಗನದ್ದಲ್ಲ ಎಂದು ಆರೋಪಿ ಶರೀಫುಲ್‌ನ ತಂದೆ ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿನ ರಾಜಕೀಯ ಬಿಕ್ಕಟ್ಟಿನ ಕಾರಣಕ್ಕಾಗಿ ತಮ್ಮ ಮಗ ಅಗತ್ಯ ದಾಖಲೆಗಳು ಇಲ್ಲದೆ ಭಾರತಕ್ಕೆ ತೆರಳಿದ್ದ ಎಂದು ಶರೀಫುಲ್‌ನ ತಂದೆ ಮೊಹಮ್ಮದ್ ರುಹುಲ್ ಅಮಿನ್ ಫಕೀರ್ ಅವರು ಹೇಳಿದ್ದಾರೆ. 'ಮೊದಲು ಪೊಲೀಸರು ಬಿಡುಗಡೆ ಮಾಡಿದ್ದ ಫೋಟೊ ನನ್ನ ಮಗನದ್ದಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ನಿಜಕ್ಕೂ ದಾಳಿ ಆಗಿತ್ತೇ?'

ನಟ ಸೈಫ್ ಅಲಿ ಖಾನ್ ಅವರು ಚಿಕಿತ್ಸೆ ಪಡೆದ ನಂತರ ಆಸ್ಪತ್ರೆಯಿಂದ ಬಂದ ಬಗೆಯನ್ನು ಗಮನಿಸಿದಾಗ, ಅವರ ಮೇಲೆ ನಿಜಕ್ಕೂ ಹಲ್ಲೆಯಾಗಿತ್ತೇ ಎಂಬ ಪ್ರಶ್ನೆ ಮೂಡುತ್ತದೆ ಎಂದು ಮಹಾರಾಷ್ಟ್ರದ ಸಚಿವ ನಿತೇಶ್ ರಾಣೆ ಹೇಳಿದ್ದಾರೆ.

ಭಾರತಕ್ಕೆ ಅಕ್ರಮವಾಗಿ ಬರುವ ಬಾಂಗ್ಲಾದೇಶಿಗಳು ಮೊದಲು ರಸ್ತೆ ಬದಿ ಕಾಣುತ್ತಿದ್ದರು. ಈಗ ಅವರು ಮನೆಗಳಿಗೆ ನುಗ್ಗುತ್ತಿದ್ದಾರೆ ಎಂದಿದ್ದಾರೆ. 'ಬಾಂಗ್ಲಾದೇಶಿ ನುಸುಳುಕೋರನು ಸೈಫ್ ಅವರನ್ನು ಕರೆದೊಯ್ಯಲು ಬಂದಿದ್ದಿರಬೇಕು. ಸೈಫ್ ತ್ಯಾಜ್ಯ ಇದ್ದಂತೆ. ಅವರನ್ನು ಬಾಂಗ್ಲಾಗೆ ಹೊತ್ತೊಯ್ದಿದ್ದರೆ ಚೆನ್ನಾಗಿತ್ತು' ಎಂದು ವ್ಯಂಗ್ಯವಾಡಿದ್ದಾರೆ.

ಕಾನೂನು–ಸುವ್ಯವಸ್ಥೆಯ ವಿಚಾರಗಳಲ್ಲಿ ಹಿಂದೂ–ಮುಸ್ಲಿಂ ವಿಷಯ ತರುವುದರ ಬದಲು ಪೊಲೀಸರು ನಿಜವಾದ ಆರೋಪಿಯನ್ನು ಬಂಧಿಸಬೇಕು. ಬಂಧಿತ ಆರೋಪಿ ಹಾಗೂ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಯಲ್ಲಿ ಇರುವವ ಒಬ್ಬನೇ ಅಲ್ಲ ಎಂಬ ವರದಿಗಳಿವೆ

ನಾನಾ ಪಟೋಲೆ, ಮಹಾರಾಷ್ಟ್ರ ಕಾಂಗ್ರೆಸ್ ಮುಖ್ಯಸ್ಥ

ಸಲೂನ್ ಮೇಲೆ ಗುಂಪಿನಿಂದ ದಾಳಿ

ಒಂದನೇ ಪುಟದಿಂದ...

'ಸಲೂನ್‌ನಲ್ಲಿದ್ದ ಇಬ್ಬರು ಮಹಿಳಾ ಸಿಬ್ಬಂದಿ ಮೇಲೆ ಗುಂಪಿನಲ್ಲಿದ್ದ ಕೆಲವರು ಹಲ್ಲೆ ನಡೆಸಿ, ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಸಲೂನ್‌ನ ಮಾಲೀಕ ನಗರದ ಆನೆಗುಂಡಿಯ ಸುಧೀರ್ ಶೆಟ್ಟಿ ದೂರು ನೀಡಿದ್ದು, ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 329 (2) (ಅಕ್ರಮ ಪ್ರವೇಶ), ಸೆಕ್ಷನ್ 324 (5) (ಸೊತ್ತುಗಳ ನಾಶ), ಸೆಕ್ಷನ್ 74 (ಮಹಿಳೆಯರ ಮೇಲೆ ಹಲ್ಲೆ, ಮಾನಭಂಗಯತ್ನ), ಸೆಕ್ಷನ್ 351 (3) (ಕ್ರಿಮಿನಲ್ ಬೆದರಿಕೆ ಒಡ್ಡುವುದು), ಸೆಕ್ಷನ್ 115 (2) (ಹಲ್ಲೆ ನಡೆಸುವುದು), ಸೆಕ್ಷನ್ 109 (ಕೊಲೆಯತ್ನ), ಸೆಕ್ಷನ್ 352 (ಅಪಮಾನಗೊಳಸಿ ಶಾಂತಿಭಂಗ ಮಾಡುವುದು) ಹಾಗೂ ಸೆಕ್ಷನ್ 190ರ (ಅಕ್ರಮ ಕೂಟ ರಚಿಸಿ ಅಪರಾಧ ಕೃತ್ಯ ನಡೆಸುವುದು) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂಡೋಮ್

'ಸಲೂನ್‌ನಲ್ಲಿ ಕಾಂಡೋಮ್ ಇದೆಯಲ್ಲ' ಎಂದು ದಾಳಿಕೋರರು ಅದನ್ನು ತೋರಿಸಿ, ಮಹಿಳಾ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಳ್ಳುವ ದೃಶ್ಯ ವಿಡಿಯೊದಲ್ಲಿದೆ. ದಾಳಿ ಮಾಡಿದವರೇ ಕಾಂಡೋಮ್ ತಂದು ಇಲ್ಲಿ ಇಟ್ಟು ಹೀಗೆ ಮಾಡಿದ್ದಾರೆ ಎಂದು ಸಲೂನ್‌ನವರು ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಅನೇಕರು ಇದ್ದ ಗುಂಪು ಸಲೂನ್‌ಗೆ ನುಗ್ಗಿದೆ. ನೀವು ಅಕ್ರಮ ಚಟುವಟಿಕೆ ನಡೆಸುತ್ತಿದ್ದೀರಿ ಎಂದು ಆರೋಪಿಸಿ ಸಿಬ್ಬಂದಿ ಜೊತೆ ಅವರು ಜಗಳವಾಡಿದ್ದಾರೆ. ಸಲೂನ್‌ನಲ್ಲಿದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದಾರೆ. ಗುಂಪಿನಲ್ಲಿದ್ದ ಕೆಲವರು ಇಬ್ಬರು ಮಹಿಳಾ ಸಿಬ್ಬಂದಿ ಮೇಲೂ ಹಲ್ಲೆ ನಡೆಸಿ, ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸರಿಗೆ ಮಾಹಿತಿ ನೀಡಿಲ್ಲ: 'ಇಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿತ್ತು. ಹೀಗಾಗಿ ನಮ್ಮ ಹುಡುಗರು ದಾಳಿ ನಡೆಸಿದ್ದಾರೆ' ಎಂದು ಪ್ರಸಾದ್ ಅತ್ತಾವರ ಮಾಧ್ಯಮಕ್ಕೆ ಹೇಳಿಕೆ ನೀಡಿದ್ದಾರೆ. 'ನೀವು ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೀರಾ' ಎಂಬ ಪ್ರಶ್ನೆಗೆ, 'ಮಂಗಳೂರು ಅಷ್ಟೇ ಅಲ್ಲ, ರಾಜ್ಯದ ಶೇ 90ರಷ್ಟು ಪಾರ್ಲರ್‌ಗಳಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆ. ಮಂಗಳೂರಿನಲ್ಲಿ ಡ್ರಗ್ಸ್ ಮಾಫಿಯಾ ಮಿತಿಮೀರಿದೆ. ಸಂಬಂಧಿಸಿದವರು ಕ್ರಮಕೈಗೊಳ್ಳುತ್ತಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

ಕ್ಯಾಮೆರಾಮನ್ ಬಂಧನ: 'ದಾಳಿ ಮಾಡಲು ತೆರಳಿದವರು ಸ್ಥಳೀಯ ಟಿವಿ ವಾಹಿನಿಯೊಂದರ ಕ್ಯಾಮೆರಾಮನ್ ಶರಣ್‌ರಾಜ್‌ನನ್ನು ಸಹ ಕರೆದುಕೊಂಡು ಹೋಗಿದ್ದರು. ಆತ, ದಾಳಿಯ ವಿಡಿಯೊ ಚಿತ್ರೀಕರಿಸಿದ್ದಾನೆ. ಆತನನ್ನೂ ಬಂಧಿಸಲಾಗಿದೆ.

ಮಸಾಜ್ ಪಾರ್ಲರ್ ದಾಳಿಕೋರರ ವಿರುದ್ಧ ಕ್ರಮ: ಪರಮೇಶ್ವರ

ಒಂದನೇ ಪುಟದಿಂದ...

ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಕಿರುಕುಳದ ಸಂತ್ರಸ್ತರ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ಆರ್‌ಬಿಐನವರು ಸಣ್ಣ ಸಣ್ಣ ಏಜೆನ್ಸಿಗಳಿಗೆ ಸಣ್ಣ ಪ್ರಮಾಣದ ಹಣ ಹಂಚಲು ಅವಕಾಶ ಮಾಡಿಕೊಟ್ಟಿದ್ದಾರೆ. ಫೈನಾನ್ಸ್ ಸಂಸ್ಥೆಯವರು ಹಣ ವಾಪಸ್ ಬರಲಿಲ್ಲ ಅಂದಾಗ ಈ ರೀತಿ ಕೃತ್ಯ ಮಾಡುತ್ತಿದ್ದಾರೆ. ಗ್ರಾಹಕರ ಮೇಲೆ ದೈಹಿಕ ಹಲ್ಲೆ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಕೃತ್ಯ ಮಾಡುತ್ತಿದ್ದಾರೆ. ಈ ರೀತಿಯ ಕೃತ್ಯಗಳಿಗೆ ಕಾನೂನಿನಲ್ಲಿ ಅವಕಾಶ ಇಲ್ಲ. ಪೊಲೀಸರಿಗೆ ದೂರು ನೀಡಿದರೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

ಶಸ್ತ್ರಾಸ್ತ್ರ, ಮದ್ದುಗುಂಡು ವಶ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಉಗ್ರರ ಅಡಗುದಾಣವನ್ನು ಭೇದಿಸಿದ್ದು, ಉಗ್ರರು ಸಂಗ್ರಹಿಸಿಟ್ಟಿದ್ದ ಹಲವು ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಲಾರ್‌ಮೋಹ್ ಅವಂತಿಪೋರಾ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆಯ ವೇಳೆ ಭದ್ರತಾ ಪಡೆಗಳು ಉಗ್ರರ ಅಡಗುತಾಣವನ್ನು ಭೇದಿಸಿದ್ದಾರೆ. ಶೋಧದ ವೇಳೆ ಗ್ರೆನೇಡ್, ಯುಬಿಜಿಎಲ್, ಎಲೆಕ್ಟ್ರಿಕ್ ಡಿಟೋನೇಟರ್, ಪಿಸ್ತೂಲ್ ಮ್ಯಾಗಜೀನ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ದೆಹಲಿಯ ಸಮಸ್ಯೆಗಳ ಪಟ್ಟಿ ಮಾಡಿ, ವಿಡಿಯೊ ಹಂಚಿಕೊಂಡ ರಾಹುಲ್

'ಶೀಲಾ ದೀಕ್ಷಿತ್ ಅಭಿವೃದ್ಧಿ ಮಾದರಿ ಬೇಕು'

ನವದೆಹಲಿ (ಪಿಟಿಐ): ದೆಹಲಿಗೆ ಈಗ ನಿಜವಾದ ಅಭಿವೃದ್ಧಿ ಮಾದರಿಯೊಂದರ ಅಗತ್ಯವಿದೆ. ಶೀಲಾ ದೀಕ್ಷಿತ್ ಮುಖ್ಯಮಂತ್ರಿಯಾಗಿದ್ದಾಗ ಅಂತಹ ಮಾದರಿ ಇತ್ತು. ಪ್ರಧಾನಿ ಮೋದಿ ಹಾಗೂ ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್ ಅವರ 'ಸುಳ್ಳು ಪ್ರಚಾರದ ಮಾದರಿ' ದೆಹಲಿಗೆ ಬೇಕಿಲ್ಲ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ಹಲವು ಸಮಸ್ಯೆಗಳಿಗೆ ಬೆಳಕು ಬೀರುವಂತಹ ತುಣುಕುಗಳಿರುವ ವಿಡಿಯೊವನ್ನು ರಾಹುಲ್ ಗಾಂಧಿ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ.

'ಕಳಪೆ ಮೂಲಸೌಕರ್ಯ, ದೂಳು, ಹಣದುಬ್ಬರ, ನಿರುದ್ಯೋಗ, ಮಾಲಿನ್ಯ, ಭ್ರಷ್ಟಾಚಾರ–ಇವೆಲ್ಲವೂ ದೆಹಲಿ ಜನರ ಎದುರಲ್ಲಿರುವ ಸತ್ಯಗಳು' ಎಂದು ಹಿಂದಿಯಲ್ಲಿ ಪೋಸ್ಟ್ ಬರೆದು, ಅದಕ್ಕೆ ವಿಡಿಯೊ ಲಗತ್ತಿಸಿ ಅವರು ಹಂಚಿಕೊಂಡಿದ್ದಾರೆ.

ರಾಹುಲ್ ಅವರು ದೆಹಲಿಯ ಸದರ್ ಬಜಾರ್ ಕ್ಷೇತ್ರದಲ್ಲಿ ರ‍್ಯಾಲಿಯಲ್ಲಿ ಬುಧವಾರ ಭಾಷಣ ಮಾಡಬೇಕಿತ್ತು. ಅನಾರೋಗ್ಯದ ಕಾರಣ ಅವರ ಭಾಷಣದ ವಿಡಿಯೊ ತುಣುಕನ್ನು ಅಲ್ಲಿ ಪ್ರಸಾರ ಮಾಡಲಾಗಿತ್ತು. ಬೆಳಗಾವಿಯಲ್ಲಿ ನಡೆದ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಕಾಂಗ್ರೆಸ್ ಅಧಿವೇಶನಕ್ಕೂ ಅವರಿಗೆ ಹೋಗಲು ಸಾಧ್ಯವಾಗಿರಲಿಲ್ಲ.

'ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಸಲ್ಲಬೇಕಾದುದನ್ನು ದೊರೆಯದಂತೆ ಮಾಡುವ ವಿಷಯದಲ್ಲಿ ಮೋದಿ, ಕೇಜ್ರಿವಾಲ್ ಇಬ್ಬರಿಗೂ ಯಾವ ವ್ಯತ್ಯಾಸವೂ ಇಲ್ಲ' ಎಂದು ಈ ಹಿಂದೆಯೇ ರಾಹುಲ್ ಟೀಕೆ ಮಾಡಿದ್ದರು.

ಶೀಲಾ ಅವರು ಮುಖ್ಯಮಂತ್ರಿಯಾಗಿ 3 ಅವಧಿಗಳಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಯಾವ ಸರ್ಕಾರವೂ ದೆಹಲಿಯಲ್ಲಿ ಮಾಡಿಲ್ಲ ಎಂದೂ ರಾಹುಲ್ ಪ್ರತಿಪಾದಿಸಿದ್ದಾರೆ.

ದೆಹಲಿಯ ವಿಶ್ವದರ್ಜೆಯ ಮೂಲಸೌಕರ್ಯವನ್ನು ನಾಶಪಡಿಸಿರುವ ಎಎಪಿ, ಕಸದ ರಾಶಿಯನ್ನಾಗಿ ಅದನ್ನು ಪರಿವರ್ತಿಸಿದೆ


ಪವನ್ ಖೇರಾ, ಕಾಂಗ್ರೆಸ್ ಮುಖಂಡ

ಹರಿನಗರದಲ್ಲಿ ಪ್ರಚಾರಕ್ಕೆ ತೆರಳಿದಾಗ ನನ್ನ ಕಾರಿನ ಮೇಲೆ ದಾಳಿ ನಡೆದಿದೆ. ಇವೆಲ್ಲವೂ, ಅಮಿತ್ ಶಾ ಸೂಚನೆಯಂತೆ ನಡೆಯುತ್ತಿದೆ

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ

ಕಳೆದ ಹತ್ತು ವರ್ಷಗಳಲ್ಲಿ ಭ್ರಷ್ಟಾಚಾರದ ವಿಷಯದಲ್ಲಿ ಎಎಪಿ ಎಲ್ಲ ದಾಖಲೆಗಳನ್ನೂ ಮುರಿದಿದೆ

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ



- 'ಚುನಾವ್ ಮಿತ್ರ' ಮತ್ತು 'ಸೈಬರ್ ಸಾರ್ಥಿ' ಎನ್ನುವ ಚಾಟ್‌ಬೋಟ್‌ಗಳು ದೆಹಲಿ ಪೊಲೀಸರು ಹಾಗೂ ಅರೆಸೇನಾ ಪಡೆಗಳಿಗೆ ಚುನಾವಣಾ ಅಕ್ರಮಗಳನ್ನು ತಡೆಯುವ ವೇಳೆ ಸಹಕಾರ ನೀಡಲಿವೆ. ಚುನಾವಣಾ ಆಯೋಗವು ರೂಪಿಸಿರುವ ನಿಯಮಗಳು, ಮಾರ್ಗಸೂಚಿಗಳನ್ನು ಭದ್ರತಾ ಸಿಬ್ಬಂದಿಗೆ 'ಚುನಾವ್ ಮಿತ್ರ' ಚಾಟ್‌ಬೋಟ್ ಒದಗಿಸಲಿವೆ. ಸೈಬರ್ ಭದ್ರತೆ ಸಂಬಂಧಿತ ಮಾರ್ಗಸೂಚಿಯನ್ನು 'ಸೈಬರ್ ಸಾರ್ಥಿ' ಚಾಟ್‌ಬೋಟ್ ನೀಡಲಿದೆ
- ಮಾದರಿ ನೀತಿ ಸಂಹಿತೆ ಜಾರಿಯಾದ ದಿನದಿಂದ (ಜ.7) ಇಲ್ಲಿಯವರೆಗೆ ಸಂಹಿತೆಯನ್ನು ಉಲ್ಲಂಘಿಸಿದ 504 ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ 17,879 ಜನರನ್ನು ಬಂಧಿಸಲಾಗಿದೆ. ಜೊತೆಗೆ ₹1.3 ಕೋಟಿ ಮೌಲ್ಯದ 44,265 ಲೀ. ಮದ್ಯ, ₹4.56 ಕೋಟಿ ನಗದು, ₹20 ಕೋಟಿ ಮೌಲ್ಯದ 110.53 ಕೆ.ಜಿ. ಮಾದಕವಸ್ತು, 1,200ಕ್ಕೂ ಹೆಚ್ಚು ನಿಷೇಧಿಸ ಚುಚ್ಚುಮದ್ದುಗಳನ್ನು ವಶಪಡಿಸಿಕೊಳ್ಳಲಾಗಿದೆ

ಮಯಂಕ್ ಪಡೆಗೆ ಇನಿಂಗ್ಸ್ ಮುನ್ನಡೆ

ರಣಜಿ ಟ್ರೋಫಿ: ಒಂದೇ ದಿನ 14 ವಿಕೆಟ್ ಪತನ • ಕೌಶಿಕ್‌ಗೆ 4 ವಿಕೆಟ್ • ಸ್ಮರಣ್ ಬ್ಯಾಟಿಂಗ್ ಸೊಬಗು

• ಗಿರೀಶ ದೊಡ್ಡಮನಿ



ಕರ್ನಾಟಕ ಕ್ರಿಕೆಟ್ ತಂಡದ ಮಧ್ಯಮವೇಗಿ ವಾಸುಕಿ ಕೌಶಿಕ್ ಬೌಲಿಂಗ್ ಶೈಲಿ —ಚಿತ್ರ/ಬಿ.ಕೆ. ಜನಾರ್ದನ್

ಬೆಂಗಳೂರು: ಕರ್ನಾಟಕ ತಂಡವು ಈಚೆಗೆ ಜಯಿಸಿದ ವಿಜಯ್ ಹಜಾರೆ ಟ್ರೋಫಿಯು ಹೊಸ ಹುಮ್ಮಸ್ಸು ತುಂಬಿದೆ. ಮಯಂಕ್ ಅಗರವಾಲ್ ಬಳಗಕ್ಕೆ ದೇಶಿ ಕ್ರಿಕೆಟ್‌ನಲ್ಲಿ ಮತ್ತಷ್ಟು ಗೆಲುವಿನ ಹಸಿವು ಹೆಚ್ಚಿಸಿರುವುದು ಎದ್ದು ಕಾಣುತ್ತಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಪಂಜಾಬ್ ಎದುರು ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯ ದಲ್ಲಿ ಮಯಂಕ್ ಪಡೆ ಆಡಿದ ರೀತಿಯೇ ಈ ಮಾತಿಗೆ ಸಾಕ್ಷಿ. ಆತಿಥೇಯ ಆಟಗಾರರ ಭರಾಟೆಗೆ ಪಂಜಾಬ್ ತಂಡವು ಕೇವಲ 55 ರನ್ ಗಳಿಗೆ ಕುಸಿಯಿತು. ಆತಿಥೇಯ ಬಳಗವು ಮೊದಲ ದಿನದಾಟದ ಮುಕ್ತಾಯಕ್ಕೆ 144 ರನ್‌ಗಳ ಮುನ್ನಡೆ ಸಾಧಿಸಿತು. ಅನುಭವಿ ಮತ್ತು ಯುವ ಆಟಗಾರರು ಇರುವ ಕರ್ನಾಟಕ ತಂಡ ಇಡೀ ದಿನ ಪಾರಮ್ಯ ಮೆರೆಯಿತು.

ಹಸಿರು ಗರಿಕೆಗಳು ನಸುನಗುತ್ತಿದ್ದ ಪಿಚ್ ಮೇಲೆ ಟಾಸ್ ಗೆದ್ದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಅವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದು ಫಲ ನೀಡಿತು.

32 ವರ್ಷ ವಯಸ್ಸಿನ ಮಧ್ಯಮವೇಗಿ ವಾಸುಕಿ ಕೌಶಿಕ್ (11–4–16–4) ಅವರ ಮುಂದಾಳತ್ವದ ಬೌಲಿಂಗ್ ಪಡೆಯ ದಾಳಿಗೆ ಪ್ರವಾಸಿ ಬಳಗವು ದೂಳೀಪಟ ವಾಯಿತು. ಉದಯೋನ್ಮುಖ ಎಡಗೈ ವೇಗಿ ಅಭಿಲಾಷ್ ಶೆಟ್ಟಿ (9–4–19–3) ಕೂಡ ಮಿಂಚಿದರು. ಭಾರತ ತಂಡದಲ್ಲಿ ಆಡಿ ಬಂದಿರುವ ಪ್ರಸಿದ್ಧ ಕೃಷ್ಣ (11ಕ್ಕೆ2) ಮತ್ತು ಯುವ ಬೌಲರ್ ಯಶೋವರ್ಧನ್ ಪರಂತಾಪ್ (3ಕ್ಕೆ1) ಪಂಜಾಬ್ ತಂಡವನ್ನು ಊಟದ ಹೊತ್ತಿಗೆ ಹೆಡೆಮುರಿ ಕಟ್ಟಲು ಸಹಕರಿಸಿದರು.

ಇದಕ್ಕುತ್ತರವಾಗಿ ದಿನದಾಟದ ಅಂತ್ಯಕ್ಕೆ ಕರ್ನಾಟಕ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 199 ರನ್ ಗಳಿಸಿತು. ಯುವ ಬ್ಯಾಟರ್ ಸ್ಮರಣ್ ರವಿಚಂದ್ರನ್ (ಬ್ಯಾಟಿಂಗ್ 83; 100ಎ, 4X12, 6X1) ಮತ್ತು ಅಭಿನವ್ ಮನೋಹರ್ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ.

ಇದೇ ಋತುವಿನಲ್ಲಿ ಪದಾರ್ಪಣೆ ಮಾಡಿರುವ ಎಡಗೈ ಬ್ಯಾಟರ್ ಸ್ಮರಣ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಚೊಚ್ಚಲ ಅರ್ಧಶತಕ ಗಳಿಸಿದರು. 64 ಎಸೆತಗಳಲ್ಲಿ ಅವರು 50ರ ಗಡಿ ದಾಟಿದರು. 7 ಬೌಂಡರಿ ಮತ್ತು 1 ಸಿಕ್ಸರ್ ಹೊಡೆದರು.


ಭೋಜನ ವಿರಾಮದ ನಂತರ ಇನಿಂಗ್ಸ್ ಆರಂಭಿಸಿದ ತಂಡದ ಕೆ.ವಿ. ಅನೀಶ್ (33; 37ಎ) ಮತ್ತು ಅಗರವಾಲ್ (20; 4ಎ) ಮೊದಲ ವಿಕೆಟ್‌ಗೆ 55 ರನ್ ಸೇರಿಸಿ ಪಂಜಾಬ್ ತಂಡದ ಲೆಕ್ಕ ಚುಕ್ತಾ ಮಾಡಿದರು. ಆರಾಧ್ಯ ಶುಕ್ಲಾ ಬೌಲಿಂಗ್‌ನಲ್ಲಿ ಅನೀಶ್ ಔಟಾದರು. ನಂತರದ ಓವರ್‌ನಲ್ಲಿ ಮಯಂಕ್ ಅವರನ್ನು ಸನ್ವೀರ್ ಸಿಂಗ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಈ ಹಂತದಲ್ಲಿ ಜೊತೆಗೂಡಿದ ದೇವದತ್ತ ಪಡಿಕ್ಕಲ್ ಮತ್ತು ಸ್ಮರಣ್ ಎಚ್ಚರಿಕೆಯಿಂದ ಆಡಿದರು. ಇದರಿಂದಾಗಿ ಚಹಾ ವಿರಾಮದ ಹೊತ್ತಿಗೆ ತಂಡದ ಖಾತೆಯಲ್ಲಿ 110 ರನ್‌ಗಳಿದ್ದವು. ಮೂರನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ದೇವದತ್ತ ಅವರ ವಿಕೆಟ್ ಗಳಿಸಿದ ಗುರ್ನೂರ್ ಬ್ರಾರ್ ಜೊತೆಯಾಟ ಮುರಿದರು.

ಶಾಂತಚಿತ್ತದಿಂದ ಆಡುತ್ತಿದ್ದ ಸ್ಮರಣ್ ಅವರು ಶ್ರೀಜಿತ್ (26; 65ಎ) ಜೊತೆಗೆ 4ನೇ ವಿಕೆಟ್ ಪಾಲುದಾರಿಕೆಯಲ್ಲಿ 81 ರನ್ ಸೇರಿಸಿದರು. ದಿನದಾಟಕ್ಕೆ 3 ಓವರ್‌ಗಳು ಬಾಕಿಯಿದ್ದಾಗ ಮಯಂಕ್ ಮಾರ್ಕಂಡೆ ಅವರ ಎಸೆತದಲ್ಲಿ ಶ್ರೀಜಿತ್ ಅವರು ಅನ್ಮೋಲ್‌ಪ್ರೀತ್ ಸಿಂಗ್‌ಗೆ ಕ್ಯಾಚ್ ಆದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್: 29 ಓವರ್‌ಗಳಲ್ಲಿ 55 (ರಮಣದೀಪ್ ಸಿಂಗ್ 16, ಮಯಂಕ್ ಮಾರ್ಕಂಡೆ 12, ವಿ. ಕೌಶಿಕ್ 16ಕ್ಕೆ4, ಅಭಿಲಾಷ್ ಶೆಟ್ಟಿ 19ಕ್ಕೆ3, ಪ್ರಸಿದ್ಧ ಕೃಷ್ಣ 11ಕ್ಕೆ2, ಯಶೋವರ್ಧನ್ ಪರಂತಾಪ್ 3ಕ್ಕೆ1) ಕರ್ನಾಟಕ: 50 ಓವರ್‌ಗಳಲ್ಲಿ 4ಕ್ಕೆ199 (ಕೆ.ವಿ. ಅನೀಶ್ 33, ಮಯಂಕ್ ಅಗರವಾಲ್ 20, ದೇವದತ್ತ ಪಡಿಕ್ಕಲ್ 27, ಸ್ಮರಣ್ ರವಿಚಂದ್ರನ್ ಬ್ಯಾಟಿಂಗ್ 83, ಕೃಷ್ಣನ್ ಶ್ರೀಜಿತ್ 26, ಅಭಿನವ್ ಮನೋಹರ್ ಬ್ಯಾಟಿಂಗ್ 1).

ರಣಜಿ ಅಂಗಳದಲ್ಲೂ ಮಂಕಾದ ತಾರೆಗಳು!



ರೋಹಿತ್

ಬೆಂಗಳೂರು: ಮುಂದಿನ ತಿಂಗಳು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಯಲ್ಲಿ ಭಾರತ ತಂಡವನ್ನು ಮುನ್ನಡೆಸಲಿರುವ ರೋಹಿತ್ ಶರ್ಮಾ ಮತ್ತು ಉಪನಾಯಕ ಶುಭಮನ್ ಗಿಲ್ ಇಬ್ಬರೂ ರಣಜಿ ಕ್ರಿಕೆಟ್‌ನಲ್ಲಿ ಮುಗ್ಗರಿಸಿದರು.

ಅವರಷ್ಟೇ ಅಲ್ಲ. ಗುರುವಾರ ಶುರುವಾರ ಟೂರ್ನಿಯ ಆರನೇ ಸುತ್ತಿನಲ್ಲಿ ಕಣಕ್ಕಿಳಿದಿರುವ ಭಾರತ ತಂಡದ ಖ್ಯಾತನಾಮರಲ್ಲಿ ಬಹುತೇಕರು ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು.

ಬಾಂದ್ರಾ–ಕುರ್ಲಾ ಸೆಂಟರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮುಂಬೈ ತಂಡದ ರೋಹಿತ್ ಶರ್ಮಾ ಅವರು ಜಮ್ಮು–ಕಾಶ್ಮೀರ ವಿರುದ್ಧದ ಪಂದ್ಯದಲ್ಲಿ ಕೇವಲ 3 ರನ್ ಗಳಿಸಿ ಔಟಾದರು. ಅವರು 19 ಎಸೆತಗಳನ್ನು ಎದುರಿಸಿದರು. ಅವ ರೊಂದಿಗೆ ಇನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ 4 ರನ್ ಗಳಿಸಿ ಔಟ್ ಆದರು. ಇವರಿಬ್ಬರೂ ಭಾರತ ತಂಡದ ಆರಂಭಿಕ ಜೋಡಿಯೂ ಹೌದು. ಮುಂಬೈ ತಂಡವು 120ಕ್ಕೆ ಆಲೌಟ್ ಆಯಿತು.

ಇನ್ನೊಂದೆಡೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಪಂಜಾಬ್ ತಂಡದಲ್ಲಿ ಆಡುತ್ತಿರುವ ಶುಭಮನ್ ಗಿಲ್ ಕೂಡ 4 ರನ್ ಗಳಿಸಿ ಔಟ್ ಆದರು.

ರಾಜ್‌ಕೋಟ್‌ನಲ್ಲಿ ಸೌರಾಷ್ಟ್ರ ಎದುರು ನಡೆಯುತ್ತಿರುವ ಪಂದ್ಯದಲ್ಲಿ ದೆಹಲಿ ತಂಡದ ರಿಷಭ್ ಪಂತ್ ಕೇವಲ 1 ರನ್ ಗಳಿಸಿ ಔಟಾದರು. ಭಾರತ ತಂಡದ ಈ ಎಲ್ಲ ಬ್ಯಾಟರ್‌ಗಳ ನಡುವೆ ಆಲ್‌ರೌಂಡರ್ ರವೀಂದ್ರ ಜಡೇಜ ಮಾತ್ರ ಮಿಂಚಿದರು. ಅವರು ದೆಹಲಿ ಎದುರು (66ಕ್ಕೆ5) ಸ್ಪಿನ್ ಮೋಡಿ ಮಾಡಿದರು. ದೆಹಲಿ 188 ರನ್‌ಗಳಿಗೆ ಕುಸಿಯಿತು.

ಆಸ್ಟ್ರೇಲಿಯಾದಲ್ಲಿ ಈಚೆಗೆ ನಡೆದ ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು ಬ್ಯಾಟರ್‌ಗಳ ವೈಫಲ್ಯ ದಿಂದಾಗಿ ಹೀನಾಯ ಸೋಲನುಭವಿಸಿತ್ತು. ಅದರಿಂದಾಗಿ ತಂಡದ ಆಟಗಾರರು ದೇಶಿ ಕ್ರಿಕೆಟ್‌ನಲ್ಲಿ ಆಡುವುದನ್ನು ಬಿಸಿಸಿಐ ಕಡ್ಡಾಯಗೊಳಿಸಿತ್ತು.

ಶುಭಮನ್ ಗಿಲ್ ಸವಾಲು ಮೀರಿದ ಶೆಟ್ಟಿ



ಶುಭಮನ್

ಮುಂದಿನ ತಿಂಗಳು ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡದ ಉಪನಾಯಕರಾಗಿರುವ ಶುಭಮನ್ ಗಿಲ್ ಬ್ಯಾಟಿಂಗ್ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ. ಆದರೆ ಅವರಿಗೆ 'ಕುಡ್ಲದ ಹುಡುಗ' ಅಭಿಲಾಷ್ ಶೆಟ್ಟಿ ಅಡ್ಡಗಾಲು ಹಾಕಿದರು. ತಮ್ಮ ಎರಡನೇ ಓವರ್‌ನಲ್ಲಿಯೇ ಗಿಲ್ ವಿಕೆಟ್ ಗಳಿಸಿದರು. ಅವರ ಬ್ಯಾಟಿನ ಅಂಚು ಸವರಿ ಹಿಂದೆ ಸಾಗಿದ ಚೆಂಡನ್ನು ವಿಕೆಟ್‌ಕೀಪರ್ ಶ್ರೀಜಿತ್ ಹಿಡಿತಕ್ಕೆ ಪಡೆದು ಜಿಗಿದಾಡಿದರು.

ಇನ್ನೊಂದು ಬದಿಯಿಂದ ಕೌಶಿಕ್ ಹಾಕಿದ ಕರಾರುವಾಕ್ ಎಸೆತಗಳಿಗೆ ಯಾವುದೇ ಬ್ಯಾಟರ್‌ಗಳ ಬಳಿ ಉತ್ತರ ಇರಲಿಲ್ಲ. ಮಧ್ಯಮಕ್ರಮಾಂಕದ ಬ್ಯಾಟರ್‌ಗಳಾದ ಪುಕರಾಜ್ ಮಾನ್, ಅನ್ಮೋಲ್‌ಪ್ರೀತ್ ಸಿಂಗ್ ಹಾಗೂ ಮಯಂಕ್ ಮಾರ್ಕಂಡೆ ಅವರು ಕೌಶಿಕ್‌ಗೆ ಶರಣಾದರು. ಹೋರಾಟ ಮಾಡುವ ಪ್ರಯತ್ನ ಮಾಡಿದ ರಮಣದೀಪ್ ಸಿಂಗ್ (16; 35ಎಸೆತ) ಅವರಿಗೆ ಪ್ರಸಿದ್ಧ ಕಡಿವಾಣ ಹಾಕಿದರು. ಸ್ಮರಣ್ ರವಿಚಂದ್ರನ್ ಪಡೆದ ಕ್ಯಾಚ್‌ಗೆ ರಮಣದೀಪ್ ನಿರ್ಗಮಿಸಿದರು.

ಸಿದ್ಧಾರ್ಥ್ ದೇಸಾಯಿಗೆ 9 ವಿಕೆಟ್

ಅಹಮದಾಬಾದ್(ಪಿಟಿಐ): ಗುಜರಾತ್ ತಂಡದ ಎಡಗೈ ಸ್ಪಿನ್ನರ್ ಸಿದ್ಧಾರ್ಥ್ ದೇಸಾಯಿ ಅವರು ಉತ್ತರಾಖಂಡ ಎದುರಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 9 ವಿಕೆಟ್ ಗಳಿಸಿದರು.

ಬಿ ಗುಂಪಿನ ಪಂದ್ಯದಲ್ಲಿ ಸಿದ್ಧಾರ್ಥ್ ಅವರ ಅಮೋಘ ಬೌಲಿಂಗ್ ಮುಂದೆ ಉತ್ತರಾಖಂಡ ತಂಡವು 111 ರನ್‌ಗಳಿಗೆ ಆಲೌಟ್ ಆಯತು. ದಿನದಾಟದ ಅಂತ್ಯಕ್ಕೆ ಗುಜರಾತ್ ತಂಡವು 61 ಓವರ್‌ಗಳಲ್ಲಿ 4ಕ್ಕೆ 190 ರನ್ ಗಳಿಸಿದೆ. ಸಿದ್ಧಾರ್ಥ್ (36ಕ್ಕೆ9) ರಣಜಿ ಇತಿಹಾಸದಲ್ಲಿ ಗುಜರಾತ್ ಪರ ಶ್ರೇಷ್ಠ ಬೌಲಿಂಗ್ ಮಾಡಿದ ದಾಖಲೆಯನ್ನು ಮಾಡಿದ್ದಾರೆ. 1960–61ರಲ್ಲಿ ಜಸುಭಾಯಿ ಪಟೇಲ್ (21ಕ್ಕೆ8) ಅವರ ದಾಖಲೆಯನ್ನು ಸಿದ್ಧಾರ್ಥ್ ಮೀರಿ ನಿಂತರು.

ಆಸ್ಟ್ರೇಲಿಯನ್ ಓಪನ್: ಹ್ಯಾಟ್ರಿಕ್ ಪ್ರಶಸ್ತಿಯತ್ತ ಸಬಲೆಂಕಾ

ಶ್ವಾಂಟೆಕ್‌ಗೆ ಕೀಸ್ ಆಘಾತ

ಮೆಲ್ಬರ್ನ್ (ಪಿಟಿಐ): ಬೆಲರೂಸ್ ದೇಶದ ಅರಿನಾ ಸಬಲೆಂಕಾ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿ, ಹ್ಯಾಟ್ರಿಕ್ ಪ್ರಶಸ್ತಿ ಜಯದ ಸನಿಹ ನಿಂತರು. ಮತ್ತೊಂದೆಡೆ, ಅಮೆರಿಕದ ಮ್ಯಾಡಿಸನ್ ಕೀಸ್ ಅವರು ಪೋಲೆಂಡ್‌ನ ಇಗಾ ಶ್ವಾಂಟೆಕ್‌ಗೆ ಆಘಾತ ನೀಡಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು.

ರಾಡ್ ಲೇವರ್ ಅರೇನಾದಲ್ಲಿ ಗುರುವಾರ ನಡೆದ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಸಬಲೆಂಕಾ 6-4, 6-2ರಿಂದ ತನ್ನ ಸ್ನೇಹಿತೆ, 11ನೇ ಶ್ರೇಯಾಂಕದ ಪಾಲ್ ಬಡೋಸಾ (ಸ್ಪೇನ್) ಅವರನ್ನು ನಿರಾಯಾಸವಾಗಿ ಮಣಿಸಿದರು.

26 ವರ್ಷ ವಯಸ್ಸಿನ ಸಬಲೆಂಕಾ ಅವರು ತನ್ನ ನೆಚ್ಚಿನ ಮೆಲ್ಬರ್ನ್ ಪಾರ್ಕ್‌ನಲ್ಲಿ ಅಜೇಯ ಓಟವನ್ನು 20 ಪಂದ್ಯಗಳಿಗೆ ವಿಸ್ತರಿಸಿ, ಸತತ ಮೂರನೇ ಬಾರಿ ಫೈನಲ್ ತಲುಪಿದರು. ಶನಿವಾರ ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 19ನೇ ಶ್ರೇಯಾಂಕದ ಮ್ಯಾಡಿಸನ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಸಬಲೆಂಕಾ ಹ್ಯಾಟ್ರಿಕ್ ಕಿರೀಟ ಮುಡಿಗೇರಿಸಿಕೊಂಡರೆ ಈ ಸಾಧನೆ ಮಾಡಿದ ಆರನೇ ಆಟಗಾರ್ತಿ ಎಂಬ ಹಿರಿಮೆಗೆ ಅವರು ಪಾತ್ರರಾಗುವರು. ಅಲ್ಲದೆ, ಈ ಶತಮಾನದ ಮೊದಲ ಆಟಗಾರ್ತಿ ಎಂಬ ದಾಖಲೆ ಅವರದಾಗಲಿದೆ. ಸ್ವಿಟ್ಜರ್ಲೆಂಡ್ ಮಾರ್ಟಿನಾ ಹಿಂಗಿಸ್ (1997, 1998, 1999) ಕೊನೆಯ ಬಾರಿ ಸತತ ಮೂರು ಬಾರಿ ಚಾಂಪಿಯನ್ ಆಗಿದ್ದರು. ಅದಕ್ಕೂ ಮೊದಲು ಆಸ್ಟ್ರೇಲಿಯಾದ ಮಾರ್ಗರೇಟ್ ಕೋರ್ಟ್, ಇವೊನ್ನೆ ಗೂಲಾಗಾಂಗ್, ಜರ್ಮನಿಯ ಸ್ಟೆಫಿ ಗ್ರಾಫ್ ಮತ್ತು ಅಮೆರಿಕದ ಮೋನಿಕಾ ಸೆಲೆಸ್ ಅವರು ಹ್ಯಾಟ್ರಿಕ್ ಸಾಧನೆ ಮೆರೆದಿದ್ದರು. ಸಬಲೆಂಕಾ ಅವರ ಆಟವನ್ನು ಟೆನಿಸ್ ಕ್ರೀಡೆಯ ದಂತಕಥೆ ಮಾರ್ಗರೇಟ್ ಕೋರ್ಟ್ ಗುರುವಾರ ಕಣ್ತುಂಬಿಕೊಂಡರು.

ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಮೊದಲ ಬಾರಿ ಸೆಮಿಫೈನಲ್ ತಲುಪಿದ್ದ 27 ವರ್ಷ ವಯಸ್ಸಿನ ಬಡೋಸಾ ಕಳೆದ ವರ್ಷ ಟೆನಿಸ್ ಬದುಕಿಗೆ ವಿದಾಯ ಹೇಳುವ ಯೋಚನೆ ಮಾಡಿದ್ದರು. ಬೆನ್ನುನೋವಿಗೆ ತುತ್ತಾಗಿದ್ದ ಅವರು ಹಲವು ತಿಂಗಳು ವಿರಾಮ ಪಡೆದು, ಸ್ಪರ್ಧಾಕಣಕ್ಕೆ ಮರಳಿದ್ದರು.

ಶ್ವಾಂಟೆಕ್‌ಗೆ ಆಘಾತ: ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಿಗೆ ಒಡತಿಯಾಗಿರುವ ಶ್ವಾಂಟೆಕ್ ಅವರಿಗೆ ಈ ಬಾರಿಯೂ ಸೆಮಿಫೈನಲ್ ದಾಟಲು ಸಾಧ್ಯವಾಗಲಿಲ್ಲ. 29 ವರ್ಷ ವಯಸ್ಸಿನ ಮ್ಯಾಡಿಸನ್ 5-7, 6-1, 7-6 (10-8)ರ ಮೂರು ಸೆಟ್‌ಗಳ ಹೋರಾಟದಲ್ಲಿ ಎರಡನೇ ಶ್ರೇಯಾಂಕದ ಶ್ವಾಂಟೆಕ್ ಅವರನ್ನು ಹಿಮ್ಮೆಟ್ಟಿಸಿದರು.

ಇಲ್ಲಿ ಫೈನಲ್ ಪ್ರವೇಶಿಸುವ ನೆಚ್ಚಿನ ಸ್ಪರ್ಧಿಯಾಗಿದ್ದ ಶ್ವಾಂಟೆಕ್ ಉತ್ತಮ ಆರಂಭವನ್ನು ಪಡೆದಿದ್ದರು. ಮೊದಲ ಸೆಟ್ ನಿರಾಯಾಸವಾಗಿ ವಶಮಾಡಿಕೊಂಡ ಅವರು, ಎರಡನೇ ಸೆಟ್‌ನಲ್ಲಿ ಮುಗ್ಗರಿಸಿದರು. ರೋಚಕವಾಗಿ ಸಾಗಿದ ನಿರ್ಣಾಯಕ ಸೆಟ್‌ನಲ್ಲಿ ಶ್ವಾಂಟೆಕ್ ಗೆಲುವಿಗೆ ಒಂದು ಪಾಯಿಂಟ್ ದೂರದಲ್ಲಿದ್ದರು. ಈ ಹಂತದಲ್ಲಿ ಎಸಗಿದ ತಪ್ಪು ಅವರಿಗೆ ದುಬಾರಿಯಾಯಿತು. ಆ ಸೆಟ್ ಅನ್ನು ಟೈಬ್ರೇಕ್‌ನಲ್ಲಿ ಗೆದ್ದುಕೊಂಡ ಮ್ಯಾಡಿಸನ್, ಎಂಟು ವರ್ಷಗಳ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಫೈನಲ್ ಪ್ರವೇಶಿಸಿದರು. ಚೊಚ್ಚಲ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ಅವರು 2017ರ ಅಮೆರಿಕ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು.

ನಾಲ್ಕು ಬಾರಿ ಫ್ರೆಂಚ್ ಓಪನ್ ಮತ್ತು ಒಂದು ಬಾರಿ ಅಮೆರಿಕ ಓಪನ್ ಕಿರೀಟ ಮುಡಿಗೇರಿಸಿಕೊಂಡಿರುವ ಶ್ವಾಂಟೆಕ್ ಮೆಲ್ಬರ್ನ್‌ನಲ್ಲಿ ಎರಡನೇ ಬಾರಿ ಸೆಮಿಫೈನಲ್ ತಲುಪಿದ್ದರು. 2022ರಲ್ಲೂ ಅವರು ಇದೇ ಹಂತದಲ್ಲಿ ನಿರಾಸೆ ಅನುಭವಿಸಿದ್ದರು.



ಪೋಲೆಂಡ್‌ನ ಇಗಾ ಶ್ವಾಂಟೆಕ್ ವಿರುದ್ಧ ಗೆದ್ದ ಸಂಭ್ರಮದಲ್ಲಿ ಅಮೆರಿಕದ ಮ್ಯಾಡಿಸನ್ ಕೀಸ್ —ಎಎಫ್‌ಪಿ ಚಿತ್ರ

ಮಹಿಳಾ ಕ್ರಿಕೆಟ್: ಸೂಪರ್ ಸಿಕ್ಸ್ ಪ್ರವೇಶಿಸಿದ ಭಾರತ



ಜಿ. ತ್ರಿಷಾ

ಕ್ವಾಲಾಲಂಪುರ (ಪಿಟಿಐ): ಆರಂಭಿಕ ಬ್ಯಾಟರ್ ಜಿ. ತ್ರಿಷಾ ಅವರ ಚೆಂದದ ಬ್ಯಾಟಿಂಗ್ ಹಾಗೂ ಬೌಲರ್‌ಗಳ ಸಂಘಟಿತ ದಾಳಿಯ ಫಲವಾಗಿ ಭಾರತದ ಯೂತ್ ಮಹಿಳಾ ತಂಡವು ಇಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು. ಇದರೊಂದಿಗೆ ತಂಡವು ಸೂಪರ್ 6 ಹಂತ ತಲುಪಿತು.

ಗುರುವಾರ ನಡೆದ ಪಂದ್ಯದಲ್ಲಿ ತ್ರಿಷಾ (49; 44 ಎಸೆತ) ಅವರ ಏಕಾಂಗಿ ಹೋರಾಟದ ಫಲವಾಗಿ ಭಾರತ ತಂಡವು 60 ರನ್‌ಗಳಿಂದ ಶ್ರೀಲಂಕಾ ಎದುರು ಜಯಿಸಿತು. ಎ ಗುಂಪಿನಲ್ಲಿ ಭಾರತ ತಂಡವು ಆಡಿದ ಎಲ್ಲ 3 ಪಂದ್ಯಗಳನ್ನು ಜಯಿಸಿತು. ಒಟ್ಟು 6 ಅಂಕ ಗಳಿಸಿ ಅಗ್ರಸ್ಥಾನಕ್ಕೇರಿತು. ಗುಂಪಿನಲ್ಲಿ ಇನ್ನೂ ಎರಡು ಪಂದ್ಯಗಳಿವೆ.

ಭಾರತ ತಂಡವು ತ್ರಿಷಾ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 118 ರನ್ ಗಳಿಸಿತು. ಉಳಿದ ಬ್ಯಾಟರ್‌ಗಳ ವೈಫಲ್ಯ ದಿಂದಾಗಿ ಸಾಧಾರಣ ಮೊತ್ತ ದಾಖಲಾಯಿತು.

ಗುರಿ ಬೆನ್ನಟ್ಟಿದ್ದ ಲಂಕಾ 20 ಓವರ್ ಗಳಲ್ಲಿ 9ಕ್ಕೆ58 ರನ್ ಗಳಿಸಿ ಶರಣಾಯಿತು. ಶಬ್ನಂ, ಜೋಷಿತಾ ಮತ್ತು ಪರುಣಿಕಾ ಅವರು ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9ಕ್ಕೆ118 (ಜಿ. ತ್ರಿಷಾ 49, ಮಿಥಿಲಾ ವಿನೋದ್ 16, ವಿ.ಜೆ. ಜೋಷಿತಾ 14, ಪ್ರಮುದಿ ಮೆತ್ಸಾರಾ 10ಕ್ಕೆ2, ಲಿಮಾಂಸಾ ತಿಲಕರತ್ನ 14ಕ್ಕೆ2, ಅಸೇನಿ ತೆಲುಗುಣ 14ಕ್ಕೆ2, ಅಸೆನಿ ತಲುಗುನೆ 24ಕ್ಕೆ2) ಶ್ರೀಲಂಕಾ : 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 58 (ರಶ್ಮಿಕಾ ಸೇವಾಂದಿ 15, ಶಬನಮ್ ಮೊಹಮ್ಮದ್ ಶಕೀಲ್ 9ಕ್ಕೆ2, ವಿ.ಜೆ. ಜೋಶಿತಾ 17ಕ್ಕೆ2, ಪರುಣಿಕಾ ಸಿಸೋಡಿಯಾ 7ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 60 ರನ್‌ಗಳ ಜಯ. ಪಂದ್ಯಶ್ರೇಷ್ಠ: ಜಿ. ತ್ರಿಷಾ.

ಗುಕೇಶ್ ಭಾರತದ ಅಗ್ರಮಾನ್ಯ ಆಟಗಾರ



ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಅರ್ಜುನ್ ಇರಿಗೇಶಿ ಅವರನ್ನು ಹಿಂದೆಹಾಕಿ ಭಾರತದ ಅಗ್ರಮಾನ್ಯ ಚೆಸ್ ಆಟಗಾರ ಎನಿಸಿದ್ದಾರೆ. ಗುರುವಾರ ಪ್ರಕಟವಾದ ಫಿಡೆ ಕ್ರಮಾಂಕಪಟ್ಟಿಯಲ್ಲಿ ಅರ್ಜುನ್ ಐದನೇ ಕ್ರಮಾಂಕಕ್ಕೆ ಸರಿದಿದ್ದಾರೆ.

18 ವರ್ಷ ವಯಸ್ಸಿನ ಗುಕೇಶ್ 2784 ರೇಟಿಂಗ್ ಹೊಂದಿದ್ದು ಕ್ರಮಾಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ. ಕಳೆದ ಸೆಪ್ಟೆಂಬರ್‌ನಿಂದ ಭಾರತದ ಅಗ್ರ ಆಟಗಾರ ಎನಿಸಿದ್ದ ಇರಿಗೇಶಿ 2779.5 ರೇಟಿಂಗ್ ಪಾಯಿಂಟ್‌ಗಳೊಡನೆ ಐದನೇ ಸ್ಥಾನಕ್ಕೆ ಸರಿದಿದ್ದಾರೆ.

ಗುಕೇಶ್, ವಿಯ್ಕ್ ಆನ್ ಝೀಯಲ್ಲಿ (ನೆದರ್ಲೆಂಡ್ಸ್) ನಡೆಯುತ್ತಿರುವ ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿ ಎರಡನೇ ಜಯ ದಾಖಲಿಸಿದ್ದರು.

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ವಿಶ್ವದ ಅಗ್ರಮಾನ್ಯ ಆಟಗಾರನಾಗಿ (2832.5 ರೇಟಿಂಗ್) ಮುಂದುವರಿದಿದ್ದಾರೆ. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಹಿಕಾರು ನಕಾಮುರಾ (2802) ಅವರು ಎರಡನೇ ಮತ್ತು ಅದೇ ದೇಶದ ಫ್ಯಾಬಿಯಾನೊ ಕರುವಾನ (2798) ಮೂರನೇ ಕ್ರಮಾಂಕ ಪಡೆದಿದ್ದಾರೆ.

ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಚೀನಾದ ಡಿಂಗ್ ಲಿರೆನ್ ಅವರನ್ನು ಸೋಲಿಸಿದ್ದ ಗುಕೇಶ್ ಅತಿ ಕಿರಿಯ ವಿಶ್ವ ಚಾಂಪಿಯನ್ ಎನಿಸಿದ್ದರು.

ಕಳೆದ ಸೆಪ್ಟೆಂಬರ್‌ನಲ್ಲಿ ಭಾರತದ ಅಗ್ರ ರ‍್ಯಾಂಕಿನ ಆಟಗಾರನಾದ ನಂತರ ಇರಿಗೇಶಿ ಅವರು ಡಿಸೆಂಬರ್‌ನಲ್ಲಿ 2801 ರೇಟಿಂಗ್ ತಲುಪಿದ್ದರು. 2800ರ ರೇಟಿಂಗ್ ಮೈಲಿಗಲ್ಲು ದಾಟಿದ ಹಿರಿಮೆಗೆ ಪಾತ್ರರಾದ ವಿಶ್ವದ 15ನೇ ಆಟಗಾರ ಹಾಗೂ ಭಾರತದ ಎರಡನೇ ಆಟಗಾರ (ವಿಶ್ವನಾಥನ್ ಆನಂದ್ ಮೊದಲನೆಯವರು) ಎನಿಸಿದ್ದರು.

ಅರ್ಜುನ್, ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಪರದಾಡುತ್ತಿದ್ದಾರೆ. ಐದು ಸುತ್ತುಗಳಿಂದ ಕೇವಲ ಒಂದು ಅಂಕ ಪಡೆದಿದ್ದಾರೆ. ಗುಕೇಶ್ 3.5 ಅಂಕ ಗಳಿಸಿದ್ದಾರೆ.

ಮಹಿಳಾ ಟೆನಿಸ್: ಅಗ್ರ ಶ್ರೇಯಾಂಕಿತೆಗೆ ಮಣಿದ ಅಂಕಿತಾ

ಎಂಟರ ಘಟ್ಟಕ್ಕೆ ಸಹಜಾ, ರೆಬೆಕಾ

ಪ್ರಜಾವಾಣಿ ವಾರ್ತೆ



ಭಾರತದ ಸಹಜಾ ಯಮಲಪಲ್ಲಿ ಆಟದ ವೈಖರಿ —ಚಿತ್ರ: ಪುಷ್ಕರ್ ವಿ.

ಬೆಂಗಳೂರು: ಭಾರತದ ಸಹಜಾ ಯಮಲಪಲ್ಲಿ ಮೂರು ಸೆಟ್‌ಗಳ ಹೋರಾಟದಲ್ಲಿ ನಾಲ್ಕನೇ ಶ್ರೇಯಾಂಕದ ಮರಿಯಾ ಟಿಮೊಫೀವಾ ಅವರನ್ನು ಸೋಲಿಸಿ ಕೆಪಿಬಿ ಟ್ರಸ್ಟ್ ಮಹಿಳಾ ಓಪನ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ಎಂಟರ ಘಟ್ಟ ಪ್ರವೇಶಿಸಿದರು.

ವಿಶ್ವ ಕ್ರಮಾಂಕದಲ್ಲಿ 315 ಸ್ಥಾನದಲ್ಲಿರುವ ಸಹಜಾ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಕೋರ್ಟ್‌ನಲ್ಲಿ ನಡೆದ ಟೂರ್ನಿಯ ಎರಡನೇ ಸುತ್ತಿನಲ್ಲಿ ಅಚ್ಚುಕಟ್ಟಾದ ಹೊಡೆತಗಳ ಜೊತೆ ಬಿರುಸಿನ ಸರ್ವ್ ಆಟ ಪ್ರದರ್ಶಿಸಿ 6–1, 3–6, 6–1 ರಿಂದ ಟಿಮೊಫೀವಾ ಅವರನ್ನು ಹೊರ ದೂಡಿದರು. ರಷ್ಯಾದ ಆಟಗಾರ್ತಿ ವಿಶ್ವ ಕ್ರಮಾಂಕದಲ್ಲಿ 134ನೇ ಸ್ಥಾನದಲ್ಲಿದ್ದಾರೆ.

'ಗ್ರೌಂಡ್‌ಸ್ಟ್ರೋಕ್‌ಗಳಿಗೆ ಸಂಬಂಧಿಸಿ ನನ್ನಿಂದ ಇಂದು ಉತ್ತಮ ಆಟ ಬಂತು' ಎಂದು 24 ವರ್ಷ ವಯಸ್ಸಿನ ಸಹಜಾ ಪ್ರತಿಕ್ರಿಯಿಸಿದರು. 'ನಾನು ವಿಶ್ವ ಕ್ರಮಾಂಕದಲ್ಲಿ 300ಕ್ಕಿಂತ ಮೇಲಿನ ರ‍್ಯಾಂಕಿನಲ್ಲಿದ್ದೇನೆ. ನನಗಿಂತ ಮೇಲಿನ ರ‍್ಯಾಂಕಿನ ಆಟಗಾರ್ತಿಯರನ್ನು ಸೋಲಿಸುವುದರಿಂದ ಸಾಕಷ್ಟು ಆತ್ಮವಿಶ್ವಾಸ ಮೂಡುತ್ತದೆ' ಎಂದು ಹೈದರಾಬಾದಿನ ಆಟಗಾರ್ತಿ ಹೇಳಿದರು.

ಅಗ್ರ ಶ್ರೇಯಾಂಕದ ತಾತ್ಯಾನಾ ಮರಿಯಾ ಭಾರತದ ಅಗ್ರ ಸಿಂಗಲ್ಸ್ ಆಟಗಾರ್ತಿ ಅಂಕಿತಾ ರೈನಾ ಅವರನ್ನು ನೇರ ಆಟಗಳಿಂದ ಸೋಲಿಸಿದರು. 37 ವರ್ಷ ವಯಸ್ಸಿನ ಜರ್ಮನಿಯ ಆಟಗಾರ್ತಿ 6–1, 6–3 ರಿಂದ ಅಂಕಿತಾ ವಿರುದ್ಧ ಗೆಲ್ಲಲು ಒಂದು ಗಂಟೆ 24 ನಿಮಿಷ ತೆಗೆದುಕೊಂಡರು.

ಎರಡನೇ ಶ್ರೇಯಾಂಕದ ರೆಬೆಕಾ ಮರಿನೊ (ಕೆನಡಾ) ಅವರು 6–2, 7–5ರಿಂದ ರಷ್ಯಾದ ಮರಿಯಾ ಕೊಝಿರೆವಾ ಅವರನ್ನು ಹಿಮ್ಮೆಟ್ಟಿಸಿ ಕ್ವಾರ್ಟರ್‌ಫೈನಲ್ ತಲುಪಿದರು.

ಝೆಕ್ ಗಣರಾಜ್ಯದ ಸಾರಾ ಬೆಜ್ಲಿಕ್ 6–4, 4–6, 6–3 ರಿಂದ ಲಿಚೆನ್‌ಸ್ಟಿನ್‌ನ ಕಥಿಂಕಾ ವಾನ್ ಡೀಚ್ಮನ್ ಅವರನ್ನು ಸೋಲಿಸಿದರು. ಏಳನೇ ಶ್ರೇಯಾಂಕದ ಲಿಯೊಲಿಯಾ ಜೀನ್‌ಜೀನ್ (ಫ್ರಾನ್ಸ್) 6–4, 6–4 ರಿಂದ ಹಂಗೆರಿಯ ಪನ್ನಾ ಉದ್ವಾರ್ಡಿ ಮೇಲೆ ಗೆಲ್ಲಲು ಹೆಚ್ಚು ಕಷ್ಟಪಡಲಿಲ್ಲ.

26ರಂದು ಬೆಂಗಳೂರು ಡರ್ಬಿ

ಪ್ರಜಾವಾಣಿ ವಾರ್ತೆ



ಬಿಟಿಸಿ ಅಧ್ಯಕ್ಷ ಆರ್. ಮಂಜುನಾಥ್ ರಮೇಶ್ ಮತ್ತು ಎಚ್‌ಪಿಎಸ್‌ಎಲ್ ಸಂಸ್ಥೆಯ ಬ್ರ್ಯಾಂಡಿಂಗ್ ಮುಖ್ಯಸ್ಥ ಪೃಥ್ವಿರಾಜ್ ಅವರು ಗುರುವಾರ ಬೆಂಗಳೂರು ಡರ್ಬಿ ಟ್ರೋಫಿಯನ್ನು ಅನಾವರಣಗೊಳಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಇಲ್ಲಿನ ರೇಸ್‌ಕೋರ್ಸ್ ಅಂಗಳದಲ್ಲಿ ಪ್ರತಿಷ್ಠಿತ 'ಎಚ್‌ಪಿಎಸ್‌ಎಲ್ ಬೆಂಗಳೂರು ಡರ್ಬಿ' ಭಾನುವಾರ (ಜ.26) ನಡೆಯಲಿದ್ದು, ಒಂಬತ್ತು ಕುದುರೆಗಳು ಪೈಪೋಟಿ ನಡೆಸಲಿವೆ.

ಚಳಿಗಾಲದ ಡರ್ಬಿಯು ಒಟ್ಟು ₹1.26 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. ವಿಜೇತ ಕುದುರೆಯು ತನ್ನ ಮಾಲೀಕನಿಗೆ ₹61.70 ಲಕ್ಷ ದೊರಕಿಸಿಕೊಡಲಿದೆ' ಎಂದು ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಅಧ್ಯಕ್ಷ ಮತ್ತು ಸೀನಿಯರ್ ಸ್ಟೀವರ್ಡ್ ಆರ್.ಮಂಜುನಾಥ್ ರಮೇಶ್ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಚ್‌ಪಿಎಸ್‌ಎಲ್ ಪ್ರಾಯೋಜಕತ್ವ: ಈ ಡರ್ಬಿ ರೇಸ್ ಅನ್ನು ಹಾರ್ಸ್ ಪವರ್ ಸ್ಪೋರ್ಟ್ಸ್ ಲೀಗ್ (ಎಚ್‌ಪಿಎಸ್‌ಎಲ್) ಸಂಸ್ಥೆಯು ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ನ ಸಹಭಾಗಿತ್ವದಲ್ಲಿ ಪ್ರಾಯೋಜಿಸುತ್ತಿದೆ. ಬಹುನಿರೀಕ್ಷಿತ ಡರ್ಬಿ ರೇಸ್ ಭಾನುವಾರ ಸಂಜೆ 4.25ಕ್ಕೆ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದರು.

ಇದೇ ವೇಳೆ ಟ್ರೋಫಿಗಳನ್ನು ಅನಾವರಣ ಮಾಡಲಾಯಿತು. ಬಳಿಕ ಡರ್ಬಿ ಕುದುರೆಗಳ 'ಡ್ರಾ' ಸಂಖ್ಯೆ ನಿಗದಿಪಡಿಸಲಾಯಿತು.

ಸಂಕ್ಷಿಪ್ತ ಸುದ್ದಿ

ಇಂಡೊನೇಷ್ಯಾ ಮಾಸ್ಟರ್ಸ್ ಭಾರತದ ಸವಾಲು ಅಂತ್ಯ

ಜಕಾರ್ತ (ಪಿಟಿಐ): ಇಲ್ಲಿ ನಡೆಯುತ್ತಿರುವ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲೇ ಭಾರತದ ಆಟಗಾರರ ಸವಾಲು ಅಂತ್ಯಗೊಂಡಿದೆ.

ಪುರುಷರ ಸಿಂಗಲ್ಸ್‌ನ 16ರ ಘಟ್ಟದ ಪಂದ್ಯದಲ್ಲಿ ಗುರುವಾರ ಭಾರತದ ಲಕ್ಷ್ಯ ಸೇನ್ 16-21, 21-12, 21-23 ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು 20-22, 21-23ರಿಂದ ಥಾಯ್ಲೆಂಡ್‌ನ ಕಿಟ್ಟಿನುಪೊಂಗ್ ಕೆಡ್ರೆನ್ ಮತ್ತು ದೇಚಪೋಲ್ ಪುವರನುಕ್ರೋಹ್ ಅವರಿಗೆ ಶರಣಾದರು.

ಇದಕ್ಕೂ ಮೊದಲು ಧ್ರುವ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿ ಮಿಶ್ರ ಡಬಲ್ಸ್‌ನಲ್ಲಿ ಹಾಗೂ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಜೋಡಿ ಮಹಿಳಾ ಡಬಲ್ಸ್‌ನಲ್ಲಿ ಪರಾಭವಗೊಂಡಿತ್ತು.

ಡೇವಿಸ್ ಕಪ್ ತಂಡ ಅಭ್ಯಾಸ

ನವದೆಹಲಿ (ಪಿಟಿಐ): ಪಶ್ಚಿಮ ಆಫ್ರಿಕಾದ ಸಣ್ಣ ದೇಶ ಟೋಗೊ ಎದುರು ಡೇವಿಸ್ ಕಪ್ ಟೆನಿಸ್ ವಿಶ್ವಗುಂಪಿನ ಪಂದ್ಯಕ್ಕೆ ಭಾರತ ಸಾಕಷ್ಟು ಮೊದಲೇ ಸಿದ್ಧತೆ ಆರಂಭಿಸಿದೆ. ಯುವ ಟೆನಿಸಿಗರಾದ ಕರಣ್ ಸಿಂಗ್, ಯುವನ್ ನಂದಾಲ್ ಮತ್ತು ಚಿರಾಗ್ ದುಹಾನ್ ಅವರು ಇಲ್ಲಿನ ಡಿಎಲ್‌ಟಿಎ ಕೋರ್ಟ್‌ನಲ್ಲಿ ಗುರುವಾರ ದೈಹಿಕ ಕಸರತ್ತು ಮತ್ತು ಅಭ್ಯಾಸದಲ್ಲಿ ತೊಡಗಿದ್ದರು.

ಫೆಬ್ರುವರಿ 1 ಮತ್ತು 2ರಂದು ಟೋಗೊ ಎದುರಿನ ಪಂದ್ಯ ನಡೆಯಲಿದೆ. ಅನುಭವಿ ಆಟಗಾರ ರಾಮಕುಮಾರ್ ರಾಮನಾಥನ್ ಈ ಉದಯೋನ್ಮುಖ ಆಟಗಾರರನ್ನು ಸೇರಿಕೊಂಡರು. ಶಶಿಕುಮಾರ್ ಮುಕುಂದ್, ಎನ್.ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ ಅವರೂ ಬೇಗನೇ ತಂಡವನ್ನು ಕೂಡಿಕೊಳ್ಳಲಿದ್ದಾರೆ. ಬಾಲಾಜಿ ಮತ್ತು ಬೊಲ್ಲಿಪಲ್ಲಿ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಿದ್ದರು.

ಬೆಳಗಿನ ತಾಲೀಮಿನ ನಂತರ ಕೋಚ್ ಅಶುತೋಷ್ ಸಿಂಗ್ ಅವರು ಸಂಜೆಯೂ ಎರಡೂವರೆ ಗಂಟೆಗಳ ಅಭ್ಯಾಸದಲ್ಲಿ ಹಾಜರಿದ್ದರು. ರಾಮಕುಮಾರ್ ಅವರು ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಕೆಲವು ಎಟಿಪಿ ಟೂರ್ನಿಗಳ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಸಮುದ್ರ ಈಜು ಸ್ಪರ್ಧೆ 26ರಂದು

ಮಂಗಳೂರು: ಇಲ್ಲಿಯ ಮಂಗಳೂರು ಸರ್ಫ್ ಕ್ಲಬ್ ವತಿಯಿಂದ 'ಡೆನ್ ಡೆನ್ ಸ್ವಿಮ್ 2.0' ರಾಷ್ಟ್ರಮಟ್ಟದ ಸಮುದ್ರ ಈಜು ಸ್ಪರ್ಧೆಯನ್ನು ಜ.26ರಂದು ತಣ್ಣೀರುಬಾವಿ ಕಡಲತೀರದ ಸಮೀಪ ಆಯೋಜಿಸಲಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಹೊರರಾಜ್ಯಗಳ ಸ್ಪರ್ಧಿಗಳು ಭಾಗವಹಿಸಲಿದ್ದು, ಈಗಾಗಲೇ 241 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಅಂದು ಬೆಳಿಗ್ಗೆ 6 ಗಂಟೆಗೆ ಸ್ಪರ್ಧೆ ಆರಂಭವಾಗಲಿದೆ ಎಂದು ಕ್ಲಬ್ ಅಧ್ಯಕ್ಷ ಚಿರಾಗ್ ಶಂಭು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

500 ಮೀ, 1.5 ಕಿ.ಮೀ, 3 ಕಿ.ಮೀ, 6 ಕಿ.ಮೀ ಸ್ಪರ್ಧೆಗಳು ಒಟ್ಟು ಏಳು ವಿಭಾಗಗಳಲ್ಲಿ ನಡೆಯಲಿವೆ. ಮಕ್ಕಳಿಗೆ 250 ಮೀ. ಫನ್ ಸ್ವಿಮ್ ಕೂಡ ನಡೆಯಲಿದೆ ಎಂದರು.

ಕರ್ನಾಟಕ ಕ್ರೀಡಾಕೂಟ ಸಂಪನ್ನ: ಪುರುಷರ ಹಾಕಿಯಲ್ಲಿ ಹಾವೇರಿ ಚಾಂಪಿಯನ್

ಜಾಫರ್, ನಿಯೋಲ್ ಅನ್ನಾ ಅತ್ಯುತ್ತಮ ಅಥ್ಲೀಟ್ಸ್

• ನವೀನ್ ಕುಮಾರ್ ಜಿ
ಪ್ರವೀಣ್ ಕುಮಾರ್ ಪಿ.ವಿ



ಅತ್ಯುತ್ತಮ ಅಥ್ಲೀಟ್ ಆಗಿ ಹೊರಹೊಮ್ಮಿದ ಬೆಳಗಾವಿಯ ಜಾಫರ್ ಖಾನ್ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಪ್ರಶಸ್ತಿ ವಿತರಿಸಿದರು. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಸಚಿವ ಜಿ.ಪರಮೇಶ್ವರ್, ಶಾಸಕ ಯಶ್‌ಪಾಲ್ ಸುವರ್ಣ ಭಾಗವಹಿಸಿದ್ದರು

ಉಡುಪಿ/ ಮಂಗಳೂರು: ಬೆಳಗಾವಿಯ ಜಾಫರ್ ಖಾನ್ ಮತ್ತು ಬೆಂಗಳೂರಿನ ನಿಯೋಲ್ ಅನಾ ಕರ್ನೆಲಿಯೊ ಅವರು ಕ್ರಮವಾಗಿ ಕರ್ನಾಟಕ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಪುರುಷ ಹಾಗೂ ಮಹಿಳಾ ವಿಭಾಗದಲ್ಲಿ ಶ್ರೇಷ್ಠ ಅಥ್ಲೀಟ್ ಗೌರವಕ್ಕೆ ಪಾತ್ರರಾಗಿದ್ದಾರೆ.

ಅಜ್ಜರಕಾಡು ಮಹಾತ್ಮಗಾಂಧಿ ಮೈದಾನದಲ್ಲಿ ಗುರುವಾರ ನಡೆದ ಲಾಂಗ್ ಜಂಪ್‌ನಲ್ಲಿ 7.44 ಮೀ. ದೂರ ಜಿಗಿದು ಚಿನ್ನ ಗೆದ್ದ ಜಾಫರ್ ಖಾನ್ ಅವರು ಕೂಟದಲ್ಲಿ ಒಟ್ಟು 1,016 ಪಾಯಿಂಟ್ಸ್ ಕಲೆಹಾಕಿದರು. ನಿಯೋಲ್ ಅನ್ನಾ ಕರ್ನೆಲಿಯೊ ಅವರು 100 ಮೀ. ಓಟವನ್ನು 11 ನಿ.93 ಸೆ.ನಲ್ಲಿ ಪೂರ್ಣಗೊಳಿಸಿ ಚಿನ್ನ ಗೆದ್ದರು. ಅವರು ಒಟ್ಟು 1005 ಪಾಯಿಂಟ್ಸ್ ಗಿಟ್ಟಿಸಿಕೊಂಡರು.

ಕೊಕ್ಕೊ: ಪುರುಷರ ವಿಭಾಗದ ಕೊಕ್ಕೊ ಫೈನಲ್‌ನಲ್ಲಿ ಬೆಳಗಾವಿ ತಂಡವು 25–19 ಪಾಯಿಂಟ್‌ಗಳಿಂದ ಬಾಗಲಕೋಟೆ ತಂಡವನ್ನು ಸೋಲಿಸಿ ಚಿನ್ನದ ಪದಕ ಗೆದ್ದಿತು. ಧಾರವಾಡ ಹಾಗೂ ರಾಯಚೂರು ತಂಡಗಳು ಕಂಚಿನ ಪದಕ ಗೆದ್ದವು. ಕೊಕ್ಕೊ ಮಹಿಳೆಯರ ವಿಭಾಗದ ರೋಚಕ ಫೈನಲ್‌ನಲ್ಲಿ ಬೆಳಗಾವಿ ತಂಡವು ಮೈಸೂರು ತಂಡವನ್ನು 13–12ರಿಂದ ಸೋಲಿಸಿ ಚಿನ್ನ ಗೆದ್ದಿತು. ಬೆಂಗಳೂರು ಹಾಗೂ ರಾಯಚೂರು ತಂಡಗಳು ಕಂಚು ಪಡೆದವು.

ಹ್ಯಾಂಡ್ ಬಾಲ್: ಪುರುಷರ ಹ್ಯಾಂಡ್‌ಬಾಲ್ ಸ್ಪರ್ಧೆಯಲ್ಲಿ ಬೆಂಗಳೂರು ಗ್ರಾಮಾಂತರ ತಂಡವು ಮೈಸೂರು ತಂಡವನ್ನು 40–32 ಪಾಯಿಂಟ್‌ಗಳಿಂದ ಸೋಲಿಸಿ ಚಿನ್ನದ ಪದಕ ಗೆದ್ದಿತು. ಬೆಂಗಳೂರು ನಗರ ಹಾಗೂ ಉಜಿರೆಯ ಎಸ್‌ಡಿಎಂ ತಂಡಗಳು ಕಂಚಿನ ಪದಕ ಗೆದ್ದವು.

ಮಹಿಳೆಯರ ವಿಭಾಗದ ರೋಚಕ ಫೈನಲ್‌ನಲ್ಲಿ ಹಾಸನ ತಂಡವು ದಾವಣಗೆರೆ ತಂಡವನ್ನು 14–13 ಪಾಯಿಂಟ್‌ಗಳಿಂದ ಸೋಲಿಸಿ ಚಿನ್ನದ ಪದಕ ಗೆದ್ದುಕೊಂಡಿತು. ಚಿತ್ರದುರ್ಗ ಹಾಗೂ ಬೆಂಗಳೂರು ನಗರ ತಂಡಗಳು ಕಂಚಿನ ಪದಕ ಗೆದ್ದುಕೊಂಡವು.

ವಾಲಿಬಾಲ್: ಪುರುಷರ ವಾಲಿಬಾಲ್‌ನಲ್ಲಿ ಬೆಂಗಳೂರು ಎ ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ಉಡುಪಿ ತಂಡಗಳು ಪ್ರಶಸ್ತಿ ಗೆದ್ದವು. ಪುರುಷರ ವಿಭಾಗದ ಫೈನಲ್‌ನಲ್ಲಿ ಬೆಂಗಳೂರು ಎ ತಂಡವು ಉಡುಪಿ ತಂಡವನ್ನು ಸೋಲಿಸಿತು. ಬೆಳಗಾವಿ ತಂಡ ಕಂಚಿನ ಪದಕ ಗೆದ್ದುಕೊಂಡಿತು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಉಡುಪಿ ತಂಡವು ಮೈಸೂರು ತಂಡವನ್ನು ಸೋಲಿಸಿತು. ಕೊಪ್ಪಳ ತಂಡವು ಕಂಚಿನ ಪದಕ ಗೆದ್ದುಕೊಂಡಿತು.

ಬ್ಯಾಸ್ಕೆಟ್‌ಬಾಲ್ ನಲ್ಲಿ ಪುರುಷರ ವಿಭಾಗದ ಫೈನಲ್‌ನಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು ಡೈಸ್ ಬೆಂಗಳೂರು ತಂಡವನ್ನು ಸೋಲಿಸಿ ಚಿನ್ನ ಗೆದ್ದಿತು. ದಕ್ಷಿಣ ಕನ್ನಡ ತಂಡವು ಕಂಚಿನ ಪದಕ ಗೆದ್ದಿತು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮೌಂಟ್ಸ್ ತಂಡವು ಚಿನ್ನ, ಡೈಸ್ ಮೈಸೂರು ಬೆಳ್ಳಿ ಹಾಗೂ ಡೈಸ್ ಮಂಡ್ಯ ತಂಡ ಕಂಚಿನ ಪದಕ ಗೆದ್ದಿತು.



ಟ್ರೋಫಿಯೊಂದಿಗೆ ನಿಯೋಲ್ ಅನ್ನಾ

ಪುರುಷರ ಹಾಕಿ: ಹಾಕಿ ಫೈನಲ್ ಪಂದ್ಯದಲ್ಲಿ ಹಾವೇರಿ ತಂಡವು 1–0 ಅಂತರದಲ್ಲಿ ಹಾಸನ ತಂಡವನ್ನು ಮಣಿಸಿ ಚಿನ್ನ ಗೆದ್ದಿತು.

ಫಲಿತಾಂಶಗಳು: ಅಥ್ಲೆಟಿಕ್ಸ್: ಪುರುಷರು: 5 ಸಾವಿರ ಮೀ. ಓಟ: ಸಂದೀಪ್ (ಬೆಂಗಳೂರು)–1,ಕಾಲ: 15ನಿ.7 ಸೆ., ವೈಭವ ಪಾಟೀಲ (ಬೆಳಗಾವಿ) –2, ಗುರುಪ್ರಸಾದ್ (ಬೆಂಗಳೂರು)–3; ಹೈಜಂಪ್:ಸಿನಾನ್ (ಉಡುಪಿ)–1. ಎತ್ತರ: 1.85 ಮೀ., ಭವಿತ್ ಕುಮಾರ್ (ಉಡುಪಿ)–2, ಯಶ್ವಿನ್ (ದಕ್ಷಿಣ ಕನ್ನಡ)–3; 100 ಮೀ.ಓಟ: ಗಗನ್ ಗೌಡ (ಬೆಂಗಳೂರು)–1. ಕಾಲ: 10ನಿ.63 ಸೆ., ರವಿ ಕಿರಣ್ (ಚಾಮರಾಜ ನಗರ)–2, ಸುಜನ್ ಥಾಮಸ್ (ದಕ್ಷಿಣ ಕನ್ನಡ)–3; 400 ಮೀ. ಹರ್ಡಲ್ಸ್: ಭೂಷನ್ ಪಾಟೀಲ್ (ಬೆಳಗಾವಿ)–1. ಕಾಲ: 53 ನಿ. 81 ಸೆ., ರಾಹುಲ್ ನಾಯಕ (ಮೈಸೂರು)–2, ಭಾಗ್ಯವಂತ (ಕಲಬುರ್ಗಿ)–3; ಶಾಟ್ ಪಟ್: ಪ್ರಜ್ವಲ್ ಶೆಟ್ಟಿ (ಉಡುಪಿ)–1, ಮೊಹಮ್ಮದ್ ಸಕ್ಲೈನ್ ಅಹಮ್ಮದ್ (ಮೈಸೂರು)–2, ಮನುಷ್ (ಮೈಸೂರು)–3; **ಮಹಿಳೆಯರು:** 5 ಸಾವಿರ ಮೀ. ಓಟ: ತೇಜಸ್ವಿನಿ (ಕೊಡಗು)–1. ಕಾಲ 19 ನಿ. 27.20 ಸೆ., ಪ್ರಣಮ್ಯ (ದಕ್ಷಿಣ ಕನ್ನಡ)–2, ಶುಭಾಂಗಿ (ಬೆಳಗಾವಿ)–3; 100 ಮೀ ಓಟ: ನಿಯೋಲ್ ಅನ್ನಾ ಕಾರ್ನೆಲಿಯೊ (ಬೆಂಗಳೂರು)–1. ಕಾಲ: 11 ನಿ.93 ಸೆ., ಶ್ರುತಿ ಶೆಟ್ಟಿ (ಉಡುಪಿ)–2, ವರ್ಷಾ ವಿ. (ಬೆಂಗಳೂರು)–3; ಹೈ ಜಂಪ್: ಪಲ್ಲವಿ ಪಾಟೀಲ (ಯಾದಗಿರಿ)–1. ಎತ್ತರ 1.76 ಮೀ., ಸುಪ್ರಿಯಾ (ಚಿಕ್ಕಮಗಳೂರು)–2, ಫ್ಲಾರ್ವಿಶಾ ವೆಲಿಶಾ ಮೊಂತೆರೊ (ದಕ್ಷಿಣ ಕನ್ನಡ)–2; 400 ಮೀ. ಹರ್ಡಲ್ಸ್: ದೀಕ್ಷಿತಾ (ದಕ್ಷಿಣ ಕನ್ನಡ)–1. ಕಾಲ: 1ನಿ.03.1 ಸೆ., ಅಪೂರ್ವ ನಾಯ್ಕ್ (ಬೆಳಗಾವಿ)–2, ಅರ್ನಿಕಾ ವರ್ಷಾ ಡಿಸೋಜ (ಉಡುಪಿ)–3.

'ಮಂಗಳೂರು, ಉಡುಪಿ ಕ್ರೀಡಾಂಗಣಗಳಿಗೆ ₹3 ಕೋಟಿ'

ಮಂಗಳೂರಿನ ಮಂಗಳಾ ಕ್ರೀಡಾಂಗಣ ಮತ್ತು ಉಡುಪಿಯ ಅಜ್ಜರಕಾಡಿನ ಮಹಾತ್ಮ ಗಾಂಧಿ ಕ್ರೀಡಾಂಗಣದ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಲಾ ₹3 ಕೋಟಿ ನೀಡುವುದಾಗಿ ಘೋಷಿಸಿದ್ದಾರೆ ಎಂದು ಗೃಹಸಚಿವ ಜಿ. ಪರಮೇಶ್ವರ್ ತಿಳಿಸಿದರು.

ಉಡುಪಿಯ ಅಜ್ಜರಕಾಡಿನ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕರ್ನಾಟಕ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹವಿದೆ. ಆ ಕಾರಣಕ್ಕೆ ಈ ಬಾರಿ ಕ್ರೀಡಾಕೂಟವನ್ನು ಇಲ್ಲಿ ನಡೆಸಲಾಗಿದೆ ಎಂದು ಹೇಳಿದ ಅವರು, ಮುಂದಿನ ಕರ್ನಾಟಕ ಕ್ರೀಡಾಕೂಟವನ್ನು ತುಮಕೂರಿನಲ್ಲಿ ನಡೆಸಬೇಕು. ಅಲ್ಲಿ ಸುಸಜ್ಜಿತವಾದ ಕ್ರೀಡಾಂಗಣವಿದೆ ಎಂದು ವೇದಿಕೆಯಲ್ಲಿದ್ದ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ. ಗೋವಿಂದರಾಜ್ ಅವರಿಗೆ ಹೇಳಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ಗುರುರಾಜ್ ಗಂಟಿಹೊಳೆ, ಕಿರಣ್‌ಕುಮಾರ್ ಕೊಡ್ಗಿ, ವಿಧಾನ ಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ, ಮಾಜಿ ಸಚಿವರಾದ ವಿನಯ ಕುಮಾರ್ ಸೊರಕೆ, ಅಭಯಚಂದ್ರ ಜೈನ್ ಭಾಗವಹಿಸಿದ್ದರು.